ಕರುನಾಡು ಎಗ್ಸಾಂ

# ಪ್ರಚಲಿತ ವಿದ್ಯಮಾನಗಳು

ಏಪ್ರಿಲ್

2013

ಸಂಪರ್ಕಿಸಿ: KARUNADUEXAMS.COM

## ರಾಜ್ಯ

**ಯಕ್ಷಗಾನ "ಪ್ರಸಂಗ" ಪುಸ್ತಕ ಹೊರತರಲಿರುವ ಮಂಗಳೂರು ವಿಶ್ವವಿದ್ಯಾಲಯ**

ಜೈನರ ತತ್ವದ ಮೇಲೆ ರಚಿಸಲಾಗಿರುವ ಆರು ಯಕ್ಷಗಾನ ಪ್ರಸಂಗಗಳನ್ನು ಒಳಗೊಂಡ ಪುಸ್ತಕವನ್ನು 2013-14 ನೇ ಸಾಲಿನಲ್ಲಿ ಮಂಗಳೂರು ವಿಶ್ವವಿದ್ಯಾಲಯ ಹೊರತರಲಿದೆ. ಜೊತೆಗೆ ಯಕ್ಷಗಾನ ಕುರಿತಾದ ಎರಡು ಪುಸ್ತಕಗಳನ್ನು ಇದೇ ಅಕಾಡೆಮಿ ವರ್ಷದಲ್ಲಿ ಪ್ರಕಟಿಸುವುದಾಗಿ ಹೇಳಿದೆ.

- ಮಂಗಳೂರು ವಿವಿ ಯ ಉಪ-ಕುಲಪತಿಗಳಾದ ಟಿ.ಸಿ. ಶಿವಶಂಕರ ಮೂರ್ತಿ ನೇತೃತ್ವವಹಿಸಿದ್ದ ತಂಡ ಪುಸ್ತಕ ಪ್ರಕಟಿಸುವ ಪ್ರಸ್ತಾವನೆಯನ್ನು ಅನುಮೋದಿಸಿದ್ದು, ಯಕ್ಷಗಾನ ಅಧ್ಯಯನ ಕೇಂದ್ರದ ದಯಾನಂದ ಪೈ ಮತ್ತು ಸತೀಶ್ ಪೈ ರವರ ಮುಂದಾಳತ್ವದಲ್ಲಿ ಪುಸ್ತಕವನ್ನು ಹೊರತರಲಾಗುವುದು.
- ಕಾರ್ಕಳ ಮೂಲದ ರೈತ ಮತ್ತು ಯಕ್ಷಗಾನ ಪ್ರವೀಣ ಎಂ.ಶ್ರೀಧರ ಪಂಡಿ ರವರು ಜೈನ ತತ್ವ ಆಧಾರಿತ 22 ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದು, ಅವುಗಳಲ್ಲಿ ಆರು ಪ್ರಸಂಗಗಳನ್ನು ಮಾತ್ರ ಪುಸ್ತಕವಾಗಿ ಹೊರತರಲು ನಿರ್ಧರಿಸಲಾಗಿದೆ.
- ಆನೆಕಾಂತ ಪ್ರಕಾಶನ ಮುದ್ರಿಸಲಿರುವ ಈ ಪುಸ್ತಕಗಳಲ್ಲಿ "ಕಮತೊಪಸರ್ಗ", "ಶ್ರೀತೀರ್ಥಾಂಕರ ಉದ್ಭವ", "ಜ್ವಾಲಮಾಲಿನಿ ದೇವಿ ಉದ್ಭವ", "ಆಚಾರ್ಯ ಸಮಂತ ಭದ್ರ" ಮತ್ತು ಅಶನೀಷ ವಿಜಯ" ಪ್ರಸಂಗಳನ್ನು ಮಾತ್ರ ಮುದ್ರಿಸಲಾಗುವುದು.

**KIOCL ನಿಂದ ಕುದುರೆಮುಖದಲ್ಲಿ ಪರಿಸರ ಪ್ರವಾಸೋದ್ಯಮ ಯೋಜನೆ**

ಕುದುರೆಮುಖದಲ್ಲಿ ಗಣಿಗಾರಿಕೆ ಸ್ತಬ್ದಗೊಂಡಿರುವ ಹಿನ್ನಲೆಯಲ್ಲಿ ಗಣಿಗಾರಿಕೆ ಪ್ರದೇಶವನ್ನು "ಪರಿಸರ ಪ್ರವಾಸೋದ್ಯಮ (Eco tourism)" ಪ್ರದೇಶವನ್ನಾಗಿ ಪರಿವರ್ತಿಸಲು ಕುದುರೆಮುಖ ಕಬ್ಬಿಣ ಮತ್ತು ಉಕ್ಕು ತಯಾರಿಕೆ ಕಂಪನಿ (KIOCL) ಮುಂದಾಗಿದೆ. ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಕಳೆದ ಏಳು ವರ್ಷಗಳಿಂದ ಗಣಿಗಾರಿಕೆಯನ್ನು ಕುದುರೆಮುಖದಲ್ಲಿ ನಿಲ್ಲಿಸಲಾಗಿದೆ.

ಯೋಜನೆ ಬಗ್ಗೆ:

- ರೂ.805 ಕೋಟಿ ಬಂಡವಾಳ ಹೂಡುವ ಮೂಲಕ ಕುದುರೆಮುಖ ಪಟ್ಟಣವನ್ನು "ಪರಿಸರ ಪಟ್ಟಣ" ವನ್ನಾಗಿಸಲು KIOCL ಮುಂದಾಗಿದ್ದು, ಕರ್ನಾಟಕ ಸರ್ಕಾರ ಈ ಯೋಜನೆಗೆ ತಾತ್ವಿಕ ಅನುಮೋದನೆ ನೀಡಿದೆ.
- ಗಣಿಗಾರಿಕೆ ಪ್ರದೇಶದಲ್ಲಿರುವ ಮೂಲಭೂತ ಸೌಕರ್ಯಗಳನ್ನೇ ಬಳಸಿಕೊಂಡು ಪರಿಸರ ಪ್ರವಾಸೋದ್ಯಮವನ್ನು ಆರಂಭಿಸಲಾಗುವುದು.
- ಕುದುರೆಮುಖ ವ್ಯಾಪ್ತಿಗೆ ಬರುವ 1622 ಎಕರೆ ಪ್ರದೇಶದಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲು ಚಿಂತಿಸಲಾಗಿದೆ. ಈ ಪ್ರದೇಶವನ್ನು 99 ವರ್ಷ ಗುತ್ತಿಗೆ ತೆಗೆದುಕೊಳ್ಳಲು ಅನುಮೋದನೆ ನೀಡುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ.

ಪರಿಸರ ಪ್ರವಾಸೋದ್ಯಮ ಆರಂಭವಾದಲ್ಲಿ ಪರಿಸರ ಸಂರಕ್ಷಣೆ ಜೊತೆಗೆ ಸ್ಥಳೀಯರಿಗೆ ಉದ್ಯೋಗ ಅವಕಾಶ ಸೃಷ್ಟಿಯಾಗಲಿದೆ. ಮತ್ತು ಸರ್ಕಾರಕ್ಕೆ ಆದಾಯ ಲಭ್ಯವಾಗುತ್ತದೆ.

**ಬೆಂಗಳೂರಿನಲ್ಲಿ ಶೇ.28 ರಷ್ಟು ನೀರು ಮಾತ್ರ ಕುಡಿಯಲು ಯೋಗ್ಯ**

ಬೆಂಗಳೂರಿನ ಕೇವಲ ನೀರಿಗೆ ಮಾತ್ರ ಕೊರತೆ ಇದೆ ಎಂದರೆ ನಿಮ್ಮ ಊಹೆ ತಪ್ಪು. ಸಮೀಕ್ಷೆಯೊಂದರ ಪ್ರಕಾರ ಬೆಂಗಳೂರಿನಲ್ಲಿ ಕುಡಿಯಲು ಬಳಸುತ್ತಿರುವ ನೀರಿನಲ್ಲಿ ಶೇ.28 ರಷ್ಟು ನೀರು ಮಾತ್ರ ಕುಡಿಯಲು ಯೋಗ್ಯವಾಗಿದೆ. "ಜನಾಗ್ರಹ" ಎಂಬ ಸಂಸ್ಥೆ ಬೆಂಗಳೂರಿನ 198 ವಾರ್ಡಗಳಲ್ಲಿ ನಡೆಸಿರುವ ಸಮೀಕ್ಷೆಯಿಂದ ಈ ಅಂಶ ಧೃಡಪಟ್ಟಿದೆ.

- ಜನವರಿ ಮಧ್ಯದಿಂದ ಬೆಂಗಳೂರಿನ ಎಲ್ಲಾ ವಾರ್ಡಗಳಲ್ಲಿ ನೀರಿನ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗಿದ್ದು, ಶೇ.72 ರಷ್ಟು ನೀರಿನ ಮಾದರಿಗಳಲ್ಲಿ ಬ್ಯಾಕ್ಟೀರಿಯಾಗಳು ಪತ್ತೆಯಾಗಿವೆ.
- ಮಧ್ಯಮ ವರ್ಗ ಅಥವಾ ಅದಕ್ಕಿಂತ ಮೇಲಿರುವ ಕುಟುಂಬಗಳಲ್ಲಿ ಸಂಗ್ರಹಿಸಿರುವ ಮಾದರಿಯಲ್ಲಿ ಶೇ.69.83 ರಷ್ಟು ನೀರು ಕುಡಿಯಲು ಯೋಗ್ಯವಲ್ಲ ಮತ್ತು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಲ್ಲಿ ಶೇ.75.87 ರಷ್ಟು ನೀರು ಕುಡಿಯಲು ಯೋಗ್ಯವಾಗಿಲ್ಲ.
- ಸಮೀಕ್ಷೆ ವರದಿ ಪ್ರಕಾರ 198 ವಾರ್ಡಗಳಲ್ಲಿ 15 ವಾರ್ಡ್ ಗಳಲ್ಲಿ ಸಂಗ್ರಹಿಸಿರುವ ಎಲ್ಲಾ ಮಾದರಿಯಲ್ಲೂ ಬ್ಯಾಕ್ಟೀರಿಯಾ ಇರುವುದು ಪತ್ತೆಯಾಗಿದೆ. ಕೇವಲ ಎರಡು ವಾರ್ಡ್ ಗಳಲ್ಲಿ ಮಾತ್ರ "0" ಬ್ಯಾಕ್ಟೀರಿಯಾ ಕಂಡು ಬಂದಿದೆ.

ಸಮೀಕ್ಷೆ ಹೇಗೆ?

- ಸಮೀಕ್ಷೆ ತಂಡಕ್ಕೆ ಪ್ರತಿ ವಾರ್ಡ್ ಗಳಲ್ಲಿ ಮಾದರಿ ನೀರನ್ನು ಸಂಗ್ರಸಹಿಸುವಾಗ ಕೆಲವು ಪ್ರಶ್ನೆಗಳನ್ನು ಕೇಳಲು ಸೂಚಿಸಲಾಗಿತ್ತು. ನೀರಿನ ಮೂಲ ಯಾವುದು, ಎಷ್ಟು ದಿನಗಳಿಗೊಮ್ಮೆ ನೀರಿನ ಅನುಕೂಲವಿದೆ, ನೀರು ಸರಬರಾಜು ಹೇಗೆ ಮಾಡಲಾಗುತ್ತಿದೆ, ಇತರೆ ನೀರಿನ ಮೂಲಗಳು ಹೀಗೆ ವರದಿಯನ್ನು ರಚಿಸಲಾಗಿದೆ. ಸಂಗ್ರಸಹಿಸದ ನೀರಿನ ಮಾದರಿಯನ್ನು ಬ್ಯಾಕ್ಟೀರಿಯಾ ಪರೀಕ್ಷೆಗೆ ಒಳಪಡಿಸದಾಗ ಎರಡು ದಿನಗಳಲ್ಲಿ ನೀರು ಕಪ್ಪು ಬಣ್ಣಕ್ಕೆ ತಿರುಗಿದೆ. ಬ್ಯಾಕ್ಟೀರಿಯಾ ಇದ್ದಾಗ ಮಾತ್ರ ನೀರಿನ ಬಣ್ಣ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಆಗಾಗಿ ನೀರು ಕುಡಿಯಲು ಯೋಗ್ಯವಲ್ಲ ಎಂದು ಧೃಡಪಟ್ಟಿದೆ.

**ಕರ್ನಾಟಕ ರಾಜ್ಯ ಹೈಕೋರ್ಟ್ ನಿಂದ "ಅರ್ಬಿಟ್ರೇಷನ್ ಸೆಂಟರ್"**

ನ್ಯಾಯಾಲಯದಲ್ಲಿ ಬಗೆಹರಿಯದ ವ್ಯಾಜ್ಯಗಳನ್ನು ಸಂಧಾನದ ಮೂಲಕ ಬಗೆಹರಿಸಲು ಮುಂದಾಗಿರುವ ರಾಜ್ಯ ಹೈಕೋರ್ಟ್ ಇದೇ ಮೊದಲ ಬಾರಿಗೆ "ರಾಜೀ ಸಂಧಾನ ಕೇಂದ್ರ (Arbitration Center)"ವನ್ನು ತೆರೆಯಲಿದೆ. ಬೆಂಗಳೂರಿನ ಖನಿಜ ಭವನದಲ್ಲಿ ಆರಂಭವಾಗಿರುವ ನೂತನ ರಾಜೀ ಸಂಧಾನ ಕೇಂದ್ರವನ್ನು ಏಪ್ರಿಲ್ 14 ರಂದು ಉದ್ಘಾಟಿಸಲಾಗುವುದು. ಸುಪ್ರೀಂ ಕೋರ್ಟನ ಮುಖ್ಯ ನ್ಯಾಯಮೂರ್ತಿಗಳಾದ ಅಲ್ತಮಸ್ ಕಬೀರ್ ರವರು ಕೇಂದ್ರಕ್ಕೆ ಚಾಲನೆ ನೀಡಲಿದ್ದಾರೆ.

- ಕಳೆದ 10-20 ವರ್ಷಗಳಿಂದ ನ್ಯಾಯಾಲಯಕ್ಕೆ ಅಲೆದರೂ ಬಗೆಹರಿಯದ ವ್ಯಾಜ್ಯಗಳನ್ನು ರಾಜೀ ಸಂಧಾನ ಕೇಂದ್ರದ ಮೂಲಕ ಬಗೆಹರಿಸಿಕೊಳ್ಳಬಹುದಾಗಿದೆ.
- ಕ್ರಿಮಿನಲ್ ಪ್ರಕರಣಗಳನ್ನು ಹೊರತುಪಡಿಸಿ ಸರ್ಕಾರದ ಮತ್ತು ಖಾಸಗಿ ವ್ಯಕ್ತಿಗಳ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಈ ಕೇಂದ್ರದ ಮೂಲಕ ಪರಿಹಾರ ಕಂಡುಕೊಳ್ಳಬಹುದಾಗಿದೆ.

- ರಾಜೀ ಸಂಧಾನಕ್ಕೆ 1996 ರ ನಿಯಮದಡಿ ಕೆಲವೊಂದು ಸೆಕ್ಷನ್ ಗಳನ್ನು ರಚಿಸಲಾಗಿದ್ದು, ಸೆಕ್ಷನ್ 89 ರ ಅಡಿಯಲ್ಲಿ ಕಾರ್ಯನಿರ್ವಹಿಸಲಾಗುತ್ತದೆ.
- ರಾಜೀ ಸಂಧಾನ ಕೇಂದ್ರವು ತನ್ನದೇ ಆದ ಸಮಿತಿಯನ್ನು ಒಳಗೊಂಡಿದೆ. ಅದರಲ್ಲಿ ನಿವೃತ್ತ ಮುಖ್ಯ ನ್ಯಾಯಮೂರ್ತಿಗಳು, ನಿವೃತ್ತ ನ್ಯಾಯಮೂರ್ತಿಗಳು, ಕಾನೂನು ತಜ್ಞರು ಸೇರಿದಂತೆ ನ್ಯಾಯಾಂಗ ವ್ಯವಸ್ಥೆಯ ಅಧಿಕಾರಿಗಳು ಇರಲಿದ್ದಾರೆ.

**ಶುಲ್ಕ**:

- ಪ್ರತಿ ವ್ಯಾಜ್ಯಗಳನ್ನು ಬಗೆಹರಿಸಲು ಶುಲ್ಕ ನಿಗದಿಪಡಿಸಲಾಗಿದೆ. ವ್ಯಾಜ್ಯಗಳ ವೆಚ್ಚವನ್ನು ರೂ. 50 ಸಾವಿರ ದಿಂದ ಎಂಟು ಲಕ್ಷ ರೂ ಗಳ ವರೆಗೆ ನಿಗದಿ ಮಾಡಲಾಗಿದೆ.

**ಕಾಲಮಿತಿ**:

- ರಾಜೀ ಸಂಧಾನಕ್ಕೆ ಬಂದ ವ್ಯಾಜ್ಯಗಳನ್ನು ಕನಿಷ್ಠ 90 ರಿಂಧ 120 ದಿನದೊಳಗೆ ಬಗೆಹರಿಸಬೇಕು. ಒಂದು ವೇಳೆ ಈ ಅವಧಿಯಲ್ಲಿ ಇತ್ಯರ್ಥಗೊಳ್ಳದಿದ್ದರೆ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲರ ಅನುಮತಿ ಮೇರೆಗೆ ಅವಧಿಯ ಮಿತಿಯನ್ನು ಮುಂದೂಡಬಹುದು. ಒಂದು ವೇಳೆ ಇಲ್ಲೂ ವ್ಯಾಜ್ಯ ಬಗೆಹರಿಯದಿದ್ದರೆ ಜಿಲ್ಲಾ ನ್ಯಾಯಾಲಯಾದ ಮೂಲಕ, ಹೈಕೋರ್ಟ್, ಸುಪ್ರೀಂ ಕೋರ್ಟ್ ಮೋರೆ ಹೋಗಬಹುದು.

**ಮಂಡಳಿ**:

- ರಾಜ್ಯ ಮುಖ್ಯ ನ್ಯಾಯಾಮೂರ್ತಿಗಳ ನೇತೃತ್ವದಲ್ಲಿ ರಾಜೀ ಸಂಧಾನ ಕೇಂದ್ರ ತನ್ನದೇ ಆದ ಮಂಡಳಿಯನ್ನು ರಚಿಸಿಕೊಂಡಿದೆ. ರಾಜ್ಯ ಮುಖ್ಯ ನ್ಯಾಯಮೂರ್ತಿಗಳು ಪ್ರಧಾನ ಪೋಷಕರಾಗಿದ್ದು, ಹೈಕೋರ್ಟ್ ನ ಐದು ಹಾಲಿ ನ್ಯಾಯಮೂರ್ತಿಗಳು ಸದಸ್ಯರಾಗಿರುತ್ತಾರೆ.

ಎರಡನೇಯದು:

- ದೆಹಲಿ ನಂತರ ದೇಶದಲ್ಲಿ ಇದು ಎರಡನೇ ರಾಜೀ ಸಂಧಾನ ಕೇಂದ್ರ.

**ಹಿನ್ನಲೆ ಗಾಯಕ ಪಿ.ಬಿ.ಶ್ರೀನಿವಾಸ್ ನಿಧನ**

ಕನ್ನಡದ ಹೆಸರಾಂತ ಹಿನ್ನಲೆ ಗಾಯಕ ಪಿ.ಬಿ. ಶ್ರೀನಿವಾಸ್ ಅವರು ಚೆನ್ನೈನಲ್ಲಿ ವಿಧಿವಶರಾದರು. ಅವರಿಗೆ 83 ವರ್ಷ ವಯಸ್ಸಾಗಿತ್ತು. ಕಳೆದ ಹಲವು ದಿನಗಳಿಂದ ಅವರು ಅನಾರೋಗ್ಯದಿಂದ ಬಳುತ್ತಿದ್ದರು.

ಪಿ.ಬಿ.ಶ್ರೀನಿವಾಸ್ ಬಗ್ಗೆ:

- ಮೂಲತಃ ಆಂಧ್ರಪ್ರದೇಶದ ಕಾಕಿನಾಡ ಜಿಲ್ಲೆಯವರಾದ ಪಿ.ಬಿ.ಶ್ರೀನಿವಾಸ್ ರವರು ಸೆಪ್ಟೆಂಬರ್ 22, 1930 ರಲ್ಲಿ ಜನಿಸಿದರು. ಅವರ ಪೂರ್ಣ ಹೆಸರು ಪ್ರತಿವಾದಿ ಭಯಂಕರ ಶ್ರೀನಿವಾಸ್.
- 1951 ರಲ್ಲಿ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ ಅವರು, 1952 ರಲ್ಲಿ ಜೆಮಿನಿ ಸಂಸ್ಥೆ ನಿರ್ಮಾಣದ ಹಿಂದಿ ಚಲನಚಿತ್ರ "ಮಿ.ಸಂಪತ್" ನಲ್ಲಿ ಮೊದಲ ಬಾರಿಗೆ ಹಾಡಿದರು.

- ಕನ್ನಡದಲ್ಲಿ ಮೇರುನಟ ಡಾ.ರಾಜ್, ಡಾ.ವಿಷ್ಣು, ಅಂಬರೀಷ್ ಸೇರಿದಂತೆ ಅನೇಕ ದಿಗ್ಗಜರ ಸಿನಿಮಾಗಳಲ್ಲಿ ತಮ್ಮ ಕಂಠದ ಮೂಲದ ಗಾನಸುಧೆ ಹರಿಸಿದ್ದರು.
- ಕೇವಲ ಕನ್ನಡ ಮಾತ್ರವಲ್ಲದೇ, ತಮಿಳು, ತೆಲುಗು, ಮಲೆಯಾಳಂ ಸೇರಿದಂತೆ ಸುಮಾರು 9 ಭಾಷೆಗಳಲ್ಲಿ 3 ಸಾವಿರಕ್ಕೂ ಅಧಿಕ ಹಾಡುಗಳನ್ನು ಹಾಡಿದ್ದಾರೆ. ಗಾಯಕರಲ್ಲದೇ ಅವರು ಕವಿಯೂ ಆಗಿದ್ದರು. ಮಲೆಯಾಳಂ ಮತ್ತು ತಮಿಳಿನ ಕೆಲವು ಸಿನಿಮಾಗಳಿಗೆ ಸಾಹಿತ್ಯವನ್ನು ರಚಿಸಿದ್ದರು. ಕನ್ನಡದಲ್ಲಿ 350 ಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಇವುಗಳಲ್ಲಿ ಡಾ.ರಾಜ್ ಚಿತ್ರಗಳ 200 ಹಾಡುಗಳು ಸೇರಿವೆ.

**ಕರಾವಳಿ ಕಣ್ಗಾವಲು ಹಡಗು ಸಿ-402 ಕಾರ್ಯಾರಂಭ**

ಶತ್ರು ಪಡೆಗಳ ಮೇಲೆ ಕ್ಷಿಪ್ರವಾಗಿ ದಾಳಿ ನಡೆಸಬಲ್ಲ ಕರಾವಳಿ ಕಣ್ಗಾವಲು ಹಡಗು ಸಿ-402 ಗೆ ಮುಂಬೈನ ನೌಕನೆಲೆಯಲ್ಲಿ ಚಾಲನೆ ನೀಡಲಾಯಿತು. ಮಹಾರಾಷ್ಟ್ರದ ಡೈರೆಕ್ಟರ್ ಜನರನ್ ಆಫ್ ಪೊಲೀಸ್ ಸಂಜೀವ್ ದಯಾಳ್ ರವರು ಸಿ-402 ಗೆ ಚಾಲನೆ ನೀಡಿದರು. ಕರಾವಳಿ ತೀರ ಪಡೆಯ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದು, ಸಮಾರಂಭಕ್ಕೆ ಸಾಕ್ಷಿಯಾದರು.

ಸಿ-402:

- ಸಿ-402 ಕರಾವಳಿ ಕಣ್ಗಾವಲು ಹಡಗನ್ನು ಲಾರ್ಸೆನ್ ಅಂಡ್ ಟರ್ಬೊ (L&T) ನಿರ್ಮಿಸಿದೆ. ಇದೇ ಮಾದರಿಯಲ್ಲಿ ಒಟ್ಟು 36 ಹಡಗುಗಳನ್ನು L & T ನಿರ್ಮಿಸಲಿದ್ದು, ಇದು ಎರಡನೇಯದಾಗಿದೆ.
- 30 ಮೀಟರ್ ಉದ್ದವಿರುವ ಈ ಹಡಗು, ಗರಿಷ್ಠ 45 ನಾಟಿಕಲ್ ಮೈಲ್ ವೇಗದಲ್ಲಿ ಸಾಗುವ ಸಾಮರ್ಥ್ಯವನ್ನು ಹೊಂದಿದೆ.
- ನಾವೀನ್ಯ ತಂತ್ರಜ್ಞಾನದ ನ್ಯಾವಿಗೇಷನ್ ಮತ್ತು ಸಂಪರ್ಕ ವ್ಯವಸ್ಥೆಯನ್ನು ಇದರಲ್ಲಿ ಅಳವಡಿಸಲಾಗಿದ್ದು, ಸಮುದ್ರ ತೀರದಲ್ಲಿ ಗಸ್ತು ತಿರುಗಲಿದೆ.
- ಮಹಾರಾಷ್ಟ್ರದ ರತ್ನಗಿರಿಯಲ್ಲಿರುವ ಕರಾವಳಿ ತೀರ ರಕ್ಷಣೆ ವಲಯದಿಂದ ಇದು ಕಾರ್ಯನಿರ್ವಹಿಸಲಿದೆ.

**ಪಶ್ಚಿಮ ಘಟ್ಟ ಸಂರಕ್ಷಣೆ: ವರದಿ ಸಲ್ಲಿಸಿದ ಕೆ.ಕಸ್ತೂರಿ ರಂಗನ್ ಸಮಿತಿ**

ಪಶ್ಚಿಮ ಘಟ್ಟ ಸಂರಕ್ಷಣೆ ಕುರಿತಾಗಿ ಅಧ್ಯಯನ ನಡೆಸಿ ವರದಿ ನೀಡಲು ಕೇಂದ್ರ ಸರ್ಕಾರ ರಚಿಸಿದ್ದ ಕೆ.ಕಸ್ತೂರಿ ರಂಗನ್ ನೇತೃತ್ವದ 10 ಸದಸ್ಯರನ್ನು ಒಳಗೊಂಡ ಅಧ್ಯಯನ ಸಮಿತಿ ತನ್ನ ವರದಿಯನ್ನು ಕೇಂದ್ರ ಪರಿಸರ ಖಾತೆ ಸಚಿವೆ ಜಯಂತಿ ನಟರಾಜನ್ ರವರಿಗೆ ಸಲ್ಲಿಸಿತು. ಸಮಿತಿ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸುಗಳು ಇಲ್ಲಿವೆ.

- ಆರು ಜಿಲ್ಲೆಗಳಲ್ಲಿ ವಿಸ್ತರಿಸಿರುವ ಪಶ್ಚಿಮ ಘಟ್ಟದಲ್ಲಿ 60 ಸಾವಿರ ಚದರ ಕಿ.ಮೀ ವ್ಯಾಪ್ತಿಯ ಪ್ರದೇಶವನ್ನು "ಪರಿಸರ ಸೂಕ್ಷ್ಮ ವಲಯ (Eco Sensitive Area)" ಎಂದು ಗುರುತಿಸಿದೆ.
- ಆರು ರಾಜ್ಯಗಳಲ್ಲಿ ಪಶ್ಚಿಮ ಘಟ್ಟದ ಒಟ್ಟು ವಿಸ್ತೀರ್ಣದ ಶೇ.37 ರಷ್ಟು ಭಾಗ "ಪರಿಸರ ಸೂಕ್ಷ್ಮ ವಲಯ"ದಡಿ ಬರಲಿದ್ದು, ಈ ಭಾಗದಲ್ಲಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ, ಗಣಿಗಾರಿಕೆ ಮತ್ತು ಪರಿಸರಕ್ಕೆ ಹಾನಿ ತರುವಂತಹ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರುವಂತೆ ಸಮಿತಿ ಶಿಫಾರಸ್ಸು ಮಾಡಿದೆ.

- ಮಾನವ ಚಟುವಟಿಕೆ, ಎಸ್ಟೇಟ್ ಗಳು ಮತ್ತು ಕೃಷಿ ಚಟುವಟಿಕೆ ಒಳಗೊಂಡಿರುವ ೨೬೦೦೦ ಚದರ ಕಿ.ಮೀ ಪ್ರದೇಶವನ್ನು "ಸಾಂಸ್ಕೃತಿಕ ಭೂ ಪ್ರದೇಶ"ವೆಂದು ಗುರುತಿಸಿದೆ. ಈ ಪ್ರದೇಶದಲ್ಲಿ ಯಾವುದೇ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸಲಾಗಿಲ್ಲ. ಆದರೆ ಇಲ್ಲಿ ಹಸಿರು ವೃದ್ಧಿಸುವ ಸಲುವಾಗಿ ಅಗತ್ಯ ಕ್ರಮಕೈಗೊಳ್ಳಲು ಸವಲತ್ತು ನೀಡಬೇಕು ಎಂದು ಹೇಳಿದೆ.
- ಹಾಸನ ಜಿಲ್ಲೆಯ ಗುಂಡ್ಯಾ ಬಳಿ ನಿರ್ಮಿಸಲಾಗುತ್ತಿರುವ ಜಲ ವಿದ್ಯುತ್ ಯೋಜನೆ ಮತ್ತು ಕೇರಳದ ಅತಿರ್ಪಲ್ಲಿ ಯೋಜನೆಗಳ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲ. ಆದರೆ ಸಂಬಂಧಪಟ್ಟ ರಾಜ್ಯಗಳು ಈ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮುನ್ನ ಪರಿಸರ ಹಾನಿಯ ಬಗ್ಗೆ ಕೂಲಂಕುಷವಾಗಿ ಯೋಚಿಸಿ ನಿರ್ಧರಿಸುವುದು ಎಂದು ತಿಳಿಸಿದೆ. ಜತೆಗೆ ತಜ್ಞರ ತಂಡದಿಂದ ಅಧ್ಯಯನ ನಡೆಸಿ ಅದರ ವರದಿಯ ಮೇರೆಗೆ ಸಂಬಂಧಿಸಿದ ಪ್ರಾಧಿಕಾರವು ಅನುಮತಿ ನೀಡಬೇಕು ಎಂದು ತಿಳಿಸಿದೆ.

ಹಿನ್ನೆಲೆ:

- ಪಶ್ಚಿಮ ಘಟ್ಟಗಳ ಸಂರಕ್ಷಣೆ ಕುರಿತಾಗಿ ವರದಿ ಸಲ್ಲಿಸಲು ಕೇಂದ್ರ ಸರ್ಕಾರ ಮೊದಲಿಗೆ ಪರಿಸರ ತಜ್ಞ "ಮಾಧವ್ ಗಾಡ್ಗಿಲ್" ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಸಮಿತಿಯು ತನ್ನ ವರದಿಯಲ್ಲಿ ಮಾನವ ಚಟುವಟಿಕೆ, ಕೃಷಿ ಚಟುವಟಿಕೆ ಮತ್ತು ಎಸ್ಟೇಟ್ ಗಳನ್ನು ಒಳಗೊಂಡಂತೆ ಪಶ್ಚಿಮ ಘಟ್ಟದ ಬಹು ಭಾಗ ಭೂ ಪ್ರದೇಶವನ್ನು ನಿರ್ಬಂಧಿತ (Restricted) ವಲಯವನ್ನಾಗಿ ಘೋಷಿಸುವಂತೆ ಶಿಫಾರಸ್ಸು ಮಾಡಿತ್ತು. ಈ ಶಿಫಾರಸ್ಸಿನ ವಿರುದ್ಧ ಕೆಲವು ರಾಜ್ಯಗಳು ವಿರೋಧ ವ್ಯಕ್ತಪಡಿಸಿದ್ದವು. ಈ ಹಿನ್ನೆಲೆಯಲ್ಲಿ "ಮಾಧವ್ ಗಾಡ್ಗಿಲ್" ವರದಿಯನ್ನು ಕುರಿತು ಸಲಹೆ ನೀಡುವಂತೆ ಕೇಂದ್ರ ಸರ್ಕಾರ "ಕಸ್ತೂರಿ ರಂಗನ್" ಮುಂದಾಳತ್ವದಲ್ಲಿ 10 ಸದಸ್ಯರನ್ನು ಒಳಗೊಂಡ ಸಮಿತಿಯನ್ನು ನೇಮಿಸಿತ್ತು.

## ಪೆಂಟಾವೆಲೆಂಟ್ ಲಸಿಕೆ ಕಾರ್ಯಕ್ರಮಕ್ಕೆ ರಾಜ್ಯದಲ್ಲಿ ಚಾಲನೆ

ನವಜಾತ ಶಿಶುಗಳನ್ನು hib (Heamophilus influence type B) ಸಂಬಂಧಿತ ಕಾಯಿಲೆಗಳಿಂದ ರಕ್ಷಿಸುವ "ಪೆಂಟಾವೆಲೆಂಟ್ ಲಸಿಕೆ (Pentavalent Vaccine)" ಹಾಕಿಸುವ ಕಾರ್ಯಕ್ರಮಕ್ಕೆ ರಾಜ್ಯದಲ್ಲಿ ಇತ್ತೀಚೆಗೆ ಚಾಲನೆ ನೀಡಲಾಗಿದೆ. "ಸಾರ್ವತ್ರಿಕ ಚುಚ್ಚುಮದ್ದು ಕಾರ್ಯಕ್ರಮ (Universal Immunisation Programme)"ದಡಿ ಈ ಯೋಜನೆಯನ್ನು ವಿಲೀನಗೊಳಿಲಾಗಿದ್ದು, ರಾಜ್ಯದಲ್ಲಿ ಪ್ರತಿ ವರ್ಷ 12 ಲಕ್ಷ ನವಜಾತ ಶಿಶುಗಳು ಮಾರಣಾಂತಿಕ ಕಾಯಿಲೆಗಳಿಂದ ರಕ್ಷಿಸಲು ಈ ಯೋಜನೆ ಸಹಕಾರಿಯಾಗಲಿದೆ.

ಪೆಂಟಾವೆಲೆಂಟ್ ಲಸಿಕೆ:

- ನವಜಾತ ಶಿಶುಗಳಲ್ಲಿ ಪ್ರಮುಖವಾಗಿ ಕಂಡು ಬರುವ ಮಾರಣಾಂತಿಕ ಕಾಯಿಲೆಗಳ ವಿರುದ್ಧ ಈ ಲಸಿಕೆಯನ್ನು ಹಾಕಲಾಗುತ್ತದೆ.
- Heamophilus influence type B ಅಥವಾ hib ಎಂದು ಕರೆಯಲಾಗುವ ಬ್ಯಾಕ್ಟರೀಯಾದಿಂದ ಹರಡಬಹುದಾದ **ಡಿಫ್ತಿರಿಯಾ, ನಾಯಿಕೆಮ್ಮು (Pertussis), ಟೆಟಾನಸ್, ಹೆಪಟೆಟಿಸ್-ಬಿ ಮತ್ತು ಇನ್ ಫ್ಲೂಯೆಂಜ-ಬಿ (Influenza-B)"** ಈ ಐದು ರೋಗಗಳಿಂದ ಮಕ್ಕಳನ್ನು ಈ ಲಸಿಕೆಯಿಂದ ರಕ್ಷಿಸಬಹುದಾಗಿದೆ.

- ಮಗು **ಜನಿಸಿದ 6, 10 ಮತ್ತು 14 ನೇ** ವಾರದಲ್ಲಿ ಪೆಂಟಾವೆಲೆಂಟ್ ಲಸಿಕೆಯನ್ನು ನೀಡಲಾಗುವುದು.
- ಈ ಲಸಿಕೆ ಹಾಕಿಸುವುದರಿಂದ ಡಿಪಿಟಿ ಮತ್ತು ಹೆಪಟೈಟಿಸ್-ಬಿ ಚುಚ್ಚುಮದ್ದುಗಳನ್ನು ಮಕ್ಕಳಿಗೆ ನೀಡುವ ಅವಶ್ಯಕತೆ ಇರುವುದಿಲ್ಲ.
- ಭಾರತದಲ್ಲಿ ಪ್ರಪ್ರಥಮ ಬಾರಿಗೆ 2011 ರಲ್ಲಿ ಪೆಂಟಾವೆಲೆಂಟ್ ಲಸಿಕೆ ಕಾರ್ಯಕ್ರಮಕ್ಕೆ **ತಮಿಳುನಾಡು ಮತ್ತು ಕೇರಳದಲ್ಲಿ** ಚಾಲನೆ ನೀಡಲಾಯಿತು.

ಉಪಯೋಗಗಳು:

- ಈ ಮಹತ್ವದ ಕಾರ್ಯಕ್ರಮದಿಂದ ಪ್ರತಿ ವರ್ಷ ರಾಜ್ಯದ ಸುಮಾರು 12 ಲಕ್ಷ ಮಕ್ಕಳನ್ನು ಮಾರಣಾಂತಿಕ ಕಾಯಿಲೆಗಳಿಂದ ಕಾಪಾಡಬಹುದಾಗಿದೆ.
- ಕೇವಲ ಖಾಸಗಿ ಆಸ್ಪತ್ರೆಗಳಲ್ಲಿ ಮಾತ್ರ ಲಭ್ಯವಿದ್ದ ಈ ಸೌಲಭ್ಯ, ಇನ್ನು ಮುಂದೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಸಿಗಲಿದೆ.
- ರಾಜ್ಯದ ಶಿಶು ಮರಣ ಪ್ರಮಾಣ ಗಣನೀಯವಾಗಿ ಇಳಿಕೆಯಾಗಲಿದೆ.

**ಪಶ್ಚಿಮ ಘಟ್ಟ ಸಂರಕ್ಷಣೆ: ವರದಿ ಸಲ್ಲಿಸಿದ ಕೆ.ಕಸ್ತೂರಿ ರಂಗನ್ ಸಮಿತಿ**

ಪಶ್ಚಿಮ ಘಟ್ಟ ಸಂರಕ್ಷಣೆ ಕುರಿತಾಗಿ ಅಧ್ಯಯನ ನಡೆಸಿ ವರದಿ ನೀಡಲು ಕೇಂದ್ರ ಸರ್ಕಾರ ರಚಿಸಿದ್ದ ಕೆ.ಕಸ್ತೂರಿ ರಂಗನ್ ನೇತೃತ್ವದ 10 ಸದಸ್ಯರನ್ನು ಒಳಗೊಂಡ ಅಧ್ಯಯನ ಸಮಿತಿ ತನ್ನ ವರದಿಯನ್ನು ಕೇಂದ್ರ ಪರಿಸರ ಖಾತೆ ಸಚಿವೆ ಜಯಂತಿ ನಟರಾಜನ್ ರವರಿಗೆ ಸಲ್ಲಿಸಿತು. ಸಮಿತಿ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸುಗಳು ಇಲ್ಲಿವೆ.

- ಆರು ಜಿಲ್ಲೆಗಳಲ್ಲಿ ವಿಸ್ತರಿಸಿರುವ ಪಶ್ಚಿಮ ಘಟ್ಟದಲ್ಲಿ 60 ಸಾವಿರ ಚದರ ಕಿ.ಮೀ ವ್ಯಾಪ್ತಿಯ ಪ್ರದೇಶವನ್ನು "ಪರಿಸರ ಸೂಕ್ಷ್ಮ ವಲಯ (Eco Sensitive Area)" ಎಂದು ಗುರುತಿಸಿದೆ.
- ಆರು ರಾಜ್ಯಗಳಲ್ಲಿ ಪಶ್ಚಿಮ ಘಟ್ಟದ ಒಟ್ಟು ವಿಸ್ತೀರ್ಣದ ಶೇ.37 ರಷ್ಟು ಭಾಗ "ಪರಿಸರ ಸೂಕ್ಷ್ಮ ವಲಯ"ದಡಿ ಬರಲಿದ್ದು, ಈ ಭಾಗದಲ್ಲಿ ಶಾಖೋತ್ಪನ್ನ ವಿದ್ಯುತ್ ಉತ್ಪಾದನೆ, ಗಣಿಗಾರಿಕೆ ಮತ್ತು ಪರಿಸರಕ್ಕೆ ಹಾನಿ ತರುವಂತಹ ಚಟುವಟಿಕೆಗಳ ಮೇಲೆ ನಿರ್ಬಂಧ ಹೇರುವಂತೆ ಸಮಿತಿ ಶಿಫಾರಸ್ಸು ಮಾಡಿದೆ.
- ಮಾನವ ಚಟುವಟಿಕೆ, ಎಸ್ಟೇಟ್ ಗಳು ಮತ್ತು ಕೃಷಿ ಚಟುವಟಿಕೆ ಒಳಗೊಂಡಿರುವ 96000 ಚದರ ಕಿ.ಮೀ ಪ್ರದೇಶವನ್ನು "ಸಾಂಸ್ಕೃತಿಕ ಭೂ ಪ್ರದೇಶ"ವೆಂದು ಗುರುತಿಸಿದೆ. ಈ ಪ್ರದೇಶದಲ್ಲಿ ಯಾವುದೇ ಚಟುವಟಿಕೆಗಳಿಗೆ ನಿರ್ಬಂಧ ವಿಧಿಸಲಾಗಿಲ್ಲ. ಆದರೆ ಇಲ್ಲಿ ಹಸಿರು ವೃದ್ದಿಸುವ ಸಲುವಾಗಿ ಅಗತ್ಯ ಕ್ರಮಕೈಗೊಳ್ಳಲು ಸವಲತ್ತು ನೀಡಬೇಕು ಎಂದು ಹೇಳಿದೆ.
- ಹಾಸನ ಜಿಲ್ಲೆಯ ಗುಂಡ್ಯಾ ಬಳಿ ನಿರ್ಮಿಸಲಾಗುತ್ತಿರುವ ಜಲ ವಿದ್ಯುತ್ ಯೋಜನೆ ಮತ್ತು ಕೇರಳದ ಅತಿರ್ಪಲ್ಲಿ ಯೋಜನೆಗಳ ಬಗ್ಗೆ ಸ್ಪಷ್ಟವಾಗಿ ಹೇಳಿಲ್ಲ. ಆದರೆ ಸಂಬಂಧಪಟ್ಟ ರಾಜ್ಯಗಳು ಈ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಮುನ್ನ ಪರಿಸರ ಹಾನಿಯ ಬಗ್ಗೆ ಕೂಲಂಕುಷವಾಗಿ ಯೋಚಿಸಿ ನಿರ್ಧರಿಸುವುದು ಎಂದು ತಿಳಿಸಿದೆ. ಜತೆಗೆ ತಜ್ಞರ

ತಂಡದಿಂದ ಅಧ್ಯಯನ ನಡೆಸಿ ಅದರ ವರದಿಯ ಮೇರೆಗೆ ಸಂಬಂಧಿಸಿದ ಪ್ರಾಧಿಕಾರವು ಅನುಮತಿ ನೀಡಬೇಕು ಎಂದು ತಿಳಿಸಿದೆ.

ಹಿನ್ನೆಲೆ:

- ಪಶ್ಚಿಮ ಘಟ್ಟಗಳ ಸಂರಕ್ಷಣೆ ಕುರಿತಾಗಿ ವರದಿ ಸಲ್ಲಿಸಲು ಕೇಂದ್ರ ಸರ್ಕಾರ ಮೊದಲಿಗೆ ಪರಿಸರ ತಜ್ಞ "ಮಾಧವ್ ಗಾಡ್ಗಿಲ್" ರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿತ್ತು. ಸಮಿತಿಯು ತನ್ನ ವರದಿಯಲ್ಲಿ ಮಾನವ ಚಟುವಟಿಕೆ, ಕೃಷಿ ಚಟುವಟಿಕೆ ಮತ್ತು ಎಸ್ಟೇಟ್ ಗಳನ್ನು ಒಳಗೊಂಡಂತೆ ಪಶ್ಚಿಮ ಘಟ್ಟದ ಬಹು ಭಾಗ ಭೂ ಪ್ರದೇಶವನ್ನು ನಿರ್ಬಂಧಿತ (Restricted) ವಲಯವನ್ನಾಗಿ ಘೋಷಿಸುವಂತೆ ಶಿಫಾರಸ್ಸು ಮಾಡಿತ್ತು. ಈ ಶಿಫಾರಸ್ಸಿನ ವಿರುದ್ದ ಕೆಲವು ರಾಜ್ಯಗಳು ವಿರೋಧ ವ್ಯಕ್ತಪಡಿಸಿದ್ದವು. ಈ ಹಿನ್ನೆಲೆಯಲ್ಲಿ "ಮಾಧವ್ ಗಾಡ್ಗಿಲ್" ವರದಿಯನ್ನು ಕುರಿತು ಸಲಹೆ ನೀಡುವಂತೆ ಕೇಂದ್ರ ಸರ್ಕಾರ "ಕಸ್ತೂರಿ ರಂಗನ್" ಮುಂದಾಳತ್ವದಲ್ಲಿ 10 ಸದಸ್ಯರನ್ನು ಒಳಗೊಂಡ ಸಮಿತಿಯನ್ನು ನೇಮಿಸಿತ್ತು.

**<u>ಪೆಂಟಾವೆಲೆಂಟ್ ಲಸಿಕೆ ಕಾರ್ಯಕ್ರಮಕ್ಕೆ ರಾಜ್ಯದಲ್ಲಿ ಚಾಲನೆ</u>**

ನವಜಾತ ಶಿಶುಗಳನ್ನು hib (Heamophilus influence type B) ಸಂಬಂಧಿತ ಕಾಯಿಲೆಗಳಿಂದ ರಕ್ಷಿಸುವ "ಪೆಂಟಾವೆಲೆಂಟ್ ಲಸಿಕೆ (Pentavalent Vaccine)" ಹಾಕಿಸುವ ಕಾರ್ಯಕ್ರಮಕ್ಕೆ ರಾಜ್ಯದಲ್ಲಿ ಇತ್ತೀಚೆಗೆ ಚಾಲನೆ ನೀಡಲಾಗಿದೆ. "ಸಾರ್ವತಿಕ ಚುಚ್ಚುಮದ್ದು ಕಾರ್ಯಕ್ರಮ (Universal Immunisation Programme)"ದಡಿ ಈ ಯೋಜನೆಯನ್ನು ವಿಲೀನಗೊಳಿಲಾಗಿದ್ದು, ರಾಜ್ಯದಲ್ಲಿ ಪ್ರತಿ ವರ್ಷ 12 ಲಕ್ಷ ನವಜಾತ ಶಿಶುಗಳು ಮಾರಣಾಂತಿಕ ಕಾಯಿಲೆಗಳಿಂದ ರಕ್ಷಿಸಲು ಈ ಯೋಜನೆ ಸಹಕಾರಿಯಾಗಲಿದೆ.

ಪೆಂಟಾವೆಲೆಂಟ್ ಲಸಿಕೆ:

- ನವಜಾತ ಶಿಶುಗಳಲ್ಲಿ ಪ್ರಮುಖವಾಗಿ ಕಂಡು ಬರುವ ಮಾರಣಾಂತಿಕ ಕಾಯಿಲೆಗಳ ವಿರುದ್ದ ಈ ಲಸಿಕೆಯನ್ನು ಹಾಕಲಾಗುತ್ತದೆ.
- Heamophilus influence type B ಅಥವಾ hib ಎಂದು ಕರೆಯಲಾಗುವ ಬ್ಯಾಕ್ಟರೀಯಾದಿಂದ ಹರಡಬಹುದಾದ **<u>ಡಿಫ್ತಿರಿಯಾ, ನಾಯಿಕೆಮ್ಮು (Pertussis), ಟೆಟಾನಸ್, ಹೆಪಟೆಟಿಸ್-ಬಿ ಮತ್ತು ಇನ್ ಪ್ಲೂಯೆಂಜ-ಬಿ (Influenza-B)"</u>** ಈ ಐದು ರೋಗಗಳಿಂದ ಮಕ್ಕಳನ್ನು ಈ ಲಸಿಕೆಯಿಂದ ರಕ್ಷಿಸಬಹುದಾಗಿದೆ.
- ಮಗು **<u>ಜನಿಸಿದ 6, 10 ಮತ್ತು 14 ನೇ</u>** ವಾರದಲ್ಲಿ ಪೆಂಟಾವೆಲೆಂಟ್ ಲಸಿಕೆಯನ್ನು ನೀಡಲಾಗುವುದು.
- ಈ ಲಸಿಕೆ ಹಾಕಿಸುವುದರಿಂದ ಡಿಪಿಟಿ ಮತ್ತು ಹೆಪಟಿಟಿಸ್-ಬಿ ಚುಚ್ಚುಮದ್ದುಗಳನ್ನು ಮಕ್ಕಳಿಗೆ ನೀಡುವ ಅವಶ್ಯಕತೆ ಇರುವುದಿಲ್ಲ.
- ಭಾರತದಲ್ಲಿ ಪ್ರಪ್ರಥಮ ಬಾರಿಗೆ 2011 ರಲ್ಲಿ ಪೆಂಟಾವೆಲೆಂಟ್ ಲಸಿಕೆ ಕಾರ್ಯಕ್ರಮಕ್ಕೆ **<u>ತಮಿಳುನಾಡು ಮತ್ತು ಕೇರಳದಲ್ಲಿ</u>** ಚಾಲನೆ ನೀಡಲಾಯಿತು.

ಉಪಯೋಗಗಳು:

- ಈ ಮಹತ್ವದ ಕಾರ್ಯಕ್ರಮದಿಂದ ಪ್ರತಿ ವರ್ಷ ರಾಜ್ಯದ ಸುಮಾರು 12 ಲಕ್ಷ ಮಕ್ಕಳನ್ನು ಮಾರಣಾಂತಿಕ ಕಾಯಿಲೆಗಳಿಂದ ಕಾಪಾಡಬಹುದಾಗಿದೆ.

- ಕೇವಲ ಖಾಸಗಿ ಆಸ್ಪತ್ರೆಗಳಲ್ಲಿ ಮಾತ್ರ ಲಭ್ಯವಿದ್ದ ಈ ಸೌಲಭ್ಯ, ಇನ್ನು ಮುಂದೆ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲೂ ಸಿಗಲಿದೆ.
- ರಾಜ್ಯದ ಶಿಶು ಮರಣ ಪ್ರಮಾಣ ಗಣನೀಯವಾಗಿ ಇಳಿಕೆಯಾಗಲಿದೆ.

**ರೈಲ್ವೇ ವಿದ್ಯುದೀಕರಣದಲ್ಲಿ ಹಿಂದೆ ಬಿದ್ದಿರುವ ರಾಜ್ಯ**

ರೈಲ್ವೇ ವಿದ್ಯುದೀಕರಣದಲ್ಲಿ ಕರ್ನಾಟಕ ರಾಜ್ಯ ನೆರೆಹೊರೆಯ ರಾಜ್ಯಗಳಿಗೆ ಹೋಲಿಸಿದರೆ ತುಂಬಾ ಹಿಂದಿ ಬಿದ್ದಿದೆ. ರಾಜ್ಯದಲ್ಲಿರುವ ರೈಲು ಮಾರ್ಗಗಳ ಒಟ್ಟು ಉದ್ದ 3,007 ಕಿ.ಮೀ. ಇದರಲ್ಲಿ ಕೇವಲ 160 ಕಿ.ಮೀ ಮಾತ್ರ, ಅಂದರೆ ಶೇ.6 ರಷ್ಟು ರೈಲು ಮಾರ್ಗಗಳು ಮಾತ್ರ ವಿದ್ಯುದೀಕರಣಗೊಳಿಸುವ ಮೂಲಕ ತೀರಾ ಕಳಪೆ ಸಾಧನೆ ಮಾಡಿದೆ. ದೇಶದಲ್ಲಿ ಈಗಾಗಲೇ ಶೇ.34 ರಷ್ಟು ರೈಲು ಮಾರ್ಗಗಳು ವಿದ್ಯುದೀಕರಣಗೊಂಡಿವೆ.

- ಕೇರಳದಲ್ಲಿರುವ 1,050 ಕಿ.ಮೀ ರೈಲು ಮಾರ್ಗಗಳ ಪೈಕಿ 540 ಕಿ.ಮೀ ಯಷ್ಟು (ಶೇ.51.43 ರಷ್ಟು) ರೈಲು ಮಾರ್ಗವನ್ನು ವಿದ್ಯುದೀಕರಣಗೊಳಿಸಲಾಗಿದೆ. ತಮಿಳುನಾಡಿನಲ್ಲಿ ಶೇ.30.08 ರಷ್ಟು (4,106 ಕಿ.ಮೀ ಗೆ 1,235 ಕಿ.ಮೀ), ಮಹಾರಾಷ್ಟ್ರದಲ್ಲಿ ಶೇ.36.87 ರಷ್ಟು (5,601 ಕಿ.ಮೀ ಗೆ 2,065 ಕಿ.ಮೀ) ಮತ್ತು ಆಂಧ್ರ ಪ್ರದೇಶದಲ್ಲಿ ಶೇ.48.08 ರಷ್ಟು (5,185 ಕಿ.ಮೀ ಗೆ 2,493 ಕಿ.ಮೀ) ವಿದ್ಯುದೀಕರಣಗೊಳಿಸಲಾಗಿದೆ.
- ರಾಜ್ಯದ ಬೆಂಗಳೂರು-ಚೆನ್ನೈ ನಡುವಿನ ಮಾರ್ಗ ಮಾತ್ರ ಪೂರ್ಣವಾಗಿ ವಿದ್ಯುದೀಕರಣಗೊಳಿಸಲಾಗಿದೆ. ಬೆಂಗಳೂರು-ಮೈಸೂರು ಮಾರ್ಗದಲ್ಲಿ ಕಾಮಗಾರಿ ಪ್ರಾರಂಭದಲ್ಲಿದಿರುವುದನ್ನು ಹೊರತುಪಡಿಸೆ ಬೇರೆಲ್ಲೂ ಆರಂಭಿಸಲಾಗಿಲ್ಲ.

**ರಾಜ್ಯದ ಕಳಪೆ ಸಾಧನೆ ಏಕೆ?**

- ರೈಲ್ವೇ ಅಧಿಕಾರಿಗಳ ನಿರ್ಲಕ್ಷ್ಯ ಇದಕ್ಕೆ ಪ್ರಮುಖ ಕಾರಣ ಎನ್ನಲಾಗಿದೆ. ಸಾಮಾನ್ಯವಾಗಿ ಬೇರೆ ರಾಜ್ಯದ ಅಧಿಕಾರಿಗಳೇ ಇಲ್ಲಿ ಕೆಲಸ ನಿರ್ವಹಿಸುತ್ತಿರುವುದರಿಂದ ತಮ್ಮದಲ್ಲ ಎಂಬ ಭಾವನೆ ಅಧಿಕಾರಿಗಳಲ್ಲಿ ಇರುವುದೇ ಮುಖ್ಯ ಕಾರಣ. ಜತೆಗೆ ರೈಲ್ವೇ ವಿದ್ಯುದೀಕರಣ ಕಡಿಮೆ ವೆಚ್ಚದಲ್ಲಿ ಮುಗಿಯುವಂತದಲ್ಲ, ಅಪಾರ ಹಣದ ಅವಶ್ಯಕತೆ ಇದೆ.
- ಮತ್ತೊಂದು ಪ್ರಮುಖ ಕಾರಣವೆಂದರೇ ರಾಜ್ಯದಲ್ಲಿ ತಲೆದೋರಿರುವ ವಿದ್ಯುತ್ ಸಮಸ್ಯೆ. ವಿದ್ಯುತ್ ನಿಂದ ಚಲಿಸುವ ಭೋಗಿಗೆಯೊಂದಕ್ಕೆ 4.5 ಮೆಗಾ ವ್ಯಾಟ್ ವಿದ್ಯುತ್ ಬೇಕು, ಇಷ್ಟು ವಿದ್ಯುತ್ ನಿಂದ ಸುಮಾರು 15,000 ಕುಟುಂಬಗಳನ್ನು ಬೆಳಗಿಸಬಹುದು.

## ರಾಷ್ಟ್ರೀಯ

### ರೋತಂಗ್ ಪಾಸ್ ನಲ್ಲಿ ಸಂಶೋಧನಾ ಸಂಸ್ಥೆ ತೆರೆಯಲಿರುವ ಇಸ್ರೋ

ಜಾಗತಿಕ ತಾಪಮಾನದ ಹೆಚ್ಚಳದಿಂದ ಪರಿಸರ ಮತ್ತು ನೀರ್ಗಲ್ಲು ಕರಗುವಿಕೆ ಮೇಲೆ ಆಗುತ್ತಿರುವ ಪರಿಣಾಮವನ್ನು ಅಧ್ಯಯನ ನಡೆಸುವ ಸಲುವಾಗಿ ರೋತಂಗ್ ಮಾರ್ಗ (Rohtang Pass) ದಲ್ಲಿ ವೀಕ್ಷಣಾಲಯವೊಂದನ್ನು ಸ್ಥಾಪಿಸುವುದಾಗಿ ಇಸ್ರೋ ಹೇಳಿದೆ. ತಾಪಮಾನದ ಹೆಚ್ಚಳದಿಂದಾಗಿ ನೀರ್ಗಲ್ಲು ಹಿಂದೆಗಿಂತಲೂ ಅತಿ ವೇಗದಲ್ಲಿ ಕರಗುತ್ತಿರುವುದಾಗಿ ಇತ್ತೀಚೆಗೆ ವರದಿಯಾಗಿತ್ತು.

- ರೋತಾಂಗ್ ಮಾರ್ಗ ಪ್ರಸಿದ್ದ ಪ್ರವಾಸಿ ತಾಣವಾಗಿದೆ. ಭಾರಿ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುವುದರಿಂದ ವಾಹನಗಳ ದಟ್ಟಣೆ ವಿಪರೀತ. ವಾಹನ ದಟ್ಟಣೆ ಅಧಿಕವಾದ ಕಾರಣ ಇಂಗಾಲದ ಆಮ್ಲ ಹೊರಸೂಸುವಿಕೆ ಪ್ರಮಾಣ ಸಹ ಸಹಜ ಮಟ್ಟ ಮೀರಿದೆ. ನಮಗೆಲ್ಲರಿಗೂ ತಿಳಿದಿರುವಂತೆ ಇಂಗಾಲದ ಆಮ್ಲ ಒಂದು ಹಸಿರು ಮನೆ ಅನಿಲವಾಗಿದೆ. ಆಗಾಗಿ ಈ ಅನಿಲವು ಒಳ ಬರುವ ಸೂರ್ಯನ ಕಿರಣಗಳನ್ನು ಹೀರಿಕೊಳ್ಳುವುದರಿಂದ ತಾಪಮಾನದಲ್ಲಿ ಹೆಚ್ಚಳವಾಗಿ ನೀರ್ಗಲ್ಲು ಕರಗುವಿಕೆ ವೇಗ ಪಡೆದುಕೊಂಡಿದೆ.
- ವಿಜ್ಞಾನಿಗಳ ಪ್ರಕಾರ ಈ ಸಂಶೋಧನಾ ಸಂಸ್ಥೆಯಲ್ಲಿ ವಾಯುದ್ರವ (Aerosol), ಕಪ್ಪು ಇಂಗಾಲ (Black Carbon) ಹೇಗೆ ನೀರ್ಗಲ್ಲು ಕರಗುವಿಕೆ ಕಾರಣವಾಗಿದೆ ಎಂಬುದರ ಬಗ್ಗೆ ಅಧ್ಯಯನ ನಡೆಸಲಾಗುವುದು.
- ಪ್ರತಿ ದಿನ ಹವಾಮಾನ ಬದಲಾವಣೆ ಮತ್ತು ನೀರ್ಗಲ್ಲು ಕರಗುವಿಕೆಯ ವೇಗವನ್ನು ದಾಖಲಿಸಿಕೊಳ್ಳಲಾಗುವುದು. ಅಲ್ಲದೇ ವಾಯುಮಂಡಲದಲ್ಲಿ ಇರಬಹುದಾದ ವಾಯುದ್ರವ ಪತ್ತೆಹಚ್ಚಲು ಮತ್ತು ಹವಾಮಾನ ಮುನ್ಸೂಚನೆ ನೀಡುವ ಸಲುವಾಗಿ ವೆದರ್ ಟವರನ್ನು ಸಹ ಸ್ಥಾಪಿಸಲಾಗುವುದು.

ರೋತಂಗ್ ಪಾಸ್:

- ಅತ್ಯಂತ ಎತ್ತರದ ಪರ್ವತ ಮಾರ್ಗ. ಹಿಮಾಲಯದ ಪಿರ್ ಪಂಜಲ್ ಕಣಿವೆಯಲ್ಲಿ ಹಾದು ಹೋಗುವ ಈ ಮಾರ್ಗ ಕುಲ್ಲ ಕಣಿವೆಯನ್ನು ಹಿಮಾಚಲ ಪ್ರದೇಶದ ಲಹಲ್ ಮತ್ತು ಸ್ಪಿತಿ ಕಣಿವೆಗಳೊಂದಿಗೆ ಸಂಪರ್ಕಿಸುತ್ತದೆ. ರಾಷ್ಟ್ರೀಯ ಹೆದ್ದಾರಿ 21 ರ ಭಾಗವಾದ ಮನಾಲಿ ಮತ್ತು ಲೇ ಹೆದ್ದಾರಿ ಕೂಡ ರೋತಂಗ್ ಮಾರ್ಗದ ಮೂಲಕ ಹಾದು ಹೋಗುತ್ತದೆ.

### ಬುಡಕಟ್ಟು ಪ್ರದೇಶದಲ್ಲಿ 2000 ದೂರಸಂಪರ್ಕ ಗೋಪುರಗಳ ನಿರ್ಮಾಣ: ಕೇಂದ್ರ ಸರ್ಕಾರ

ಕೇಂದ್ರ ಸರ್ಕಾರ ಮಾರ್ಚ್ 29, 2013 ರಂದು ಬುಡಕಟ್ಟು ಪ್ರದೇಶಗಳಲ್ಲಿ (Tribal Areas) 2000 ದೂರಸಂಪರ್ಕ ಗೋಪುರಗಳನ್ನು ರೂ.3000 ಕೋಟಿ ವೆಚ್ಚದಲ್ಲಿ ನಿರ್ಮಿಸಲು ನಿರ್ಣಯ ಕೈಗೊಂಡಿದೆ. ಸದ್ಯ ದೇಶದಲ್ಲಿ 93 ಕೋಟಿ ಜನ ದೂರಸಂಪರ್ಕ ಸೌಲಭ್ಯವನ್ನು ಪಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಎಲ್ಲರೂ ಈ ಸೌಲಭ್ಯವನ್ನು ಪಡೆಯಲು ಈ ನಿರ್ಣಯದಿಂದ ಅನುಕೂಲವಾಗಲಿದೆ.

ಈ ನಿರ್ಧಾರ ಏಕೆ?

- ಸರ್ಕಾರ ಜಾರಿಗೆ ತಂದಿರುವ ಇ-ಆಡಳಿತ ಸೇವೆಯಲ್ಲಿ ಮೊಬೈಲ್ ಗಳು ಕ್ರಾಂತಿಯನ್ನು ಉಂಟು ಮಾಡಲಿವೆ ಎಂದು ನಂಬಲಾಗಿದೆ.

- ಸದ್ಯ ಸರ್ಕಾರದ ಹಲವಾರು ಯೋಜನೆಗಳನ್ನು ಕಿಯೊಸ್ಕೊಗಳ ಮೂಲಕ ಈಗ ಆನ್ ಲೈನ್ ನಲ್ಲಿ ಒದಗಿಸಲಾಗುತ್ತಿದ್ದು, ಭವಿಷ್ಯದಲ್ಲಿ ಮೊಬೈಲ್ ಗಳ ಮೂಲಕ ಸೌಲಭ್ಯವನ್ನು ಒದಗಿಸಲು ಸರ್ಕಾರ ಚಿಂತಿಸುತ್ತಿದೆ. ಇಂದೊಮ್ಮೆ ಎಲ್ಲರೂ ಮೊಬೈಲ್ ಬಳಸುವಂತಾದರೆ ಆಡಳಿತದಲ್ಲಿ ಪಾರದರ್ಶಕತೆ ಜೊತೆಗೆ ಶೀಘ್ರವಾಗಿ ಸೇವೆಯನ್ನು ಒದಗಿಸಬಹುದಾಗಿದೆ.

**ಕ್ಯಾನ್ಸರ್ ಔಷಧ ಪೇಟೆಂಟ್ ಸಮರ: ನೋವಾರ್ಟಿಸ್ ಗೆ ಸುಪ್ರೀಂ ನಿಂದ ಮುಖಭಂಗ**

ರಕ್ತ ಕ್ಯಾನ್ಸರ್ ಗೆ ಸಂಬಂಧಿಸಿದಂತೆ ನೀಡಲಾಗುವ "ಗ್ಲಿವೆಕ್" ಔಷಧಕ್ಕೆ ಭಾರತದಲ್ಲಿ ಪೇಟೆಂಟ್ ಗಳಿಸಲು ನಡೆದ ಏಳು ವರ್ಷಗಳ ಕಾನೂನು ಸಮರದಲ್ಲಿ ಸ್ವಿಸ್ ಕಂಪನಿ ನೋವಾರ್ಟಿಸ್ ಎಜಿ ಗೆ ಮುಖಭಂಗವಾಗಿದೆ. "ಗ್ಲಿವೆಕ್" ಔಷಧವನ್ನು ಸಾವರ್ತಿಕವಾಗಿ ಉತ್ಪಾದಿಸದಂತೆ ಭಾರತೀಯ ಔಷಧ ಕಂಪನಿಗಳ ಮೇಲೆ ನಿರ್ಬಂಧ ಹೇರುವಂತೆ ಬಹು ರಾಷ್ಟ್ರೀಯ ಕಂಪನಿ ನೋವಾರ್ಟಿಸ್ ಸಲ್ಲಿಸಿದ್ದ ಮನವಿಯನ್ನು ಸುಪ್ರೀಂ ಕೋರ್ಟ್ ತಳ್ಳಿಹಾಕಿದೆ. ಇದರಿಂದ ಭಾರತದ ಕಂಪನಿಗಳೂ ಜಯಗಳಿಸಿದಂತಾಗಿದೆ.

ವಿವಾದವೇನು?

- "ಗ್ಲಿವಿಕ್" ಔಷಧವನ್ನು ರಕ್ತ ಕ್ಯಾನ್ಸರ್ ರೋಗವನ್ನು ಗುಣಪಡಿಸಲು ನೀಡಲಾಗುತ್ತಿದೆ. ಭಾರತದ ಸಿಪ್ಲ ಮತ್ತು ರಾಂಬಾಕ್ಸಿ ಕಂಪನಿಗಳು ಸಹ ಈ ಔಷಧವನ್ನು ತಯಾರಿಸುತ್ತಿವೆ. ಸ್ವಿಸ್ ಮೂಲದ ನೋವಾರ್ಟಿಸ್ ಕಂಪನಿ "ಗ್ಲಿವೆಕ್" ಔಷಧದಲ್ಲಿ ಹೊಸ ದ್ರವ್ಯವಾದ "ಇಮಾತಿನಿಬ್ ಮೆನಿಲೇಟ್" ನ್ನು ಬಳಸಿದ್ದು ಈ ಔಷಧಕ್ಕಾಗಿ ಭಾರತದಲ್ಲಿ ಪೇಟೆಂಟ್ ಪಡೆಯುವದಕ್ಕಾಗಿ 2006 ರಲ್ಲಿ ಅರ್ಜಿ ಸಲ್ಲಿಸಿತ್ತು. ಜೊತೆಗೆ ಭಾರತದ ಕಂಪನಿಗಳು ಈ ಔಷಧ ತಯಾರಿಸುವುದರ ಮೇಲೆ ನಿರ್ಬಂಧ ವಿಧಿಸುವಂತೆಯೂ ಮನವಿಯನ್ನು ಸಲ್ಲಿಸಿತ್ತು.
- ಆದರೆ "ಚೆನ್ನೈ ಬೌದ್ಧಿಕ ಆಸ್ತಿಪಾಸ್ತಿ ಮಂಡಳಿ (Intellectual Property Appellate Board)" ಕಂಪನಿಯ ಅರ್ಜಿಯನ್ನು ತಿರಸ್ಕರಿಸಿತ್ತು. ಚೆನ್ನೈ ಬೌದ್ಧಿಕ ಆಸ್ತಿಪಾಸ್ತಿ ಮಂಡಳಿಯ ಈ ತೀರ್ಪನ್ನು ಪ್ರಶ್ನಿಸಿ ನೋವಾರ್ಟಿಸ್ ಸುಪ್ರೀಂ ಮೆಟ್ಟಿಲೇರಿತ್ತು. ಈಗ ಘನವೆತ್ತ ನ್ಯಾಯಾಲಯ ಸಹ ಪೇಟೆಂಟ್ ಮನವಿಯನ್ನು ತಿರಸ್ಕರಿಸಿದೆ.

ಕೋರ್ಟ್ ಹೇಳಿದ್ದೇನು?

- ಪೇಟೆಂಟ್ ಇನ್ನು ನೈಜ ಸಂಶೋಧನೆಗಳಿಗೆ ಮಾತ್ರ ಲಭಿಸುತ್ತದೆ ಹೊರತಾಗಿ ಪುನರಾವರ್ತಿತ ಸಂಶೋಧನೆಗಳಿಗಲ್ಲ ಎಂದು ನ್ಯಾಯಮೂರ್ತಿಗಳಾದ ಅಫ್ತಾಭ್ ಕಬೀರ್ ಮತ್ತು ರಂಜನಾ ಪ್ರಕಾಶರವರನ್ನು ಒಳಗೊಂಡ ಪೀಠ ಹೇಳಿದೆ. ಗ್ಲಿವೆಕ್ ನಲ್ಲಿ ಬಳಸಿರುವ ಹೊಸ ದ್ರವ್ಯವೆಂದು ಹೇಳುವ "ಇಮಾತಿಬ್ ಮೆಸಿಲೇಟ್" ರಾಸಾಯನಿಕ ಎಲ್ಲರಿಗೂ ಗೊತ್ತಿರುವಂತಹ ದ್ರವ್ಯ ಆಗಾಗಿ ಪೇಟೆಂಟ್ ಸಲ್ಲಿಸುವ ಪ್ರಶ್ನೆಯೇ ಇಲ್ಲ ಎಂದು ಸುಪ್ರೀಂ ತೀರ್ಪು ನೀಡಿದೆ.
- ರಕ್ತ ಕ್ಯಾನ್ಸರ್ ರೋಗಿಗಳು ಒಂದು ತಿಂಗಳು ತೆಗೆದುಕೊಳ್ಳಬೇಕಾದ "ಗ್ಲಿವೆಕ್" ಔಷಧಕ್ಕೆ 1.2 ಲಕ್ಷ ರೂಪಾಯಿ ಆಗುತ್ತದೆ. ಭಾರತೀಯ ಕಂಪನಿಗಳು ತಯಾರಿಸುವ ಇಷ್ಟೇ ಪ್ರಮಾಣದ ಔಷಧಕ್ಕೆ ತಗಲುವ ವೆಚ್ಚ ಕೇವಲ ರೂ.8000 ಎಂದು ಭಾರತದ ಕಂಪನಿಗಳ ಪರ ವಾದಿಸಿದ ವಕೀಲೆ ಪ್ರತಿಭಾ ಸಿಂಗ್ ನ್ಯಾಯಮೂರ್ತಿಗಳಿಗೆ ತಿಳಿಸಿದರು.

**L & T ಮಡಿಲಿಗೆ ರಾಜಸ್ತಾನ ರಾಜ್ಯ ವಿದ್ಯುತ್ ಉತ್ಪಾದನ ನಿಗಮದ ರೂ.5689 ಕೋಟಿ ಯೋಜನೆ**

ಎಂಜನಿಯರಿಂಗ್ ಮತ್ತು ನಿರ್ಮಾಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಲಾರ್ಸನ್ ಅಂಡ್ ಟರ್ಬೋ (L & T) ಕಂಪನಿಯು ರಾಜಸ್ತಾನ ದಲ್ಲಿ ಸೂಪರ್ ಕ್ರಿಟಿಕಲ್ ಶಾಖೋತ್ಪನ್ನ ವಿದ್ಯುತ್ ಘಟಕ ನಿರ್ಮಾಣದ ಆದೇಶವನ್ನು ಪಡೆದುಕೊಂಡಿರುವುದಾಗಿ ಹೇಳಿದೆ. ಯೋಜನೆಯ ವೆಚ್ಚ ರೂ.5689 ಎಂದು ಅಂದಾಜಿಸಲಾಗಿದೆ.

- ದೇಶ ವಿದೇಶಗಳಿಂದ ಸಲ್ಲಿಸಲಾಗಿದ್ದ ಬಿಡ್ ಗಳ ನಡುವೆ ಎಲ್&ಟಿ ಈ ಯೋಜನೆಯನ್ನು ತನಗೆ ದಕ್ಕಿಸಿಕೊಂಡಿದೆ. ಈ ಯೋಜನೆಯನ್ನು ತನ್ನದಾಗಿಸಿಕೊಂಡ ಬಳಿಕ ಎಲ್&ಟಿ ಮಾಡಿಕೊಂಡಿರುವ ಒಪ್ಪಂದಗಳ ಒಟ್ಟು ಬೆಲೆ ರೂ.26000 ಕೋಟಿಗೆ ಏರಿಕೆಯಾಗಲಿದೆ.
- ರಾಜಸ್ತಾನದ ಬರಣ್ ಜಿಲ್ಲೆಯಲ್ಲಿ ನಿರ್ಮಿಸಲಾಗುತ್ತಿರುವ ಕಲ್ಲಿದ್ದಲು ಆಧಾರಿತ ಎರಡು ಶಾಖೋತ್ಪನ್ನ ಘಟಕಕ್ಕೆ L&T ಕಂಪನಿಯು ಎಂಜನಿಯರಿಂಗ್, ವಿನ್ಯಾಸ, ಅಗತ್ಯವಿರುವ ಸಾಮಾಗ್ರಿಗಳ ಪೂರೈಕೆ ಜೊತೆಗೆ ನಿರ್ಮಾಣ ಕಾರ್ಯದ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದೆ.

**77 ನೇ ಸಂಸ್ಥಾಪನ ದಿನ ಆಚರಿಸಿಕೊಂಡ ಓಡಿಶಾ**

ಏಪ್ರಿಲ್ 1 ರಂದು ಓಡಿಶಾದಲ್ಲಿ "ಉತ್ಕಲ್ ದಿವಸ್" ಅಥವಾ "ಓಡಿಶಾ ಸಂಸ್ಥಾಪನಾ" ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು. 77 ನೇ ಓಡಿಶಾ ಸಂಸ್ಥಾಪನ ದಿನವಾದ ಏಪ್ರಿಲ್ 1 ರಂದು ಎಲ್ಲಾ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳು ವಿಜ್ರಂಭಣೆಯಿಂದ ನಾಡದಿನವನ್ನು ಆಚರಿಸಿದವು.

- ಏಪ್ರಿಲ್ 1, 1936 ರಲ್ಲಿ ಬೆಂಗಾಳ-ಬಿಹಾರ ಪ್ರಾಂತ್ಯದಿಂದ ವಿಭಜನೆಗೊಂಡು ಓಡಿಶಾ ಸ್ವತಂತ್ರ್ಯ ರಾಜ್ಯವಾಗಿ ಉದಯಿಸಿತು. ಆಗಾಗಿ ಪ್ರತಿ ವರ್ಷ ಏಪ್ರಿಲ್ 1 ರಂದು "ಉತ್ಕಲ್ ದಿವಸ್" ನ್ನು ಆಚರಿಸಲಾಗುತ್ತದೆ.
- ಭಾಷೆಯ ಆಧಾರದ ಮೇಲೆ ಓಡಿಶಾ ಪ್ರತ್ಯೇಕ ರಾಜ್ಯವಾಗಿ ರಚನೆಯಾಗಲು ಹೋರಾಡಿ ಜೀವ ಸವೆಸಿದ ನಾಯಕರಾದ ಮಧುಸೂಧನ್ ದಾಸ್, ಗೋಪಬಂಧು ದಾಸ್, ಫಕೀರ್ ಮೋಹನ್ ಸೇನಾನಿ ಮುಂತಾದ ಹೋರಾಟಗಾರರನ್ನು ಮುಖ್ಯಮಂತ್ರಿ ನವೀನ್ ಪಟ್ನಾಯಕ್ ರವರ ಈ ದಿನದಂದು ಸ್ಮರಿಸಿದರು.
- ಓಡಿಶಾದಾದ್ಯಂತ ಈ ದಿನದಂದು ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

**ಗುಜರಾತ್ : ಹೊಸ ಲೋಕಾಯುಕ್ತ ಮಸೂದೆಯನ್ನು ಮಂಡಿಸಿದ ಮೋದಿ ಸರ್ಕಾರ**

ನರೇಂದ್ರ ಮೋದಿ ನೇತೃತ್ವದ ಗುಜರಾತ್ ಸರ್ಕಾರ ಹೊಸ ಲೋಕಾಯುಕ್ತ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿದೆ. ಮಸೂದೆಯ ಅನ್ವಯ ಲೋಕಾಯುಕ್ತ ನೇಮಕಾತಿಯಲ್ಲಿ ರಾಜ್ಯ ಮುಖ್ಯ ನ್ಯಾಯಾಧೀಶರು ಮತ್ತು ರಾಜ್ಯಪಾಲರಿಗೆ ಇರುವ ಅಧಿಕಾರವನ್ನು ಮೊಟಕುಗೊಳಿಸಲಾಗಿದ್ದು, ಆಯ್ಕೆ ಸಮಿತಿಗೆ ಹೆಚ್ಚಿನ ಮಹತ್ವವನ್ನು ನೀಡಲಾಗಿದೆ.

ಗುಜರಾತ್ ಲೋಕಾಯುಕ್ತ ಆಯೋಗ ಮಸೂದೆ, 2013 ರಲ್ಲಿ ಏನಿದೆ?

- ಲೋಕಾಯುಕ್ತರ ನೇಮಕಾತಿಯಲ್ಲಿ ಆಯ್ಕೆ ಸಮಿತಿಯ ನಿರ್ಣಯವೇ ಅಂತಿಮವಾಗಿದ್ದು, ರಾಜ್ಯದ ರಾಜ್ಯಪಾಲರು ಸಮಿತಿಯ ನಿರ್ಣಯಕ್ಕೆ ಬದ್ಧವಾಗಿರಬೇಕಾಗಿದೆ.

- ಮಸೂದೆಯ ಸೆಕ್ಷನ್ 3 ರ ಪ್ರಕಾರ ಲೋಕಾಯುಕ್ತರ ನೇಮಕಾತಿಯನ್ನು ರಾಜ್ಯಪಾಲರು, ಆಯ್ಕೆ ಸಮಿತಿಯು ಅಂತಿಮಗೊಳಿಸಿದವರನ್ನೇ ಮಾಡಬೇಕು. ಮಸೂದೆಯಲ್ಲಿ ಒಬ್ಬ ಮುಖ್ಯ ಲೋಕಾಯುಕ್ತ ಮತ್ತು ನಾಲ್ಕು ಉಪ ಲೋಕಾಯುಕ್ತರನ್ನು ನೇಮಕ ಮಾಡಿಕೊಳ್ಳಲು ಅವಕಾಶ ನೀಡಲಾಗಿದೆ. ಆದರೆ ಗುಜರಾತ್ ಲೋಕಾಯುಕ್ತ ಕಾಯಿದೆ-1986 ರ ಪ್ರಕಾರ ಲೋಕಾಯುಕ್ತ ರ ನೇಮಕವನ್ನು ರಾಜ್ಯ ಮುಖ್ಯ ನ್ಯಾಯಾಧೀಶರು ಮತ್ತು ರಾಜ್ಯಪಾಲರ ಗಮನಕ್ಕೆ ತಂದು ಒಪ್ಪಿಗೆ ಪಡೆದ ಮೇಲೆ ನೇಮಕಾತಿಯನ್ನು ಮಾಡಿಕೊಳ್ಳಬೇಕಾಗಿತ್ತು.
- ಹೊಸ ಮಸೂದೆಯಡಿ ಯಾವ ಸರ್ಕಾರಿ ಸಂಸ್ಥೆಯನ್ನು ಲೋಕಾಯುಕ್ತ ವ್ಯಾಪ್ತಿಗೆ ತರಬೇಕು ಮತ್ತು ಯಾವ ಸಂಸ್ಥೆಯನ್ನು ವ್ಯಾಪ್ತಿಯಿಂದ ಹೊರಗಿಡಬೇಕು ಎಂದು ನಿರ್ಧರಿಸುವ ವಿಶೇಷ ಅಧಿಕಾರವನ್ನು ರಾಜ್ಯ ಸರ್ಕಾರಕ್ಕೆ ನೀಡಲಾಗಿದೆ.
- ಮತ್ತೊಂದು ವಿಶೇಷವೆಂದರೆ ಹೊಸ ಮಸೂದೆಯ ಸೆಕ್ಷನ್ 12(8) ರಲ್ಲಿ ಹೇಳುವಂತೆ ಯಾರು ಕಾಯಿದೆಗೆ ವಿರುದ್ದವಾಗಿ ಮಾಹಿತಿಯನ್ನು ಸಾರ್ವಜನಿಕರಿಗೆ ಬಹಿರಂಗಪಡಿಸುವವರೋ ಅಥವಾ ಪತ್ರಿಕೆಗಳಲ್ಲಿ ಮುದ್ರಿಸುವವರೋ ಅಂಥವರಿಗೆ ಎರಡು ವರ್ಷ ಜೈಲು ಜತೆಗೆ ಎರಡು ಲಕ್ಷ ದಂಡವನ್ನು ವಿಧಿಸಲಾಗುವುದು.

ಗುಜರಾತ್ ಲೋಕಾಯುಕ್ತ ನೇಮಕ ವಿವಾದ:

- ಕಳೆದ ವರ್ಷ ಗುಜರಾತ್ ನ ರಾಜ್ಯಪಾಲರಾದ ಕಮಲ ಬೆನಿವಾಲ್ ರವರು ಆರ್.ಎ.ಮೆಹ್ತಾ ರವರನ್ನು ಗುಜರಾತ್ ನ ರಾಜ್ಯಪಾಲರಾಗಿ ನೇಮಕಮಾಡಿ ಆದೇಶ ಹೊರಡಿಸಿದ್ದರು. ರಾಜ್ಯ ಸರ್ಕಾರವನ್ನು ಕಡೆಗಣಿಸಿ ರಾಜ್ಯಪಾಲರು ತಮ್ಮ ಇಚ್ಚೆಯಂತೆ ನೇಮಕ ಮಾಡಿದ್ದಾರೆ ಎಂದು ಮತ್ತು ನೇಮಕಾತಿಯಲ್ಲಿ ರಾಜ್ಯಪಾಲರಿಗೆ ಯಾವುದೇ ಅಧಿಕಾರವಿಲ್ಲವೆಂದು ಮೋದಿ ಗುಡುಗಿದ್ದರು. ರಾಜ್ಯಪಾಲರ ಕ್ರಮವನ್ನು ಗುಜರಾತ್ ಹೈಕೋರ್ಟ್ ಎತ್ತಿ ಹಿಡಿಯಿತು ಅಲ್ಲದೇ ಸುಪ್ರೀಂ ಕೋರ್ಟ ಸಹ ರಾಜ್ಯಪಾಲರೇ ಸರಿ ಎಂದು ತೀರ್ಪು ನೀಡಿತ್ತು.

**ಅತ್ಯಾಚಾರ ತಡೆ ಮಸೂದೆ-2013 ಕ್ಕೆ ರಾಷ್ಟ್ರಪತಿಗಳ ಸಹಿ**

ದೇಶದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿದ್ದ ಅತ್ಯಚಾರ ತಡೆ ಮಸೂದೆಗೆ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ರವರು ಅಂಕಿತ ಹಾಕಿದ್ದು, ಅದರ ಅಧಿಕೃತ ಪ್ರಕಟಣೆ ಹೊರಬಿದ್ದಿದೆ. ಹಲವು ಮಾರ್ಪಾಟು ಮತ್ತು ತಿದ್ದುಪಡಿಗಳೊಂದಿದೆ ಕಾಯಿದೆಯು ಕೊನೆಗೂ ಅಧಿಕೃತವಾಗಿ ಕಾನೂನಿನ ಮಾನ್ಯತೆಯನ್ನು ಪಡೆದುಕೊಂಡಿದೆ. ಮಸೂದೆಯು ಮಾರ್ಚ್ 19 ರಂದು ಲೋಕಸಭೆಯಲ್ಲಿ ಮತ್ತು ಮಾರ್ಚ್ 21 ರಂದು ರಾಜ್ಯಸಭೆಯಲ್ಲಿ ಅನುಮೋದನೆಯನ್ನು ಪಡೆದಿತ್ತು.

ಅತ್ಯಾಚಾರ ತಡೆ ಕಾಯಿದೆ-2013:

ದೆಹಲಿಯ ಯುವತಿ "ನಿರ್ಭಯ" ಳ ಮೇಲೆ ನಡೆಸಿದ ಸಾಮೂಹಿಕ ಅತ್ಯಾಚಾರದ ಬಳಿಕ ದೇಶದ ಎಲ್ಲೆಡೆ ಸರ್ಕಾರದ ವಿರುದ್ಧ ಪ್ರತಿಭಟನೆಗಳು ನಡೆದಿದ್ದವು. ಮಹಿಳೆಯರ ಸುರಕ್ಷತೆ ಬಗ್ಗೆ ಎಚ್ಚೆತ್ತುಕೊಂಡ ಸರ್ಕಾರ ಕಾಮುಕರಿಗೆ ಕಡಿವಾಣ ಹಾಕುವ ಸಲುವಾಗಿ ಕಾಯಿದೆಯನ್ನು ಜಾರಿಗೆ ತರಲು ನಿರ್ಧರಿಸಿತು. ಪರ ಮತ್ತು ವಿರೋಧ ನಡುವೆಯು ಮಸೂದೆ ಈಗ ಕಾನೂನು ಆಗಿ ಜಾರಿಗೊಳ್ಳಲಿದೆ.

<u>ಮಸೂದೆಯ ವಿಶೇಷತೆಗಳು</u>:

- ಈ ಮಸೂದೆಯಲ್ಲಿ ಭಾರತ ದಂಡ ಸಂಹಿತೆ, ಅಪರಾಧಿ ನಿಯಮ ಸಂಹಿತೆ, ಭಾರತೀಯ ಸಾಕ್ಷ್ಯ ಕಾನೂನು ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ ಕಾನೂನಿನಲ್ಲಿ ತಿದ್ದುಪಡಿ ತರಲಾಗಿದೆ.
- ಚರ್ಚೆ ಮತ್ತು ವಿವಾದಕ್ಕೆ ಎಡೆಮಾಡಿಕೊಟ್ಟಿದ್ದ ಸಮ್ಮತಿಯ ಲೈಂಗಿಕ ಕ್ರಿಯೆಯ ವಯೋಮಿತಿಯನ್ನು 18 ವರ್ಷಕ್ಕೆ ನಿಗದಿಪಡಿಸಲಾಗಿದೆ.
- ಅತ್ಯಾಚಾರ ಪ್ರಕರಣದಲ್ಲಿ ಸಾಬೀತಾಗುವ ಅಪರಾಧಿಗಳಿಗೆ ಕನಿಷ್ಠ 20 ವರ್ಷಕ್ಕಿಂತ ಕಡಿಮೆ ಇಲ್ಲದಂತೆ ಶಿಕ್ಷೆ ಮತ್ತು ಗಂಭೀರ ಪ್ರಕರಣಗಳಲ್ಲಿ ಗಲ್ಲು ಶಿಕ್ಷೆ ವಿಧಿಸುವ ಅವಕಾಶ ಕಲ್ಪಿಸಲಾಗಿದೆ.
- ಮಹಿಳೆಯರನ್ನು ಚುಡಾಯಿಸುವುದು, ಅಸಭ್ಯವಾಗಿ ವರ್ತಿಸುವುದು, ಅಶ್ಲೀಲ ಪದಗಳಿಂದ ನಿಂದಿಸುವುದು, ಲೈಂಗಿಕ ಕ್ರಿಯೆಯನ್ನು ಕದ್ದು ನೋಡುವ ಮೊದಲ ಅಪರಾಧಕ್ಕೆ ಜಾಮೀನು ಮತ್ತು ಅಪರಾಧ ಪುನರಾವರ್ತನೆಯಾದರೆ ಜಾಮೀನು ರಹಿತ ಅಪರಾಧವೆಂದು ಪರಿಗಣನೆ.

  ಆಸಿಡ್ ದಾಳಿಗೆ ಅಪರಾಧಿಗೆ 10 ವರ್ಷ ಜೈಲು ಮತ್ತು ಆಸಿಡ್ ದಾಳಿ ಪ್ರಯತ್ನದಲ್ಲಿ ಮಹಿಳೆ ತನ್ನನ್ನು ತಾನು ರಕ್ಷಿಸಿಕೊಳ್ಳಲು ಎಲ್ಲಾ ರೀತಿಯ ಕಾನೂನು ಅವಕಾಶ
- ಅತ್ಯಾಚಾರ ಮತ್ತು ಆಸಿಡ್ ದಾಳಿಗೆ ಒಳಗಾದ ಮಹಿಳೆಗೆ ಯಾವುದೇ ಖಾಸಗಿ ಮತ್ತು ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತ ಮತ್ತು ಕಡ್ಡಾಯವಾಗಿ ಪ್ರಥಮ ಚಿಕಿತ್ಸೆ ನೀಡುವುದು. ಇದನ್ನು ನಿರಾಕರಿಸಿದ ವೈದ್ಯ ಸಂಸ್ಥೆಗಳ ಮೇಲೆ ಕಠಿಣ ಕ್ರಮ ಮತ್ತು 1 ವರ್ಷ ಜೈಲು ಶಿಕ್ಷೆ.

<u>**ಮಣಿಪುರ ಎನ್ ಕೌಂಟರ್ ಪ್ರಕರಣ ನಕಲಿ**</u>

ಮಣಿಪುರದಲ್ಲಿ ಸೇನಾ ಪಡೆ ಕಾನೂನು ಬಾಹಿರವಾಗಿ ನಡೆಸಿದ್ದ ಎನ್ ಕೌಂಟರ್ ಪ್ರಕರಣದ ನಿಜ ಬಣ್ಣ ಬಯಲಾಗಿದೆ. ಎನ್ ಕಾಂಟರ್ ಪ್ರಕರಣದ ತನಿಖೆ ನಡೆಸಲು ಸುಪ್ರೀಂ ಕೋರ್ಟ್ ರಚಿಸಿದ್ದ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದ್ದು, ಇದೊಂದು ನಕಲಿ ಪ್ರಕರಣ ಎಂದು ವರದಿಯಲ್ಲಿ ಸಲ್ಲಿಸಿದೆ.

- ಕರ್ನಾಟಕದ ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಮಾಜಿ ಚುನಾವಣಾ ಆಯುಕ್ತ ಜೆ.ಎಂ.ಲಿಂಗ್ಡೋ ಮತ್ತು ಹಿರಿಯ ಪೋಲಿಸ್ ಅಧಿಕಾರಿಯೊಬ್ಬರನ್ನು ಒಳಗೊಂಡ 3 ಜನರ ಸಮಿತಿ ನಡೆಸಿದ ತನಿಖೆಯಲ್ಲಿ ಎನ್ ಕೌಂಟರ್ ಗೆ ಬಲಿಯಾದವರ ಮೇಲೆ ಯಾವುದೇ ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿಲ್ಲ ಎಂದು ವರದಿಯಲ್ಲಿ ಹೇಳಿದೆ.
- ಸುಪ್ರೀಂ ಕೋರ್ಟ್ ನ ಮುಖ್ಯ ನ್ಯಾಯಾಧೀಶರಾದ ಅಫ್ತಬ್ ಆಲಂ ಮತ್ತು ರಂಜನಾ ಪ್ರಕಾಶ್ ದೇಸಾಯಿರವರನ್ನು ಒಳಗೊಂಡ ಪೀಠ ಪ್ರಕರಣವನ್ನು ಆಲಿಸಿದ್ದು, ಕೋರ್ಟ ನಿಲುವನ್ನು ಏಪ್ರಿಲ್ 9 ರಂದು ಪ್ರಕಟಿಸುವುದಾಗಿ ಹೇಳಿದೆ.
- ಸೇನಾಪಡೆಯು ಕಾನೂನು ಬಾಹಿರವಾಗಿ "ಎನ್ ಕೌಂಟರ್" ಗಳನ್ನು ನಡೆಸಿದ್ದು, ಇದರಿಂದ ಬಾಲಕನೊಬ್ಬ ಸೇರಿದಂತೆ ನೂರಾರು ಅಮಾಯಕರು ಬಲಿಯಾಗಿದ್ದಾರೆ ಎಂದು ಆರೋಪಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಜನವರಿ 2 ರಂದು ಈ ಬಗ್ಗೆ ತನಿಖೆ ನಡೆಸಲು ನ್ಯಾ.ಸಂತೋಷ್ ಹೆಗ್ಡೆ ನೇತೃತ್ವದಲ್ಲಿ ಮೂರು ಮಂದಿ ಸಮಿತಿಯನ್ನು ರಚಿಸಿತ್ತು.

<u>**ಸಕ್ಕರೆ ವಲಯ ವಿನಿಯಂತ್ರಣಕ್ಕೆ ಕೇಂದ್ರ ಆರ್ಥಿಕ ವ್ಯವಹಾರಗಳ ಕುರಿತಾದ ಸಮಿತಿ ಒಪ್ಪಿಗೆ**</u>

ಆರ್ಥಿಕ ಸುಧಾರಣೆಗಳ ಹಾದಿಯಲ್ಲಿ ಮತ್ತೊಂದು ದಿಟ್ಟ ಹೆಜ್ಜೆ ಇಟ್ಟಿರುವ ಕೇಂದ್ರ ಸರ್ಕಾರ, ಸಕ್ಕರೆ ವಲಯಗಳನ್ನು ಭಾಗಶಃ ವಿನಿಯಂತ್ರಣಗೊಳಿಸಿದೆ. ಇದರಿಂದ ಸಕ್ಕರೆ ಕಾರ್ಖಾನೆಗಳ ಬಹು ದಿನದ ಕನಸು ನನಸಾಗಲಿದೆ. ಅಂದರೆ ಇನ್ನು ಮುಂದೆ ಯಾವುದೇ ಸಕ್ಕರೆ ಕಾರ್ಖಾನೆಗಳು ತಮ್ಮ ಉತ್ಪಾದನೆಯ ಶೇ.10 ರಷ್ಟು ಸಕ್ಕರೆಯನ್ನು (ಲೇವಿ ಶುಗರ್) ಕಡಿಮೆ ದರದಲ್ಲಿ ನೀಡುವಂತಿಲ್ಲ. ಸರ್ಕಾರದ ಈ ನಿರ್ಧಾರದಿಂದ ಸಕ್ಕರೆ ಉದ್ಯಮಕ್ಕೆ ಪ್ರತಿ ವರ್ಷ ರೂ. 3000 ಕೋಟಿ ಉಳಿತಾಯವಾಗಲಿದೆ ಎಂದು ಅಂದಾಜಿಸಲಾಗಿದೆ.

- ಸರ್ಕಾರದ ಈ ನಿರ್ಧಾರದಿಂದ ಪಡಿತರ ವ್ಯವಸ್ಥೆಯಲ್ಲಿ ದೊರೆಯುತ್ತಿರುವ ಸಕ್ಕರೆಯ ಬೆಲೆಯಲ್ಲಿ ಏರಿಕೆಯಾಗುವುದಿಲ್ಲ. ಪಡಿತರ ವ್ಯವಸ್ಥೆಗೆ ಬೇಕಾದ ಸಕ್ಕರೆಯನ್ನು ಆಯಾ ರಾಜ್ಯಗಳು ಸ್ಪರ್ಧಾತ್ಮಕ ದರದಲ್ಲಿ ಮುಕ್ತ ಮಾರುಕಟ್ಟೆಯಿಂದ ಖರೀದಿ ಮಾಡಲಿವೆ. ಮುಕ್ತ ಮಾರುಕಟ್ಟೆ ದರ ಮತ್ತು ಪಡಿತರ ವ್ಯವಸ್ಥೆಯಲ್ಲಿನ ಪೂರೈಕೆ ದರವನ್ನು ಕೇಂದ್ರ ಸರ್ಕಾರ ಭರಿಸಲಿದೆ.
- ಈ ನಿರ್ಧಾರದಿಂದ ಈ ಹಿಂದೆ ರೂ. 2600 ಕೋಟಿ ನಷ್ಟಿದ್ದ ಸಕ್ಕರೆ ಮೇಲಿನ ಸಬ್ಸಿಡಿ ಹೊರೆ ಇನ್ನು 5300 ಕೋಟಿ ರೂ. ದಾಟಲಿದೆ.

ಸಕ್ಕರೆ ಕಾರ್ಖಾನೆಗಳಿಗೆ ಏನು ಲಾಭ?

- ಸರ್ಕಾರದ ಈ ಕ್ರಮದಿಂದ ಸಕ್ಕರೆ ಕಾರ್ಖಾನೆಗಳು ಇದುವರೆಗೂ ಪಾಲಿಸಿಕೊಂಡು ಬಂದಿದ್ದ ಲೇವಿ ಶುಗರ್ ಪದ್ದತಿ ರದ್ದಾಗಲಿದೆ. ಅಂದರೆ ಇದುವರೆಗೂ ಸಕ್ಕರೆ ಕಾರ್ಖಾನೆಗಳು ತಮ್ಮ ಉತ್ಪಾದನೆಯ ಶೇ.10 ರಷ್ಟು ಸಕ್ಕರೆಯನ್ನು ಕಡಿಮೆ ದರದಲ್ಲಿ ಸರ್ಕಾರಕ್ಕೆ ನೀಡಬೇಕಿತ್ತು. ಇದನ್ನು ಲೇವಿ ಶುಗರ್ ಎನ್ನಲಾಗುತಿತ್ತು. ಈ ಸಕ್ಕರೆಯನ್ನು ಸರ್ಕಾರ ಪಡಿತರ ವ್ಯವಸ್ಥೆಗೆ ಬಳಸಿಕೊಳ್ಳುತ್ತಿತ್ತು.
- ಲೇವಿ ನೀಡುವುದನ್ನು ರದ್ದಾಗಿರುವುದರಿಂದ ಸಕ್ಕರೆ ಕಾರ್ಖಾನೆಗಳಿಗೆ ವಾರ್ಷಿಕ ರೂ.3000 ಕೋಟಿ ಲಾಭವಾಗಲಿದೆ

ಯಾವ ಆಧಾರದ ಮೇಲೆ?

- ಸಕ್ಕರೆ ವಲಯದ ನಿಯಂತ್ರಣವನ್ನು ಕೈಬಿಡುವ ಬಗ್ಗೆ ಅಧ್ಯಯನ ನಡೆಸಿ ಶಿಫಾರಸ್ಸು ಮಾಡುವ ಸಲುವಾಗಿ ಸರ್ಕಾರ ಪ್ರಧಾನಮಂತ್ರಿಗಳಿಗೆ ಆರ್ಥಿಕ ಸಲಹೆಗಾರರಾಗಿರುವ "ಸಿ.ರಂಗರಾಜನ್" ನೇತೃತ್ವದ ಸಮಿತಿಯನ್ನು ನೇಮಿಸಿತ್ತು. ರಂಗರಾಜನ್ ಸಮಿತಿ ಸಕ್ಕರೆ ವಲಯವನ್ನು ವಿನಿಯಂತ್ರಣಗೊಳಿಸುವಂತೆ ಸರ್ಕಾರಕ್ಕೆ ತನ್ನ ಶಿಫಾರಸಿನಲ್ಲಿ ಸೂಚಿಸಿತ್ತು.

<u>**ಇನ್ನೂ 78 ಜಿಲ್ಲೆಗಳಲ್ಲಿ ನೇರ ನಗದು ಯೋಜನೆ**</u>

ಯುಪಿಎ ಸರ್ಕಾರದ ಮಹತ್ವದ ಯೋಜನೆಯಾದ "ನೇರ ನಗದು ಯೋಜನೆ"ಯನ್ನು ಮತ್ತಷ್ಟು ವಿಸ್ತರಿಸಲು ಕೇಂದ್ರ ಸರ್ಕಾರ ತಿರ್ಮಾನಿಸಿದೆ. ನೇರ ನಗದು ವರ್ಗಾವಣೆ ಯೋಜನೆಯ ಕುರಿತಾಗಿ ಪ್ರಧಾನ ಮಂತ್ರಿ ನೇತೃತ್ವದಲ್ಲಿ ರಚಿಸಲಾಗಿರುವ ಸಮಿತಿ ಏಪ್ರಿಲ್ 5 ರಂದು ನಡೆಸಿದ ಸಭೆಯಲ್ಲಿ ದೇಶದ ಇತರೆ 78 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಮುಂದಿನ ಹಂತದಲ್ಲಿ ಅನುಷ್ಠಾನಗೊಳಿಸಲು ನಿರ್ಣಯ ಕೈಗೊಂಡಿದೆ. ಇದರಿಂದ ದೇಶದ 1/5 ರಷ್ಟು ಭಾಗದಲ್ಲಿ ಈ ಯೋಜನೆ ಜಾರಿಗೊಳ್ಳಲಿದೆ.

ಸಮಿತಿಯಲ್ಲಿ ಕೈಗೊಂಡಿರುವ ನಿರ್ಣಯಗಳು:

- ನೇರ ನಗದು ಯೋಜನೆಯ ಎರಡನೇ ಹಂತ ಜುಲೈ 1, 2013 ರಿಂದ ಆರಂಭಗೊಳ್ಳಲಿದ್ದು, ಈ ಯೋಜನೆ ಕಾರ್ಯಗತಗೊಂಡ ಜಿಲ್ಲೆಗಳ ಸಂಖ್ಯೆ 121 ಕ್ಕೆ ಏರಲಿದೆ.
- ಮೊದಲ ಹಂತದಲ್ಲಿ ಯೋಜನೆ ಜಾರಿಗೆ ಬರದ ತಮಿಳುನಾಡು, ಉತ್ತರ ಪ್ರದೇಶ, ಒಡಿಶಾ, ಗುಜರಾತ್, ಬಿಹಾರ್, ಹಿಮಾಚಲ ಪ್ರದೇಶ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಯೋಜನೆಯನ್ನು ಎರಡನೇ ಹಂತದಲ್ಲಿ ಜಾರಿಗೊಳಿಸಲಾಗುವುದು.
- ಇದೇ ಸಂದರ್ಭದಲ್ಲಿ LPG ಸಬ್ಸಿಡಿ ಸಹ ಈ ಯೋಜನೆಯಡಿ ತರಲು ನಿರ್ಧರಿಸಲಾಗಿದೆ. ಮೊದಲ ಬಾರಿಗೆ LPG ಸಬ್ಸಿಡಿಯನ್ನು ಒಂದು ಜಿಲ್ಲೆಯಲ್ಲಿ ಮತ್ತು ಮೇ,15 2013 ರ ಒಳಗೆ 20 ಜಿಲ್ಲೆಗಳಿಗೆ ವಿಸ್ತರಿಸಲು ಸಮ್ಮತಿ ಸೂಚಿಸಿದೆ. ಜತೆಗೆ ವೃದ್ದಾಪ್ಯ ವೇತನ, ವಿಧವಾ ವೇತನ ಮತ್ತು ವಿಕಲ ಚೇತನರಿಗೆ ನೀಡುವ ವೇತನವನ್ನು ಜುಲೈ 1, 2013 ರಿಂದ ನೇರ ನಗದು ವರ್ಗಾವಣೆಯಡಿ ತರಲಾಗುವುದು.
- ಯೋಜನೆಯಲ್ಲಿರುವ ಲೋಪದೋಷಗಳನ್ನು ಸರಿಪಡಿಸಿ ಮತ್ತು ವಿವಿಧ ಇಲಾಖೆಗಳ ನಡುವೆ ಸಮನ್ವಯತೆ ಕಾಪಾಡಿ ಯೋಜೆಯನ್ನು ಸುಗಮವಾಗಿ ಅನುಷ್ಠಾನಕ್ಕೆ ತರಲು "ಮಿಷನ್ ಡೈರೆಕ್ಟರ್" ಹುದ್ದೆಯನ್ನು ರಚಿಸಲು ಸಹ ಸಮಿತಿ ಒಪ್ಪಿಗೆ ಸೂಚಿಸಿದೆ.
- ಅಂಚೆ ಕಚೇರಿಗಳಲ್ಲಿ ಕೋರ್ ಬ್ಯಾಂಕಿಂಗ್ ವ್ಯವಸ್ಥೆಯನ್ನು ಅಳವಡಿಸಿಕೊಂಡು ಯೋಜನೆಯನ್ನು ಮತ್ತಷ್ಟು ಯಶಸ್ಸುಗೊಳಿಸಲಾಗುವುದು. ಮೊದಲ ಹಂತದಲ್ಲಿ 51 ಜಿಲ್ಲೆಯ ಅಂಚೆ ಕಚೇರಿಗಳನ್ನು ಕೋರ್ ಬ್ಯಾಂಕಿಂಗ್ ವ್ಯವಸ್ಥೆಗೆ ಒಳಪಡಿಸಲಾಗುವುದು.

**ರಾಷ್ಟ್ರೀಯ ರಕ್ಷಣಾ ವಿಶ್ವವಿದ್ಯಾಲಯ ಸ್ಥಾಪನೆಗೆ ಒಪ್ಪಿಗೆ**

ದೇಶದಲ್ಲೇ ಪ್ರಥಮವೆನಿಸಿರುವ "ಭಾರತೀಯ ರಾಷ್ಟ್ರೀಯ ರಕ್ಷಣಾ ವಿಶ್ವವಿದ್ಯಾಲಯ (Indian National Defence University)" ಸ್ಥಾಪನೆಗೆ ಹಸಿರು ನಿಶಾನೆ ದೊರೆತಿದೆ. ರಕ್ಷಣಾ ಸಚಿವ ಎ.ಕೆ.ಆಂಟೋನಿ ನೇತೃತ್ವದ ಸಭೆಯಲ್ಲಿ ಈ ವಿಶ್ವವಿದ್ಯಾಲಯ ಸ್ಥಾಪನೆಗೆ ಅನುಮತಿ ದೊರೆತಿದ್ದು, ಮೇ ತಿಂಗಳಲ್ಲಿ ಪ್ರಧಾನಿ ಮನಮೋಹನ್ ಸಿಂಗ್ ರವರು ಶಂಕು ಸ್ಥಾಪನೆ ನೆರವೇರಿಸಲಿದ್ದಾರೆ.

ವಿಶ್ವವಿದ್ಯಾಲಯ ಎಲ್ಲಿ?

- ಹರಿಯಾಣದ ಗುರಾಂಗವ್ ಬಳಿ ಇರುವ ಬಿನೊಲ (Binola)ದಲ್ಲಿ ಈ ವಿಶ್ವವಿದ್ಯಾಲಯ ತಲೆ ಎತ್ತಲಿದೆ. ಸುಮಾರು 205 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ಅಸ್ತಿತ್ವಕ್ಕೆ ಬರಲಿರುವ ಈ ವಿವಿ ಯ ಯೋಜನಾ ವೆಚ್ಚ ರೂ 395 ಕೋಟಿ.

ವಿವಿ ಯ ರೂಪುರೇಷೆಗಳು?

- ವಿಶ್ವವಿದ್ಯಾಲಯ ಕ್ಕೆ ಸಂಬಂಧಪಟ್ಟ ರೂಪುರೇಷೆಗಳನ್ನು ಮುಂದಿನ ದಿನಗಳಲ್ಲಿ ಅಂತಿಮಗೊಳಿಸಲಾಗುವುದು. ಆದರೆ ಎ.ಕೆ.ಆಂಟನಿ ರವರು ಹೇಳಿರುವಂತೆ ಇದೊಂದು ಸ್ವಾಯುತ್ತತೆ ಸಂಸ್ಥೆಯಾಗಿ ಕಾರ್ಯನಿರ್ವಹಿಸಲಿದ್ದು, ಸಂಸತ್ತಿನ ಕಾಯಿದೆ ಮೂಲಕ ಸ್ಥಾಪಿಸಲಾಗುವುದು.
- ಭಾರತದ ರಾಷ್ಟ್ರಪತಿಗಳು ಈ ವಿಶ್ವವಿದ್ಯಾಲಯದ ವೀಕ್ಷಕ ಕುಲಪತಿಗಳಾಗಿ ಮತ್ತು ರಕ್ಷಣಾ ಸಚಿವರು ಉಪ ಕುಲಪತಿಗಳಾಗಿರುವರು. ಈಗಿರುವ ನ್ಯಾಷನಲ್ ಡಿಫೆನ್ಸ್ ಕಾಲೇಜ್ (ದೆಹಲಿ), ಕಾಲೇಜ್ ಆಫ್ ಡಿಫೆನ್ಸ್ ಮ್ಯಾನೇಜ್

ಮೆಂಟ್ (ಸಿಕಂದರಬಾದ್), ಡಿಫೆನ್ಸ್ ಸರ್ವಿಸ್ ಸ್ಟಾಫ್ ಕಾಲೇಜ್ (ವೆಲ್ಲಿಂಗಟನ್) ಮತ್ತು ನ್ಯಾಷನಲ್ ಡಿಫೆನ್ಸ್ ಅಕಾಡೆಮಿ (ಕಡಕ್ಸವಲ) ಬೇರೆ ವಿಶ್ವವಿದ್ಯಾಲಯಗಳಡಿ ಕಾರ್ಯನಿರ್ವಹಿಸುತ್ತಿದ್ದು, ಈ ವಿವಿ ಅಸ್ತಿತ್ವಕ್ಕೆ ಬಂದ ಮೇಲೆ ಇದರ ಅಡಿಯಲ್ಲಿ ತರಲಾಗುವುದು.

- ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪೈಕಿ ಶೇ.65 ರಷ್ಟು ವಿದ್ಯಾರ್ಥಿಗಳನ್ನು ಮಿಲಿಟರಿ ಕ್ಷೇತ್ರಗಳಿಂದ ಆರಿಸಿಕೊಳ್ಳಲಾಗುವುದು. ಉಳಿದವರು ಪೋಲಿಸ್ ಮತ್ತು ಇತರೆ ಸರ್ಕಾರಿ ಏಜೆನ್ಸಿಗಳು ಆಗಿರಲಿದ್ದಾರೆ.
- ಒಟ್ಟರೆಯಾಗಿ ರಕ್ಷಣಾ ಕ್ಷೇತ್ರದ ನಿರ್ವಹಣೆಯ ಸಾಮರ್ಥ್ಯವನ್ನು ಮತ್ತು ಅದಕ್ಕೆ ಬೇಕಾಗುವ ಉನ್ನತ ದರ್ಜೆಯ ಜ್ಞಾನವನ್ನು ಈ ವಿವಿ ನೀಡಲಿದೆ.

ವಿವಿ ಹುಟ್ಟಿದ್ದು ಹೇಗೆ?

- ರಕ್ಷಣಾ ಕ್ಷೇತ್ರಕ್ಕೆ ಸಂಬಂಧಿಸಿದ ವಿಶ್ವವಿದ್ಯಾಲಯ ಪರಿಕಲ್ಪನೆ ಮೊದಲು ಹುಟ್ಟಿದ್ದು 2001 ರಲ್ಲಿ. 1999 ರಲ್ಲಿ ನಡೆದ ಕಾರ್ಗಿಲ್ ಯುದ್ಧದ ನಂತರ ಸಲ್ಲಿಸಲಾದ "Reforming National Security System" ವರದಿಯಲ್ಲಿ ಇಂತಹ ವಿವಿ ಯ ಅವಶ್ಯಕತೆಯ ಬಗ್ಗೆ ಪ್ರಸ್ತಾಪಿಸಲಾಗಿತ್ತು.
- ಹರಿಯಾಣದ ಬಿರೊಲ ದಲ್ಲಿ ಸ್ಥಳಾವಕಾಶದ ಕೊರತೆ ಇರದ ಕಾರಣ ಮತ್ತು ರಾಷ್ಟ್ರ ರಾಜಧಾನಿ ದೆಹಲಿಗೆ ಸಮೀಪವಿರುವುದರಿಂದ ಈ ಪ್ರದೇಶವನ್ನೇ ಆರಿಸಿಕೊಳ್ಳಲಾಗಿದೆ.

## ಗೂಗಲ್ ಮ್ಯಾಪತಾನ್ (MAPATHON)-2013 ವಿರುದ್ಧ ಪ್ರಕರಣ ದಾಖಲು

ಗೂಗಲ್ ಆರಂಭಿಸಿದ ವಿನೂತನ ಸ್ಪರ್ಧೆಯಾದ ಮ್ಯಾಪತಾನ್ ವಿವಾದಕ್ಕೆ ಸಿಲುಕಿದೆ. ಗೂಗಲ್ ನ ಈ ಸ್ಪರ್ಧೆಯ ವಿರುದ್ಧ ದೆಹಲಿ ಪೋಲಿಸರಲ್ಲಿ ಪ್ರಕರಣ ದಾಖಲಾಗಿದ್ದು, ದೆಹಲಿ ಪೋಲಿಸರು ಪ್ರಕರಣದ ತನಿಖೆಯನ್ನು ಕೈಗೊಂಡಿದ್ದಾರೆ.

ಏನಿದು ಮ್ಯಾಪತಾನ್ 2013?

- "ಮ್ಯಾಪತಾನ್ 2013" ಗೂಗಲ್ ಭಾರತದಲ್ಲಿ ಆರಂಭಿಸಿದ ಭೂಪಟ ಬಿಡಿಸುವ ಸ್ಪರ್ಧೆ. ಈ ಸ್ಪರ್ಧೆಯನ್ನು ಫೆಬ್ರವರಿ 12 ರಿಂದ ಮಾರ್ಚ್ 25 ರ ವರೆಗೆ ಆಯೋಜಿಸಲಾಗಿತ್ತು. ಈ ಸ್ಪರ್ಧೆಯಲ್ಲಿ ಭಾಗವಹಿಸುವವರು ತಮ್ಮ ಸುತ್ತಮುತ್ತಲಿನ ಭೌಗೋಳಿಕ ಪ್ರದೇಶದ ನಕ್ಷೆಯನ್ನು ಬಿಡಿಸಿ ಅದನ್ನು ಗೂಗಲ್ ಗೆ ಕಳುಹಿಸಬೇಕಿತ್ತು. ಇದರಿಂದ ಭಾರತದ ಭೂಪಟದ ಸಂಪೂರ್ಣ ಚಿತ್ರಣ ದೊರೆಯಲ್ಲಿದ್ದು, ಬಳಕೆದಾರರಿಗೆ ತಮ್ಮ ಸ್ಥಳೀಯ ಪ್ರದೇಶಗಳ ಚಿತ್ರಣ ಸುಲಭವಾಗಿ ದೊರೆಯಲಿದೆ ಎಂಬುದು ಗೂಗಲ್ ನ ನಂಬಿಕೆ. ಉತ್ತಮ ಸ್ಪರ್ಧಾಳುಗಳಿಗೆ ಸ್ಮಾರ್ಟಫೋನ್, ಐಪ್ಯಾಡ್ ಮತ್ತು ಗಿಫ್ಟ್ ವೋಚರ್ ಗಳನ್ನು ಬಹುಮಾನ ನೀಡುವುದಾಗಿ ಸಹ ಗೂಗಲ್ ಘೋಷಿಸಿತ್ತು.

ವಿವಾದವೇನು?

- ಭಾರತದಲ್ಲಿ ಭೌಗೋಳಿಗ ಪ್ರದೇಶಗಳ ಭೂಪಟ ಸೇರ್ಪಡೆ ಅಧಿಕಾರ "ಸರ್ವೆ ಆಫ್ ಇಂಡಿಯಾ"ಗೆ ಮಾತ್ರ ಇದೆ. ಗೂಗಲ್ ಆಯೋಜಿಸಿದ್ದ ಈ ಸ್ಪರ್ಧೆಯಲ್ಲಿ ಸ್ಪರ್ಧಾಳುಗಳು ತಪ್ಪಾಗಿ ಭೂಪಟವನ್ನು ರಚಿಸಿದರೆ ವಿವಾದಕ್ಕೆ ಎಡಮಾಡಿಕೊಡಲಿದೆ. ಅಲ್ಲದೇ ಗಡಿ ಪ್ರದೇಶಗಳಲ್ಲಿ ಏರುಪೇರಾದರೆ ರಾಷ್ಟ್ರದ ಭದ್ರತೆಗೆ ದಕ್ಕೆ ಬರಲಿದೆ ಎಂಬುದು

"ಸರ್ವೆ ಆಫ್ ಇಂಡಿಯಾ"ದ ವಾದ. ಜತೆಗೆ ಗೂಗಲ್ ನ ಕ್ರಮ ಭಾರತದ ಭೂಪಟ ನಿಯಮಕ್ಕೆ ವಿರುದ್ಧವಾಗಿದೆ. ಈ ಕಾರಣಗಳಿಂದಾಗಿ ಸರ್ವೆ ಆಫ್ ಇಂಡಿಯಾ ಗೂಗಲ್ ವಿರುದ್ಧ ದೆಹಲಿ ಪೋಲಿಸರಲ್ಲಿ ಪ್ರಕರಣ ದಾಖಲಿಸಿದೆ.

**ಅಗ್ನಿ-II ಕ್ಷಿಪಣಿ ಯಶಸ್ವಿ ಪರೀಕ್ಷೆ**

ಸ್ವದೇಶಿ ನಿರ್ಮಿತ, ಅಣ್ವಸ್ತ್ರ ಸಿಡಿತಲೆಗಳನ್ನು ಹೊತ್ತಯ್ಯೊಬಲ್ಲ ಅಗ್ನಿ-II ಕ್ಷಿಪಣಿಯ ಪರೀಕ್ಷೆ ಯಶಸ್ವಿಯಾಗಿ ನೆರವೇರಿದೆ. ಒಡಿಶಾ ತೀರಾದ ವೀಲರ್ ಐಲ್ಯಾಂಡ್ ನಿಂದ ಉಡಾಯಿಸಲಾದ ಅಗ್ನಿ-II ಕ್ಷಿಪಣಿ ನಿರ್ದಿಷ್ಟಪಡಿಸಿದ ಗುರಿಯನ್ನು ಮುಟ್ಟುವಲ್ಲಿ ಯಶಸ್ವಿಯಾಯಿತು.

ಅಗ್ನಿ-II ಕ್ಷಿಪಣಿ

- ಅಗ್ನಿ-II ಸ್ವದೇಶಿ ನಿರ್ಮಿತ ಕ್ಷಿಪಣಿಯಾಗಿದ್ದು, ಹೈದ್ರಾಬಾದ್ ನ "ಅಡ್ವಾನ್ಸ್ ಡ್ ಡೈನಾಮಿಕ್ ಲ್ಯಾಬೋರೆಟರಿ" ಮತ್ತು "ಭಾರತ್ ಡೈನಾಮಿಕ್ ಲಿಮಿಟೆಡ್" ಸಂಸ್ಥೆಗಳು ಜಂಟಿಯಾಗಿ ನಿರ್ವಹಿಸಿದೆ.
- ಹದಿನಾಳು ಟನ್ ತೂಕವಿರುವ ಅಗ್ನಿ-II ಎರಡು ಹಂತಗಳಲ್ಲಿ ಕಾರ್ಯನಿರ್ವಹಿಸಲಿದೆ. 1000 ಕೆ.ಜಿ ಅಣ್ವಸ್ತ್ರ ಸಿಡಿತಲೆಗಳನ್ನು 2000 ಕಿ.ಮೀ ದೂರ ಕೊಂಡಯ್ಯಬಲ್ಲ ಸಾಮರ್ಥ್ಯವನ್ನು ಈ ಕ್ಷಿಪಣಿ ಹೊಂದಿದೆ. ಅಲ್ಲದೇ ನಿಖರವಾದ ನ್ಯಾವಿಗೇಷನ್ ವ್ಯವಸ್ಥೆಯನ್ನು ಈ ಕ್ಷಿಪಣಿ ಹೊಂದಿದೆ.
- ಅಗ್ನಿ-II DRDO ಅಭಿವೃದ್ಧಿ ಪಡಿಸುತ್ತಿರುವ ಅಗ್ನಿ ಸರಣಿಯ ಕ್ಷಿಪಣಿಗಳಲ್ಲಿ ಒಂದಾಗಿದೆ. ಅಗ್ನಿ-I (700 ಕಿ.ಮೀ), ಅಗ್ನಿ-III (3000 ಕಿ.ಮೀ), ಅಗ್ನಿ-IV (4000 ಕಿ.ಮೀ) ಮತ್ತು ಅಗ್ನಿ-V (5000 ಕಿ.ಮೀ) DRDO ಅಭಿವೃದ್ಧಿಪಡಿಸುತ್ತಿರುವ ಅಗ್ನಿ ಸರಣಿಯ ಇತರೆ ಕ್ಷಿಪಣಿಗಳು.
- ಅಗ್ನಿ-II ಕ್ಷಿಪಣಿಯ ಪ್ರಯೋಗಾರ್ಥ ಪರೀಕ್ಷೆಯನ್ನು ಕಳೆದ ಬಾರಿ ಆಗಸ್ಟ್ 9, 2012 ರಂದು ನಡೆಸಲಾಗಿತ್ತು. ಅದು ಸಹ ಯಶಸ್ವಿಯಾಗಿತ್ತು. ಈಗಾಗಲೇ ಅಗ್ನಿ-II ಕ್ಷಿಪಣಿಯನ್ನು ಸೇನೆಗೆ ಸೇರ್ಪಡೆಗೊಳಿಸಲಾಗಿದೆ.

**ರಾಜಸ್ತಾನದಲ್ಲಿ "ಉಚಿತ ವೈದ್ಯಕೀಯ ಪರೀಕ್ಷೆ" ಯೋಜನೆಗೆ ಚಾಲನೆ**

ವಿಶ್ವ ಆರೋಗ್ಯ ದಿನದ ಅಂಗವಾಗಿ ರಾಜಸ್ತಾನದಲ್ಲಿ "ಉಚಿತ ವೈದ್ಯಕೀಯ ಪರೀಕ್ಷೆ" ಯೋಜನೆಗೆ ಮುಖ್ಯಮಂತ್ರಿ ಅಶೋಕ್ ಗೆಹ್ಲಾಟ್ ರವರು ಚಾಲನೆ ನೀಡಿದರು. ಈ ಸೇವೆಯನ್ನು ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾತ್ರ ಆರಂಭಿಸಲಾಗಿದೆ. X-ರೇ, ECG ಸೇರಿದಂತೆ ಅತಿ ಪ್ರಮುಖ ವೈದ್ಯಕೀಯ ಪರೀಕ್ಷೆಗಳನ್ನು ಈ ಯೋಜನೆಯಡಿ ರೋಗಿಗಳು ಉಚಿತವಾಗಿ ಪಡೆಯಬಹುದು.

ಯೋಜನೆ ಬಗ್ಗೆ:

- ಯೋಜನೆಯನ್ನು ಮೂರು ಹಂತಗಳಲ್ಲಿ ಜಾರಿಗೊಳಿಸಲಾಗುವುದು. ಯೋಜನೆಯ ಪ್ರಥಮ ಹಂತ ಏಪ್ರಿಲ್ 7 ರಿಂದಲೇ ಆರಂಭಗೊಂಡಿದೆ. ಮೂತ್ರ ಪರೀಕ್ಷೆ, ರಕ್ತದಲ್ಲಿ ಸಕ್ಕರೆ ಅಂಶ ಪರೀಕ್ಷೆ, X-ರೇ, ECG ಸೇರಿದಂತೆ ಒಟ್ಟು 14 ತರದ ವೈದ್ಯಕೀಯ ಪರೀಕ್ಷೆಗಳ ಸೇವೆಯನ್ನು ಉಚಿತವಾಗಿ ಪ್ರಥಮ ಹಂತದಲ್ಲಿ ನೀಡಲಾಗುವುದು.

- ಯೋಜನೆಯ ಎರಡನೇ ಹಂತವನ್ನು ಜುಲೈ 1 (ವೈದ್ಯರ ದಿನ) ರಂದು ಜಾರಿಗೊಳಿಸಲಾಗುವುದು. ಈ ಹಂತದಲ್ಲಿ ಒಟ್ಟು 28 ತರಹದ ವೈದ್ಯಕೀಯ ಪರೀಕ್ಷೆಯನ್ನು ಉಚಿತವಾಗಿ ಮಾಡಲಾಗುವುದು. ಜತೆಗೆ ಸಮುದಾಯ ಆರೋಗ್ಯ ಕೇಂದ್ರಗಳಿಗೂ  ಯೋಜನೆಯನ್ನು ವಿಸ್ತರಿಸಲಾಗುವುದು.
- ಆಗಸ್ಟ್ 15, ಸ್ವಾತಂತ್ರ ದಿನದಂದು ಯೋಜನೆಯ ಮೂರನೇ ಹಂತವನ್ನು ಅನುಷ್ಟಾನಗೊಳಿಸಲಾಗುವುದು. ಈ ಹಂತದಲ್ಲಿ 15 ವೈದ್ಯಕೀಯ ಪರೀಕ್ಷೆಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಉಚಿತವಾಗಿ ಮಾಡಲಾಗುತ್ತದೆ.

## ಮುಂದಿನ ಐದು ವರ್ಷಗಳಲ್ಲಿ ನ್ಯಾಯಾಧೀಶರ ಸಂಖ್ಯೆ ದ್ವಿಗುಣಗೊಳಿಸಲು ಕೇಂದ್ರ ಒಪ್ಪಿಗೆ

ಇತ್ಯಾರ್ಥವಾಗದೇ ಬಾಕಿ ಉಳಿದಿರುವ ಪ್ರಕರಣಗಳನ್ನು ತ್ವರಿತ ಗತಿಯಲ್ಲಿ ವಿಲೇವಾರಿ ಮಾಡಲು ಈಗಿರುವ ನ್ಯಾಯಾಧೀಶರ ಸಂಖ್ಯೆಯನ್ನು ಮುಂದಿನ ಐದು ವರ್ಷಗಳಲ್ಲಿ ದ್ವಿಗುಣಗೊಳಿಸಲು ಕೇಂದ್ರ ಸರ್ಕಾರ ತೀರ್ಮಾನಿಸಿದೆ. ಸರ್ಕಾರದ ಈ ಕ್ರಮದಿಂದ ಮುಂದಿನ ಐದು ವರ್ಷಗಳಲ್ಲಿ ನ್ಯಾಯಾಧೀಶರ ಸಂಖ್ಯೆ 37000 ಕ್ಕೆ ಏರಿಕೆಯಾಗಲಿದೆ.

- ಇತ್ತೀಚೆಗೆ ನಡೆದ "ಕಾನೂನು ಮತ್ತು ನ್ಯಾಯಾಂಗ ಸುಧಾರಣೆ" ಕುರಿತಾದ ಕಾರ್ಯಕ್ರಮದಲ್ಲಿ ಕೇಂದ್ರ ಕಾನೂನು ಸಚಿವ ಅಶ್ವಿನ್ ಕುಮಾರ್ ರವರು ಈ ವಿಷಯವನ್ನು ಬಹಿರಂಗಪಡಿಸಿದರು.
- ಸದ್ಯ ದೇಶದಲ್ಲಿ ಒಂದು ಮಿಲಿಯನ್ ಜನಸಂಖ್ಯೆಗೆ 15.47 ನ್ಯಾಯಾಧೀಶರಿದ್ದಾರೆ. ಮಿಲಿಯನ್ ಜನಸಂಖ್ಯೆಗೆ 30 ನ್ಯಾಯಾಧೀಶರ ಲಭ್ಯತೆಯನ್ನು ಕಾಯ್ದುಕೊಳ್ಳಲು ಸರ್ಕಾರ ಈ ಕ್ರಮಕೈಗೊಂಡಿದೆ.
- ಇದೇ ಸಂದರ್ಭದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲೆ ನಡೆಸಲಾಗುವ ಅತ್ಯಾಚಾರ ಮುಂತಾದ ಹೀನಾ ಕೃತ್ಯಗಳನ್ನು ವಿಚಾರಣೆ ನಡೆಸಲು ತ್ವರಿತ ನ್ಯಾಯಾಲಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮವಹಿಸುವುದಾಗಿ ಹೇಳಲಾಯಿತು. ತ್ವರಿತ ನ್ಯಾಯಾಲಯಗಳಿಗೆ ಮೂಲ ಸೌಕರ್ಯವನ್ನು ಒದಗಿಸಲು ಕೇಂದ್ರ ಸರ್ಕಾರ 75:25 ರ ಅನುಪಾತದಲ್ಲಿ ಅನುದಾನವನ್ನು ಶೀಘ್ರವೇ ಬಿಡುಗಡೆಗೊಳಿಸಲು ಸಹ ಒಪ್ಪಿತ್ತು.
- ಸದ್ಯ ದೇಶದ ಹೈ ಕೋರ್ಟ್ ಗಳಲ್ಲಿ 906 ನ್ಯಾಯಾಧೀಶರು ಸೇವೆ ಸಲ್ಲಿಸುತ್ತಿದ್ದು, ಮುಂದಿನ ಮೂರು ವರ್ಷಗಳಲ್ಲಿ ಈ ಸಂಖ್ಯೆಯು ಶೇ.25 ಮತ್ತು ಐದು ವರ್ಷಗಳಲ್ಲಿ ಶೇ.50 ರಷ್ಟು ಹೆಚ್ಚಿಸಲಾಗುವುದು.

## 2013 ಟೈಮ್ಸ್ ಆಫ್ ಇಂಡಿಯಾ ಪ್ರಶಸ್ತಿ (TOIFA): ಬರ್ಫಿಗೆ ಅತ್ಯುತ್ತಮ ಚಿತ್ರ ಪ್ರಶಸ್ತಿ

ಟೈಮ್ಸ್ ಆಫ್ ಇಂಡಿಯಾ ನೀಡಲಾಗುವ ಪ್ರಶಸ್ತಿಯನ್ನು ಪ್ರಕಟಿಸಲಾಗಿದ್ದು, ಬರ್ಫಿ ಚಿತ್ರ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಭಾಜನವಾಯಿತು. TOIFA ಪ್ರಶಸ್ತಿಯ ಪ್ರಮುಖ ವಿವರ ಇಲ್ಲಿದೆ.

- TOIFA ಅತ್ಯುತ್ತಮ ಚಿತ್ರ: ಬರ್ಫಿ
- TOIFA ಅತ್ಯುತ್ತಮ ನಟ: ರಣಬೀರ್ ಕಪೂರ್ (ಬರ್ಫಿ)
- TOIFA ಅತ್ಯುತ್ತಮ ನಟಿ: ಪ್ರಿಯಾಂಕ ಚೋಪ್ರ
- TOIFA ಅತ್ಯುತ್ತಮ ಪೋಷಕ ನಟ: ಅನ್ನು ಕಪೂರ್

- TOIFA ಅತ್ಯುತ್ತಮ ಪೋಷಕ ನಟಿ: ಡಾಲಿ ಅಹ್ಲುವಾಲಿಯ
- TOIFA ಅತ್ಯುತ್ತಮ ನಿರ್ದೇಶಕ: ಅನುರಾಗ್ ಬಸು (ಬರ್ಫಿ)
- TOIFA ಅತ್ಯುತ್ತಮ ನಿರ್ದೇಶಕ: ವಿಜಯ್ ಅತುಲ್
- TOIFA ಅತ್ಯುತ್ತಮ ನಟ (ವಿಮರ್ಶಕರ): ಇರ್ಫಾನ್ ಖಾನ್
- TOIFA ಅತ್ಯುತ್ತಮ ನಟಿ (ವಿಮರ್ಶಕರ): ದೀಪಿಕಾ ಪಡುಕೋಣೆ

**ಒಡಿಶಾದಲ್ಲಿ ದೇಶದ ಮೊದಲ ಸಾರ್ವಜನಿಕ ಆರೋಗ್ಯ ವಿಶ್ವವಿದ್ಯಾಲಯ**

ದೇಶದ ಮೊದಲ ಸಾರ್ವಜನಿಕ ಆರೋಗ್ಯ ವಿಶ್ವವಿದ್ಯಾಲಯ (Public Health University) ಒಡಿಶಾ ರಾಜ್ಯದಲ್ಲಿ ಉದಯಿಸಲಿದೆ. ಸರ್ಕಾರಿ - ಖಾಸಗಿ ಸಹಭಾಗಿತ್ವದಲ್ಲಿ ಈ ವಿಶ್ವವಿದ್ಯಾಲಯವನ್ನು ಒಡಿಶಾದ ಗ್ರಾಮದಿಹ ಹಳ್ಳಿಯಲ್ಲಿ ನಿರ್ಮಿಸಲು ಒಡಿಶಾ ಸರ್ಕಾರ ನಿರ್ಧರಿಸಿದೆ.

- ಮೊದಲ ಹಂತದಲ್ಲಿ ರೂ.100 ಕೋಟಿಯನ್ನು ಈ ವಿವಿ ಸ್ಥಾಪನೆಗೆ ನೀಡಲಾಗುವುದು. ಪ್ರಾಥಮಿಕ ಆರೋಗ್ಯ ಮತ್ತು ಅದಕ್ಕೆ ಸಂಬಂಧಿಸಿದ ಸಂಶೋಧನೆಯನ್ನು ಈ ವಿವಿಯಲ್ಲಿ ಕೈಗೊಳ್ಳಲಾಗುವುದು.
- ಈ ವಿವಿ ಯ ಸ್ಥಾಪನೆಗೆ ಒಡಿಶಾ ಸರ್ಕಾರ ಅಮೆರಿಕಾದ ನೆಬ್ರಸ್ಕಾ ಮೆಡಿಕಲ್ ಸೆಂಟರ್ ಮತ್ತು ಏಷಿಯನ್ ಇನ್ ಸ್ಟಿಟ್ಯೂಟ್ ಆಫ್ ಪಬ್ಲಿಕ್ ಹೆಲ್ತ್" ಜೊತೆ ಒಪ್ಪಂದಕ್ಕೆ ಸಹಿ ಹಾಕಿದೆ.
- ಸದ್ಯ ಸರ್ಕಾರ ಒಪ್ಪಿಗೆ ಸೂಚಿಸಿರುವ ಈ ವಿವಿ 2016 ರಿಂದ ಕಾರ್ಯರಂಭ ಮಾಡಲಿದೆ.

**ಆಂಧ್ರಪ್ರದೇಶ: "ಅಮ್ಮ ಹಸ್ತಂ" ಯೋಜನೆಗೆ ಚಾಲನೆ**

ಆಂಧ್ರಪ್ರದೇಶ ಸರ್ಕಾರ ತನ್ನ ಪ್ರಜೆಗಳಿಗೆ ಯುಗಾದಿಯಂದು ಅಮೂಲ್ಯವಾದ ಕೊಡುಗೆಯನ್ನು ನೀಡಿದೆ. "ಅಮ್ಮ ಹಸ್ತಂ" ಎಂಬ ಯೋಜನೆಗೆ ಮುಖ್ಯ ಮಂತ್ರಿ ಕಿರಣ್ ಕುಮಾರ್ ರೆಡ್ಡಿಯವರು ಹೈದ್ರಾಬಾದ್ ನಲ್ಲಿ ಯುಗಾದಿ ಹಬ್ಬದ ದಿನದಂದು ಚಾಲನೆ ನೀಡಿದರು. ಈ ಯೋಜನೆಯಡಿ ಬಡ ವರ್ಗದ ಜನರಿಗೆ ಅಗತ್ಯವಾದ ೯ ಆಹಾರ ಪದಾರ್ಥಗಳನ್ನು ಸಬ್ಸಿಡಿ ದರದಲ್ಲಿ ನೀಡಲಾಗುವುದು.

- ಭಾರತದ ಮಾಜಿ ಪ್ರಧಾನಿ ದಿವಂಗತ "ಇಂದಿರಾ ಗಾಂಧಿ" ರವರ ಹೆಸರನ್ನು ಈ ಯೋಜನೆಗೆ ಇಡಲಾಗಿದೆ.
- ಈ ಯೋಜನೆಯಿಂದ ಆಂಧ್ರ ಪ್ರದೇಶದ 2 ಕೋಟಿ 20 ಲಕ್ಷ ಬಡ ಕುಟುಂಬಗಳು ಉಪಯೋಗ ಪಡೆದುಕೊಳ್ಳಲಿವೆ.
- ಆಂಧ್ರಪ್ರದೇಶ ಸರ್ಕಾರದ ಮೇಲೆ ಈ ಯೋಜನೆಯಿಂದ ರೂ.660 ಕೋಟಿ ಹೊರೆ ಬೀಳಲಿದೆ.

ಯೋಜನೆಯಡಿ ವಿತರಿಸಲಾಗುವ ಪದಾರ್ಥಗಳು:

- ಗೋಧಿ, ಗೋಧಿ ಹಿಟ್ಟು, ತಾಳೆ ಎಣ್ಣೆ, ಉಪ್ಪು, ತೊಗರಿ, ಸಕ್ಕರೆ, ಹುಣಸೆ ಹಣ್ಣು, ಮೆಣಸಿನ ಕಾಯಿ ಪುಡಿ ಮತ್ತು ಅರಶಿನ ಪುಡಿಯನ್ನು ವಿತರಿಸಲಾಗುವುದು.

**"ಮಲ್ಲಕಂಬ"ವನ್ನು ರಾಜ್ಯ ಕ್ರೀಡೆಯನ್ನಾಗಿ ಘೋಷಿಸಿದ ಮಧ್ಯಪ್ರದೇಶ**

ಮಧ್ಯಪ್ರದೇಶ ಸರ್ಕಾರ "ಮಲ್ಲಕಂಬ"ವನ್ನು ತನ್ನ ರಾಜ್ಯ ಕ್ರೀಡೆಯನ್ನಾಗಿ ಘೋಷಿಸಿದೆ. ಅಲ್ಲದೇ ಒಲಂಪಿಕ್ 2020 ಯಲ್ಲಿ ರಾಜ್ಯವನ್ನು ಪ್ರತಿನಿಧಿಸುವವರ ಸಂಖ್ಯೆಯನ್ನು ಹೆಚ್ಚಿಸಲು "ಮಿಷನ್ ಒಲಂಪಿಕ್-2020" ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಲು ತಿರ್ಮಾನಿಸಿದೆ. ಈ ಯೋಜನೆಯಡಿ ಪ್ರತಿಭಾವಂತ ಯುವ ಆಟಗಾರರಿಗೆ ವಿಶೇಷ ತರಭೇತಿಯನ್ನು ನೀಡಲಾಗುವುದು.

ಮಲ್ಲಕಂಬ:

- "ಮಲ್ಲಕಂಬ" ಒಂದು ಪ್ರಾಚೀನ ಕ್ರೀಡಾಕಲೆ. ಇಂದು ಅನೇಕ ಕ್ರೀಡೆಗಳ ತಂತ್ರಜ್ಞಾನ "ಮಲ್ಲಕಂಬ"ದಿಂದ ಸ್ಪೂರ್ತಿ ಪಡೆದಿರುವುದು ಗಮನಾರ್ಹ. ಕಡಿಮೆ ಅವಧಿಯಲ್ಲಿ ಈ ಕ್ರೀಡೆಯಿಂದ ದೇಹದ ಎಲ್ಲಾ ಭಾಗಗಳಿಗೂ ವ್ಯಾಯಾಮ ಮಾಡಿದಂತಾಗುತ್ತದೆ. ಹಾಗೂ ಮಲ್ಲಕಂಬ ಪಟುಗಳು ಜಿಮ್ನಾಸ್ಟಿಕ್, ಕುಸ್ತಿ, ಪೋಲ್ ವಾಲ್ಟ್ ನಂತಹ ಕ್ರೀಡೆಗಳಲ್ಲೂ ಸಹ ಪರಿಣಿತಿಯನ್ನು ಹೊಂದಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿ ಮಧ್ಯಪ್ರದೇಶ ಮಲ್ಲಕಂಬವನ್ನು ರಾಜ್ಯಕ್ರೀಡೆ ಎಂದು ಘೋಷಿಸಿದೆ.

"ಮಿಷನ್ ಒಲಂಪಿಕ್- 2020":

- ಈ ಕಾರ್ಯಕ್ರಮದಡಿ 9 ವರ್ಷ ವಯಸ್ಸಿನ ಪ್ರತಿಭಾವಂತ ಕ್ರೀಡಾಪಟುಗಳನ್ನೂ ತರಭೇತಿಗೆ ಆಯ್ಕೆಮಾಡಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿರುವ ತರಭೇತುದಾರರಿಂದ ಇವರಿಗೆ ತರಭೇತಿ ನೀಡಲಾಗುವುದು. ಸುಮಾರು 76ಕ್ಕೂ ಹೆಚ್ಚು ಕ್ರೀಡಾಪಟುಗಳಿಗೆ 2 ತಿಂಗಳ ಕಾಲ ವಿದೇಶದಲ್ಲಿ ತರಭೇತಿ ಪಡೆಯಲು ಕಳುಹಿಸಲಾಗುವುದು.
- ಈ ಕಾರ್ಯಕ್ರಮಕ್ಕೆ ಮಧ್ಯಪ್ರದೇಶ 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ. 28.37 ಕೋಟಿಗಳನ್ನು ವ್ಯಯಿಸಲಿದೆ.

**ಏಪ್ರಿಲ್ 11: ರಾಷ್ಟ್ರೀಯ ಮಾತೃತ್ವ ಸುರಕ್ಷಿತ ದಿನ**

ರಾಷ್ಟ್ರೀಯ ಮಾತೃತ್ವ ಸುರಕ್ಷಿತ ದಿನ (National Safe Motherhood Day) ವನ್ನು ಏಪ್ರಿಲ್ 11 ರಂದು ದೇಶದಾದ್ಯಂತ ಆಚರಿಸಲಾಗುತ್ತದೆ. ಬಾಣಂತಿಯರು ಮತ್ತು ಗರ್ಭೀಣಿ ಸ್ತ್ರೀ ಯರಿಗೆ ಇರುವ ಸೌಲಭ್ಯ, ಸುರಕ್ಷತೆ ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಮುಖ್ಯ ಉದ್ದೇಶ.

- ಏಪ್ರಿಲ್ 11 ಕಸ್ತೂರ ಬಾಯಿ ರವರ ಜನ್ಮ ದಿನ. ಆದ್ದರಿಂದ ಈ ದಿನವನ್ನು "ರಾಷ್ಟ್ರೀಯ ಮಾತೃತ್ವ ಸುರಕ್ಷಿತ ದಿನ" ವನ್ನಾಗಿ ಆಚರಿಸಲಾಗುತ್ತಿದೆ.
- ಈ ವರ್ಷದ ರಾಷ್ಟ್ರೀಯ ಮಾತೃತ್ವ ಸುರಕ್ಷಿತ ದಿನದ ಥೀಮ್: "Every Woman Counts"
- ಮಹಿಳೆಯರ ಆರೋಗ್ಯವನ್ನು ಕಾಪಾಡುವ ಹಿತದೃಷ್ಟಿಯಿಂದ ಭಾರತ ಸರ್ಕಾರ ಕೆಲವು ಪ್ರಮುಖ ಯೋಜನೆಗಳನ್ನು ಜಾರಿಗೊಳಿಸಿದೆ. ಇವುಗಳಲ್ಲಿ ಪ್ರಮುಖವಾದದು "ಜನನಿ ಸುರಕ್ಷಾ ಯೋಜನೆ".

ಜನನಿ ಸುರಕ್ಷಾ ಯೋಜನೆ:

- ಕೇಂದ್ರ ಸರ್ಕಾರ ಈ ಯೋಜನೆಯನ್ನು 2005 ರಂದು ಪ್ರಾರಂಭಿಸಿತು. ಸಾಂಸ್ಥಿಕ ಹೆರಿಗೆಗಳನ್ನು ಪ್ರೋತ್ಸಾಹಿಸುವ ಮೂಲಕ ತಾಯಂದಿರ ಮರಣ ಪ್ರಮಾಣ ಮತ್ತು ಶಿಶು ಮರಣ ಪ್ರಮಾಣವನ್ನು ತಗ್ಗಿಸುವುದು ಈ ಯೋಜನೆಯ ಪ್ರಮುಖ ಗುರಿ. ಈ ಯೋಜನೆಯಡಿ ಹೆರಿಗೆಗೆ ತಗಲುವ ವೆಚ್ಚವನ್ನು ಸರ್ಕಾರವೇ ಭರಿಸುತ್ತದೆ.
- ಸದ್ಯ ಭಾರತದಲ್ಲಿ ತಾಯಂದಿರ ಮರಣ ಪ್ರಮಾಣ 212 (1 ಲಕ್ಷ ಕ್ಕೆ) ರಷ್ಟಿದೆ.1999 ರಲ್ಲಿ ಈ ಪ್ರಮಾಣ 437 ರಷ್ಟಿತ್ತು.
- ಕರ್ನಾಟಕದ "ಭಾಗ್ಯ ಲಕ್ಷ್ಮಿ" ಮತ್ತು "ಮಡಿಲು" ಯೋಜನೆಗಳು ಸಹ ಮಹಿಳೆಯರಿಗೆ ಸಂಬಂಧಿಸಿದ ಯೋಜನೆಗಳು.

**ಏಷ್ಯಾದ ಟಾಪ್ 100 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಭಾರತದ ಮೂರು ವಿವಿಗಳು**

"ಟೈಮ್ಸ್ ಹೈಯರ್ ಎಜುಕೇಷನ್ (Times Higher Education)" ನಿಯತಕಾಲಿಕೆ ಪ್ರಥಮ ಬಾರಿಗೆ ಹೊರತಂದಿರುವ ಏಷ್ಯಾದ ಟಾಪ್ 100 ವಿಶ್ವವಿದ್ಯಾಲಯಗಳ ಪಟ್ಟಿಯಲ್ಲಿ ಭಾರತದ ಮೂರು ವಿಶ್ವವಿದ್ಯಾಲಯಗಳು ಮಾತ್ರ ಸ್ಥಾನ ಪಡೆದುಕೊಂಡಿವೆ. ವಿಶೇಷವೆಂದರೆ ಈ ಮೂರು ಸಹ "ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಸೈನ್ಸ್" ವಿಶ್ವವಿದ್ಯಾಲಯಗಳೇ ಆಗಿವೆ.

ಯಾವ ವಿಶ್ವವಿದ್ಯಾಲಯಗಳು?

- ಐಐಟಿ-ಕರಗ್ ಪುರ್, ಐಐಟಿ-ಬಾಂಬೆ ಮತ್ತು ಐಐಟಿ-ರೂರ್ಕಿ ಈ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಭಾರತದ ವಿಶ್ವವಿದ್ಯಾಲಯಗಳು. ಪಟ್ಟಿಯಲ್ಲಿ ಐಐಟಿ-ಕರಗ್ ಪುರ್ ಗೆ 30 ನೇ ಸ್ಥಾನ, ಐಐಟಿ-ಬಾಂಬೆ ಗೆ 33 ನೇ ಸ್ಥಾನ ಮತ್ತು ಐಐಟಿ-ರೂರ್ಕಿ ಗೆ 56 ನೇ ಸ್ಥಾನ ಲಭಿಸಿದೆ.
- ಜಪಾನ್ ನ ಟೋಕಿಯೊ ವಿಶ್ವವಿದ್ಯಾಲಯ 78.3 ಅಂಕಗಳನ್ನು ಪಡೆಯುವ ಮೂಲಕ ಏಷ್ಯಾದ ನಂ.1 ವಿಶ್ವವಿದ್ಯಾಲಯ ಎನಿಸಿದೆ. 77.5 ಅಂಕಗಳನ್ನು ಪಡೆಯುವ ಮೂಲಕ ಸಿಂಗಾಪುರದ ನ್ಯಾಷನಲ್ ವಿಶ್ವವಿದ್ಯಾಲಯ ಎರಡನೇ ಸ್ಥಾನದಲ್ಲಿದೆ. ಮೂರನೇ ಸ್ಥಾನದಲ್ಲಿ ಹಾಂಗ್ ಕಾಂಗ್ ವಿವಿ ಇದೆ.
- ಜಪಾನ್ ನ 22 ತೈವಾನ್ ನ 17, ಚೀನಾದ 15 ಮತ್ತು ಕೊರಿಯಾದ 14 ವಿವಿಗಳು ಟಾಪ್ 100 ವಿವಿಗಳ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿವೆ.

ಮಾನದಂಡ ಹೇಗೆ?

- ಸಮೀಕ್ಷೆಯಲ್ಲಿ ಶಿಕ್ಷಣ, ಸಂಶೋಧನೆ, ಭೋದನೆಯ ಮಟ್ಟ ಸೇರಿದಂತೆ ಒಟ್ಟು 13 ಮಾನದಂಡಗಳನ್ನು ಗಣನೆಗೆ ತೆಗೆದುಕೊಂಡು ಪಟ್ಟಿಯನ್ನು ತಯಾರಿಸಲಾಗಿದೆ.

ವಿಶ್ವ ಶ್ರೇಣಿಯೊಂದಿಗೆ ಹೋಲಿಕೆ:

- ಜಾಗತಿಕ ಮಟ್ಟಕ್ಕೆ ಹೋಲಿಸಿದರೆ ಭಾರತದ ವಿವಿ ಗಳು ನಗಣ್ಯ. ಭಾರತದ ಯಾವ ವಿಶ್ವವಿದ್ಯಾಲಯಗಳು ಟಾಪ್ 200 ರ ಪಟ್ಟಿಯಲ್ಲಿ ಸ್ಥಾನ ಪಡೆಯಲು ವಿಫಲವಾಗಿವೆ. ಭಾರತದಲ್ಲಿ ಟಾಪ್ ವಿವಿ ಎನಿಸಿರುವ ಐಐಟಿ ಕರಗ್ ಪುರ್ ವಿಶ್ವ ಶ್ರೇಣಿಯಲ್ಲಿ 226 ನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಲಿದೆ. ಐಐಟಿ ಬಾಂಬೆ 251 ರಿಂದ 276 ಮತ್ತು ಐಐಟಿ ರೂರ್ಕಿ 350 ರಿಂದ 400 ರ ನಡುವೆ ಸ್ಥಾನಗಳಿಸುವ ಸಾದ್ಯತೆಗಳಿವೆ.

**ಭಾರತ – ಜರ್ಮನ್ ನಡುವೆ ದ್ವಿಪಕ್ಷಿಯ ಒಪ್ಪಂದಗಳಿಗೆ ಸಹಿ**

ಮೂರು ದಿನಗಳ ಕಾಲ ಜರ್ಮನ್ ಪ್ರವಾಸದಲ್ಲಿರುವ ಭಾರತದ ಪ್ರಧಾನ ಮಂತ್ರಿಗಳಾದ ಮನಮೋಹನ್ ಸಿಂಗ್ ಮತ್ತು ಜರ್ಮನಿಯ ಚಾನ್ಸಲರ್ ಅಂಜೆಲ್ ಮಾರ್ಕೆಲ್ ರವರು ಭಾರತ-ಮತ್ತು ಜರ್ಮನಿಯ ನಡುವೆ ದ್ವಿಪಕ್ಷಿಯ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಈ ದ್ವಿಪಕ್ಷಿಯ ಒಪ್ಪಂದಗಳ ಮೂಲಕ ಎರಡು ದೇಶಗಳು ಪರಸ್ಪರ ಅಭಿವೃದ್ಧಿ ಶ್ರಮಿಸಲಿವೆ ಎಂದು ಮಾರ್ಕೆಲ್ ಹೇಳಿದ್ದಾರೆ. ಇನ್ನೂ ಈ ಒಪ್ಪಂದಗಳ ಅನುಷ್ಠಾನದಿಂದ ಉಭಯ ದೇಶಗಳ ನಡುವಿನ ಬಾಂಧವ್ಯ ಮತ್ತಷ್ಟು ವೃದ್ಧಿಯಾಗಲಿದೆ ಎಂದು ಸಿಂಗ್ ವಿಶ್ವಾಸ ವ್ಯಕ್ತಪಡಿಸಿದರು.

ಯಾವ ಯಾವ ಕ್ಷೇತ್ರಗಳಲ್ಲಿ?

- ವ್ಯಾಪಾರ, ಬಂಡವಾಳ ಹೂಡಿಕೆ, ಇಂಧನ ಭದ್ರತೆ, ಉನ್ನತ ಶಿಕ್ಷಣ, ಕೃಷಿ, ಪರಿಸರ, ಸಂಸ್ಕೃತಿ ಮತ್ತು ಮಿಲಿಟರಿ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಹಕಾರ ನೀಡುವ ದ್ವಿಪಕ್ಷಿಯ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.
- ಇದೇ ವೇಳೆ ಭಾರತದ ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವರಾದ ಫಾರೂಕ್ ಅಬ್ದುಲ್ಲ ಮತ್ತು ಜರ್ಮನಿಯ ಸಂಸತ್ತು ಸಚಿವ "ಗುದ್ರನ್ ಕೊಪ್ಪ್ (Gudrun Kopp)" ರವರು "ಗ್ರೀನ್ ಎನರ್ಜಿ ಕಾರಿಡಾರ್" ಸ್ಥಾಪನೆಗೆ ಸಹಿ ಹಾಕಿದರು.

**ದೇಶದ ಮೊದಲ RFID ಆಧಾರಿತ ಎಲೆಕ್ಟ್ರಾನಿಕ್ ಸುಂಕ ಸಂಗ್ರಹ ವ್ಯವಸ್ಥೆಗೆ ಚಾಲನೆ**

ಮಹಾರಾಷ್ಟ್ರದ ಥಾಣೆ ಜಿಲ್ಲೆಯ "ಚರೊತಿ ಸುಂಕ ವಸೂಲಾತಿ ಕೇಂದ್ರ"ದಲ್ಲಿ ದೇಶದ ಮೊದಲ "ಇಂಟರ್ ಆಪರೇಬಲ್ ರೇಡಿಯೋ ಫ್ರಿಕ್ವೆನ್ಸಿ ಐಡೆಂಟಿಫಿಕೇಶನ್ ಡಿವೈಸ್ (RFID)" ಆಧಾರಿತ ಎಲೆಕ್ಟ್ರಾನಿಕ್ ಸುಂಕ ಸಂಗ್ರಹ ವ್ಯವಸ್ಥೆಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ಡಾ.ಸಿ.ಪಿ.ಜೋಶಿರವರು ಚಾಲನೆ ನೀಡಿದರು. ಇದರ ಜತೆಗೆ ಮುಂಬೈ ಮತ್ತು ವಡೋದರ ಹೆದ್ದಾರಿಯಲ್ಲಿ ಬರುವ ಎಲ್ಲಾ ಸುಂಕ ವಸೂಲಾತಿ ಕೇಂದ್ರಗಳಲ್ಲೂ ಈ ವ್ಯವಸ್ಥೆ ಜಾರಿಗೊಳ್ಳಲಿದೆ.

ಏನಿದು RFID?

- Radio Frequency Identification Device (RFID) ಒಂದು ವಿನೂತನ ಸುಂಕ ಸಂಗ್ರಹ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯಲ್ಲಿ ಪ್ರೀ ಪೇಡ್ ಮಾದರಿಯ ರೀತಿಯಲ್ಲಿ ಸುಂಕವನ್ನು ಸಂಗ್ರಹಿಸಲಾಗುವುದು. ಎಲೆಕ್ಟ್ರಾನಿಕ್ ಸುಂಕ ಸಂಗ್ರಹ ವಿಧಾನದಲ್ಲಿ ವಾಹನಗಳಿಗೆ ಎಲೆಕ್ಟ್ರಾನಿಕ್ ಟ್ಯಾಗ್ (Tag)ಗಳನ್ನು ನೀಡಲಾಗುವುದು. ಈ ಟ್ಯಾಗ್ ಗಳನ್ನು ಚಾಲಕರು ತಮ್ಮ ವಾಹನದ ಮುಂಭಾಗದಲ್ಲಿ ಅಂಟಿಸಬೇಕು. ಈ ಟ್ಯಾಗ್ ಗಳು ಕಿಯೊಸ್ಕೊ ಬಳಿ ಅಥವಾ ಐಸಿಐಸಿಐ ಬ್ಯಾಂಕ್ ವೆಬ್ ಸೈಟ್ ನಲ್ಲಿ ಆನ್ ಲೈನ್ ಮೂಲಕ ಪಡೆಯಬಹುದು.
- ಟ್ಯಾಗ್ ಹೊಂದಿರುವ ವಾಹನಗಳು ಸುಂಕ ಸಂಗ್ರಹ ಕೇಂದ್ರದ ಮೂಲಕ ಹಾದು ಹೋಗುವಾಗ ಸುಂಕ ಕೇಂದ್ರದ ಬಳಿ ಅಳವಡಿಸಲಾಗಿರುವ ಸೆನ್ಸರ್ ಉಪಕರಣವು ಟ್ಯಾಗ್ ನಲ್ಲಿರುವ ಯುನಿಕ್ಯೂ ಐಡೆಂಟಿಫಿಕೇಶನ್ ನಂಬರನ್ನು ಗ್ರಹಿಸಿ ಅದನ್ನು ಸಂಬಂಧಪಟ್ಟ ಬ್ಯಾಂಕ್ ನ ಸೆಂಟ್ರಲ್ ಕ್ಲಿಯರಿಂಗ್ ಹೌಸ್ ಗೆ ರವಾನಿಸುತ್ತದೆ. ಇಲ್ಲಿ ಸುಂಕದ ಮೊತ್ತವನ್ನು

ಸಂಬಂಧಪಟ್ಟವರ ಬ್ಯಾಂಕ್ ಖಾತೆಯಿಂದ ಕಡಿತಗೊಳಿಸಿಲಾಗುತ್ತದೆ. ಈ ಕ್ರಿಯೆ ಸಂಪೂರ್ಣವಾಗಿ ಸ್ವಯಂಚಾಲಿತವಾಗಿರುತ್ತದೆ.

ಉಪಯೋಗವೇನು?

- ಆನ್ ಲೈನ್ ಮೂಲಕ ಸುಂಕ ವಸೂಲಾಗುವುದರಿಂದ ಸುಗಮವಾಗಿ ನಡೆಯಲಿದೆ.
- ಮುಖ್ಯವಾಗಿ ಈ ವ್ಯವಸ್ಥೆಯಿಂದ ಟ್ರಾಫಿಕ್ ಕಿರಿಕಿರಿ ತಪ್ಪಲಿದೆ.

**ನ್ಯಾಯಾಧೀಶರ ನೇಮಕ ವಿಧಾನಕ್ಕೆ ಬದಲಾವಣೆ ತರಲಿರುವ ಕೇಂದ್ರ ಸರ್ಕಾರ**

ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಾಧೀಶರ ನೇಮಕಾತಿಗಿರುವ ಹಾಲಿ ವಿಧಾನವನ್ನು ಬದಲಾಯಿಸಿ ಹೊಸ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸರ್ಕಾರ ಚಿಂತನೆ ನಡೆಸಿದೆ. ಈ ಸಂಬಂಧ "ನ್ಯಾಯಾಂಗ ನೇಮಕಾತಿ ಆಯೋಗ ಮಸೂದೆ-2013 (Judicial Appointment Commission Bill-2013)" ನ್ನು ಸಂಸತ್ತಿನಲ್ಲಿ ಮಂಡಿಸಲಾಗುವುದೆಂದು ಕೇಂದ್ರ ಕಾನೂನು ಸಚಿವ ಅಶ್ವಿನ್ ಕುಮಾರ್ ರವರು ಹೇಳಿದ್ದಾರೆ. ಒಂದು ವೇಳೆ ಈ ಮಸೂದೆ ಜಾರಿಗೊಂಡರೆ ನ್ಯಾಯಾಧೀಶರ ನೇಮಕಾತಿಯಲ್ಲಿ ಭಾರತದ ಮುಖ್ಯ ನ್ಯಾಯಾಧೀಶರಗಿರುವ ಅಧಿಕಾರ ಮೊಟಕುಗೊಳ್ಳಲಿದೆ. ವಿರೋಧ ಪಕ್ಷಗಳು ಈ ಮಸೂದೆಗೆ ಸಮ್ಮತಿ ಸೂಚಿಸಿರುವುದಾಗಿ ತಿಳಿದು ಬಂದಿದೆ.

ಹೊಸ ವಿಧಾನದಲ್ಲಿ ಏನಿದೆ?

- ಸರ್ಕಾರ ಉದ್ದೇಶಿಸಿರುವ ಹೊಸ ವ್ಯವಸ್ಥೆಯು ಬಹು ವಿಸ್ತಾರವಾಗಿರಲಿದೆ. ಸುಪ್ರೀಂ ಕೋರ್ಟ್ ಗೆ ನ್ಯಾಯಾಧೀಶರ ನೇಮಕಾತಿ ಮಾಡುವ ಅಧಿಕಾರವನ್ನು ವಿರೋಧ ಪಕ್ಷದ ನಾಯಕ, ಒಬ್ಬ ನುರಿತ ಕಾನೂನು ಶಾಸ್ತ್ರಜ್ಞ, ಕಾನೂನು ಸಚಿವ, ಸುಪ್ರೀಂ ಕೋರ್ಟನ ಮುಖ್ಯನ್ಯಾಯಾಧೀಶರು ಸೇರಿದಂತೆ ಇಬ್ಬರು ಹಿರಿಯ ನ್ಯಾಯಾಧೀಶರನ್ನು ಒಳಗೊಂಡಿರುವ ಆಯೋಗಕ್ಕೆ ನೀಡಲಾಗುವುದು.
- ಅದೇ ರೀತಿ ಹೈಕೋರ್ಟ್ ಗೆ ನ್ಯಾಯಾಧೀಶರನ್ನು ಆಯ್ಕೆಮಾಡಲು ಸಂಬಂಧಪಟ್ಟ ರಾಜ್ಯದ ವಿರೋಧ ಪಕ್ಷದ ಮುಖಂಡರು, ಕಾನೂನು ಸಚಿವರು, ಒಬ್ಬ ನುರಿತ ಕಾನೂನು ಶಾಸ್ತ್ರಜ್ಞ ಮತ್ತು ಹೈಕೋರ್ಟನ ಮುಖ್ಯನ್ಯಾಯಾಧೀಶರನ್ನು ಒಳಗೊಂಡ ಆಯೋಗವನ್ನು ರಚಿಸಲಾಗುವುದು.
- ಈ ಹೊಸ ವಿಧಾನದ ನೇಮಕಾತಿ ಬಗ್ಗೆ ಈಗಾಗಲೇ ದೇಶದ ಹಿರಿಯ ನ್ಯಾಯಾಧೀಶರುಗಳಾದ ಎಂ.ಎನ್.ವೆಂಕಟಚಲಯ್ಯ, ಜೆ.ಎಸ್.ವರ್ಮಾ ಮತ್ತು ಕೃಷ್ಣ ಅಯ್ಯರ್ ಜೊತೆ ಕಾನೂನು ಸಚಿವಾಲಯ ಚರ್ಚಿಸಿದ್ದು, ಅವರ ಸಲಹೆಗಳನ್ನು ಅಳವಡಿಸಿಕೊಂಡ ಮೇಲೆ ಕರಡು ಪ್ರತಿಯನ್ನು ಸಿದ್ದಪಡಿಸಲಾಗಿದೆ.

ಈಗಿರುವ ವ್ಯವಸ್ಥೆ:

- ಭಾರತ ಸಂವಿಧಾನದಲ್ಲಿ ನ್ಯಾಯಾಧೀಶರ ನೇಮಕಾತಿ ಅಧಿಕಾರವನ್ನು ರಾಷ್ಟ್ರಪತಿಗಳ ಪರಮಾಧಿಕಾರಕ್ಕೆ ನೀಡಲಾಗಿದೆ. ಸಂವಿಧಾನದ ಪರಿಚ್ಛೇದ 124 ರ ಅಡಿಯಲ್ಲಿ ರಾಷ್ಟ್ರಪತಿಗಳು ಸುಪ್ರೀಂ ಕೋರ್ಟ್ ಗೆ ಮತ್ತು 217 ರ ಅಡಿಯಲ್ಲಿ ಹೈಕೋರ್ಟ್ ಗೆ ನ್ಯಾಯಾಧೀಶರನ್ನು ನೇಮಕಾತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

- ಆದರೆ 1993 ರಲ್ಲಿ ಸುಪ್ರೀಂ ಕೋರ್ಟ್ ನೀಡಿದ ಮಹತ್ವದ ತೀರ್ಪಿನಲ್ಲಿ ಈ ಅಧಿಕಾರಕ್ಕೆ ಕತ್ತರಿ ಹಾಕಲಾಯಿತು. ನ್ಯಾಯಾಧೀಶರ ನೇಮಕಾತಿಯಲ್ಲಿ ಸುಪ್ರೀಂ ಕೋರ್ಟ್ನ ಮುಖ್ಯನ್ಯಾಯಾಧೀಶರ ಜತೆ ಸಮಾಲೋಚನೆ ನಡೆಸಿದ ಬಳಿಕ ರಾಷ್ಟ್ರಪತಿಗಳು ನೇಮಕ ಮಾಡುವುದು ಎಂದು 9 ಜನ ನ್ಯಾಯಾಧೀಶರನ್ನು ಒಳಗೊಂಡ ಪೀಠ ಹೇಳಿತ್ತು.
- ಸದ್ಯ ನ್ಯಾಯಾಧೀಶರ ನೇಮಕಾತಿಯನ್ನು Collegium of Judges ಮೂಲಕ ನೇಮಕಾತಿ ಮಾಡಲಾಗುತ್ತದೆ. ಅಂದರೆ ಸುಪ್ರೀಂಕೋರ್ಟ್ ನ ಮುಖ್ಯನ್ಯಾಯಾಧೀಶರು ಮತ್ತು ನಾಲ್ಕು ಜನ ಹಿರಿಯ ನ್ಯಾಯಾಧೀಶರನ್ನು ಒಳಗೊಂಡ ಸಮಿತಿಯು ನ್ಯಾಯಾಧೀಶರ ಹೆಸರನ್ನು ರಾಷ್ಟ್ರಪತಿಗಳಿಗೆ ಶಿಫಾರಸ್ಸು ಮಾಡಿದ ಬಳಿಕ ರಾಷ್ಟ್ರಪತಿಗಳು ನೇಮಕಾತಿ ಮಾಡಿ ಆದೇಶ ಹೊರಡಿಸುತ್ತಾರೆ. ಒಂದು ವೇಳೆ ಸಮಿತಿ ಮಾಡಿದ ಶಿಫಾರಸ್ಸನ್ನು ಪುನರ್ ವಿಮರ್ಶಿಸಲು ಸರ್ಕಾರ ಹಿಂತಿರುಗಿಸಿ ಸಮಿತಿ ತನ್ನ ನಿರ್ಧಾರವನ್ನು ಬದಲಾಯಿಸದಿದ್ದರೆ ಸರ್ಕಾರ ಸಮಿತಿಯ ಶಿಫಾರಸ್ಸನ್ನು ಪರಿಗಣಿಸಲೇ ಬೇಕು.

**ಕೆನಡಾ ಜೊತೆ ಪರಮಾಣು ವಾಣಿಜ್ಯ ವ್ಯಾಪಾರ ಒಪ್ಪಂದಕ್ಕೆ ಭಾರತ ಸಹಿ**

ಕೆನಡಾ ಮತ್ತು ಭಾರತ ನಡುವೆ ಪರಮಾಣು ವಾಣಿಜ್ಯ ವ್ಯಾಪಾರವನ್ನು ಪುನರ್ ಆರಂಭಿಸುವ ಐತಿಹಾಸಿಕ ಒಪ್ಪಂದಕ್ಕೆ ಉಭಯ ದೇಶಗಳು ಸಹಿಹಾಕಿದ್ದು, ಸುಮಾರು ನಲವತ್ತು ವರ್ಷಗಳಿಂದ ಸ್ಥಗಿತಗೊಂಡಿದ್ದ ಪರಮಾಣು ವಾಣಿಜ್ಯ ವ್ಯಾಪಾರಕ್ಕೆ ಮತ್ತೆ ಜೀವ ಬಂದಿದೆ. ಈ ಒಪ್ಪಂದದಿಂದಾಗಿ ಕೆನಡಾ ಭಾರತಕ್ಕೆ ಯುರೇನಿಯಂನ್ನು ರಫ್ತು ಮಾಡಲು ಒಪ್ಪಿಗೆ ಸೂಚಿಸಿದೆ. ಇದರಿಂದ ಅಣು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೆನಡಾ ಭಾರತದ ಮೇಲೆ ಹೇರಿದ್ದ ನಿರ್ಬಂಧಗಳನ್ನು ಹಿಂತೆಗೊಳ್ಳಲಿದ್ದು, ಕೆನಡಾದಿಂದ ಯುರೇನಿಯಂ ಆಮದು ಮಾಡಿಕೊಳ್ಳಲು ಇದ್ದ ಅಡಚರಣೆಗಳು ದೂರವಾಗಲಿವೆ.

ಹಿನ್ನಲೆ:

- ಭಾರತ ಮತ್ತು ಕೆನಡಾ ನಡುವಿನ ಸಂಬಂಧ ಇಂದು ನಿನ್ನೆಯದಲ್ಲ. ಭಾರತ ಸ್ವತಂತ್ರಗಳಿಸಿದ ನಂತರ ಉಭಯ ದೇಶಗಳ ನಡುವಿನ ಬಾಂಧವ್ಯ ಉತ್ತಮವಾಗಿಯೇ ಇತ್ತು. ಆದರೆ 1974 ರಲ್ಲಿ ಭಾರತ ನಡೆಸಿದ ಮೊದಲ ಅಣು ಪರೀಕ್ಷೆ (Smiling Budda)ಯ ನಂತರ ಕೆನಡಾ ಮತ್ತು ಭಾರತದ ನಡುವಿನ ಸಂಬಂಧದ ನಡುವೇ ಬಿರುಕು ಉಂಟಾಯಿತು. ಭಾರತ ತನ್ನ ಮೊದಲ ಅಣ್ವಸ್ತ್ರ ತಯಾರಿಕೆಗೆ ಕೆನಡಾದಿಂದ ಪಡೆದಿದ್ದ CIRUS ಅಣು ರಿಯಾಕ್ಟರ್ ನ್ನು ಬಳಸಿದ್ದೇ ಈ ಬಿರುಕಿಗೆ ಮುಖ್ಯ ಕಾರಣವಾಯಿತು. 1998 ರಲ್ಲಿ ಭಾರತ ಕೈಗೊಂಡ ಎರಡನೇ ಅಣು ಪರೀಕ್ಷೆಯ ನಂತರ ಭಾರತದೊಂದಿಗೆ ತನ್ನ ಬಹುತೇಕ ವ್ಯವಹಾರಗಳನ್ನು ಸ್ಥಗಿತಗೊಳಿಸಿತು.
- ಉಭಯ ದೇಶಗಳ ಸಂಬಂಧದಲ್ಲಿ ಮತ್ತೆ ಚೇತರಿಕೆ ಕಂಡುಬಂದಿದ್ದು 2009 ರಲ್ಲಿ. ಕೆನಡಾದ ಪ್ರಧಾನಿ "ಸ್ಟಿಫನ್ ಹಾರ್ಪರ್" 2009 ರಲ್ಲಿ ಭಾರತಕ್ಕೆ ಭೇಟಿ ನೀಡಿದ್ದರು. ಬಳಿಕ 2010 ರಲ್ಲಿ ಭಾರತದ ಪ್ರಧಾನಿ ಮನಮೋಹನ್ ಸಿಂಗ್ ಕೆನಡಾದ ಟೊರೊಂಟೊ ಗೆ ಭೇಟಿ ನೀಡಿದ್ದರು.
- 2010 ರಲ್ಲಿ ಭಾರತ ಮತ್ತು ಕೆನಡಾ ನಾಗರಿಕ ಪರಮಾಣು ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದವು. ಈ ಒಪ್ಪಂದ ಭಾರತಕ್ಕೆ ಯುರೇನಿಯಂ ರಫ್ತು ಮಾಡುವ ವಿಷಯವನ್ನು ಚರ್ಚಿಸಲು ನಾಂದಿಯಾಯಿತು. 2011 ನೇ ವರ್ಷವನ್ನು

"ಇಯರ್ ಆಫ್ ಇಂಡಿಯಾ ಇನ್ ಕೆನಡಾ" ಎಂದು ಗುರುತಿಸಿದ್ದು ಎರಡು ದೇಶಗಳ ನಡುವಿನ ಸಂಬಂಧವನ್ನು ಮತ್ತಷ್ಟು ಬಿಗಿಗೊಳಿಸಿತು.

**ಭಾರತದಲ್ಲಿ ಅಣು ವಿದ್ಯುತ್ ಉತ್ಪಾದನೆ:**

- ಅಣು ವಿದ್ಯುತ್ ಗೆ ಪ್ರಾಮುಖ್ಯತೆ ನೀಡಿರುವ ದೇಶಗಳ ಪೈಕಿ ಭಾರತ ಕೂಡ ಒಂದು. ಭಾರತ ತನ್ನ ಅಣು ಇಂಧನ ಯೋಜನೆಗಳ ಮೂಲಕ 2030 ರ ವೇಳೆಗೆ 30,000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವ ಗುರಿ ಹೊಂದಿದೆ.
- ಸದ್ಯ ಭಾರತ 5,000 ಮೆಗಾ ವ್ಯಾಟ್ ವಿದ್ಯುತ್ ನ್ನು ಅಣು ಶಕ್ತಿ ಮೂಲಕ ಉತ್ಪಾದಿಸುತ್ತಿದೆ. ಭಾರತ ಯುರೇನಿಯಂ ಕೊರತೆಯನ್ನು ಎದುರಿಸುತ್ತಿದೆ. ತಜ್ಞರ ಪ್ರಕಾರ 200 ಮೆಗಾ ವ್ಯಾಟ್ ಉತ್ಪಾದಿಸಲು ಸುಮಾರು 30 ಟನ್ ಯುರೇನಿಯಂ ಅವಶ್ಯಕತೆಯಿದೆ.
- ದೇಶದ ಯುರೇನಿಯಂ ಕೊರತೆಯನ್ನು ನೀಗಿಸುವ ಸಲುವಾಗಿ ಆಸ್ಟ್ರೇಲಿಯಾ, ನಮಿಬಿಯಾ, ಮಂಗೋಲಿಯಾ, ಕಜಕಸ್ತಾನ್ ಮತ್ತು ಕೆನಡಾ ರಾಷ್ಟ್ರಗಳ ಜೊತೆ "ನಾಗರಿಕ ಪರಮಾಣು ಒಪ್ಪಂದಕ್ಕೆ" ಸಹಿ ಹಾಕಲಾಗಿದೆ.
- ಫ್ರಾನ್ಸ್ ಮತ್ತು ರಷ್ಯಾ ಈಗಾಗಲೇ ಭಾರತಕ್ಕೆ ಯುರೇನಿಯಂ ನ್ನು ಸರಬರಾಜು ಮಾಡುತ್ತಿವೆ. ಆಸ್ಟ್ರೇಲಿಯಾ ಸಹ ಸಮ್ಮತಿ ಸೂಚಿಸಿದ್ದು, ಪರಮಾಣು ಸುರಕ್ಷತೆ ನಿಯಮಗಳ ಒಪ್ಪಂದ ಬಗ್ಗೆ ಚರ್ಚೆ ನಡೆಯುತ್ತಿದೆ.
- ಭಾರತ 2020 ರ ವೇಳೆಗೆ ತನ್ನ ಅಣು ವಿದ್ಯುತ್ ಉತ್ಪಾದನೆ ಸಾಮರ್ಥ್ಯವನ್ನು 20000 ಮೆಗಾ ವ್ಯಾಟ್ ಗೆ ಹೆಚ್ಚಿಸುವ ಗುರಿಯನ್ನು ಹೊಂದಿದೆ. ಈ ಗುರಿ ಮುಟ್ಟಲು ವಾರ್ಷಿಕವಾಗಿ 1500 ಟನ್ ಯುರೇನಿಯಂ ಅವಶ್ಯಕತೆ ಇದೆ.
- ಸದ್ಯ ಭಾರತ 450 ಮೆಟ್ರಿಕ್ ಟನ್ ನಷ್ಟು ಯುರೇನಿಯಂ ನ್ನು ಉತ್ಪಾದಿಸುತ್ತಿದೆ. ದೇಶದಲ್ಲಿ ಸರಿ ಸುಮಾರು 61000 ಟನ್ ಯುರೇನಿಯಂ ಲಭ್ಯತೆ ಇರುವುದಾಗಿ ಅಂದಾಜಿಸಲಾಗಿದೆ.

ಯುರೇನಿಯಂ ದೇಶಗಳು:

- ಕಜಕಿಸ್ತಾನ್ ವಿಶ್ವದಲ್ಲೇ ಅತಿ ಹೆಚ್ಚು ಯುರೇನಿಯಂ ಉತ್ಪಾದಿಸುವ ರಾಷ್ಟ್ರವೆನಿಸಿದೆ. ಎರಡನೇ ಸ್ಥಾನದಲ್ಲಿ ಕೆನಡಾ ಮತ್ತು ಆಸ್ಟ್ರೇಲಿಯಾ ಮೂರನೇ ಸ್ಥಾನದಲ್ಲಿದೆ. ಈಗಾಗಲೇ ಭಾರತಕ್ಕೆ ಯುರೇನಿಯಂ ರಫ್ತು ಮಾಡಲು ಆಸ್ಟ್ರೇಲಿಯಾ ಒಪ್ಪಿಗೆ ಸೂಚಿಸಿದೆ.

**ಭಾರತದಲ್ಲಿ ಬಡತನ ನಿವಾರಿಸಲು ವಿಶ್ವಬ್ಯಾಂಕ್ ನೆರವು**

ಆರ್ಥಿಕವಾಗಿ ಹಿಂದುಳಿದಿರುವ ದೇಶದ ಏಳು ರಾಜ್ಯಗಳಲ್ಲಿ ಬಡತನ ಪ್ರಮಾಣ ತಗ್ಗಿಸಲು ಬಾರಿ ಮೊತ್ತದ ಸಾಲ ನೆರವಿನ ಯೋಜನೆಯ ಪ್ರಸ್ತಾಪವನ್ನು ವಿಶ್ವಬ್ಯಾಂಕ್ ಸಿದ್ಧಪಡಿಸಿದೆ.

ಯಾವ ಯಾವ ರಾಜ್ಯಗಳಿಗೆ?

- ದೇಶದಲ್ಲಿ ಕಡಿಮೆ ಆದಾಯ ಹೊಂದಿರುವ ರಾಜ್ಯಗಳಾದ ಛತ್ತೀಸ್ ಗಡ, ಬಿಹಾರ, ಜಾರ್ಖಂಡ್, ಮಧ್ಯಪ್ರದೇಶ, ಒಡಿಶಾ, ರಾಜಸ್ತಾನ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶ.

ಯೋಜನೆಯಲ್ಲಿ ಏನಿದೆ?

- ಒಂದು ವೇಳೆ ಈ ಯೋಜನೆ ಕಾರ್ಯಗತವಾದರೆ ವಿಶ್ವಬ್ಯಾಂಕ್ ನಾಲ್ಕು ವರ್ಷದ ಅವಧಿವರೆಗೆ ರೂ.16,500 ರಿಂದ ರೂ.27,500 ಕೋಟಿ ಸಾಲ ನೆರವನ್ನು ಈ ರಾಜ್ಯಗಳಿಗೆ ನೀಡಲಿದೆ.
- ಈ ಸಾಲ ಮೊತ್ತದ ಶೇ.60 ರಷ್ಟು ಹಣವನ್ನು ರಾಜ್ಯ ಸರ್ಕಾರ ತನ್ನ ಯೋಜನೆಗಳಿಗಾಗಿ ಮೀಸಲಿಡಬೇಕಾಗುತ್ತದೆ.
- ಈ ಮೂಲಕ 2010 ರಲ್ಲಿ 29.8 ರಷ್ಟಿದ್ದ ಬಡತನದ ಪ್ರಮಾಣವನ್ನು 2030 ರ ವೇಳೇಗೆ 5.5 ರಷ್ಟು ತಗ್ಗಿಸುವ ಗುರಿಯನ್ನು ಹೊಂದಲಾಗಿದೆ.

**ಸುಪ್ರೀಂ ಕೋರ್ಟ್ ಗೆ ಇಬ್ಬರು ನ್ಯಾಯಾಧೀಶರ ನೇಮಕ**

ರಾಷ್ಟ್ರಪತಿ ಪ್ರಣಭ್ ಮುಖರ್ಜಿರವರು ನ್ಯಾ.ಅರ್ಜನ್ ಕುಮಾರ್ ಸಿಕ್ರಿ ಮತ್ತು ನ್ಯಾ.ಶರದ್ ಅರವಿಂದ್ ಬೊಬ್ಡೆ ರವರನ್ನು ಸುಪ್ರೀಂ ಕೋರ್ಟ್ನ ನ್ಯಾಯಾಧೀಶರಾಗಿ ನೇಮಕಮಾಡಿದ್ದಾರೆ. ಸುಪ್ರೀಂ ಕೋರ್ಟ್ ನ ಮುಖ್ಯ ನ್ಯಾಯಾಧೀಶರಾದ ಅಲ್ತಮಸ್ ಕಬೀರ್ ರವರು ಈ ಇಬ್ಬರು ನ್ಯಾಯಾಧೀಶರಿಗೆ ಪ್ರಮಾಣ ವಚನ ಬೋಧಿಸಿದರು.

- ಈ ನ್ಯಾಯಾಧೀಶರುಗಳ ನೇಮಕಾತಿಯಿಂದ ಸುಪ್ರೀಂ ಕೋರ್ಟ್ ನ ನ್ಯಾಯಾಧೀಶರುಗಳ ಸಂಖ್ಯೆ 30 ಕ್ಕೆ ಏರಿದೆ. ಸುಪ್ರೀಂ ಕೋರ್ಟ್ ನ ಒಟ್ಟು ನ್ಯಾಯಾಧೀಶರುಗಳ ಸಂಖ್ಯೆ 31.

ಅರ್ಜನ್ ಕುಮಾರ್ ಸಿಕ್ರಿ:

- ಸಿಕ್ರಿ ರವರು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನ ಮುಖ್ಯ ನ್ಯಾಯಾಧೀಶರಾಗಿ ಸೇವೆ ಸಲ್ಲಿಸುತ್ತಿದ್ದರು. 1977 ರಲ್ಲಿ ವಕೀಲರಾಗಿ ದೆಹಲಿ ಬಾರ್ ಕೌನ್ಸಿಲ್ ನಲ್ಲಿ ವೃತ್ತಿಯನ್ನು ಆರಂಭಿಸಿದರು. ಬಳಿಕ 1997 ರಲ್ಲಿ ದೆಹಲಿ ಹೈಕೋರ್ಟ್ ಹಿರಿಯ ವಕೀಲರಾಗಿ ಬಡ್ತಿಪಡೆದಿದ್ದರು.

ಶರದ್ ಅರವಿಂದ್ ಬೊಬ್ಡೆ:

- ಅರವಿಂದ್ ಬೊಬ್ಡೆ ರವರು ಮಧ್ಯಪ್ರದೇಶ ಹೈಕೋರ್ಟ್ ನ ಮುಖ್ಯ ನ್ಯಾಯಾಧೀಶರು. 1978 ರಲ್ಲಿ ಬಾಂಬೆ ಹೈಕೋರ್ಟ್ ನ ನಾಗಪುರ್ ಪೀಠದಲ್ಲಿ ವಕೀಲರಾಗಿ ಸೇವೆ ಪ್ರಾರಂಭ. 1998 ರಲ್ಲಿ ಹಿರಿಯ ನ್ಯಾಯಾಧೀಶರಾಗಿ ಅವರು ಬಡ್ತಿ ಹೊಂದಿದರು.

**"ಏಷ್ಯಾ ಸಿಂಹ" ಗಳ ಸ್ಥಳಾಂತರಕ್ಕೆ ಸುಪ್ರೀಂ ಕೋರ್ಟ್ ಆದೇಶ**

ಅಪಾಯದ ಅಂಚಿನಲ್ಲಿರುವ "ಏಷ್ಯಾ ಸಿಂಹ (Asiatic Lions)" ಗಳಲ್ಲಿ ಕೆಲವನ್ನು ಗುಜರಾತ್ ನ ಗಿರ್ ಅರಣ್ಯದಿಂದ ಮಧ್ಯ ಪ್ರದೇಶದ "ಕುನೊ ವನ್ಯಜೀವಿ ಅಭಯಾರಣ್ಯ" ಕ್ಕೆ ಸ್ಥಳಾಂತರಿಸುವಂತೆ ಸಂಬಂಧಪಟ್ಟ ಇಲಾಖೆಗಳಿಗೆ ಸುಪ್ರೀಂ ಕೋರ್ಟ್ ಆದೇಶಿಸಿದೆ. ಸುಪ್ರೀಂ ಕೋರ್ಟ್ ನ ಈ ತೀರ್ಪಿನಿಂದ ಗುಜರಾತ್ ಗೆ ಮುಖಭಂಗವಾಗಿದೆ. "ಏಷ್ಯಾ ಸಿಂಹ"ಗಳ ಸಂತತಿ ವಿನಾಶದ ಮಟ್ಟ ತಲುಪಿದ್ದು, ಅವುಗಳ ಸಂರಕ್ಷಣೆ ಅತ್ಯಗತ್ಯವಾಗಿದೆ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಅಲ್ಲದೇ ಮುಂದಿನ ಆರು ತಿಂಗಳೊಳಗೆ

ಸಿಂಹಗಳನ್ನು ಸ್ಥಳಾಂತರಿಸಲು ನ್ಯಾ.ಕೆ.ಎಸ್.ರಾಧಕೃಷ್ಣನ್ ಮತ್ತು ನ್ಯಾ.ಸಿ.ಕೆ.ಪ್ರಸಾದ್ ರವರನ್ನು ಒಳಗೊಂಡ ಪೀಠ ಗಡುವು ನೀಡಿದೆ.

ಹಿನ್ನೆಲೆ:

- ಭಾರತದಲ್ಲಿ "ಏಷ್ಯಾ ಸಿಂಹ"ಗಳು ಕಾಣ ಸಿಗುವ ಏಕೈಕ ರಾಜ್ಯ ಗುಜರಾತ್. ಗುಜರಾತ್ ನ ಗಿರ್ ಅರಣ್ಯ ಪ್ರದೇಶ ಏಷ್ಯಾ ಸಿಂಹಗಳಿಗೆ ಹೆಸರುವಾಸಿಯಾಗಿದೆ. ಆದರೆ ಕಳೆದ ಎರಡು ವರ್ಷಗಳಲ್ಲಿ ಇಲ್ಲಿ ಸುಮಾರು 90 ಕ್ಕೂ ಹೆಚ್ಚು ಸಿಂಹಗಳು ಸ್ವಾಭಾವಿಕವಾಗಿ ಸಾವನ್ನಪ್ಪಿವೆ. ಅಪಾಯದ ಅಂಚಿನಲ್ಲಿರುವ ಈ ಸಿಂಹಗಳಿಗೆ ತನ್ನ "ಕುನೊ ವನ್ಯಜೀವಿ ಅಭಯಾರಣ್ಯ"ದಲ್ಲಿ ಸೂಕ್ತ ನೆಲೆಯನ್ನು ಕಲ್ಪಿಸಲಾಗುವುದು ಆಗಾಗಿ ಸಿಂಹಗಳನ್ನು ಸ್ಥಳಾಂತರಿಸುವಂತೆ ಮಧ್ಯಪ್ರದೇಶ ಸರ್ಕಾರ ಸುಪ್ರೀಂ ಕೋರ್ಟ್ ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿತ್ತು. ಆದರೆ ಮಧ್ಯಪ್ರದೇಶದ ಈ ಮನವಿಯನ್ನು ವಿರೋಧಿಸಿದ ಗುಜರಾತ್ ಸರ್ಕಾರ, "ಏಷ್ಯಾ ಸಿಂಹ"ಗಳು ಗುಜರಾತ್ ನ ಪ್ರತೀಕವಾಗಿವೆ ಆದ್ದರಿಂದ ಇವುಗಳನ್ನು ಸ್ಥಳಾಂತರಿಸಲು ಆಗುವುದಿಲ್ಲ ಎಂಬ ನಿಲುವನ್ನು ವ್ಯಕ್ತಪಡಿಸಿತ್ತು. ಅಳಿಸಿ ಹೋಗುತ್ತಿರುವ ಸಿಂಹಗಳ ಸಂತತಿಯನ್ನು ಉಳಿಸುವುದು ಅತಿ ಮುಖ್ಯ ಎಂಬುದನ್ನು ಅರಿತ ಸುಪ್ರೀಂ ಕೋರ್ಟ್ ಸಿಂಹಗಳ ಸ್ಥಳಾಂತರಕ್ಕೆ ಆದೇಶಿಸಿದೆ.
- ಸಿಂಹಗಳ ಸ್ಥಳಾಂತರಕ್ಕೆ ಸಂಬಂಧಿಸಿದಂತೆ "ತಜ್ಞ"ರ ಸಮಿತಿಯನ್ನು ರಚಿಸುವುದಾಗಿ ಕೋರ್ಟ್ ಹೇಳಿದೆ. ಎಷ್ಟು ಸಿಂಹಗಳನ್ನು ಸ್ಥಳಾಂತರ ಮಾಡಬೇಕು ಮತ್ತು ಹೇಗೆ ಎನ್ನುವ ವಿಚಾರವನ್ನು ಈ ಸಮಿತಿ ಅಧ್ಯಯನ ಮಾಡಲಿದೆ.
- ಸಿಂಹಗಳ ಸ್ಥಳಾಂತರಕ್ಕೆ ಆರು ತಿಂಗಳ ಗಡುವು ನೀಡಲಾಗಿದೆ.

<u>ಏಷ್ಯಾ ಸಿಂಹ</u>:

- ಗುಜರಾತ್ ನ ಗಿರ್ ರಾಷ್ಟ್ರೀಯ ಉದ್ಯಾನದಲ್ಲಿ ಮಾತ್ರ ಕಾಣ ಸಿಗುವ ಈ ಸಿಂಹಗಳನ್ನು IUCN (International Union for Conservation of Nature) ಅಪಾಯದ ಅಂಚಿನಲ್ಲಿರುವ ಪ್ರಾಣಿಗಳ ಗುಂಪಿಗೆ ಸೇರಿಸಿದೆ. 1,412 ಚದರ ಕಿ.ಮೀ ವಿಸ್ತೀರ್ಣವಿರುವ ಗಿರ್ ಅರಣ್ಯವನ್ನು 1965 ರಲ್ಲಿ ಅಭಯಾರಣ್ಯ ನಂತರ ರಾಷ್ಟ್ರೀಯ ಉದ್ಯಾನವಾಗಿ ಘೋಷಿಸಲಾಯಿತು.
- ಸದ್ಯ ಗಿರ್ ರಾಷ್ಟ್ರೀಯ ಉದ್ಯಾನದಲ್ಲಿ 400 ಏಷ್ಯಾ ಸಿಂಹಗಳು ಇರುವುದಾಗಿ ಅಂದಾಜಿಸಲಾಗಿದೆ. 2011 ಮತ್ತು 2012 ನೇ ಸಾಲಿನಲ್ಲಿ ವರ್ಷಕ್ಕೆ 46 ರಂತೆ ಒಟ್ಟು 92 ಸಿಂಹಗಳು ಇಲ್ಲಿ ಸಾವನ್ನಪ್ಪಿವೆ.
- ಸುಪ್ರೀಂಕೋರ್ಟ್ ನ ಈ ಆದೇಶದಿಂದ "ಕುನೊ ವನ್ಯ ಜೀವಿ ಅಭಯಾರಣ್ಯ" ಏಷ್ಯಾ ಸಿಂಹಗಳನ್ನು ಹೊಂದಲಿರುವ ದೇಶದ ಎರಡನೇ ಪ್ರದೇಶವಾಗಲಿದೆ.

<u>**ಚಿರತೆ ಮರುಸೇರ್ಪಡೆಗೂ ಸುಪ್ರೀಂ ನಕಾರ**</u>

- ಇದೇ ವೇಳೆ ಸುಪ್ರೀಂ ಕೋರ್ಟ್ ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯದ ಮಹತ್ವದ "ಚಿರತೆಗಳ ಮರುಸೇರ್ಪಡೆ ಯೋಜನೆಗೂ (Cheetah Reintroduction Scheme)" ತಡೆ ನೀಡಿದೆ. ನಮೀಬಿಯಾ ದಿಂದ ಆಫ್ರಿಕಾದ ಚಿರತೆಗಳನ್ನು ಭಾರತಕ್ಕೆ ತರಸಿಕೊಂಡು ಸಂತತಿಯನ್ನು ಅಭಿವೃದ್ಧಿಯನ್ನು ಹೆಚ್ಚಿಸುವ ಆಶಾಯವನ್ನು ಸರ್ಕಾರ ಹೊಂದಿತ್ತು. ಇದಕ್ಕಾಗಿ ರೂ.300 ಕೋಟಿಯನ್ನು ವ್ಯಯಿಸಲು ಸರ್ಕಾರ ಸಿದ್ದವಿತ್ತು, ಆದರೆ ಕಳೆದ ವರ್ಷ ಮೇ ನಲ್ಲಿ ಸುಪ್ರೀಂಕೋರ್ಟ್ ಈ ಯೋಜನೆಗೆ ತಡೆ ನೀಡಿ ಆದೇಶ ಹೊರಡಿಸಿತ್ತು.

- ಸ್ಥಳೀಯ ಪ್ರಭೇದಗಳಾದ “ಕಾಡುಎಮ್ಮೆ” ಮತ್ತು “ಗ್ರೇಟ್ ಇಂಡಿಯನ್ ಬಸ್ಟರ್ಡ್” ಗಳ ಸಂತತಿ ನಾಶದ ಮಟ್ಟ ತಲುಪಿವೆ. ಇಂತಹ ಸ್ಥಳೀಯ ಪ್ರಬೇದಗಳ ರಕ್ಷಣೆಗೆ ಮೊದಲು ಆದ್ಯತೆ ನೀಡಬೇಕೆ ಹೊರತು ವಿದೇಶಿ ಪ್ರಬೇಧಗಳಿಗಲ್ಲ ಎಂದು ಕೋರ್ಟ್ ಹೇಳಿದೆ.

**ಭಾರತೀಯ ರೈಲ್ವೆಗೆ 160 ವರ್ಷಗಳ ಸಂಭ್ರಮ**

ಏಪ್ರಿಲ್ 16, ಭಾರತದ ರೈಲ್ವೆ ಇತಿಹಾಸದಲ್ಲಿ ಸುವರ್ಣ ಅಕ್ಷರದಲ್ಲಿ ಬರೆದಿಡಬೇಕಾದ ದಿನ. ಏಕೆಂದರೆ ಏಪ್ರಿಲ್ 16, 1853 ರಂದು ಭಾರತದಲ್ಲಿ ಪ್ರಥಮ ಪ್ರಯಾಣಿಕರ ರೈಲು ಸಂಚರಿಸುವ ಮೂಲಕ ಹೊಸದೊಂದು ಕ್ರಾಂತಿ ಸೃಷ್ಟಿಸಿತು. ಭಾರತದಲ್ಲಿ ಪ್ರಯಾಣಿಕರ ರೈಲು ಸಂಚಾರ ಆರಂಭವಾಗಿ ಏಪ್ರಿಲ್ 16, 2013 ಕ್ಕೆ 160 ವರ್ಷಗಳು ತುಂಬಿವೆ. 160 ವರ್ಷಗಳ ಸಂಭ್ರಮದಲ್ಲಿರುವ ಭಾರತೀಯ ರೈಲ್ವೆಯ ಕೆಲವು ಪ್ರಮುಖ ಮಾಹಿತಿಗಳು ಇಲ್ಲಿವೆ.

- ವಿಶ್ವದಲ್ಲೇ ಪ್ರಥಮ ಬಾರಿಗೆ ಇಂಗ್ಲೆಂಡ್ ನ “ಸ್ಟಾಕ್ ಹೋಮ್ ಮತ್ತು ಡಾರ್ಲಿಂಗ್ ಟನ್” ನಡುವೆ ಮೊದಲ ಸಾರ್ವಜನಿಕ ರೈಲು 1825 ರಲ್ಲಿ ಸಂಚಾರ ಆರಂಭಿಸಿತು.
- ಭಾರತದಲ್ಲಿ ರೈಲ್ವೆ ಕಲ್ಪನೆ ಮೂಡಿದ್ದು 1843 ರ ದಶಕದಲ್ಲಿ. ಭಾರತದ ಪ್ರಮುಖ ಬಂದರುಗಳಾದ ಮುಂಬೈ, ಕಲ್ಕತ್ತಾ ಮತ್ತು ಮದ್ರಾಸ್ ಬಂದರುಗಳನ್ನು ರೈಲ್ವೆ ಮಾರ್ಗದ ಮೂಲಕ ಸಂಪರ್ಕಿಸುವ ಯೋಜನೆಯನ್ನು “ಲಾರ್ಡ್ ಡಾಲ್ ಹೌಸಿ” 1843 ರಲ್ಲಿ ಪ್ರಸ್ತಾಪಿಸಿದ್ದರು. ಇದೇ ವರ್ಷ ರೈಲ್ವೆ ಮಾರ್ಗ ಅಳವಡಿಕೆಯ ಬಗ್ಗೆ ಅಧ್ಯಯನ ನಡೆಸಲು ಎಂಜಿನಿಯರ್ “ಜಿಯೋರ್ಜ್ ಟಿ ಕ್ಲಾರ್ಕ”ರವರನ್ನು ಭಾರತಕ್ಕೆ ಕರೆಸಲಾಯಿತು.
- 1845 ರಲ್ಲಿ ರೈಲ್ವೇ ಸಂಪರ್ಕ ಜಾರಿಗೊಳಿಸುವ ಸಲುವಾಗಿ “ಬಾಂಬೆ ಗ್ರೇಟ್ ಈಸ್ಟರ್ನ್ ರೈಲ್ವೆ” ಸಂಸ್ಥೆಯನ್ನು ಸ್ಥಾಪಿಸಲಾಯಿತು.
- ಭಾರತದ ಮೊದಲ ರೈಲ್ವೆ ಕಂಪನಿ “ದಿ ಗ್ರೇಟ್ ಇಂಡಿಯನ್ ಪೆನಿಸ್ಯುಲರ್ ಕಂಪನಿ” ಮಸೂದೆಯನ್ನು 1947 ರಲ್ಲಿ ಪ್ರಥಮ ಬಾರಿಗೆ ಮಂಡಿಸಲಾಯಿತದರೂ ಅಂದಿನ ಬ್ರಿಟಿಷ್ ಸರ್ಕಾರ ಈ ಮಸೂದೆ ಒಪ್ಪಿಗೆ ನೀಡಲಿಲ್ಲ. ಆದರೆ “ಲಾರ್ಡ್ ಡಾಲ್ ಹೌಸಿ” ಭಾರತದ ಗೌವರ್ನರ್ ಜನರಲ್ ಆಗಿ ನೇಮಕಗೊಂಡ ಬಳಿಕ ಆಗಸ್ಟ್ 1, 1949 ರಲ್ಲಿ ಈ ಕಂಪನಿ ಸ್ಥಾಪನೆಗೆ ಒಪ್ಪಿಗೆ ನೀಡಲಾಯಿತು. ಇಲ್ಲಿಂದ ಸೃಷ್ಟಿಯಾದದ್ದೇ ಇತಿಹಾಸ.
- ಡಿಸೆಂಬರ್ 22, 1851 ರಲ್ಲಿ ದೇಶದ ಮೊದಲ ಸರಕು ಸಾಗಣೆ ರೈಲು ಸಂಚಾರ ಆರಂಭಿಸಿತು.
- ಏಷ್ಯಾದ ಮತ್ತು ದೇಶದ ಮೊದಲ ಪ್ರಯಾಣಿಕರ ರೈಲು ಸಂಚಾರಕ್ಕೆ 1852 ರಲ್ಲೇ ಸಿದ್ದತೆ ಮಾಡಲಾಗಿತ್ತಾದರೂ, ಪ್ರಯಾಣಿಕರ ರೈಲು ಮೊದಲ ಬಾರಿಗೆ ಸಂಚರಿಸಿದ್ದು ಏಪ್ರಿಲ್ 16, 1853, ಶನಿವಾರ 3.35 PM ಗೆ. ಮಂಬೈನ ಬೂರಿ ಬಂದರ್ ನಿಂದ ಥಾಣೆ ವರೆಗೆ ಸುಮಾರು 34 ಕಿ.ಮೀ ದೂರ ಸಂಚಾರ ಮಾಡುವ ಮೂಲಕ ಐತಿಹಾಸಿಕ ಘಟನೆಗೆ ಸಾಕ್ಷಿಯಾಯಿತು.

- ಈ ಮೊದಲ ಪ್ರಯಾಣಿಕರ ರೈಲಿನಲ್ಲಿ ಸಿಂದ್, ಸಾಹೀಬ್ ಮತ್ತು ಸುಲ್ತಾನ್ ಹೆಸರಿನ ಮೂರು ಎಂಜಿನ್ ಗಳನ್ನು ಅಳವಡಿಸಲಾಗಿತ್ತು. 14 ಭೋಗಿಗಳನ್ನು ಹೊಂದಿದ್ದ ಈ ರೈಲಿನಲ್ಲಿ, 400 ಕ್ಕೂ ಹೆಚ್ಚು ಪ್ರಯಾಣಿಕರು ಅಂದು ಪ್ರಯಾಣ ಮಾಡಿದ್ದರು.
- ಪೂರ್ವ ಭಾಗದಲ್ಲಿ ಮೊದಲ ಬಾರಿಗೆ ಆಗಸ್ಟ್ 15, 1854 ರಲ್ಲಿ "ಹೌರ ಮತ್ತು ಹೂಗ್ಲಿ" ನಡುವೆ ಪ್ರಯಾಣಿಕರ ರೈಲು ಸಂಚಾರ ಆರಂಭಿಸಿತು. ಆಗಸ್ಟ್ 1, 1864 ರಲ್ಲಿ ಬಳ್ಳಾರಿ, ರಾಯಚೂರು ರೈಲ್ವೆ ಮಾರ್ಗಗಳು ಸಂಚಾರಕ್ಕೆ ಮುಕ್ತವಾದವು.
- ಭಾರತದ ಮೊದಲ ವಿದ್ಯುತ್ ರೈಲು ಫೆಬ್ರವರಿ 25, 1925 ರಲ್ಲಿ "ಮುಂಬೈ ನಿಂದ ಕುರ್ಲಾ" ಮಾರ್ಗದಲ್ಲಿ ಕಾರ್ಯಾರಂಭ ಮಾಡಿತು.

**ರೈಲ್ವೆ ಬಜೆಟ್**:

- ರೈಲ್ವೆ ಆಡಳಿತದಲ್ಲಿ ಬದಲಾವಣೆ ತರುವ ಸಲುವಾಗಿ 1920 ರಲ್ಲಿ 10 ಜನ ಸದಸ್ಯರ ಸಮಿತಿಯೊಂದನ್ನು ನೇಮಿಸಲಾಯಿತು. ರೈಲ್ವೆ ಆಡಳಿತದಲ್ಲಿ ಅಪಾರ ಪರಿಣಿತಿಯನ್ನು ಹೊಂದಿದ್ದ "ವಿಲಿಯಂ ಆಕ್ ವರ್ತ್" ಈ ಸಮಿತಿಯ ನೇತೃತ್ವವಹಿಸಿದರು. ಈ ಸಮಿತಿಯು ಸೆಪ್ಟೆಂಬರ್, 1921 ರಲ್ಲಿ ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ರೈಲ್ವೆ ಬಜೆಟ್ ನ್ನು ಸಾಮಾನ್ಯ ಬಜೆಟ್ ನಿಂದ ಬೇರ್ಪಡಿಸಬೇಕು ಎನ್ನುವುದು ಈ ಸಮಿತಿಯ ಪ್ರಮುಖ ಶಿಫಾರಸ್ಸು. ಅದರಂತೆ ಪ್ರಥಮ ಬಾರಿಗೆ ರೈಲ್ವೆ ಬಜೆಟ್ ನ್ನು 1925 ರಲ್ಲಿ ಪ್ರತ್ಯೇಕವಾಗಿ ಮಂಡಿಸಲಾಯಿತು. ಅಂದಿನಿಂದ ಇಲ್ಲಿಯವರೆಗೂ ರೈಲ್ವೆ ಬಜೆಟ್ ನ್ನು ಪ್ರತ್ಯೇಕವಾಗಿ ಮಂಡಿಸಲಾಗುತ್ತಿದೆ.

**ರೈಲ್ವೆ ಮ್ಯೂಸಿಯಂ**:

- ದೇಶದಲ್ಲೇ ಪ್ರಥಮ ಬಾರಿಗೆ ರೈಲ್ವೆ ಮ್ಯೂಸಿಯಂನ್ನು ದೆಹಲಿಯ ಚಾಣಕ್ಯಪುರಿಯಲ್ಲಿ ತೆರೆಯಲಾಯಿತು. ಸುಮಾರು 10 ಎಕರೆ ವಿಸ್ತೀರ್ಣದಲ್ಲಿ ನಿರ್ಮಿಸಿರುವ ಈ ಮ್ಯೂಸಿಯಂ ಇಂದು ಪ್ರಮುಖ ಪ್ರವಾಸಿ ತಾಣ.

**ರೈಲ್ವೆಗೆ ಸಂಬಂಧಿಸಿದ ಸಮಿತಿಗಳು**:

- **ರಾಕೇಶ್ ಮೋಹನ್ ಸಮಿತಿ**: ರೈಲ್ವೆ ಮೂಲಸೌಕರ್ಯಕ್ಕೆ ಸಂಬಂಧಿಸಿದಂತೆ ಸುಧಾರಣಾ ಕ್ರಮುಗಳನ್ನು ಶಿಫಾರಸ್ಸು ಮಾಡಲು ಭಾರತೀಯ ರಿಸರ್ವ್ ಬ್ಯಾಂಕ್ ನ ಉಪ ಗೌವರ್ನರ್ ಆಗಿದ್ದ ರಾಕೇಶ್ ಮೋಹನ್ ರವರ ನೇತೃತ್ವದಲ್ಲಿ ಈ ಸಮಿತಿಯನ್ನು ಡಿಸೆಂಬರ್ 31, 1998 ರಲ್ಲಿ ರಚಿಸಲಾಗಿತ್ತು. ಸಮಿತಿಯು ಒಟ್ಟು 17 ಸದಸ್ಯರನ್ನು ಒಳಗೊಂಡಿತ್ತು. ಸಮಿತಿಯು ತನ್ನ ಶಿಫಾರಸ್ಸನ್ನು ಅಂದಿನ ರೈಲ್ವೆ ಸಚಿವರಾಗಿದ್ದ ನಿತೀಶ್ ಕುಮಾರ್ ರವರಿಗೆ 2001 ರಲ್ಲಿ ಸಲ್ಲಿಸಿತು. ರೈಲ್ವೆ ದರ ಹೆಚ್ಚಳ, ಪ್ರತ್ಯೇಕ ರೈಲ್ವೆ ನಿರ್ವಹಣಾ ಮಂಡಳ ಸ್ಥಾಪನೆ, ನಷ್ಟದಲ್ಲಿರುವ ರೈಲ್ವೆ ಮಾರ್ಗಗಳನ್ನು ಮುಚ್ಚುವುದು ಮತ್ತು ಮಾನವ ಸಂಪನ್ಮೂಲವನ್ನು ತಗ್ಗಿಸುವುದು ಸೇರಿದಂತೆ ಅನೇಕ ಸಲಹೆಗಳನ್ನು ಸರ್ಕಾರಕ್ಕೆ ಸಲ್ಲಿಸಿತ್ತು.
- **ಕಾಕೋಡ್ಕರ್ ಸಮಿತಿ**: ರೈಲ್ವೆ ಸುರಕ್ಷತೆಯ ಕುರಿತಾಗಿ ಅಧ್ಯಯನ ನಡೆಸಲು ಈ ಸಮಿತಿಯನ್ನು ರಚಿಸಲಾಗಿತ್ತು. ಅಣು ಶಕ್ತಿ ಆಯೋಗದ ಮುಖ್ಯಸ್ಥರಾಗಿದ್ದ ಅನಿಲ್ ಕಾಕೋಡ್ಕರ್ ರವರು ಈ ಸಮಿತಿಯ ಅಧ್ಯಕ್ಷತೆಯನ್ನು ವಹಿಸಿದ್ದರು. ದೇಶದಲ್ಲಿ ವಾರ್ಷಿಕವಾಗಿ 14,000 ಸಾವಿನ ಪ್ರಕರಣಗಳು ರೈಲ್ವೆ ಅಪಘಾತದಿಂದ ಸಂಭವಿಸುತ್ತಿದ್ದು, ಅವೈಜ್ಞಾನಿಕ ಪದ್ಧತಿ ಪಾಲಿಸುತ್ತಿರುವುದೇ ಇದಕ್ಕೆ ಕಾರಣವೆಂದು ಸಮಿತಿ ವರದಿಯಲ್ಲಿ ತಿಳಿಸಿತ್ತು. ವಿನೂತನ ತಂತ್ರಜ್ಞಾನದಿಂದ ಕೂಡಿರುವ

ಸಿಗ್ನಲ್ ಗಳ ಅಳವಡಿಕೆ, ಲೆವೆಲ್ ಕ್ರಾಸಿಂಗ್ ಗಳ ಬಳಕೆಯನ್ನು ಕಾಲಕ್ರಮೇಣ ನಿಲ್ಲಿಸುವುದು ಮತ್ತು ಸುರಕ್ಷತಾ ವಿಧಾನಗಳನ್ನು ಜಾರಿಗೊಳಿಸುವುದನ್ನು ಒಳಗೊಂಡತೆ ಅನೇಕ ಶಿಫಾರಸ್ಸುಗಳನ್ನು ಈ ಸಮಿತಿ ಸರ್ಕಾರಕ್ಕೆ ಸಲ್ಲಿಸಿತ್ತು.

**ಸಿನಿಮಾಗಳ ಚಿತ್ರೀಕರಣ ಸುಗಮಗೊಳಿಸಲು "ಏಕಗವಾಕ್ಷಿ" ಸಮಿತಿ ರಚನೆ**

ಸಿನಿಮಾ ಚಿತ್ರೀಕರಣಕ್ಕೆ ಅನುಮತಿ ನೀಡಲು ಉಂಟಾಗುತ್ತಿರುವ ವಿಳಂಬ ಧೋರಣೆಯನ್ನು ಮನಗೊಂಡ ಸರ್ಕಾರ ಈ ಸಮಸ್ಯೆಯನ್ನು ಬಗೆಹರಿಸಲು ಅಂತರ ಸಚಿವಾಲಯಗಳ ಸಮಿತಿಯೊಂದನ್ನು ರಚಿಸಿದೆ. ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ಕಾರ್ಯದರ್ಶಿಗಳ ಅಧ್ಯಕ್ಷತೆಯಡಿ ಕಾರ್ಯನಿರ್ವಹಿಸಲಿರುವ ಈ ಸಮಿತಿಯು "ಏಕಗವಾಕ್ಷಿ"ಯಾಗಿ ಕಾರ್ಯನಿರ್ವಹಿಸಲಿದೆ.

**ಹಿನ್ನೆಲೆ**:

- ಸದ್ಯ ದೇಶದಲ್ಲಿ ಸ್ಥಳೀಯ ಮತ್ತು ವಿದೇಶಿ ಚಿತ್ರಗಳನ್ನು ಚಿತ್ರೀಕರಿಸುವ ಮುನ್ನ ಸುಮಾರು 30 ಇಲಾಖೆಗಳಿಂದ ಅನುಮತಿ ಪಡೆಯಬೇಕು. 30 ಇಲಾಖೆಗಳಿಂದ ಅನುಮತಿಯನ್ನು ಪಡೆಯುವುದು ಸುಲಭದ ಕಾರ್ಯವಲ್ಲ. ಆಗಾಗಿ ಈ ವ್ಯವಸ್ಥೆ ಅನಗತ್ಯ ವಿಳಂಬಕ್ಕೆ ದಾರಿ ಮಾಡಿಕೊಡುತ್ತಿತ್ತು.
- ಈಗ ರಚನೆಯಾಗಿರುವ ಈ ಸಮಿತಿಯು "ಏಕಗವಾಕ್ಷಿ"ಯಾಗಿ ಕಾರ್ಯನಿರ್ವಹಿಸಲಿದೆ. ಅಂದರೆ ಇನ್ನು ಮುಂದೆ ಸಿನಿಮಾಗಳ ಚಿತ್ರೀಕರಣಕ್ಕೆ ಅನುಮತಿ ಪಡೆಯಲು 30 ಇಲಾಖೆಗಳಿಗೆ ಅಲೆಯುವುದು ಬೇಕಾಗಿಲ್ಲ. ಈ ಇಲಾಖೆಗಳ ಪರವಾಗಿ ಸಮಿತಿಯು ಏಕಪಕ್ಷೀಯವಾಗಿ ಅನುಮತಿ ನೀಡಲಿದೆ.
- ದೇಶಿ ಮತ್ತು ವಿದೇಶ ಚಿತ್ರಗಳ ಚಿತ್ರೀಕರಣ ಎರಡಕ್ಕೂ ಇದು ಅನ್ವಯವಾಗಲಿದೆ. ಕೇವಲ ಸಿನಿಮಾ ಮಾತ್ರವಲ್ಲದೇ ಕಿರು ಚಿತ್ರ, ಟಿವಿ ಕಾರ್ಯಕ್ರಮಗಳ ಚಿತ್ರೀಕರಣಕ್ಕೂ ಅನುಮತಿ ನೀಡಲಿದೆ.

ಸಮಿತಿ ರಚನೆ:

- ಮಾಹಿತಿ ಮತ್ತು ಪ್ರಸಾರ (I&B) ಸಚಿವಾಲಯದ ಕಾರ್ಯದರ್ಶಿರವರು ಈ ಸಮಿತಿಯ ಅಧ್ಯಕ್ಷರಾಗಿರುವರು. ಈಗ I&B ಕಾರ್ಯದರ್ಶಿಗಳಾಗಿರುವ ಯು.ಕೆ.ವರ್ಮಾ ಸಮಿತಿಯ ಅಧ್ಯಕ್ಷರಾಗಿದ್ದಾರೆ.
- ಇವರ ಜತೆಗೆ ಸಂಸ್ಕೃತಿ, ಪ್ರವಾಸೋದ್ಯಮ, ವಿದೇಶಾಂಗ ವ್ಯವಹಾರ, ರೈಲ್ವೆ ಮತ್ತು ರಕ್ಷಣಾ ಸಚಿವಲಾಯದ ಕಾರ್ಯದರ್ಶಿಗಳು ಸಮಿತಿಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

**ವಿಶ್ವದ ಟಾಪ್ ಮೂರು ನಾಯಕರ ಪಟ್ಟಿಯಲ್ಲಿ ಮಹಾತ್ಮ ಗಾಂಧಿ**

ವಿಶ್ವದ ಅತ್ಯಂತ ಪ್ರಶಂಸನೀಯ ನಾಯಕರ ಪಟ್ಟಿಯಲ್ಲಿ ರಾಷ್ಟ್ರಪತಿ ಮಹಾತ್ಮ ಗಾಂಧಿ ರವರಿಗೆ ಮೂರನೇ ಸ್ಥಾನ ಲಭಿಸಿದೆ. PwC ಎಂಬ ಸಂಸ್ಥೆ ನಡೆಸಿರುವ ತನ್ನ 16 ನೇ ವಾರ್ಷಿಕ ಜಾಗತಿಕ ಸಿಇಒ ಗಳ ಸಮೀಕ್ಷೆಯಲ್ಲಿ ಗಾಂಧೀಜಿ ರವರಿಗೆ ಈ ಸ್ಥಾನ ಲಭಿಸಿದೆ. ವಿಶ್ವದಾದ್ಯಂತ ಒಟ್ಟು 1400 ಸಿಇಒಗಳನ್ನು ಈ ಸಮೀಕ್ಷೆಗೆ ಒಳಪಡಿಸಲಾಗಿತ್ತು.

- ಸಮೀಕ್ಷೆಯಲ್ಲಿ ರಷ್ಯಾದ "ವಿನ್ ಸ್ಟನ್ ಚರ್ಚಿಲ್" ರವರು ವಿಶ್ವದ ಅತ್ಯಂತ ಪ್ರಶಂಸನೀಯ ನಾಯಕರಾಗಿ ಹೊರಹೊಮ್ಮಿದ್ದಾರೆ.
- ಆಪಲ್ ಸಂಸ್ಥೆಯ ಸ್ಥಾಪಕ "ಸ್ಟೀವ್ ಜಾಬ್" ರವರಿಗೆ ಎರಡನೇ ಸ್ಥಾನ ಲಭಿಸಿದೆ.
- ನೆಪೋಲಿಯನ್, ಅಲೆಕ್ಸಾಂಡರ್ ದಿ ಗ್ರೇಟ್, ಜಾಕ್ ವೆಚ್ ಮತ್ತು ಬಿಲ್ ಕ್ಲಿಂಟನ್ ಪಟ್ಟಿಯಲ್ಲಿ ಸ್ಥಾನಗಳಿಸಿರುವ ಇತರೆ ಪ್ರಮುಖರೆನಿಸಿದ್ದಾರೆ.
- ಸಮೀಕ್ಷೆಗೆ ಒಳಪಡಿಸಿದ ಬಹುತೇಕ ಸಿಇಓ ಗಳು ಚರ್ಚಿಲ್ ರವರನ್ನು ಪ್ರಶಂಸನೀಯ ನಾಯಕ ಎಂದು ಬಣ್ಣಿಸಿದ್ದಾರೆ.
- ಟಾಪ್ ಟೆನ್ ಪ್ರಶಂಸನೀಯ ನಾಯಕರ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಏಕೈಕ ಮಹಿಳೆಯೆಂದರೆ "ಮಾರ್ಗರೇಟ್ ಥ್ಯಾಚರ್" ರವರು. ಥ್ಯಾಚರ್ ರವರಿಗೆ ಪಟ್ಟಿಯಲ್ಲಿ 7 ನೇ ಸ್ಥಾನ ಲಭಿಸಿದೆ.

## ಭಾರತ-ತಜಕಿಸ್ತಾನ: ಭಯೋತ್ಪಾದನೆ ನಿಗ್ರಹದ ಬಗ್ಗೆ ಚರ್ಚೆ

ತಜಕಿಸ್ತಾನ್ ದೇಶಕ್ಕೆ ಅಧಿಕೃತ ಪ್ರವಾಸ ಕೈಗೊಂಡಿರುವ ಭಾರತದ ಉಪರಾಷ್ಟ್ರಪತಿಗಳಾದ "ಹಮೀದ್ ಅನ್ಸಾರಿ" ರವರು ತಜಕಿಸ್ತಾನ್ ನ ಅಧ್ಯಕ್ಷರಾದ "ಇಮೊಮಾಲಿ ರಹಮೊನ್" ರವರೊಂದಿಗೆ ಮಹತ್ವದ ಚರ್ಚೆ ನಡೆಸಿದರು. ಉಭಯ ದೇಶಗಳ ನಡುವೆ ಭದ್ರತೆ ವಿಷಯಕ್ಕೆ ಸಂಬಂಧಿಸಿದ ಸಹಕಾರ ಮತ್ತು ಭಯೋತ್ಪಾದನೆಯನ್ನು ನಿಗ್ರಹಿಸಲು ಪರಸ್ಪರ ಸಹಕಾರದ ಬಗ್ಗೆ ಚರ್ಚಿಸಲಾಯಿತು.

- ಇಂಧನ, ಮಾಹಿತಿ ಕ್ಷೇತ್ರ, ಆರೋಗ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ಸಂಬಂಧಗಳನ್ನು ಬಲಪಡಿಸಲು ಉಭಯ ದೇಶದ ಮುಖಂಡರು ಚರ್ಚಿಸಿದರು.
- ತಜಕಿಸ್ತಾನದಲ್ಲಿ ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳನ್ನು ನಿರ್ಮಿಸಲು ಭಾರತ ಬದ್ಧವಿರುವುದಾಗಿ ಹಮೀದ್ ಅನ್ಸಾರಿಯವರು ಹೇಳಿದರು.
- ಉಭಯ ದೇಶಗಳು ಪ್ರಾದೇಶಿಕ ಶಾಂತಿ ಸ್ಥಿರತೆ ಬಗ್ಗೆ ಚರ್ಚಿಸಿದವು. ಅದರಲ್ಲೂ ಆಫ್ಘಾನಿಸ್ತಾನದಲ್ಲಿನ ಶಾಂತಿ ಅಸ್ಥಿರತೆ ಬಗ್ಗೆ ಎರಡೂ ದೇಶದ ಪ್ರತಿನಿಧಿಗಳು ಚರ್ಚಿಸಿದರು.

## 2017 ಕ್ಕೆ ದೇಶದ ನವೀಕರಿಸಬಹುದಾದ ಇಂಧನ ಉತ್ಪಾದನೆ ಸಾಮರ್ಥ್ಯ ದ್ವಿಗುಣ: ಪ್ರಧಾನಿ

ಇಂಧನ ಉತ್ಪಾದನೆಯಲ್ಲಿ ಸ್ವಾವಲಂಭನೆ ಸಾಧಿಸಲು ಭಾರತ ಧೃಡ ಸಂಕಲ್ಪ ತಾಳಿದೆ. 2017 ರ ವೇಳೆಗೆ ದೇಶದ ನವೀಕರಿಸಬಹುದಾದ ಇಂಧನ (Renewable Energy) ಉತ್ಪಾದನೆ ಸಾಮರ್ಥವನ್ನು ದ್ವಿಗುಣಗೊಳಿಸುವ ಯೋಜನೆಯನ್ನು ಹೊಂದಿರುವುದಾಗಿ ಪ್ರಧಾನ ಮನಮೋಹನ್ ಸಿಂಗ್ ರವರು ನಾಲ್ಕನೇ ಶುದ್ಧ ಇಂಧನ ಕುರಿತಾದ ಸಚಿವರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ವೇಳೆ ಹೇಳಿದ್ದಾರೆ. ನಾಲ್ಕನೇ ಶುದ್ಧ ಇಂದನ ಕುರಿತಾದ ಸಚಿವರ ಸಭೆ ದೇಶದ ರಾಜಧಾನಿ ನವದೆಹಲಿಯಲ್ಲಿ ಆಯೋಜಿಸಲಾಗಿದ್ದು, ಪ್ರಥಮ ಬಾರಿಗೆ ಈ ಸಭೆಯ ಅತಿಥ್ಯವನ್ನು ಭಾರತ ವಹಿಸಿಕೊಂಡಿದೆ.

- 2012 ರ ವೇಳೆಗೆ ದೇಶದ ನವೀಕರಿಸಬಹುದಾದ ಇಂಧನ ಉತ್ಪಾದನೆ ಸಾಮರ್ಥ್ಯ 25,000 ಮೆಗಾ ವ್ಯಾಟ್ ಗಳಿಷ್ಟಿದೆ. 2017 ರ ವೇಳೆಗೆ 55,000 ಮೆಗಾ ವ್ಯಾಟ್ ನವೀಕರಿಸಬಹುದಾದ ಇಂಧನ ಉತ್ಪಾದಿಸುವ ಗುರಿಯನ್ನು ಭಾರತ ಹೊಂದಿದೆ.
- ನವೀಕರಿಸಬಹುದಾದ ಇಂಧನ ಮೂಲಗಳಾದ ಸೌರ ಶಕ್ತಿ, ಪವನ ಶಕ್ತಿ ಮತ್ತು ಜೈವಿಕ ಅನಿಲಗಳ ಸಂಪೂರ್ಣ ಬಳಕೆಯ ಮೂಲಕ ಗುರಿಯನ್ನು ತಲುಪಲು ಭಾರತ ಯೋಜನೆ ರೂಪಿಸಿದೆ.
- ಸುಸ್ಥಿರ ಮತ್ತು ಶುದ್ದ ಇಂಧನ ಉತ್ಪಾದನೆಗೆ 12 ನೇ ಪಂಚ ವಾರ್ಷಿಕ ಯೋಜನೆಯಲ್ಲಿ ಒತ್ತು ನೀಡಲಾಗಿದೆ. ಇಂಗಾಲ ಮುಕ್ತ ಇಂಧನದ ಬಳಕೆಗೆ ಭಾರತ ಬದ್ದವಾಗಿರುವುದಾಗಿ ಪ್ರಧಾನಿ ಸಿಂಗ್ ಹೇಳಿದ್ದಾರೆ.
- ಸೌರ ಶಕ್ತಿ ಉತ್ಪಾದನಗೆ ಭಾರತದಲ್ಲಿ ಆಗಾದವಾದ ಅವಕಾಶವಿದೆ. ದೇಶದಲ್ಲಿ ಲಭ್ಯವಿರುವ ಸೌರ ಶಕ್ತಿಯ ಕೊಯ್ಲು ಮಾಡಿ ಇಂಧನವನ್ನು ಉತ್ಪಾದಿಸುವ ಸಲುವಾಗಿ ಈಗಾಗಲೇ "ಜವಹಾರ್ ಲಾಲ್ ನೆಹರೂ ಸೋಲಾರ್ ಮಿಷನ್" ನ್ನು ಸರ್ಕಾರ 2008 ರಲ್ಲಿ ಆರಂಭಿಸಿತು.
- "ಜವಾಹರ್ ಲಾಲ್ ನೆಹರೂ ಸೋಲಾರ್ ಮಿಷನ್" ಅಡಿ 2022 ರ ವೇಳೆಗೆ 22,000 ಮೆಗಾ ವ್ಯಾಟ್ ಸೌರ ವಿದ್ಯುತ್ ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ.
- ಸದ್ಯ ಪವನ ಶಕ್ತಿ ಮೂಲಕ 18,560 ಮೆಗಾ ವ್ಯಾಟ್ ಇಂಧನ ಉತ್ಪಾದಿಸುವ ಸಾಮರ್ಥ್ಯವನ್ನು ಭಾರತ ಹೊಂದಿದ್ದು, 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ಇನ್ನೂ 15,000 ಮೆಗಾ ವ್ಯಾಟ್ ಇಂಧನವನ್ನು ಪವನ ಶಕ್ತಿ ಮೂಲಕ ಉತ್ಪಾದಿಸುವ ಆಶಾಯ ಹೊಂದಿದೆ.
- ಪವನ ಶಕ್ತಿ ಉತ್ಪಾದನೆಯಲ್ಲಿ ಸದ್ಯ ತಮಿಳುನಾಡು ಮುಂಚೂಣಿಯಲ್ಲಿದೆ. ನಂತರದ ಸ್ಥಾನದಲ್ಲಿ ಗುಜರಾತ್, ಆಂಧ್ರಪ್ರದೇಶ ಮತ್ತು ಕರ್ನಾಟಕ ರಾಜ್ಯಗಳಿವೆ.

**<u>ಸಿದ್ದೇಶ್ವರ ಧಾಮ ಲೋಕಾರ್ಪಣೆ</u>**

ದಕ್ಷಿಣ ಸಿಕ್ಕಿಂ ನ ಸೋಲೊಫೊಗ್ ನಲ್ಲಿ ನಿರ್ಮಿಸಲಾಗಿರುವ "ಸಿದ್ದೇಶ್ವರ ಧಾಮ"ವನ್ನು ರಾಷ್ಟ್ರಪತಿ ಪ್ರಣಬ್ ಮುಖರ್ಜಿ ರವರು ಏಪ್ರಿಲ್ 17, 2013 ರಂದು ಉದ್ಘಾಟಿಸಿದರು. ಸಿಕ್ಕಿಂ ರಾಜ್ಯ ಸರ್ಕಾರ ಈ ಧಾಮವನ್ನು ನಿರ್ಮಿಸಿದ್ದು, ಭಕ್ತವೃಂದ ಮತ್ತು ಪ್ರವಾಸಿಗರನ್ನು ಆಕರ್ಷಿಸುವ ತಾಣವಾಗಿ ಇದು ತಲೆಎತ್ತಿದೆ. ದೇಶದ ನಾಲ್ಕು ಪ್ರಮುಖ ಹಿಂದೂ ಧಾರ್ಮಿಕ ಕೇಂದ್ರಗಳಾದ ಒಡಿಶಾದ ಪುರಿ, ಗುಜರಾತ್ ನ ದ್ವಾರಕ ಪುರಿ, ತಮಿಳುನಾಡಿನ ರಾಮೇಶ್ವರಂ ಮತ್ತು ಬದ್ರಿನಾಥ್ ಮಾದರಿಯಲ್ಲೇ ಇದನ್ನು ನಿರ್ಮಿಸಲಾಗಿದೆ.

- ಶ್ರೀ ಜಗದ್ಗುರು ಶಂಕರಚಾರ್ಯ ಸ್ವಾಮಿ ಸರಸ್ವತಿನಂದ ರವರು ನವೆಂಬರ್ 8, 2011 ರಲ್ಲಿ ಈ ಧಾಮಕ್ಕೆ ಶಂಕು ಸ್ಥಾಪನೆ ನೇರವೆರಿಸಿದ್ದರು.

- ದಕ್ಷಿಣ ಸಿಕ್ಕಿಂ ನ ಸೊಲೊಬೊಕ್ ಬೆಟ್ಟದ ತುದಿಯಲ್ಲಿ ನಿರ್ಮಾಣಗೊಂಡಿರುವ ಈ ಧಾಮದಲ್ಲಿ 108 ಅಡಿ ಎತ್ತರದ ಶಿವನ ವಿಗ್ರಹವನ್ನು ನಿಲ್ಲಿಸಲಾಗಿದೆ. ಜತೆಗೆ 12 ಜ್ಯೋತಿರ್ಲಿಂಗಗಳು, ಮತ್ತು ಶಿವನ ಅವತಾರ ಎಂದು ನಂಬಲಾಗಿರುವ 18 ಉದ್ದದ ಕೀರ್ತಿಕೇಶ್ವರ ವಿಗ್ರಹವನ್ನು ಒಳಗೊಂಡಿದೆ.
- ಪುರಾಣಗಳ ಪ್ರಕಾರ ಶಿವನು ಸೊಲೊಪೊಕ್ ಬೆಟ್ಟದಲ್ಲಿ ಏಕಾಂತ ವಾಸದಲ್ಲಿದ್ದಾಗ, ಇಲ್ಲಿನ ಅರಣ್ಯದಲ್ಲಿ ಬೇಟೆಯಾಡಿದ್ದನು ಎಂಬ ಪ್ರತೀತಿ ಇದೆ.
- ಸುಮಾರು 29.6 ಎಕರೆ ವಿಸ್ತೀರ್ಣ ಪ್ರದೇಶದಲ್ಲಿ ನೆಲೆಗೊಂಡಿರುವ ಈ ಧಾಮವನ್ನು ರೂ.56.6 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ.

**<u>ಬ್ರಹ್ಮಪುತ್ರ ನದಿಯಲ್ಲಿ ಅಣೆಕಟ್ಟು ಯೋಜನೆ: ಭಾರತದ ಪ್ರಸ್ತಾವನೆ ತಿರಸ್ಕರಿಸಿದ ಚೀನಾ</u>**

ಚೀನಾ-ಭಾರತ ನಡುವಿನ ಬ್ರಹ್ಮಪುತ್ರ ನದಿ ವಿವಾದ ತಾರಕ್ಕೇರುವ ಸೂಚನೆಗಳು ಗೋಚರವಾಗಿವೆ. ಉಭಯ ದೇಶಗಳ ನಡುವಿನ ಈ ವಿವಾದವನ್ನು ಜಲ ಆಯೋಗ ಸ್ಥಾಪನೆ ಅಥವಾ ಅಂತರ ರಾಷ್ಟ್ರಗಳ ಒಪ್ಪಂದದ ಮೂಲಕ ಬಗೆಹರಿಸಿಕೊಳ್ಳುವಂತೆ ಭಾರತ ನೀಡಿದ್ದ ಪ್ರಸ್ತಾವನೆಯನ್ನು ಚೀನಾ ತಳ್ಳಿಹಾಕಿದೆ.

ವಿವಾದವೇನು?

- ಬ್ರಹ್ಮಪುತ್ರ ನದಿಯ ಮೇಲೆ ಚೀನಾ ಹೊಸದಾಗಿ ಮೂರು ಅಣೆಕಟ್ಟು (Dagu, Jiacha, Jiexu) ನಿರ್ಮಾಣ ಯೋಜನೆಯನ್ನು ಕೈಗೆತ್ತಿಕೊಂಡಿದೆ. ಈ ಹಿಂದೆ ಈಗಾಗಲೇ Zangmu ಬಳಿ ಅಣೆಕಟ್ಟು ಯೋಜನೆಯನ್ನು ಚೀನಾ ನಿರ್ಮಿಸಿದೆ. ಟಿಬೆಟ್ ನಲ್ಲಿ ಹುಟ್ಟುವ ಬ್ರಹ್ಮಪುತ್ರ ನದಿಯು ಚೀನಾ ಮುಖಾಂತರ ಹರಿದು ಅರುಣಾಚಲ ಪ್ರದೇಶದಲ್ಲಿ ಭಾರತವನ್ನು ಪ್ರವೇಶಿಸುತ್ತದೆ.
- ಚೀನಾ ನಿರ್ಮಿಸುತ್ತಿರುವ ಈ ಅಣೆಕಟ್ಟುಗಳಿಂದ ಬ್ರಹ್ಮಪುತ್ರ ನದಿಯ ನೀರಿನ ಹರಿವಿನಲ್ಲಿ ಇಳಿಮುಖವಾಗಲಿದ್ದು, ಭಾರತಕ್ಕೆ ಲಭ್ಯವಾಗುತ್ತಿರುವ ನೀರಿನ ಪ್ರಮಾಣ ತಗ್ಗಲಿದೆ ಎಂಬುದು ಭಾರತದ ವಾದ.
- ಈ ಸಂಬಂಧ ಉಭಯ ದೇಶಗಳು ಪರಸ್ಪರ ಚರ್ಚಿಸಿವೆ ಆದರೂ ಭಾರತದ ನಿಲುವನ್ನು ಅಲ್ಲಗಳೆದ ಚೀನಾ, ತನ್ನ ಈ ಯೋಜನೆಯಿಂದ ನೀರಿನ ಹರಿವಿನ ಮೇಲೆ ಯಾವುದೇ ಪರಿಣಾಮ ಉಂಟಾಗುವುದಿಲ್ಲ ಎಂಬ ವಿಶ್ವಾಸ ವ್ಯಕ್ತಪಡಿಸಿತ್ತು.
- ಆದರೆ ಭಾರತ ಸರ್ಕಾರದ ಪರವಾಗಿ ನೇಮಿಸಲಾದ ತಜ್ಞರ ತಂಡ ಚೀನಾ ನೀಡಿರುವ ವಿಶ್ವಾಸವನ್ನು ಸಂಪೂರ್ಣವಾಗಿ ನಿರಾಕರಿಸಿ, ಚೀನಾದ ಈ ಯೋಜನೆಗಳಿಂದ ಭಾರತಕ್ಕೆ ಅನ್ಯಾಯವಾಗಲಿದೆ ಎಂದು ಹೇಳಿದೆ.
- ಉಭಯ ದೇಶಗಳ ನಡುವಿನ ಈ ವಿವಾದವನ್ನು ತಿಳಿಗೊಳಿಸುವ ಸಲುವಾಗಿ ಜಲ ಆಯೋಗ ರಚನೆ ಅಥವಾ ಒಪ್ಪಂದ ಮಾಡಿಕೊಳ್ಳುವ ಮೂಲಕ ಸಮಸ್ಯೆಯನ್ನು ಬಗೆಹರಿಸಲು ನೀಡಿದ್ದ ಪ್ರಸ್ತಾವನೆಯನ್ನು ಚೀನಾ ನಿರಾಕರಿಸಿದೆ.
- ಭಾರತ-ಪಾಕ್ ನಡುವೆ ನದಿ ನೀರು ಹಂಚಿಕೆ ಮತ್ತು ಮಾಹಿತಿ ವಿನಿಮಯ ಮಾಡಿಕೊಳ್ಳುವ ಸಲುವಾಗಿ ಭಾರತ-ಪಾಕ್ ಜಲ ನೀತಿ -1960 ಒಪ್ಪಂದ ಮಾಡಿಕೊಂಡಿವೆ. ಇದೇ ರೀತಿ ಬಾಂಗ್ಲಾ ಮತ್ತು ಭಾರತ ನಡುವೆ ಸಹ ಒಪ್ಪಂದ ಮಾಡಿಕೊಳ್ಳಲಾಗಿದೆ.

## ಏಪ್ರಿಲ್ 18-ವಿಶ್ವ ಪರಂಪರೆಯ ದಿನ

ಏಪ್ರಿಲ್ 18 ನ್ನು ಪ್ರತಿ ವರ್ಷ ವಿಶ್ವ ಪರಂಪರೆಯ ದಿನ (World Heritage Day)ವನ್ನಾಗಿ ಆಚರಿಸಲಾಗುತ್ತದೆ. ಐತಿಹಾಸಿಕ ಸ್ಮಾರಕಗಳ ಮಹತ್ವ ಮತ್ತು ಅವುಗಳ ಸಂರಕ್ಷಣೆ ಕುರಿತು ಜಾಗತಿಕ ಮಟ್ಟದಲ್ಲಿ ಅರಿವು ಮೂಡಿಸುವುದು ಈ ದಿನದ ಮುಖ್ಯ ಉದ್ದೇಶ.

- 1982 ರಲ್ಲಿ ಮೊದಲ ಬಾರಿಗೆ ವಿಶ್ವ ಪರಂಪರೆಯ ದಿನವನ್ನು ಏಪ್ರಿಲ್ 18 ರಂದು ಹಮ್ಮಿಕೊಳ್ಳಲಾಗಿತು. ಟುನೇಷಿಯಾದ "ಇಂಟರ್ ನ್ಯಾಷನಲ್ ಕೌನ್ಸಿಲ್ ಆಫ್ ಮನೊಮೆಂಟ್ಸ್ ಮತ್ತು ಸೈಟ್ಸ್" ನಿಂದ ಹಮ್ಮಿಕೊಳ್ಳಲಾಗಿದ್ದ ಈ ದಿನವನ್ನು "ಯುನೆಸ್ಕೊ" 1983 ರಲ್ಲಿ ಅಂಗೀಕರಿಸಿತು.
- ವಿಶ್ವದ ಮೂಲೆಗಳಲ್ಲಿ ಇರುವ ಐತಿಹಾಸಿಕ ತಾಣಗಳನ್ನು ಗುರುತಿಸಿ, ಅವುಗಳ ಸಂರಕ್ಷಣೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ನೀಡುವಂತೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಈ ದಿನದಂದು ಹಮ್ಮಿಕೊಳ್ಳಲಾಗುವುದು.
- ವಿಶ್ವದಾದ್ಯಂತ ಇಂದು ಒಟ್ಟು 962 ತಾಣಗಳನ್ನು "ಯುನೆಸ್ಕೊ" ವಿಶ್ವ ಪರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.
- ಭಾರತದ 29 ಪರಂಪರಿಕ ತಾಣಗಳು ಯುನೆಸ್ಕೊ ವಿಶ್ವ ಪರಂಪರಿಕ ತಾಣಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.
- ದೆಹಲಿಯ ಆಗ್ರಾ ಕೋಟೆ ಮತ್ತು ಅಜಂತಾ ಗುಹೆಗಳು ಈ ಪಟ್ಟಿಯಲ್ಲಿ ಸೇರ್ಪಡೆಗೊಂಡ ಮೊದಲ ತಾಣಗಳು. 1983 ರಲ್ಲಿ ಇವೆರಡೂ ಪರಂಪರಿಕ ತಾಣಗಳು ಯುನೆಸ್ಕೊ ಪಟ್ಟಿಗೆ ಸೇರ್ಪಡೆಗೊಂಡವು.

## ಪ್ರಪಂಚದ ಮೊದಲ ಅಂಧರ ಸ್ಮಾರ್ಟಫೋನ್ ತಯಾರಿಸಿದ ಭಾರತ

ವಿಶ್ವದಲ್ಲೇ ಇದೇ ಮೊದಲ ಬಾರಿಗೆ ಅಂಧರಿಗಾಗಿ ಬ್ರೈಲ್ "ಸ್ಮಾರ್ಟ್ ಫೋನ್" ನ್ನು ಭಾರತದಲ್ಲಿ ಅಭಿವೃದ್ಧಿಪಡಿಸಲಾಗಿದೆ. ವಿನೂತನ ತಂತ್ರಜ್ಞಾನದಿಂದ ಕೂಡಿರುವ ಈ ಮೊಬೈಲ್ ನಲ್ಲಿ ಅಂಧರು ಎಸ್ಎಂಎಸ್ ಮತ್ತು ಇ-ಮೇಲ್ ಗಳನ್ನು ಓದಬಹುದು. ಅಂಧರಿಗಾಗಿ ತಯಾರಿಸಲಾಗಿರುವ ಈ ಮೊಬೈಲ್ ಶೀಘ್ರದಲ್ಲಿ ಮಾರುಕಟ್ಟೆಗೆ ಲಗ್ಗೆ ಇಡಲಿದೆ.

- "ನ್ಯಾಷನಲ್ ಇನ್ ಸ್ಟಿಟ್ಯೂಟ್ ಆಫ್ ಡಿಸೈನ್" ನಿಂದ ಸ್ನಾತಕೋತ್ತರ ಪದವಿ ಪಡೆದಿರುವ "ಸುಮಿತ್ ದಗರ್" ಈ ಮೊಬೈಲ್ ನ್ನು ಸೃಷ್ಟಿಸಿದಾತ. ಖಾಸಗಿ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಇವರು ಈ ಮೊಬೈಲ್ ಅಭಿವೃದ್ಧಿಪಡಿಸುವುದಕ್ಕಾಗಿಯೇ ಕೆಲಸವನ್ನು ತೊರೆದರು. ಸುಮಾರು 3 ವರ್ಷಗಳಿಂದ ಇದರೆಡೆಗೆ ಗಮನವನ್ನು ಕೇಂದ್ರಿಕರಿಸಿ ಈಗ ಯಶಸ್ವಿಯಾಗಿದ್ದಾರೆ.

ಸ್ಮಾರ್ಟ್ ಫೋನ್ ಬಗ್ಗೆ:

- ಈ "ಸ್ಮಾರ್ಟ್ ಫೋನ್" ಅತ್ಯಾಧುನಿಕ "ಟಚ್ ಸ್ಕ್ರೀನ್" ತಂತ್ರಜ್ಞಾನದಿಂದ ಕೂಡಿದೆ. ಮೊಬೈಲ್ ಸ್ವೀಕರಿಸುವ ಪ್ರತಿಯೊಂದು ಸಂದೇಶವು ಸ್ಪರ್ಶ ರೂಪಕ್ಕೆ ಪರಿವರ್ತನೆಯಾಗುತ್ತವೆ.
- ಈ ಬ್ರೈಲಿ ಮೊಬೈಲ್ "Shape Memory Alloy" ತಂತ್ರಜ್ಞಾನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತದೆ. ಅಂದರೆ ಈ ಮೊಬೈಲ್ ನಲ್ಲಿ ಬಳಸಿರುವ ಲೋಹವು ಬಳಕೆಯ ನಂತರ ಮತ್ತೆ ತನ್ನ ಮೂಲ ಆಕಾರವನ್ನು ಪಡೆದುಕೊಳ್ಳುತ್ತದೆ.

- ಮೊಬೈಲ್ ನ ಪರದೆಯಲ್ಲಿ ನಲ್ಲಿ "ಪಿನ್ ಗ್ರಿಡ್" ಎಂಬ ವ್ಯವಸ್ಥೆಯನ್ನು ಕಲ್ಪಿಸಿದ್ದು, ಇದು ಬೇಕಾಗುವ ರೀತಿಯಲ್ಲಿ ಮೇಲೆ ಕೆಳಗೆ ಚಲಿಸುತ್ತದೆ. "ಪಿನ್ ಗ್ರಿಡ್" ಮೇಲೆ ಬಂದಾಗ ಅಕ್ಷರಗಳನ್ನು ಗುರುತಿಸಬಹುದು. ಮೊಬೈಲ್ ಪರದೆ ಬ್ರೈಲ್ ತರವೇ ಕಾರ್ಯನಿರ್ವಹಿಸುತ್ತದೆ. ಉಳಿದಂತೆ ಬೇರೆ ಎಲ್ಲಾ ಬಳಕೆ ಅಂಶಗಳು ಸಾಮಾನ್ಯ ಮೊಬೈಲ್ ನಂತೆಯೇ ಕಾರ್ಯನಿರ್ವಹಿಸಲಿವೆ.

**<u>ವೇದಾಂತ ಕಂಪನಿಯ ಬಾಕ್ಸೈಟ್ ಗಣಿಗಾರಿಕೆಗೆ ಸುಪ್ರೀಂ ತಡೆ</u>**

ಒಡಿಶಾದ "ನಿಯಮ್ ಗಿರಿ" ಬೆಟ್ಟದಲ್ಲಿ ವೇದಾಂತ ಕಂಪನಿಯ ಬಾಕ್ಸೈಟ್ ಗಣಿಗಾರಿಕೆ ಉದ್ಯಮಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದ್ದು, ಸ್ಥಳೀಯ ಗ್ರಾಮ ಪಂಚಾಯತಿಗಳು ಈ ವಿಷಯದಲ್ಲಿ ನಿರ್ಣಯ ತೆಗೆದುಕೊಳ್ಳಬೇಕು ಎಂಬ ಮಹತ್ವದ ತೀರ್ಪು ನೀಡಿದೆ. ಗಣಿಗಾರಿಕೆ ಉದ್ಯಮಕ್ಕೆ ಸಂಬಂಧಿಸಿದಂತೆ ವಿಚಾರಣೆ ಆಲಿಸಿದ ಆಫ್ತಾಬ್ ಆಲಂ, ಕೆ.ಎಸ್.ರಾಧಕೃಷ್ಣನ್ ಮತ್ತು ರಂಜನ್ ಗಗೋಯ್ ಒಳಗೊಂಡ ಪೀಠ ಈ ಐತಿಹಾಸಿಕ ತೀರ್ಪು ನೀಡಿದೆ. ಈ ತೀರ್ಪಿನಿಂದ ಸ್ಥಳೀಯ ಸಂಸ್ಥೆಗಳಿಗೆ ಬಲಬಂದಿದೆ.

- ಒಡಿಶಾದ ಕಾಳಹಂಡಿ ಮತ್ತು ರಾಯಗಡ ಜಿಲ್ಲೆಯಲ್ಲಿ "ಡೊಂಗ್ರಿಯಾ" ಮತ್ತು "ಕುಟಿಯಾ ಕೊಂಡ್" ಎಂಬ ಬುಡಕಟ್ಟು ಜನಾಂಗಗಳು ಅತಿ ಹೆಚ್ಚಾಗಿ ಕಂಡುಬರುತ್ತವೆ. ಈ ಬುಡಕಟ್ಟು ಜನಾಂಗಗಳು ನಿಯಾಮ್ ಗಿರಿ ಬೆಟ್ಟದಲ್ಲಿ ತುದಿಯಲ್ಲಿ ತಮ್ಮ ಕುಲದೈವ "ನಿಯಾಮ್ ರಾಜಾ" ನೆಲಸಿರುವುದಾಗಿ ನಂಬಿದ್ದು, ಸಂಪ್ರದಾಯದಂತೇ ಅನೇಕ ವರ್ಷಗಳಿಂದ ಆರಾಧಿಸುತ್ತಾ ಬಂದಿವೆ. ಇಲ್ಲಿಂದ ಸುಮಾರು 10 ಕಿ.ಮೀ ದೂರದಲ್ಲಿ ವೇದಾಂತ ಕಂಪನಿ, ಒಡಿಶಾ ಮೈನಿಂಗ್ ಕಂಪನಿಗಳ ಪಾಲುದಾರಿಕೆಯಲ್ಲಿ ಬಾಕ್ಸೈಟ್ ಗಣಿಗಾರಿಕೆ ನಡೆಸಲು ಯೋಜನೆ ರೂಪಿಸಿದೆ.
- ಈ ಅರ್ಜಿ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಧಾರ್ಮಿಕ ಹಕ್ಕನ್ನು ಎತ್ತಿಹಿಡಿದಿದ್ದು, ಈ ಬುಡಕಟ್ಟು ಜನರ ಸಂಪ್ರದಾಯಕ್ಕೆ ಯಾವುದೇ ಚ್ಯುತಿ ಬರದಂತೆ ನಿಗಾವಹಿಸಲು ಆದೇಶ ನೀಡಿದೆ.
- ವೇದಾಂತ ಕಂಪನಿ ಈ ಭಾಗದಲ್ಲಿ ಗಣಿಗಾರಿಕೆ ನಡೆಸಬೇಕೊ ಅಥವಾ ಬೇಡವೋ ಎನ್ನುವ ನಿರ್ಧಾರವನ್ನು "ನಿಯಾಮ್ ಗಿರಿ" ಪ್ರದೇಶದ ವ್ಯಾಪ್ತಿಗೆ ಬರುವ ಗ್ರಾಮಸಭೆಗಳು ತಿರ್ಮಾನ ಕೈಗೊಳ್ಳಬೇಕು.
- ಗ್ರಾಮಸಭೆಗಳು ಮೂರು ತಿಂಗಳೊಳಗೆ ನಿರ್ಣಯವನ್ನು ಕೈಗೊಂಡು, ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯಕ್ಕೆ ಕಳುಹಿಸಿಕೊಡಬೇಕು. ಈ ನಿರ್ಣಯದ ಆಧಾರದ ಮೇಲೆ ಪರಿಸರ ಸಚಿವಾಲಯವು ಅಂತಿಮ ನಿರ್ಧಾರವನ್ನು ಪ್ರಕಟಿಸುವುದು ಎಂದು ಪೀಠ ಹೇಳಿದೆ.
- ಗ್ರಾಮ ಸಭೆಗಳ ಮೇಲೆ ರಾಜ್ಯ, ಕೇಂದ್ರ ಸರ್ಕಾರ ಮತ್ತು ಈ ಯೋಜನೆ ಅನುಷ್ಠಾನ ಸಂಸ್ಥೆ ಒತ್ತಡ ತರಬಹುದನ್ನು ತಪ್ಪಿಸಲು ಮತ್ತು ಕೈಗೊಂಡ ನಿರ್ಣಯವನ್ನು ದೃಢಿಕರಿಸಲು ಜಿಲ್ಲಾ ನ್ಯಾಯಾಧೀಶರು ಗ್ರಾಮಸಭೆಯಲ್ಲಿ ಭಾಗವಹಿಸಲು ಸುಪ್ರೀಂ ಕೋರ್ಟ ಆದೇಶ ಮಾಡಿದೆ.

ಹಿನ್ನೆಲೆ:

- 2007 ರಲ್ಲಿ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವೂ ಬ್ರಿಟನ್ ಮೂಲದ ವೇದಾಂತ ಕಂಪನಿಯ ಭಾರತದ ಅಂಗವಾದ ಸ್ಟೆರಲೈಟ್ ಗೆ ಬಾಕ್ಸೈಟ್ ಗಣಿಗಾರಿಕೆಯನ್ನು ನಡೆಸಲು ಅನುಮತಿ ನೀಡಿತ್ತು. ಆದರೆ ಇದಕ್ಕೆ ತೀವ್ರ ವಿರೋಧ ವ್ಯಕ್ತವಾದ ಹಿನ್ನಲೆಯಲ್ಲಿ ಎಚ್ಚೆತ್ತುಕೊಂಡು, 2010 ರಲ್ಲಿ ಯೋಜನೆಯ ಅನುಷ್ಠಾನಕ್ಕೆ ಮುಂದಿನ ಹಂತದ

ಅನುಮತಿಯನ್ನು ನೀಡಲಾಗದು ಎಂದು ಹೇಳಿತ್ತು. ಇದನ್ನು ಪ್ರಶ್ನಿಸಿ ಸ್ಟೆರಲೈಟ್ ಮತ್ತು ಯೋಜನೆಯಲ್ಲಿ ಪಾಲುದಾರಿಕೆ ಹೊಂದಿದ್ದ ಒಡಿಶಾದ ಇತರೆ ಗಣಿಗಾರಿಕೆ ಸಂಸ್ಥೆಗಳು ಕೋರ್ಟ್ ಮೆಟ್ಟಿಲೇರಿದ್ದವು.

## ಭಾರತದಲ್ಲಿ ವಿಶ್ವದ ಮೂರನೇ ಒಂದರಷ್ಟು ಬಡವರು: ವಿಶ್ವಬ್ಯಾಂಕ್ ವರದಿ

ಬಡತನ ಕುರಿತಾಗಿ ವಿಶ್ವಬ್ಯಾಂಕ್ ಹೊರತರುವ ವರದಿಯನ್ನು ಬಿಡುಗಡೆಗೊಳಿಸಿದ್ದು, ವಿಶ್ವದಲ್ಲಿ 65 ರೂ.ಗಳಿಗೂ ಕಡಿಮೆ ದೈನಂದಿನ ಆದಾಯವನ್ನು ಹೊಂದಿರುವ 1.2 ಶತಕೋಟಿ ಕಡುಬಡವರು ಇರುವುದಾಗಿ ವಿಶ್ವಬ್ಯಾಂಕ್ ಹೇಳಿದೆ. ಇದರಲ್ಲಿ ಮೂರನೇ ಒಂದು ಭಾಗದಷ್ಟು ಬಡವರು ಭಾರತದಲ್ಲಿ ನೆಲೆಸಿದ್ದಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ವಿಶ್ವಬ್ಯಾಂಕ್ ಹೊರತಂದಿರುವ ಬಡತನ ಕುರಿತಾದ ವರದಿಯ ಮುಖ್ಯಾಂಶಗಳು ಇಲ್ಲಿವೆ.

- ವಿಶ್ವದಲ್ಲಿ ಇಂದಿಗೂ 1.2 ಶತಕೋಟಿ ಜನರ ದೈನಂದಿನ ಆದಾಯ ರೂ.65 ಗಳಿಗೂ ಕಡಿಮೆ ಇದ್ದು ಕಡುಬಡವರಾಗಿದ್ದಾರೆ.
- ಕಳೆದ ಮೂವತ್ತು ವರ್ಷಗಳ ಅವಧಿಯಲ್ಲಿ ಅಭಿವೃದ್ಧಿ ಶೀಲ ಪ್ರದೇಶಗಳ ಜನಸಂಖ್ಯೆಯಲ್ಲಿ ಶೇ.59 ರಷ್ಟು ಅಭಿವೃದ್ಧಿಯಾಗಿದ್ದರೂ ಬಡವರ ಪ್ರಮಾಣದಲ್ಲಿ ಶೇ.50 ರಿಂದ ಶೇ.21 ಕ್ಕೆ ಇಳಿದಿದೆ.
- 1999 ರಿಂದ 2010 ರ ಅವಧಿಯಲ್ಲಿ ಸಹಾರ ಉಪಖಂಡದಲ್ಲಿ ಬಡತನದ ಪ್ರಮಾಣದಲ್ಲಿ ಶೇ.10 ರಷ್ಟು ಕುಸಿತ ಕಂಡು ಬಂದಿದ್ದು, ಈಗ ಶೇ.48 ರಷ್ಟಿದೆ.
- ಲ್ಯಾಟಿನ್ ಅಮೆರಿಕಾ ದೇಶಗಳಲ್ಲಿ ಕಳೆದೆರಡು ದಶಕಗಳಲ್ಲಿ ಸಂಖ್ಯೆ ಶೇ.12 ರಷ್ಟಿದ್ದ ಬಡವರ ಸಂಖ್ಯೆ ಈಗ ಶೇ.6 ರಷ್ಟಿದೆ.
- ಜಗತ್ತಿನ ಮೂರನೇ ಒಂದು ಭಾಗದಷ್ಟು ಭಾರತದಲ್ಲಿ ನೆಲೆಸಿದ್ದಾರೆ. 1981 ಕ್ಕೆ ಹೋಲಿಸಿದರೆ ಭಾರತದಲ್ಲಿ ಬಡವರ ಸಂಖ್ಯೆಯಲ್ಲಿ ಶೇ.22 ರಷ್ಟು ಹೆಚ್ಚಾಗಿದ್ದರೆ ಚೀನಾದಲ್ಲಿ ಶೇ.43 ರಷ್ಟು ಇಳಿಕೆಯಾಗಿದೆ. ವಿಶ್ವದ ಜನಸಂಖ್ಯೆಯಲ್ಲಿ ಚೀನಾದ ಪಾಲು ಶೇ.13 ರಷ್ಟಿದೆ.
- ವಿಶ್ವದಲ್ಲಿ ಕಂಡುಬರುವ ಕಡುಬಡವರಲ್ಲಿ ಮೂರನೇ ಒಂದು ಭಾಗಕ್ಕಿಂತಲೂ ಅಧಿಕ ಸಂಖ್ಯೆಯ ಬಡವರು ಆಫ್ರಿಕಾದ ಸಹರಾ ಉಪಖಂಡದಲ್ಲಿ ನೆಲೆಸಿದ್ದಾರೆ.
- ವಿಶ್ವದಾದ್ಯಂತ ಬಡತನ ಹೋಗಲಾಡಿಸಲು ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿದ್ದರು, ಇಂದು ವಿಶ್ವದ ಜನಸಂಖ್ಯೆಯ ಐದನೇ ಒಂದು ಭಾಗದಷ್ಟು ಜನ ಬಡತನ ರೇಖೆಗಿಂತ ಕೆಳಗಿರುವುದು ಕಳವಳಕಾರಿ ಎಂದು ವಿಶ್ವಬ್ಯಾಂಕ್ ಅಧ್ಯಕ್ಷ ಜಿಮ್ ಯಾಂಗ್ ಕಿಮ್ ಹೇಳಿದ್ದಾರೆ.

## ಸ್ಟೆರೆಲೈಟ್ ತಾಮ್ರ ದ್ರವೀಕರಣ ಘಟಕದ ಅಧ್ಯಯನಕ್ಕೆ ಸಮಿತಿ ರಚನೆ

ತಮಿಳುನಾಡಿನ ಟ್ಯೂಟಿಕಾರಿನ್ ನಲ್ಲಿರುವ ಸ್ಟೆರೆಲೈಟ್ ತಾಮ್ರ ದ್ರವೀಕರಣ ಘಟಕದಿಂದ ವಿಷ ಅನಿಲ ಹೊರಸೂಸುತ್ತಿದೆ ಎಂದು ಕೇಳಿ ಬಂದಿರುವ ಆರೋಪದ ಹಿನ್ನೆಲೆಯಲ್ಲಿ ನಾಲ್ಕು ಸದಸ್ಯರನ್ನು ಒಳಗೊಂಡ ಅಧ್ಯಯನ ಸಮಿತಿಯನ್ನು "ರಾಷ್ಟ್ರೀಯ ಹಸಿರು ಮಂಡಳಿ" ರಚಿಸಿದೆ.

- ಮದ್ರಾಸ್ ಐಐಟಿ ಯ ಇಬ್ಬರು ಅನುಭವಿ ಪ್ರೊಫೆಸರ್ ಗಳಾದ ಪಿ.ಎಸ್.ಟಿ.ಸಾಯಿ ಮತ್ತು ಲಿಲಿ ಫಿಲಿಪ್, ಸ್ಟೆರೆಲೈಟ್ ಕಂಪನಿಯ ಪರವಾಗಿ ಡಿ.ಸುಮತಿ ಮತ್ತು ತಮಿಳುನಾಡು ಮಾಲಿನ್ಯ ನಿಯಂತ್ರಣ ಮಂಡಳಿಯ ಪರವಾಗಿ ಡಿ.ಮೋಹನ್ ನಾಯ್ಡು ಈ ಸಮಿತಿಯ ಸದಸ್ಯರಾಗಿರುವರು.
- ಸ್ಟೆರೆಲೈಟ್ ತಾಮ್ರ ದ್ರವೀಕರಣ ಘಟಕದ ಈಗಿನ ಸ್ಥಿತಿಗಳನ್ನು ಅಧ್ಯಯನ ಮಾಡಿ, ಅಧ್ಯಯನದ ವರದಿಯನ್ನು ಏಪ್ರಿಲ್ 29 ರೊಳಗೆ ಸಲ್ಲಿಸುವಂತೆ ಸಮಿತಿಗೆ ಜವಾಬ್ದಾರಿವಹಿಸಲಾಗಿದೆ.

ಆರೋಪವೇನು?

- ಸ್ಟೆರೆಲೈಟ್ ತಾಮ್ರ ದ್ರವೀಕರಣ ಘಟಕದಿಂದ ವಿಷ ಅನಿಲವನ್ನು ಹೊರಹಾಕಲಾಗುತ್ತಿದ್ದು, ಸುತ್ತಮುತ್ತಲಿನ ಪ್ರದೇಶದಲ್ಲಿ ವಾಸವಾಗಿರುವ ಜನರು ಅನೇಕ ರೋಗಗಳಿಗೆ ಬಲಿಯಾಗುತ್ತಿದ್ದಾರೆ ಎಂಬ ಗಂಬೀರ ಆರೋಪವನ್ನು ಈ ಸಂಸ್ಥೆ ಎದುರಿಸುತ್ತಿದೆ. ಸ್ಟೆರಲೈಟ್ ನಿಂದ ಪರಿಸರಕ್ಕೆ ಅಪಾರ ಹಾನಿಯಾಗಿರುವುದು ಸಾಬೀತಾದ ಕಾರಣ ಇದೇ ಏಪ್ರಿಲ್ 2 ರಂದು ಸುಪ್ರೀಂ ಕೋರ್ಟ್ ರೂ.100 ಕೋಟಿ ದಂಡವನ್ನು ಕಂಪನಿಗೆ ವಿಧಿಸಿತ್ತು.

<u>**ಡೆಮಾಕ್ರಸಿ ಇಂಡೆಕ್ಸ್-2012: ಭಾರತದಲ್ಲಿ ದೋಷಯುಕ್ತ ಪ್ರಜಾಪ್ರಭುತ್ವ**</u>

ವಿಶ್ವದಲ್ಲಿಯೇ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಭಾರತದಲ್ಲಿನ ಪ್ರಜಾಸತ್ತೆಯು ದೋಷಯುಕ್ತವಾಗಿದೆ ಎಂದು ಬ್ರಿಟನ್ ಮೂಲದ "ಆರ್ಥಿಕ ಗುಪ್ತಚರ ಘಟಕ (Economist Intelligency Unit)" ಹೊರತಂದಿರುವ ಪ್ರಜಾಪ್ರಭುತ್ವ ಸೂಚ್ಯಂಕ-2012 ವರದಿಯಲ್ಲಿ ಹೇಳಲಾಗಿದೆ.

ವರದಿಯ ಪ್ರಮುಖ ಅಂಶಗಳು:

- ಚಿಲಿ, ಬೋತ್ಸವಾನ, ಇಸ್ರೇಲ್ ದೇಶಗಳಲ್ಲಿನ ಪ್ರಜಾಪ್ರಭುತ್ವ ಭಾರತಕ್ಕಿಂತ ಹೆಚ್ಚು ಬಲಿಷ್ಠವಾಗಿದೆ.
- ಒಟ್ಟು 167 ರಾಷ್ಟ್ರಗಳನ್ನು ಒಳಗೊಂಡಿರುವ ಈ ಪಟ್ಟಿಯಲ್ಲಿ ನಾರ್ವೆ, ಸ್ವೀಡನ್, ಐಸ್ ಲ್ಯಾಂಡ್, ಡೆನಾರ್ಕ್ ಮತ್ತು ನ್ಯೂಜಿಲ್ಯಾಂಡ್ ಗಳು ಪ್ರಥಮ ಐದು ಸ್ಥಾನಗಳಲ್ಲಿ ಕಾಣಿಸಿಕೊಂಡಿವೆ.
- ಉತ್ತರ ಕೊರಿಯಾ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲಿದೆ.
- ಶ್ರೇಷ್ಠ ಪ್ರಜಾಪ್ರಭುತ್ವ ರಾಷ್ಟ್ರಗಳ ಪೈಕಿ ಭಾರತಕ್ಕೆ 38 ನೇ ಸ್ಥಾನ ಲಭಿಸಿದೆ. ಭಾರತದ ನೆರೆಯ ರಾಷ್ಟ್ರಗಳಾದ ಬಾಂಗ್ಲಾದೇಶ 84, ಶ್ರೀಲಂಕಾ 89, ಭೂತಾನ್ 107, ಪಾಕಿಸ್ತಾನ 108, ನೇಪಾಳ 111, ಚೀನಾ 142 ಮತ್ತು ಆಫ್ಘಾನಿಸ್ತಾನ 152 ನೇ ಸ್ಥಾನದಲ್ಲಿವೆ.
- ಒಟ್ಟು ಐದು ಮಾನದಂಡಗಳನ್ನು ಅನುಸರಿಸಿ ತಯಾರಿಸಿರುವ ಈ ಪಟ್ಟಿಯಲ್ಲಿ ಭಾರತ 7.52 ಅಂಕಗಳನ್ನು ಗಳಿಸಿದೆ. ಪ್ರಥಮ ಸ್ಥಾನದಲ್ಲಿರುವ ನಾರ್ವೆ 9.93 ಅಂಕ ಗಳಿಸಿದೆ.

<u>**ಸಮೀಕ್ಷೆ ಹೇಗೆ?**</u>

- ಪಟ್ಟಿಯನ್ನು ಒಟ್ಟು ಐದು ಮಾನದಂಡಗಳ ಆಧಾರದ ಮೇಲೆ ತಯಾರಿಸಲಾಗಿದೆ. ಚುನಾವಣಾ ಪ್ರಕ್ರಿಯೆ, ಬಹು ಸಂಸ್ಕೃತಿ, ನಾಗರಿಕ ಸ್ವಾತಂತ್ರ್ಯ, ರಾಜಕೀಯ ಸಹಭಾಗಿತ್ವ ಮತ್ತು ರಾಜಕೀಯ ಸಂಸ್ಕೃತಿ ಇವೇ ಈ ಐದು ಮಾನದಂಡಗಳು.

**ವಾರ್ಷಿಕ ವಾಣಿಜ್ಯ ಚಟುವಟಿಕೆ ಪೂರಕ ನೀತಿ ಪ್ರಕಟ**

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕ ಸಚಿವ ಆನಂದ್ ಶರ್ಮಾ ರವರು ರಫ್ತು ಹೆಚ್ಚಿಸುವ ಸಲುವಾಗಿ ಪ್ರಮುಖ ಉತ್ತೇಜನಾ ಕ್ರಮಗಳನ್ನು ನವದೆಹಲಿಯ ವಿಜ್ಞಾನ ಭವನದಲ್ಲಿ ಇತ್ತೀಚೆಗೆ ಪ್ರಕಟಿಸಿದರು. 2012-13 ನೇ ಸಾಲಿನಲ್ಲಿ ದೇಶದ ರಫ್ತು ಪ್ರಮಾಣ 30000 ಕೋಟಿಯಿಂದ 30,600 ಕೋಟಿಗೆ ಏರಿಕೆಯಾಗಿದ್ದರು, 2011-12 ನೇ ಸಾಲಿಗೆ ಹೋಲಿಸಿದರೆ ಶೇ.1.76 ರಷ್ಟು ಇಳಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ರಫ್ತು ಹೆಚ್ಚಿಸುವುದು ಅತಿ ಅಗತ್ಯವಾಗಿದ್ದು, ಉತ್ತೇಜನ ಕ್ರಮಗಳನ್ನು ಪ್ರಕಟಿಸಲಾಗಿದೆ ಎಂದು ಅವರು ಹೇಳಿದರು.

ಪೂರಕ ನೀತಿಯಲ್ಲಿರು ಪ್ರಮುಖ ಅಂಶಗಳು:

- **ಸುಂಕ ವಿನಾಯ್ತಿ ಯೋಜನೆ**: ಈ ಮೊದಲು ಪ್ರಧಾನ ಸರಕುಗಳ ಮೇಲೆ ಕೆಲವು ವಲಯಗಳಲ್ಲಿ ಶೂನ್ಯ ಸುಂಕ ವಿನಾಯ್ತಿ (ಇಪಿಸಿಜಿ) ಮತ್ತು ಶೇ.3 ರಷ್ಟು ಸುಂಕ ವಿನಾಯ್ತಿ ಯೋಜನೆ ಚಾಲ್ತಿಯಲ್ಲಿತ್ತು. ಆದರೆ ಜೂನ್,5 2012 ರಲ್ಲಿ ಇವುಗಳನ್ನು ವಿಲೀನಗೊಳಿಸಿ ಹೊಸ ಯೋಜನೆಯಾದ ಪ್ರಧಾನ ಸರಕುಗಳ ಮೇಲೆ ರಫ್ತು ನಂತರದ ಸುಂಕ ವಿನಾಯ್ತಿಯನ್ನು ಜಾರಿಗೊಳಿಸಲಾಗಿದೆ. ಈ ಸವಲತ್ತನ್ನು ರಫ್ತು ಕ್ಷೇತ್ರದ ಎಲ್ಲಾ ವಲಯಗಳಿಗೂ ವಿಸ್ತರಿಸಲಾಗಿದೆ.
- **SEZ ಭೂಮಿ ಮಿತಿ**: ವಿಶೇಷ ಆರ್ಥಿಕ ವಲಯ (Special Economic Zone) ಸ್ಥಾಪನೆಗೆ ಈ ಹಿಂದೆ ಇದ್ದ ಅಗತ್ಯವಾದ ಭೂಮಿ ಮಿತಿಯನ್ನು ಇನ್ನೂ ಅರ್ಧದಷ್ಟು ಕಡಿಮೆಮಾಡಲಾಗಿದೆ. **ಅಂದರೆ 1000 ಹೇಕ್ಟೆರ್ ನಿಂದ 500** ಹೇಕ್ಟೆರ್ ಗೆ ಇಳಿಸಲಾಗಿದೆ
- ಮಾಹಿತಿ ತಂತ್ರಜ್ಞಾನ ಮತ್ತು ಈ ಕ್ಷೇತ್ರಗಳನ್ನು ಆಧಾರಿಸಿದ ಸೇವೆಗಳ ಉದ್ಯಮಕ್ಕೆ "SEZ" ಸ್ಥಾಪಿಸಲು ಬೇಕಾಗುವ ಅಗತ್ಯ ಭೂಮಿಯ ಮಿತಿಯನ್ನು ರದ್ದು ಮಾಡಲಾಗಿದೆ.
- ಎಸ್‌ಇಜೆಡ್ ಸ್ಥಾಪನೆಗೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ಸುಲಭಗೊಳಿಸುವುದಾಗಿ ಹೇಳಲಾಗಿದೆ.

**ಏಪ್ರಿಲ್ 21: ನಾಗರಿಕ ಸೇವಾ ದಿನ (Civil Service Day)**

ಪ್ರತಿ ವರ್ಷ ಏಪ್ರಿಲ್ 21 ರಂದು "ನಾಗರಿಕ ಸೇವಾ ದಿನ"ವನ್ನು ದೇಶಾದಾದ್ಯಂತ ಆಚರಿಸಲಾಗುತ್ತಿದೆ. ದೇಶದ ಪ್ರಜೆಗಳಿಗೆ ಉತ್ತಮ ನಾಗರಿಕ ಸೇವೆಗಳನ್ನು ನೀಡುವುದು ಮತ್ತು ನಾಗರಿಕ ಸೇವಕರು, ಬದಲಾಗುತ್ತಿರುವ ಸಮಯದಲ್ಲಿ ಉಂಟಾಗಬಹುದಾದ ಸವಾಲಗಳನ್ನು ಎದುರಿಸಲು ಮುಂದಿನ ಕ್ರಮಗಳ ಬಗ್ಗೆ ಆತ್ಮಾವಲೋಕನ ಮತ್ತು ವಿಮರ್ಶೆಯನ್ನು ಈ ದಿನದಂದು ಮಾಡಲಾಗುವುದು. ಸಾರ್ವಜಿಕ ವಲಯದಲ್ಲಿ ಉತ್ತಮ ಸೇವೆ ಸಲ್ಲಿಸಿದ ನೌಕರರಿಗೆ ಮತ್ತು ಸಂಸ್ಥೆಗೆ ಈ ದಿನದಂದು ಪ್ರಶಸ್ತಿಯನ್ನು ಪ್ರಧಾನ ಮಂತ್ರಿಗಳು ನೀಡುವರು. ಈ ಪ್ರಶಸ್ತಿಯನ್ನು 2006 ರಲ್ಲಿ ಸ್ಥಾಪಿಸಲಾಗಿದ್ದು, ವೈಯುಕ್ತಿಕ ವಿಭಾಗದಲ್ಲಿ ನೀಡಲಾಗುವ

ಪ್ರಶಸ್ತಿಯು 1 ಲಕ್ಷ ನಗದು ಮತ್ತು ಫಲಕ ಹಾಗೂ ಸಂಸ್ಥೆಗೆ ನೀಡಲಾಗುವ ಪ್ರಶಸ್ತಿಯು 5 ಲಕ್ಷ ನಗದು ಮತ್ತು ಫಲಕವನ್ನು ಒಳಗೊಂಡಿರುತ್ತದೆ.

**"ಸಿಕ್ಕಿಂ" ರಾಜ್ಯಕ್ಕೆ ಪ್ರಶಸ್ತಿ:**

- ನಾಗರಿಕ ಸೇವಾ ದಿನದಂದು ಅತ್ಯುತ್ತಮ ನಾಗರಿಕ ಸೇವೆ ಸಲ್ಲಿಸಿರುವ ಸಂಸ್ಥೆಗೆ ನೀಡಲಾಗುವ ಪ್ರಶಸ್ತಿಗೆ ಈ ಬಾರಿ ಸಿಕ್ಕಿಂ ರಾಜ್ಯದ ಗ್ರಾಮೀಣ ಅಭಿವೃದ್ಧಿ ಇಲಾಖೆ ಆಯ್ಕೆಯಾಗಿದೆ. ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ಸಿಂಗ್ ರವರ ಈ ಪ್ರಶಸ್ತಿಯನ್ನು ವಿತರಿಸಿದರು.
- ನೈರ್ಮಲ್ಯತೆಗೆ ನೀಡಲಾಗುವ "ನಿರ್ಮಲ ರಾಜ್ಯ" ಪುರಸ್ಕಾರಕ್ಕೆ ಆಯ್ಕೆಯಾದ ಮೊದಲ ರಾಜ್ಯ "ಸಿಕ್ಕಿಂ". 2008 ರಲ್ಲೇ ಸಿಕ್ಕಿಂ "ಬಯಲು ಮಲ ವಿಸರ್ಜನೆ (Open Defecation Free)" ಯಿಂದ ಮುಕ್ತಿ ಹೊಂದಿದ ದೇಶದ ಮೊದಲ ರಾಜ್ಯ ವೆಂಬ ಹಿರಿಮೆಗೆ ಪಾತ್ರವಾಯಿತು.
- 2011 ರ ಜನಗಣತಿ ಪ್ರಕಾರ ಸಿಕ್ಕಿಂ ನಲ್ಲಿ ಶೇ.86.7 ರಷ್ಟು ಕುಟುಂಬಗಳು ಶೌಚಾಲಯವನ್ನು ಕಟ್ಟಿ ಬಳಕೆ ಮಾಡುತ್ತಿವೆ.
- ಬಡತನ ನಿವಾರಣೆಯಲ್ಲೂ ಸಿಕ್ಕಿಂ ಬಹಳಷ್ಟು ಪ್ರಗತಿ ಸಾಧಿಸಿದೆ. 2004-05 ರಲ್ಲಿ ಶೇ.30.9 ರಷ್ಟಿದ್ದ ಬಡತನ, 2009-10 ರಲ್ಲಿ ಶೇ.13.6 ಕ್ಕೆ ಇಳಿದಿರುವುದೇ ಇದಕ್ಕೆ ಸಾಕ್ಷಿ.
- ಅತ್ಯುತ್ತಮ ಆಡಳಿತ ಸೇವೆಯಿಂದ ದೇಶದ ಗಮನ ಸೆಳೆದಿರುವ ಸಿಕ್ಕಿಂ, ಕಳೆದ ಐದು ವರ್ಷಗಳಲ್ಲಿ 16ಕ್ಕೂ ಹೆಚ್ಚು ರಾಷ್ಟ್ರೀಯ ಪ್ರಶಸ್ತಿಗಳನ್ನು ವಿವಿಧ ವಿಭಾಗದಲ್ಲಿ ಗಳಿಸಿದೆ.

**ಉಚಿತವಾಗಿ ಕ್ಯಾನ್ಸರ್ ಔಷಧಿ ವಿತರಿಸಲಿರುವ ರಾಜಸ್ತಾನ ಸರ್ಕಾರ**

ಕ್ಯಾನ್ಸರ್ ರೋಗದಿಂದ ಬಳಲುತ್ತಿರುವ ರೋಗಿಗಳ ಆರ್ಥಿಕ ಹೊರೆಯನ್ನು ಇಳಿಸುವ ಉದ್ದೇಶದಿಂದ ಉಚಿತವಾಗಿ ಕ್ಯಾನ್ಸರ್ ಔಷಧಿಗಳನ್ನು ವಿತರಿಸಲು ರಾಜಸ್ತಾನ ಸರ್ಕಾರ ನಿರ್ಧರಿಸಿದೆ. ರಾಜ್ಯ ಸರ್ಕಾರದ ಈ ಯೋಜನೆಯಿಂದ ಅಪಾರ ಸಂಖ್ಯೆಯ ಬಡ ಕ್ಯಾನ್ಸರ್ ರೋಗಿಗಳಿಗೆ ಅನುಕೂಲವಾಗಲಿದೆ.

- ಮುಖ್ಯಮಂತ್ರಿ ಉಚಿತ ಔಷಧಿ ಯೋಜನೆಯಡಿ "ಇಮಟಿನಿಬ್ (Imatinib)" ಮಾತ್ರೆಗಳನ್ನು ಉಚಿತವಾಗಿ ಕ್ಯಾನ್ಸರ್ ರೋಗಿಗಳಿಗೆ ವಿತರಿಸಲಾಗುವುದು. ಇಮಟಿನಿಬ್ ಮತ್ತು ಗ್ಲಿವೆಕ್ ಎರಡು ಒಂದೇ ಆಗಿವೆ. ಇತ್ತೀಚೆಗೆ ಸುಪ್ರೀಂ ಕೋರ್ಟ್ ಸ್ವಿಸ್ ಮೂಲದ ಔಷಧಿ ಕಂಪನಿ ನೊವರ್ಟಿಸ್ ನ "ಗ್ಲಿವೆಕ್" ಮೇಲಿನ ಪೇಟೆಂಟ್ ಅರ್ಜಿಯನ್ನು ವಜಾಗೊಳಿಸಿತ್ತು.
- ಔಷಧಿ ವಿತರಣೆಗಾಗಿಯೇ "ರಾಜಸ್ತಾನ್ ಮೆಡಿಕಲ್ ಸರ್ವೀಸ್ ಕಾರ್ಪೋರೇಶನ್" ವಿಶೇಷ ಕೌಂಟರ್ ಗಳನ್ನು ತೆರೆಯಲಿದೆ.
- ಮೂಲಗಳ ಪ್ರಕಾರ ಈ ಯೋಜನೆಯಡಿ ಒಟ್ಟು ಹದಿನಾಲ್ಕು ತರಹದ ಕ್ಯಾನ್ಸರ್ ಔಷಧಿಗಳನ್ನು ವಿತರಿಸಲಾಗುವುದು.
- ರಕ್ತ ಕ್ಯಾನ್ಸರ್ ನಿಂದ ಬಳಲು ರೋಗಿಗಳು ಪ್ರತಿ ದಿನ ಒಂದರಂತೆ "ಇಮಟಿನಿಬ್" ಮಾತ್ರೆಗಳನ್ನು ತೆಗೆದುಕೊಳ್ಳಬೇಕು. 30 ಮಾತ್ರೆಗಳ ಪ್ಯಾಕ್ ಗೆ ತಗಲುವ ವೆಚ್ಚ 3,454 ರೂ ಗಳು. ಆದರೆ ಇಷ್ಟೇ "ಗ್ಲಿವಿಕ್" ಮಾತ್ರೆಗಳಿಗೆ ರೋಗಿಗಳು ರೂ.1.3 ಲಕ್ಷ ತೆರಬೇಕಿತ್ತು.

**ಕೇರಳದಲ್ಲಿ ಹೊಸ ವೀಸಾ ವ್ಯವಸ್ಥೆಗೆ ಕೇಂದ್ರ ಒಪ್ಪಿಗೆ**

ಕೇರಳದ ಕೊಚ್ಚಿ ಮತ್ತು ತಿರುವನಂತಪುರಂ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ "ಹೊಸ ವೀಸಾ ವ್ಯವಸ್ಥೆ (Visa on Arrival)" ಸೌಲಭ್ಯಕ್ಕೆ ಕಲ್ಪಿಸಲು ಕೇಂದ್ರ ಪ್ರವಾಸೋದ್ಯಮ ಸಚಿವಾಲಯ ಒಪ್ಪಿಗೆ ನೀಡಿದೆ. ಇತ್ತೀಚೆಗೆ ನಡೆದ ಅಂತರ ರಾಜ್ಯ ಪ್ರವಾಸೋದ್ಯಮ ಸಚಿವರ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಈ ನಿರ್ಣಯದಿಂದ ಕೇರಳ ರಾಜ್ಯಕ್ಕೆ ವಿದೇಶಿ ಪ್ರವಾಸಿಗರನ್ನು ಆಕರ್ಷಿಸಲು ಸಹಕಾರಿಯಾಗಲಿದೆ ಎಂದು ಕೇರಳ ಪ್ರವಾಸೋದ್ಯಮ ಸಚಿವ ಅನಿಲ್ ಕುಮಾರ್ ಹೇಳಿದ್ದಾರೆ.

- ಈ ಹೊಸ ವೀಸಾ ವ್ಯವಸ್ಥೆಯಿಂದ ಜಪಾನ್, ಫಿನ್ ಲ್ಯಾಂಡ್, ಇಂಡೊನೇಷಿಯಾ, ಲಾವೋಸ್, ಲಕ್ಸಂಬರ್ಗ್ ಸೇರಿದಂತೆ ಒಟ್ಟು 11 ದೇಶಗಳ ಪ್ರವಾಸಿಗರಿಗೆ ಅನುಕೂಲವಾಗಲಿದೆ.
- ವಿದೇಶಿ ಪ್ರವಾಸಿಗರನ್ನು ಆಕರ್ಷಿಸಿ, ಪ್ರವಾಸೋದ್ಯಮವನ್ನು ಉತ್ತೇಜಸಿವಲ್ಲು ಮಹತ್ವದ ಪಾತ್ರವಹಿಸಲಿದೆ.

**2017 ರ ವೇಳಗೆ ಎಲ್ಲಾ "ಮಿಲಿಟರಿ ಫಾರ್ಮ್" ಗಳನ್ನು ಮುಚ್ಚಲಿರುವ ಸೇನೆ**

ದೇಶದ ಸೈನಿಕರಿಗೆ ಹಾಲು ಮತ್ತು ಹಾಲಿನ ಉತ್ಪನ್ನಗಳ ಸವಿಯನ್ನು ಬಡಿಸುತ್ತಿದ್ದ "ಮಿಲಿಟರಿ ಫಾರ್ಮ್" ಗಳನ್ನು 2017 ರ ವೇಳಗೆ ಮುಚ್ಚಲು ಸೇನಾಡಳಿತ ನಿರ್ಧರಿಸಿದೆ. ಸೈನಿಕರಿಗೆ ತಾಜಾ ಹಾಲಿನ ಉತ್ಪನ್ನಗಳನ್ನು ಪೂರೈಸುವ ಸಲುವಾಗಿ 1889 ರಲ್ಲಿ ಮೊದಲ ಬಾರಿಗೆ ಈ ಫಾರ್ಮ್ ಗಳನ್ನು ತೆರೆಯಲಾಗಿತ್ತು.

- ದೇಶದಾದ್ಯಂತ 39 ಫಾರ್ಮಗಳನ್ನು ತೆರೆಯಾಲಾಗಿದೆ. ಎಲ್ಲಾ ಫಾರ್ಮ್ ಗಳಿಂದ ಒಟ್ಟಾರೆ ಸುಮಾರು 23,600 ಹಸುಗಳು ಇವೆ. ಈ ಹಸುಗಳಿಂದ ವಾರ್ಷಿಕವಾಗಿ 335 ಲಕ್ಷ ಟನ್ ಹಾಲನ್ನು ಉತ್ಪಾದಿಸಲಾಗುತ್ತಿದೆ.
- ಅಹಮದಾ ಬಾದ್, ಮೀರತ್ ಪುರ್, ಗ್ವಾಲಿಯರ್, ಜಬಲ್ ಪುರ್ ಸೇರಿದಂತೆ 39 ಸ್ಥಳಗಳಲ್ಲಿರುವ ಈ "ಫಾರ್ಮ್" ಗಳ ಒಟ್ಟು ವಿಸ್ತೀರ್ಣ 20,120 ಎಕರೆ.
- ಮೊದಲ ಹಂತದಲ್ಲಿ, ಅಂದರೆ 2015 ರ ವೇಳೆಗೆ 29 ಫಾರ್ಮ್ ಗಳನ್ನು ಮುಚ್ಚಲಾಗುವುದು. ನಂತರ ಉಳಿದ 10 ಫಾರ್ಮ್ ಗಳನ್ನು 2017 ರ ವೇಳೆಗೆ ಮುಚ್ಚಲು ತೀರ್ಮಾನಿಸಿರುವುದಾಗಿ ಸೇನಾಡಳಿತ ಹೇಳಿದೆ.

ನಿರ್ಧಾರ ಏಕೆ?

- 1970 ರ ದಶಕದಲ್ಲಿ ದೇಶದಲ್ಲಿ ನಡೆದ "ಕ್ಷೀರ ಕ್ರಾಂತಿ" ಪ್ರತಿಫಲದಿಂದಾಗಿ ಭಾರತ ಇಂದು ವಿಶ್ವದಲ್ಲೇ ಅತಿ ಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರ ಎನಿಸಿದೆ. ಸೇನೆ ಗೆ ಅಗತ್ಯವಾದ ಹಾಲು ಮಾರುಕಟ್ಟೆಯಲ್ಲಿ ಲಭ್ಯವಿರುವುದರಿಂದ "ಫಾರ್ಮ್" ಗಳನ್ನು ಮುಚ್ಚಲು ಸಮ್ಮತಿಸಿಲಾಗಿದೆ.

**ಸೈನಿಕರ ಡಿಎನ್ಎ (DNA) ಮಾಹಿತಿ ಸಂಗ್ರಹ: ಎ.ಕೆ.ಆಂಟೋನಿ**

ದೇಶದಲ್ಲಿ ಸೇವೆ ಸಲ್ಲಿಸುತ್ತಿರುವ ಸುಮಾರು 1.1 ಮಿಲಿಯನ್ ಸೈನಿಕರ "ಡಿಎನ್ಎ" ಮಾದರಿಯ ಮಾಹಿತಿಯನ್ನು ಸಂಗ್ರಹಿಸುತ್ತಿರುವುದಾಗಿ ರಕ್ಷಣಾ ಸಚಿವ ಎ.ಕೆ.ಆಂಟನಿ ರವರು ಲೋಕಸಭೆಯಲ್ಲಿ ತಿಳಿಸಿದ್ದಾರೆ. "ಆರ್ಮಡ್ ಫೋರ್ಸ್ ಮೆಡಿಕಲ್

ಸರ್ವೀಸ್" ನಡಿ ಈಗಾಗಲೇ ಪುಣೆಯ "ಆರ್ಮಡ್ ಫೋರ್ಸ್ ಮೆಡಿಕಲ್ ಕಾಲೇಜಿ"ನಲ್ಲಿ ಪ್ರಾತ್ಯಕ್ಷಿಕವಾಗಿ ಈ ಯೋಜನೆಯನ್ನು ಜಾರಿಗೊಳಿಸಲಾಗಿದೆ.

- ಯುದ್ಧ ಅಥವಾ ಇತರೆ ರಕ್ಷಣಾ ಕಾರ್ಯಾಚರಣೆ ವೇಳೆ ಸೈನಿಕರು ದಾಳಿಗೆ ಒಳಗಾಗಗದ ಅವರ ದೇಹ ವಿರೂಪಗೊಂಡು ಕೆಲವೊಮ್ಮೆ ಯಾರ ದೇಹವೆಂದು ಗುರುತಿಸುವುಹುದು ಕಷ್ಟವೆನಿಸುತ್ತದೆ. ಆದರೆ ಡಿಎನ್ಎ ಮಾದರಿಯಿಂದ ಸುಟ್ಟು ಕರಕಲಾದ ದೇಹವನ್ನು ನಿಖರವಾಗಿ ಗುರುತಿಸಬಹುದು.
- ಈ ಯೋಜನೆಯಡಿ ಸೈನಿಕರ ರಕ್ತದ ಮಾದರಿ ಸಂಗ್ರಹ ಮತ್ತು ಅವುಗಳ ಸಂರಕ್ಷಣೆ ವಿಧಾನವನ್ನು ತಯಾರಿಸಲಾಗುವುದು. ಡಿಎನ್ಎ ಮಾದರಿ ಸಂಗ್ರಹಕ್ಕೆ ಡಿಎನ್ಎ ಬ್ಯಾಂಕ್ ನ್ನು ತೆರೆಯಲಾಗುವುದು.
- "ಆರ್ಮಡ್ ಫೋರ್ಸ್ ಮೆಡಿಕಲ್ ರಿಸರ್ಚ್ ಸಮಿತಿ" ಈಗಾಗಲೇ ಯೋಜನೆಗೆ ತಾತ್ವಿಕ ಒಪ್ಪಿಗೆ ನೀಡಿದ್ದು, 2014 ರ ವೇಳೆಗೆ ಪ್ರಾತ್ಯಕ್ಷಿಕ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.
- ಸದ್ಯ **ಅಮೆರಿಕಾ ಮತ್ತು ಇಸ್ರೇಲ್** ದೇಶಗಳಲ್ಲಿ ಈ ವ್ಯವಸ್ಥೆ ಜಾರಿಯಲ್ಲಿದೆ.

## ಗೋವಾ ಬೀಚ್ ಗಳಲ್ಲಿ ಇನ್ನು ಮುಂದೆ ಮದ್ಯಪಾನ ನಿಷೇಧ

ಪ್ರವಾಸಿಗರ ಸ್ವರ್ಗವೆನಿಸಿರುವ ಗೋವಾದಲ್ಲಿ ಇನ್ನು ಮುಂದೆ ಜಾಲಿ ಮಾಡುವುದು ಅಷ್ಟು ಸುಲಭವಲ್ಲ. ಏಕೆಂದರೆ ಗೋವಾದ ಬೀಚ್ ಗಳಲ್ಲಿ ಮದ್ಯಪಾನ ಮಾಡುವುದಕ್ಕೆ ಗೋವಾ ಸರ್ಕಾರ ಕಡಿವಾಣ ಹಾಕುವ ಮಹತ್ವದ ಹೆಜ್ಜೆ ಇಟ್ಟಿದೆ. ಈ ಸಂಬಂಧ ಗೋವಾ ಪ್ರವಾಸೋದ್ಯಮ ಇಲಾಖೆ ಈಗಾಗಲೇ "ಇಂಡಿಯನ್ ರಿಸರ್ವ್ ಬೆಟಾಲಿಯನ್" ಗೆ ಸೂಚನೆ ನೀಡಿದ್ದು, 24X7 ಸಮಯಗಳ ಕಾಲ ಬೀಚ್ ಗಳ ಮೇಲೆ ಭದ್ರತಾ ಸಿಬ್ಬಂದಿ ಕಣ್ಣಿಡಲಿದ್ದಾರೆ.

ನಿಷೇಧ ಏಕೆ?

- ಬೀಚ್ ಗಳು ಗೋವಾದ ಪ್ರಮುಖ ಪ್ರವಾಸಿ ತಾಣಗಳು. ದೇಶ ವಿದೇಶ ಪ್ರವಾಸಿಗರನ್ನು ಆಕರ್ಷಿಸುವ ಮೂಲಕ ಈ ಬೀಚ್ ಗಳು ರಾಜ್ಯದ ಪ್ರಮುಖ ಆದಾಯ ಮೂಲಗಳಾಗಿವೆ. ಆದರೆ ಮದ್ಯಪಾನ ಮಾಡುವುದರಿಂದಲೇ ಗೋವಾ ಬೀಚ್ ಗಳಲ್ಲಿ ವಿದೇಶಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂದು ಹೇಳಲಾಗುತ್ತಿದೆ.
- ಇದಲ್ಲದೇ ಮದ್ಯಪಾನದ ಮತ್ತಿನಲ್ಲಿರುವವರು ಬಾಟಲಿಗಳನ್ನು ಬೀಚ್ ಬಳಿಯ ಒಡೆದು ಸ್ವಚ್ಚತೆಗೆ ದಕ್ಕೆ ತರುತ್ತಿರುವುದು ನಿಷೇಧ ಹೇರಲು ಮತ್ತೊಂದು ಕಾರಣ. ಒಡೆದ ಬಾಟಲಿ ಚೂರುಗಳು ಪ್ರವಾಸಿಗರ ಸುರಕ್ಷತೆಗೆ ಅಡ್ಡಿಯಾಗುತ್ತಿರುವುದನ್ನು ಮನಗೊಂಡ ಗೋವಾ ಪ್ರವಾಸೋದ್ಯಮ ಈ ನಿರ್ಣಯ ಕೈಗೊಂಡಿದೆ.

## ಏಪ್ರಿಲ್ 24: ರಾಷ್ಟ್ರೀಯ ಪಂಚಾಯತ್ ರಾಜ್ ದಿನ

ಮೂರನೇ "ರಾಷ್ಟ್ರೀಯ ಪಂಚಾಯತ್ ರಾಜ್ ದಿವಸ"ವನ್ನು ಏಪ್ರಿಲ್ 24 ರಂದು ದೇಶಾದ್ಯಂತ ಆಚರಿಸಲಾಯಿತು. ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ರವರು ನವದೆಹಲಿಯ ವಿಜ್ಞಾನ ಭವನದಲ್ಲಿ ಆಯೋಜಿಸಲಾಗಿದ್ದ "ಪಂಚಾಯತ್ ರಾಜ್ ದಿವಸ್"

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ "ಪಂಚಾಯತ್ ರಾಜ್" ವ್ಯವಸ್ಥೆ ಬಲಗೊಳ್ಳಲು ಎಲ್ಲಾ ರಾಜ್ಯಗಳು ಒಕ್ಕಲಿನಿಂದ ಶ್ರಮಿಸಬೇಕು ಎಂದು ಕರೆನೀಡಿದರು.

- ಸಂವಿಧಾನದ 73 ನೇ ತಿದ್ದುಪಡಿ-1992ರ ಮೂಲಕ "ಪಂಚಾಯತ್ ರಾಜ್ ವ್ಯವಸ್ಥೆ"ಗೆ ಸಾಂವಿಧಾನಿಕ ಸ್ಥಾನಮಾನಗಳನ್ನು ನೀಡಲಾಗಿದೆ.
- 73 ನೇ ತಿದ್ದುಪಡಿಯ ಮೂಲಕ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು **ಏಪ್ರಿಲ್ 24, 1993** ರಿಂದ ದೇಶದಾದ್ಯಂತ ಜಾರಿಗೊಳಿಸಲಾಗಿದೆ. ಆದ್ದರಿಂದ ಏಪ್ರಿಲ್ 24 ನ್ನು "ಪಂಚಾಯತ್ ರಾಜ್ ದಿವಸ್" ಎಂದು ಸರ್ಕಾರ ಘೋಷಿಸಿದೆ. 2011 ರಿಂದ ಪಂಚಾಯತ್ ರಾಜ್ ದಿವಸ್ ನ್ನು ಆಚರಿಸಲಾಗುತ್ತಿದೆ.
- ಅಧಿಕಾರ ವಿಕೇಂದ್ರಿಕರಣದಲ್ಲಿ ಪಂಚಾಯತ್ ರಾಜ್ ಗಳ ಕೊಡುಗೆ, ಪಂಚಾಯತ್ ರಾಜ್ ವ್ಯವಸ್ಥೆಯ ಸಬಲೀಕರಣದ ಉದ್ದೇಶ, ಗ್ರಾಮೀಣ ಆಡಳಿತದಲ್ಲಿ ಮಹಿಳೆಯರ ಪಾತ್ರ, ತಳಹಂತದ ಅಭಿವೃದ್ದಿಗಾಗಿ ಪಂಚಾಯತಿಗಳ ಸೇವೆ ಮುಂತಾದ ವಿಷಯಗಳ ಬಗ್ಗೆ ಈ ದಿನದಂದು ಅರಿವು ಮೂಡಿಲಾಗುವುದು.
- ಪಂಚಾಯತ್ ರಾಜ್ ಆಡಳಿತದಲ್ಲಿ ವಿಶೇಷ ಸಾಧನೆ ತೋರಿರುವ ರಾಜ್ಯಗಳಿಗೆ ಈ ದಿನದಂದು ಪ್ರಶಸ್ತಿಯನ್ನು ನೀಡಲಾಗುವುದು.
- ದೇಶದಲ್ಲೇ ಮೊದಲ ಬಾರಿಗೆ ಪಂಚಾಯತ್ ರಾಜ್ ವ್ಯವಸ್ಥೆಯನ್ನು **ಅಕ್ಟೋಬರ್ 2, 1959 ರಲ್ಲಿ ರಾಜಸ್ತಾನದ ನಾಗೂರ್** ಜಿಲ್ಲೆಯಲ್ಲಿ ಆರಂಭಿಸಲಾಯಿತು. ಅಂದಿನ ಪ್ರಧಾನಿಗಳಾದ ಜವಹಾರ್ ಲಾಲ್ ನೆಹರೂ ರವರು ಇದಕ್ಕೆ ಚಾಲನೆ ನೀಡಿದ್ದರು.

ಕೇರಳ, ಕರ್ನಾಟಕಕ್ಕೆ ಪ್ರಶಸ್ತಿ:

- ಪಂಚಾಯತ್ ರಾಜ್ ಆಡಳಿತದಲ್ಲಿ ಅತ್ಯುತ್ತಮ ಸಾಧನೆ ಮಾಡಿರುವ ಆರು ರಾಜ್ಯಗಳಿಗೆ ಪ್ರಧಾನ ಮಂತ್ರಿಯವರು ಪ್ರಶಸ್ತಿಯನ್ನು ವಿತರಿಸಿದರು.
- ಕೇರಳ ಮತ್ತು ಕರ್ನಾಟಕಕ್ಕೆ ಮೊದಲ ಸ್ಥಾನ ಲಭಿಸಿದೆ. ಪ್ರಶಸ್ತಿಯ ಮೊತ್ತ ತಲಾ ರೂ.2.5 ಕೋಟಿ. ತಮಿಳುನಾಡು ಮತ್ತು ಪಶ್ಚಿಮ ಬಂಗಾಳ ಎರಡನೇ ಪ್ರಶಸ್ತಿ ದೊರೆತಿದೆ (ರೂ.1 ಕೋಟಿ). ಮಹಾರಾಷ್ಟ್ರ ಕ್ಕೆ ಮೂರನೇ ಸ್ಥಾನ ದೊರೆತರೆ, ಈಶಾನ್ಯ ರಾಜ್ಯಗಳ ಪೈಕಿ ಉತ್ತಮ ಸಾಧನೆ ಮಾಡಿರುವ ರಾಜ್ಯ ಎಂದು "ಸಿಕ್ಕಿಂ" ಗೆ ಪ್ರಶಸ್ತಿ ಲಭಿಸಿದೆ.

**2016 ರ ವರೆಗೂ ಸೇವೆ ಮುಂದುವರೆಸಲಿರುವ "INS ವಿರಾಟ್"**

ಸಮುದ್ರದಲ್ಲಿ ಯುದ್ದವಿಮಾನಗಳನ್ನು ಹೊತ್ತಯ್ಯುತ್ತಿರುವ ಏಕೈಕ ಯುದ್ದನೌಕೆ "ಐಎನ್ಎಸ್ ವಿರಾಟ್" ತನ್ನ ಸೇವೆಯನ್ನು 2016 ರ ವರೆಗೆ ಮುಂದುವರೆಸಲಿದೆ ಎಂದು ಎ.ಕೆ.ಆಂಟನಿ ಹೇಳಿದ್ದಾರೆ. ಐಎನ್ಎಸ್ ವಿರಾಟ್ 54 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದು, ಪ್ರತಿ ಎರಡು ವರ್ಷಗಳಿಗೊಮ್ಮೆ ಈ ನೌಕೆಯನ್ನು ದುರಸ್ತಿ ಮಾಡಿಸಿ, ಸಾಮರ್ಥ್ಯವನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಆದ್ದರಿಂದ ಇನ್ನೂ ಮೂರು ವರ್ಷಗಳ ಕಾಲ, ಅಂದರೆ 2016 ರವರಗೆ ಇದು ಕಾರ್ಯನಿರ್ವಹಿಸಲಿದೆ ಎಂದು ಅಂಟೋನಿ ಲೋಕಸಭೆಯಲ್ಲಿ ತಿಳಿಸಿದ್ದಾರೆ.

- ಕೆನಡಾದಲ್ಲಿ 1959 ರಿಂದ ಕಾರ್ಯನಿರ್ವಹಿಸುತ್ತಿದ್ದ "ಸೆಂಟಾರ ಕ್ಲಾಸ್" ಹೆಸರಿನ ಈ ನೌಕೆಯನ್ನು 1987 ರಲ್ಲಿ ಭಾರತ ಖರೀದಿಸಿತ್ತು. 28,000 ಟನ್ ಭಾರವಿರುವ ಈ ನೌಕೆಗೆ "ಐಎನ್ಎಸ್ ವಿರಾಟ್" ಎಂದು ಮರುನಾಮಕರಣ ಮಾಡಲಾಗಿತ್ತು. ಸಾಮಾನ್ಯವಾಗಿ ಈ ಗಾತ್ರದ ನೌಕೆಗಳ ಆಯಸ್ಸು 25 ವರ್ಷ ಮಾತ್ರ. ಆದರೆ "ಐಎನ್ಎಸ್ ವಿರಾಟ್ "ನ ಕಾರ್ಯವೈಖರಿ ನಿಜಕ್ಕೂ ಆಶ್ಚರ್ಯ. ಸದ್ಯ ಭಾರತದಲ್ಲಿ ಇಂತಹ ನೌಕೆಗಳಿಗೆ ಕೊರತೆಯಿರುವ ಕಾರಣ 2016 ರ ವರಗೆ ಮುಂದುವರೆಸಲು ನಿರ್ಧರಿಸಲಾಗಿದೆ.
- ಯುದ್ಧವಿಮಾನಗಳನ್ನು ಹೊತ್ತಯ್ಯಬಲ್ಲ "ಅಡ್ಮಿರಲ್ ಗೋರ್ಕಶೊವ್" ನೌಕೆಯನ್ನು ರಷ್ಯಾದಿಂದ ಖರೀದಿಸಲು ಭಾರತ ಒಪ್ಪಂದ ಮಾಡಿಕೊಂಡಿದೆ. ಈ ನೌಕೆಗೆ **"INS ವಿಕ್ರಮಾಧಿತ್ಯ"** ಎಂದು ಮರುನಾಮಕರಣ ಮಾಡಲಾಗಿದ್ದು, ರಷ್ಯಾ ಈ ವರ್ಷದ ಡಿಸೆಂಬರ್ ಒಳಗೆ ಭಾರತಕ್ಕೆ ಪೂರೈಸಲಿದೆ. ಕಳೆದ ವರ್ಷ ಇದರ ಪ್ರಯೋಗರ್ಥ ಪರೀಕ್ಷೆ ನಡೆಸಲಾಗಿತ್ತು, ಆದರೆ ಬಾಯ್ಲರ್ ಗಳಲ್ಲಿ ದೋಷಕಂಡುಬಂದ ಕಾರಣ ರಷ್ಯಾದ "ಸೇವ್ ಮಾಷ್ ಶಿಪ್ ಯಾರ್ಡ್" ನಲ್ಲಿ ದುರಸ್ತಿ ಕಾರ್ಯನಡೆಯುತ್ತಿದೆ.
- ಇದೇ ವೇಳೆ ಭಾರತ "ಐಎನ್ಎಸ್ ವಿಕ್ರಾಂಟ್" ನೌಕೆಯನ್ನು ಸ್ವದೇಶಿ ತಂತ್ರಜ್ಞಾನ ಬಳಸಿಕೊಂಡು ನಿರ್ಮಿಸುತ್ತಿದೆ. 2018 ರ ವೇಳಗೆ "ವಿಕ್ರಾಂಟ್" ತನ್ನ ಸೇವೆಯನ್ನು ಆರಂಭಿಸಲಿದೆ ಎಂದು ಹೇಳಲಾಗಿದೆ. 2014 ಕ್ಕೆ ಕಾರ್ಯರಂಭಿಸುವ ಗುರಿಯನ್ನು ಹೊಂದಲಾಗಿತ್ತು, ಆದರೆ ಗೇರ್ ಬಾಕ್ಸ್ ಮತ್ತಿತ್ತರ ಉಪಕರಣ ಪೂರೈಕೆಯಲ್ಲಿ ಆಗುತ್ತಿರುವ ವಿಳಂಬದಿಂದ 2018 ಕ್ಕೆ ಕಾರ್ಯರಂಭ ಮಾಡುವ ಗುರಿಯನ್ನು ಹೊಂದಲಾಗಿದೆ.

**ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ (National Urban Health Mission)**

ನಗರದಲ್ಲಿ ವಾಸಿಸುತ್ತಿರುವ ಬಡವರ ಆರೋಗ್ಯಮಟ್ಟವನ್ನು ಉತ್ತಮಗೊಳಸಿಸುವ ಸಲುವಾಗಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವೂ "ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ" ಎಂಬ ಯೋಜನೆಯನ್ನು 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೊಳಿಸಿಲಿದೆ. ಈಗಾಗಲೇ ಚಾಲ್ತಿಯಲ್ಲಿರುವ "ರಾಷ್ಟ್ರೀಯ ಆರೋಗ್ಯ ಅಭಿಯಾನ (National Health Mission)" ಅಡಿಯಲ್ಲಿ ಈ ಯೋಜನೆ ಅನುಷ್ಠಾನಕ್ಕೆ ತರುವುದಾಗಿ ಸಚಿವಾಲಯ ತನ್ನ ಪ್ರಸ್ತಾವನೆಯಲ್ಲಿ ತಿಳಿಸಿದೆ.

- 11 ನೇ ಪಂಚವಾರ್ಷಿಕ ಯೋಜನೆಯಲ್ಲೇ ಈ ಅಭಿಯಾನವನ್ನು ಜಾರಿಗೊಳಿಸಲು ನಿರ್ಧರಿಸಲಾಗಿತ್ತು. ಇದಕ್ಕಾಗಿ ರೂ.4500 ಕೋಟಿಗಳನ್ನು ಮೀಸಲಿಡಲಾಗಿದ್ದು, ಆರ್ಥಿಕ ವೆಚ್ಚ ಸಮಿತಿ ತನ್ನ ಒಪ್ಪಿಗೆಯನ್ನು ಸಹ ಸೂಚಿಸಿತ್ತು. ಆದರೆ ಏಕೋ ಈ ಯೋಜನೆ ಜಾರಿಗೊಳ್ಳಲು ವಿಫಲವಾಗಿತ್ತು.

ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನ:

- ನಗರ ವಾಸಿಗಳು, ಅದರಲ್ಲೂ ಕೊಳಚೆ ನಿವಾಸಿಗಳು ಮತ್ತು ಅತ್ಯಂತ ಹಿಂದುಳಿದ ವರ್ಗಗಳಿ ಸೇರಿದ ಜನರ ಆರೋಗ್ಯ ಸ್ಥಿತಿಯನ್ನು ಉತ್ತಮಗೊಳಿಸುವುದು ಈ ಅಭಿಯಾನದ ಮುಖ್ಯ ಗುರಿಯಾಗಿದೆ. ಈ ಯೋಜನೆಯನ್ನು ಅನುಷ್ಠಾನಗೊಳಿಸುವ ಜವಾಬ್ದಾರಿಯನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವಹಿಸಲಾಗಿದೆ.
- 50 ಸಾವಿರಕ್ಕೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ದೇಶದ ಸುಮಾರು 779 ನಗರ ಮತ್ತು ಪಟ್ಟಣಗಳು ಹಾಗೂ 7 ಮಹಾನಗರ ಪಾಲಿಕೆಗಳನ್ನು ಈ ಯೋಜನೆಯಡಿ ತರಲಾಗುವುದು.

- ಈ ಯೋಜನೆಯ ಅನುಷ್ಠಾನಕ್ಕಾಗಿ 12 ನೇ ಪಂಚವಾರ್ಷಿಕ ಯೋಜನೆಯಲ್ಲಿ ರೂ.15143 ಕೋಟಿಗೆ ಯೋಜನಾ ಆಯೋಗ ಅನುಮತಿ ನೀಡಿದೆ. ಸಚಿವಾಲಯವೂ ರೂ.16995 ಕೋಟಿಯನ್ನು ಪ್ರಸ್ತಾವನೆಯನ್ನು ಸಲ್ಲಿಸಿತ್ತು.

**ಪ್ರಬಲ ದೇಶಗಳ ಪಟ್ಟಿಯಲ್ಲಿ ಭಾರತಕ್ಕೆ 8ನೇ ಸ್ಥಾನ**

ವಿಶ್ವದ 27 ಪ್ರಬಲ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತಕ್ಕೆ 8 ನೇ ಪ್ರಬಲ ರಾಷ್ಟ್ರ ಎಂಬ ಮನ್ನಣೆ ಲಭಿಸಿದೆ. ಇದೇ ಮೊದಲ ಬಾರಿಗೆ ದೆಹಲಿ ಮೂಲದ "ಫೌಂಡೇಶನ್ ಫಾರ್ ನ್ಯಾಷನಲ್ ಸೆಕ್ಯೂರಿಟಿ ರಿಸರ್ಚ್ (FSNR)" ಸಂಸ್ಥೆ ನಡೆಸಿರುವ ಅಧ್ಯಯನದಲ್ಲಿ ಭಾರತ ಪ್ರಬಲ ಹತ್ತು ರಾಷ್ಟ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿದೆ.

- ಜಗತ್ತಿನ ಪ್ರಬಲ ರಾಷ್ಟ್ರಗಳ ಪಟ್ಟಿಯಲ್ಲಿ "ಅಮೆರಿಕಾ" ನಂ.1 ಸ್ಥಾನದಲ್ಲಿದರೆ, ಚೀನಾ ಎರಡನೇ ಸ್ಥಾನವನ್ನು ಗಳಿಸುವಲ್ಲಿ ಯಶಸ್ವಿಯಾಗಿದೆ.

ಸಮೀಕ್ಷೆ ಹೇಗೆ?

ಸಮೀಕ್ಷೆಯನ್ನು "ನ್ಯಾಷನಲ್ ಪವರ್"ಎಂಬ ಶಿರ್ಷೀಕೆಯಡಿ ನಡೆಸಲಾಗಿದ್ದು, ಈ ಕೆಳಕಂಡ ಮಾನದಂಡಗಳಿಗೆ ಹೊಂದಾಣಿಕೆಯಾಗುವ ದೇಶಗಳನ್ನು ಮಾತ್ರ ಸಮೀಕ್ಷೆಗೆ ಒಳಪಡಿಸಲಾಗಿದೆ.

- ಜನಸಂಖ್ಯೆ 50 ಮಿಲಿಯನ್ ಗಿಂತ ಅಧಿಕ ಜನಸಂಖ್ಯೆ
- ರಕ್ಷಣಾ ವೆಚ್ಚ 5 ಬಿಲಿಯನ್ ಡಾಲರ್ ಗಿಂತ ಹೆಚ್ಚಿರುವಂತದ್ದು.
- ಜಿಡಿಪಿ 500 ಬಿಲಿಯನ್ ಡಾಲರ್ ಗಿಂತ ಅಧಿಕವಾಗಿರುವಂತದ್ದು.

ಸಮೀಕ್ಷೆಯಲ್ಲಿ ಗಣನೆಗೆ ತೆಗೆದುಕೊಂಡಿರುವ ಅಂಶಗಳು:

- ಇಂಧನ ಭದ್ರತೆ, ಜನಸಂಖ್ಯೆ, ತಂತ್ರಜ್ಞಾನ, ರಕ್ಷಣಾ ವ್ಯವಸ್ಥೆ ಮತ್ತು ವಿದೇಶ ವ್ಯವಹಾರ ಸಾಮರ್ಥ್ಯ.
- ತಂತ್ರಜ್ಞಾನ ಸಾಮರ್ಥ್ಯದಲ್ಲಿ ಭಾರತಕ್ಕೆ 17 ನೇ ಸ್ಥಾನ ದೊರೆತರೆ, ಇಂಧನ ಭದ್ರತೆಯಲ್ಲಿ 20 ನೇ ಸ್ಥಾನ ಲಭಿಸಿದೆ.

**"ಅಂತರರಾಷ್ಟ್ರೀಯ ಸಂಗೀತ ಶಾಲೆಗೆ" ಒಪ್ಪಿಗೆ ಸೂಚಿಸಿದ ಕೇರಳ ಸರ್ಕಾರ**

ಕೇರಳದಲ್ಲಿ "ಅಂತರರಾಷ್ಟ್ರೀಯ ಸಂಗೀತ ಶಾಲೆ (International School of Music)" ಸ್ಥಾಪನೆ ಮಾಡಲು ಸ್ಥಳಾವಕಾಶ ಕಲ್ಪಿಸುವಂತೆ ಸರೋದ್ ಮಾಂತ್ರಿಕ "ಉಸ್ತದ್ ಅಮ್ಜದ್ ಅಲಿ ಖಾನ್" ರವರು ಕೇರಳ ಸರ್ಕಾರ ಸಲ್ಲಿಸಿದ್ದ ಪ್ರಸ್ತಾವನೆಗೆ ಸರ್ಕಾರ ಹಸಿರು ನಿಶಾನೆ ತೋರಿದೆ.

- ಕೇರಳ ಮುಖ್ಯಮಂತ್ರಿ "ಉಮ್ಮನ್ ಚಾಂಡಿ" ರವರು ಪ್ರಸ್ತಾವನೆಯನ್ನು ಅನುಮೋದಿಸಿದ್ದು, ಕೇರಳದ "ಕೊಝಿಕೊಡೆ" ಸಮೀಪ 3 ಎಕರೆ ವಿಸ್ತೀರ್ಣದ ಪ್ರದೇಶವನ್ನು ನೀಡುವುದಾಗಿ ಕೇರಳ ಸಂಸ್ಕೃತಿ ಸಚಿವ "ಕೆ.ಸಿ.ಜೋಸೆಫ್" ಹೇಳಿದ್ದಾರೆ.

ಶಾಲೆಯ ಬಗ್ಗೆ:

- ಗುರುಕುಲ ಮಾದರಿಯಂತೆ ಇರಲಿರುವ ಈ ಶಾಲೆಯಲ್ಲಿ ಅಂತರರಾಷ್ಟ್ರೀಯ ವಿದ್ಯಾರ್ಥಿಗಳು ಭಾರತ ಸಂಗೀತ ಬಗ್ಗೆ ಅಭ್ಯಾಸ ಮಾಡಲಿದ್ದಾರೆ. ಈ ಶಾಲೆ ನಿರ್ಮಾಣಕ್ಕಾಗಿ "ಕಾರ್ಪೋರೇಟರ್" ಗಳಿಂದ ಧನಸಹಾಯವನ್ನು ಕೋರುವುದಾಗಿ ಅಲಿ ಖಾನ್ ಹೇಳಿದ್ದಾರೆ.

**ರಾಜಸ್ತಾನದ ಮತ್ತೆ ಆರು ಜಿಲ್ಲೆಗಳು ಧೂಮಪಾನ ನಿಷೇಧಕ್ಕೆ ಸಜ್ಜು**

ಸಾರ್ವಜನಿಕರ ಆರೋಗ್ಯ ಅಭಿವೃದ್ಧಿಗಾಗಿ ಹೊಸ ಹೊಸ ಯೋಜನೆಗಳನ್ನು ಜಾರಿಗೊಳಿಸಿ ಸುದ್ದಿಯಲ್ಲಿರುವ ರಾಜಸ್ತಾನ, ಈಗ ಮತ್ತೊಂದು ದಿಟ್ಟ ಹೆಜ್ಜೆಯಿಡಲು ಸಜ್ಜಾಗಿದೆ. ರಾಜ್ಯದ ಮತ್ತೆ ಆರು ಜಿಲ್ಲೆಗಳನ್ನು ಧೂಮಪಾನ ಮುಕ್ತ ಜಿಲ್ಲೆಗಳನ್ನಾಗಿ ಪರಿವರ್ತಿಸಲು "ಇಂಟರ್ ನ್ಯಾಷನಲ್ ಯೂನಿಯನ್ ಎಗೆನೆಸ್ಟ್ ಟ್ಯುಬರ್ ಕ್ಯುಲೊಸಿಸ್ ಅಂಡ್ ಲಂಗ್ ಡಿಸೀಸ್ (IUATLD)" ಸಂಸ್ಥೆ ತನ್ನ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿದ್ದು, ಶೀಘ್ರದಲ್ಲೇ ಕಾರ್ಯಾರಂಭ ಮಾಡಲಿದೆ.

ಯಾವ ಜಿಲ್ಲೆಗಳು?

- ಬಿಕನೇರ್, ಅಲ್ವರ್, ಭರತ್ ಪುರ್, ಅಜ್ಮೇರ್, ಬಿಲ್ವರ ಮತ್ತು ನಾಗ್ಪುರ ಇವೇ ಹೊಸ ಆರು ಜಿಲ್ಲೆಗಳು. ಈ ಆರು ಜಿಲ್ಲೆಗಳಲ್ಲಿ ಶೀಘ್ರವೇ "ಸಿಗರೇಟ್ ಮತ್ತು ಇತರೆ ತಂಬಾಕು ಉತ್ಪನ್ನ ಕಾಯಿದೆ (Cigarette and Other Tobacco Product Act COTPA)" ವನ್ನು ಜಾರಿಗೊಳಿಸಲಾಗುವುದು.
- ಈಗಾಗಲೇ IUATLD ರಾಜಸ್ತಾನದ ಜೈಪುರ, ಜೋಧ್ ಪುರ, ಜುನ್ ಜುನು, ಕೋಟ ಮತ್ತು ಉದಯ್ ಪುರ ಜಿಲ್ಲಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. 2012 ರಲ್ಲಿ "ಜುನ್ ಜುನು" ಜಿಲ್ಲೆಯನ್ನು ಧೂಮಪಾನ ಮುಕ್ತ ಜಿಲ್ಲೆಯೆಂದು ಘೋಷಿಸಲಾಗಿದೆ. ಇದೇ ಮೇ 3 ರಂದು "ಜೋಧ್ ಪುರ" ಸಹ ಧೂಮಪಾನ ಮುಕ್ತ ಜಿಲ್ಲೆಯ ಪಟ್ಟಿಗೆ ಸೇರ್ಪಡೆಗೊಳ್ಳಲಿದೆ. ಉಳಿದ ನಾಲ್ಕು ಜಿಲ್ಲೆಗಳಲ್ಲಿ ಶೇ.80 ರಷ್ಟು ಪ್ರಗತಿ ಸಾಧಿಸಲಾಗಿದ್ದು, ಅತಿ ಶೀಘ್ರವೇ ಧೂಮಪಾನ ಮುಕ್ತ ಜಿಲ್ಲೆಗಳೆಂದು ಕರೆಯಿಸಿಕೊಳ್ಳಲಿವೆ.

ನಿಷೇಧ ಹೇಗೆ?

- COTPA ಕಾಯಿದೆ ಮೂರು ಪ್ರಮುಖ ಸೆಕ್ಷನ್ ಗಳ ಅಡಿಯಲ್ಲಿ ಹಂತ ಹಂತವಾಗಿ ಧೂಮಪಾನಕ್ಕೆ ನಿಷೇಧ ಹೇರಲಾಗುವುದು. ಸೆಕ್ಷನ್ 4 ರ ಪ್ರಕಾರ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನಕ್ಕೆ ಕಡಿವಾಣ ಹಾಕುವುದು, ಸೆಕ್ಷನ್ 5 ಪ್ರಕಾರ ತಂಬಾಕು ಉತ್ಪನ್ನಗಳ ಮೇಲಿನ ಜಾಹೀರಾತಿಗೆ ನಿಷೇಧ ಮತ್ತು 18 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ತಂಬಾಕು ಉತ್ಪನ್ನಗಳ ಮಾರಾಟವನ್ನು ಸಂಪೂರ್ಣವಾಗಿ ನಿಯಂತ್ರಿಸಲಾಗುವುದು.
- ಇದರ ಜತೆಗೆ ಜಿಲ್ಲಾ ಆಡಳಿತ, ಆರೋಗ್ಯ ಇಲಾಖೆ ಸಹ ಮತ್ತು ಸ್ಥಳೀಯ ಸರ್ಕಾರ ಸಹ IUATLD ಜೊತೆ ಕೈಜೋಡಿಸಲ್ಲಿದ್ದು, ಯೋಜನೆ ಯಶಸ್ವಿಗೆ ದುಡಿಯಲಿವೆ.

**ತಮಿಳುನಾಡು-ಕೇರಳ ನಡುವೆ ನದಿ ನೀರು ಹಂಚಿಕೆ ಮಾತುಕತೆ**

ತಮಿಳುನಾಡು ಮತ್ತು ಕೇರಳ ನಡುವೆ ನೀರು ಹಂಚಿಕೆ ಸಲುವಾಗಿ ಇತ್ತೀಚೆಗೆ ನಡೆದ ಸಚಿವರ ಮಟ್ಟದ ಮಾತುಕತೆ ಯಶಸ್ವಿಯಾಗಿದೆ. ತೀವ್ರ ಬರಗಾಲ ಮತ್ತು ನೀರಿನ ಕೊರತೆ ಎದುರಿಸುತ್ತಿರುವ ತಮಿಳುನಾಡು ಮತ್ತು ಕೇರಳದ ಕೆಲವು ಪ್ರದೇಶಗಳಿಗೆ ಈ ಮಾತುಕತೆಯಿಂದ ಭಾರಿ ಅನುಕೂಲವಾಗಲಿದೆ. ತಮಿಳುನಾಡಿನ ಪರವಾಗಿ ಜಲಸಂಪನ್ಮೂಲ ಸಚಿವ ಕೆ.ವಿ.ರಾಮಲಿಂಗಂ ಮತ್ತು ಕೇರಳದ ಪರವಾಗಿ ಕೇರಳದ ಜಲ ಸಂಪನ್ಮೂಲ ಸಚಿವ ಪಿ,ಜೆ.ಜೋಸೆಫ್ ರವರು ಸಭೆಯಲ್ಲಿ ಭಾಗವಹಿಸಿದ್ದರು.

ಹಿನ್ನೆಲೆ:

- ಅಸಮರ್ಪಕ ಮಳೆ ಕಾರಣ ತಮಿಳುನಾಡಿನ ಕೊಯಮತ್ತೂರು ಮತ್ತು ಕೇರಳದ ಪಾಲಕ್ಕಡ್ ಸುತ್ತಮುತ್ತಲಿನ ಪ್ರದೇಶಗಳು ಭೀಕರ ಬರಗಾಲಕ್ಕೆ ತುತ್ತಾಗಿವೆ. ಈ ಪ್ರದೇಶಗಳಲ್ಲಿ ಕುಡಿಯುವ ನೀರಿಗೂ ಅಭಾವ ಉಂಟಾಗಿದೆ.
- ಒಪ್ಪಂದ ಅನ್ವಯ ತಮಿಳುನಾಡು 100 ಕ್ಯೂಸೆಕ್ ನೀರನ್ನು "ಪರಂಬಿಕುಲಂ" ಅಣೆಕಟ್ಟೆನಿಂದ ಕೇರಳದ ಪಾಲಕ್ಕಡ್ ಜಿಲ್ಲೆಯ "ಚಿತ್ತಪುಜ" ಪ್ರದೇಶಕ್ಕೆ ಹರಿಸಲಿದೆ. ಇದರಿಂದ ಚಿತ್ತಪುಜ ಜನರಿಗೆ ಉಪಯೋಗವಾಗಲಿದೆ.
- ಇದಕ್ಕೆ ಪೂರಕವಾಗಿ ಕೇರಳದ "ಶಿರುವಣಿ" ಜಲಾಶಯದಿಂದ ತಮಿಳುನಾಡು 40 ಕ್ಯೂಸೆಕ್ ನೀರನ್ನು ಪಡೆಯಲಿದೆ. ಇದರಿಂದ ಕೊಯಮತ್ತೂರು ಭಾಗದ ಜನರ ಕುಡಿಯುವ ನೀರಿನ ಸಮಸ್ಯೆ ಸ್ವಲ್ಪ ಮಟ್ಟಿಗೆ ದೂರವಾಗಲಿದೆ.
- ಈ ಒಪ್ಪಂದ ತಾತ್ಕಲಿಕವಾಗಿದ್ದು, ಸರ್ಮಪಕ ಮಳೆಯಾದ ತಕ್ಷಣ ಸ್ಥಗಿತಗೊಳ್ಳಲಿದೆ.

**2017 ರವರೆಗೆ ಕಲ್ಲಿದ್ದಲು ಆಮದು ಅಗತ್ಯ: ಕೇಂದ್ರ ಸರ್ಕಾರ**

ದೇಶದಲ್ಲಿ ಕಲ್ಲಿದ್ದಲು ಕೊರತೆಯನ್ನು ಸರಿದೂಗಿಸಲು 2017 ರ ವರೆಗೆ ಕಲ್ಲಿದ್ದಲ ಆಮದು ಅಗತ್ಯವಿದೆ ಎಂದು ಕಲ್ಲಿದ್ದಲು ರಾಜ್ಯ ಸಚಿವ "ಪ್ರತೀಕ್ ಪ್ರಕಾಶ್ ಬಾಬು ಪಾಟೀಲ್" ರವರು ರಾಜ್ಯಸಭೆಗೆ ತಿಳಿಸಿದ್ದಾರೆ. ಜನವರಿ 2013 ರ ವೇಳೆಗೆ 110.47 ಮಿಲಿಯನ್ ಟನ್ ಕಲ್ಲಿದ್ದಲನ್ನು ಆಮದು ಮಾಡಿಕೊಂಡಿರುವುದಾಗಿ ಇದೇ ವೇಳೆ ಅವರು ಹೇಳಿದರು.

- ಅಂದಾಜಿ ಪ್ರಕಾರ 12 ನೇ ಪಂಚವಾರ್ಷಿಕ ಯೋಜನೆ (2012-17) ಬಳಿಕವೂ ದೇಶದಲ್ಲಿ ಕಲ್ಲಿದ್ದಲು ಉತ್ಪಾದನೆ ಮತ್ತು ಬೇಡಿಕೆಯ ಮಧ್ಯೆ ಭಾರಿ ಅಂತರವಿರಲಿದೆ. ಆದ್ದರಿಂದ ಕಲ್ಲಿದ್ದಲ ಕೊರತೆಯನ್ನು ನೀಗಿಸಲು ಆಮದು ಅತಿ ಅವಶ್ಯವೆನಿಸಿದೆ.
- ಇಂಡೋನೇಷಿಯಾ, ಆಸ್ಟ್ರೇಲಿಯಾ, ದಕ್ಷಿಣಾ ಆಫ್ರಿಕಾ ಮತ್ತು ಅಮೆರಿಕಾ ದೇಶಗಳು, ಭಾತರಕ್ಕೆ ಕಲ್ಲಿದ್ದಲು ಪೂರೈಸುತ್ತಿರುವ ಪ್ರಮುಖ ರಾಷ್ಟ್ರಗಳು.
- ಯೋಜನಾ ಆಯೋಗದ ಮುನ್ನೋಟದ ಪ್ರಕಾರ 2017 ರ ವೇಳಗೆ ದೇಶದ ಕಲ್ಲಿದ್ದಲು ಆಮದು ಪ್ರಮಾಣದಲ್ಲಿ ಶೇ.20 ರಷ್ಟು ಹೆಚ್ಚಾಗಲಿದೆ. ಅಂದರೆ 2017 ರ ವೇಳಗೆ ಭಾರತ ಸುಮಾರು 185 ಮಿಲಿಯನ್ ಟನ್ ಕಲ್ಲಿದ್ದಲನ್ನು ಆಮದು ಮಾಡಿಕೊಳ್ಳಲಿದೆ.

- ಕಳೆದ ಸಾಲಿನಲ್ಲಿ 575.5 ಮಿಲಿಯನ್ ಟನ್ ಕಲ್ಲಿದ್ದಲನ್ನು ಭಾರತ ಉತ್ಪಾದಿಸಿದೆ. ಆದರೆ ಉತ್ಪಾದನೆಗಿಂತ ಬೇಡಿಕೆ ಹೆಚ್ಚಿರುವ ಕಾರಣ ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ಕಲ್ಲಿದ್ದಲ ಉತ್ಪಾದನೆಯನ್ನು ಹೆಚ್ಚಿಸಿ, ಸ್ಥಾವಲಂಭನೆಯನ್ನು ಸಾಧಿಸಲು ಸರ್ಕಾರ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಅನೇಕ ಯೋಜನೆಗಳನ್ನು ರೂಪಿಸಿದೆ.

## ಅಂತರರಾಷ್ಟ್ರೀಯ

### ಪಳೆಯುಳಿಕೆಗೆ ಕ್ರಾಂತಿಕಾರಿ ವಾದಿಮಿರ್ ಲೆನಿನ್ ಹೆಸರಿಟ್ಟ ರಷ್ಯಾ ವಿಜ್ಞಾನಿಗಳು

ಇತಿಹಾಸ ಪೂರ್ವ ಪಳೆಯುಳಿಕೆಯೊಂದಕ್ಕೆ ರಷ್ಯಾದ ಕ್ರಾಂತಿಕಾರಿ ನಾಯಕ "ವಾದಿಮರ್ ಲೆನಿನ್" ರವರ ಹೆಸರನ್ನು ಇಡಲಾಗಿದೆ. ಹಲ್ಲಿ ಜಾತಿಗೆ ಸೇರಿದ ಈ ಪಳೆಯುಳಿಕೆಗೆ ರಷ್ಯಾದ ವಿಜ್ಞಾನಿಗಳು "ಲೆನಿನಿಯಾ ಸ್ಟೆಲ್ಲಾನ್ಸ್ (Leninia Stellans)" ಎಂದು ನಾಮಕರಣ ಮಾಡಿದ್ದಾರೆ.

- ರಷ್ಯಾದ ಲಿಯೊನೊವಸ್ಕ (Ulyanovaska) ಎಂಬ ಹಳ್ಳಿಯಲ್ಲಿ ಇಕ್ತಿಯೊಸಾರ್ (Ichthyosaur) ಪಳೆಯುಳಿಕೆಯನ್ನು ಕೆಲವು ವರ್ಷಗಳ ಹಿಂದೆ ಉತ್ಖನನ ಮಾಡಲಾಗಿತ್ತು. ಈ ಪಳೆಯುಳಿಕೆಗೆ ಲೆನಿನ್ ರವರ ಹೆಸರನ್ನು ಇಡಲು ಯಾವುದೇ ಭಿನ್ನಮತ ಮೂಡದ ಕಾರಣ "ಲೆನಿನಿಯಾ ಸ್ಟೆಲ್ಲಾನ್ಸ್" ಎಂದು ನಾಮಕರಣ ಮಾಡಲಾಗಿದೆ. ಇಕ್ತಿಯೊಸಾರ್ ಒಂದು ಕಡಲ ಹಲ್ಲಿ ಜಾತಿಗೆ ಸೇರಿದ ಪ್ರಭೇದ. ಸುಮಾರು 251 ರಿಂದ 65 ಮಿಲಿಯನ್ ವರ್ಷಗಳ ಹಿಂದೆ ಇದು ಜೀವಿಸಿತ್ತು.
- ಇಕ್ತಿಯಾಸ್ ಪಳೆಯುಳಿಕೆಯ ತಲೆಬುರುಡೆ 3.3 ಅಡಿಗಳಷ್ಟಿದ್ದು, ಡಾಲ್ಫಿನ್ ಗಳಂತೆ ಹೋಲುವ ಈ ಜೀವಿ ಮೀನು ಮತ್ತಿತ್ತರ ಜಲಚರಗಳನ್ನು ಆಹಾರವಾಗಿ ಸೇವಿಸುತ್ತಿತ್ತು ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.
- ಇತ್ತೀಚೆಗೆ ಆಮೆರಿಕಾದ ಪಳೆಯುಳಿಕೆ ತಜ್ಞರು ಪೂರ್ವ ಕಾಲದ ಹಲ್ಲಿಯ ಪಳೆಯುಳಿಕೆಯೊಂದಕ್ಕೆ ಆಮೆರಿಕಾದ ಅಧ್ಯಕ್ಷ "ಬರಾಕ್ ಒಬಾಮ" ರವರ ಹೆಸರನ್ನು ಇಟ್ಟಿದನ್ನು ಸ್ಮರಿಸಬಹುದು.

### "ಬ್ರೈನ್ ಮ್ಯಾಪಿಂಗ್" ಎಂಬ ವಿನೂತನ ಸಂಶೋಧನೆಗೆ ಒಬಾಮ ಚಾಲನೆ

ಮಾನವನ ಮಿದುಳಿನ ಹಿಂದೆ ಅಡಗಿರುವ ರಹಸ್ಯವನ್ನು ಬೇಧಿಸುವ ಉದ್ದೇಶದಿಂದ ಆಮೆರಿಕಾದ ಅಧ್ಯಕ್ಷ "ಬರಾಕ್ ಒಬಾಮ" ರವರು "ಬ್ರೈನ್ ಮ್ಯಾಪಿಂಗ್" ಸಂಶೋಧನೆಗೆ ಕರೆ ನೀಡಿದ್ದಾರೆ. ಮಾನವನ ಮಿದುಳಿನ ಬಗ್ಗೆ ಆಳವಾಗಿ ಅಧ್ಯಯನ ನಡೆಸಲಿರುವ ಈ ಸಂಶೋಧನೆಗೆ ಒಬಾಮ ಸರ್ಕಾರ 100 ಮಿಲಿಯನ್ ಡಾಲರ್ ನೆರವನ್ನು ಸಹ ಘೋಷಿಸಿದೆ.

ಏನಿದು BRAIN ಮ್ಯಾಪಿಂಗ್?

- BRAIN: "Brain Research through Advancing Innovative Neurotechnologist" ಒಂದು ವಿನೂತನ ಸಂಶೋಧನೆಯಾಗಿದ್ದು, ಹೊಸ ತಂತ್ರಜ್ಞಾನ ಮತ್ತು ವಿಧಾನಗಳನ್ನು ಅಳವಡಿಸಿಕೊಂಡು ಮಿದುಳಿಗೆ ಸಂಬಂಧಿಸಿದ ಸಂಪೂರ್ಣ ಚಿತ್ರಣವನ್ನು ಅಭ್ಯಾಸಿಸಲಾಗುವುದು. ಈ ಸಂಶೋಧನೆಯನ್ನು ವಿವಿಧ ಸರ್ಕಾರೇತರ ಸಂಸ್ಥೆಗಳು ಮತ್ತು ಖಾಸಗಿ ಸಂಸ್ಥೆಗಳು ಸಹಭಾಗಿತ್ವದೊಂದಿಗೆ ನಡೆಸಲಿವೆ.

- ಮಿದುಳಿಗೆ ಸಂಬಂಧಿ ಕಾಯಿಲೆಗಳಾದ ಅಲ್ಜೀಮಿರ್, ಎಪಿಲೆಪ್ಸಿ, ಆಟಿಸಂ ಕಾಯಿಲೆಗಳನ್ನು ಪ್ರಾಥಮಿಕ ಹಂತದಲ್ಲಿ ಪತ್ತೆಹಚ್ಚುವುದು, ಸೂಕ್ತ ಚಿಕಿತ್ಸಾ ವಿಧಾನ, ಮತ್ತು ಕಾಯಿಲೆ ಬರದಂತೆ ತಡೆಯುವ ವಿಧಾನದ ಬಗ್ಗೆ ಸಂಶೋಧನೆಯನ್ನು ಕೈಗೊಳ್ಳುವುದು "ಬ್ರೈನ್ ಮ್ಯಾಪಿಂಗ್" ಮಿಷನ್ ನ ಪ್ರಮುಖ ಉದ್ದೇಶವಾಗಿದೆ.

**ಚೀನಾದಲ್ಲಿ ಸುಮಾರು 600 ವರ್ಷಗಳ ಹಳೆಯದಾದ ಸಮಾಧಿ ಪತ್ತೆ**

ಚೀನಾದ ಜಿಯಾಂಗ್ಸಿ ಪ್ರದೇಶದಲ್ಲಿ ಸುಮಾರು 600 ವರ್ಷಗಳಷ್ಟು ಹಳೆಯದಾದ ಸಮಾಧಿಯೊಂದು ಪತ್ತೆಯಾಗಿದೆ. ವಿಶೇಷವೆಂದರೆ ಈ ಸಮಾಧಿಯ ಗೋಡೆಗಳ ಮೇಲೆ ಮುರಲ್ (Mural) ಕಲೆಯನ್ನು ಬಿಡಿಸಲಾಗಿದ್ದು, ಜಿಯಾಂಗ್ಸಿ ಪ್ರದೇಶದಲ್ಲಿ ಕಟ್ಟಡವೊಂದರ ನಿರ್ಮಾಣದ ವೇಳೆ ಈ ಸಮಾಧಿ ಬೆಳಕಿಗೆ ಬಂದಿದೆ.

- ಸಮಾಧಿ ಸುಮಾರು 600 ವರ್ಷಗಳು ಹಿಂದಿನದಾಗಿದ್ದು, ಚೀನಾದ "ಮಿಂಗ್ ಸಂತತಿ"ಗೆ (1368-1644) ಸೇರಿರುವುದಾಗಿ ಪುರಾತತ್ವ ಇಲಾಖೆ ತಿಳಿಸಿದೆ.
- ಸಮಾಧಿ ಯಾರ ದಾಳಿಗೂ ಒಳಗಾಗದ ಕಾರಣ ವಿರೂಪಗೊಂಡಿಲ್ಲ. ಆದರೆ ಮುರಲ್ ಕಲೆ ಸ್ವಲ್ಪ ಮಾಸಿದಂತ ಸ್ಥಿತಿಯಲ್ಲಿ ಪತ್ತೆಯಾಗಿದೆ.
- ಉತ್ತರ ಚೀನಾದಲ್ಲಿ ಮಿಂಗ್ ಸಂತತಿಗೆ ಸೇರಿದ ಇಂತಹ ಅವಶೇಷಗಳು ಸಾಮಾನ್ಯ ಆದರೆ ದಕ್ಷಿಣಾ ಭಾಗದಲ್ಲಿ ಪ್ರಥಮ ಬಾರಿಗೆ ಇಂತಹ ಸಮಾಧಿ ಪತ್ತೆಯಾಗಿದೆ ಎಂದು ಪುರಾತತ್ವ ತಜ್ಞರೊಬ್ಬರು ಹೇಳಿದ್ದಾರೆ. ಪುರಾತತ್ವ ಇಲಾಖೆ ತನ್ನ ಉತ್ಖನನ ಕಾರ್ಯವನ್ನು ಚುರುಕುಗೊಳಿಸಿದ್ದು, ಮತ್ತಷ್ಟು ಸಮಾಧಿಗಳು ಪತ್ತೆಯಾಗಬಹುದು ಎಂಬ ಹುಮ್ಮಸಿನಲ್ಲಿದೆ.

**ಟರ್ಕಿಯಲ್ಲಿ "ನರಕದ ಬಾಗಿಲು (Gate to Hell)" ಪತ್ತೆ ಹಚ್ಚಿದ ವಿಜ್ಞಾನಿಗಳು**

ಇಟಲಿಯ ಪುರಾತತ್ವಜ್ಞರು ಟರ್ಕಿಯಲ್ಲಿ ನರಕದ ಬಾಗಿಲು ಎಂದೇ ಖ್ಯಾತಿಗೊಂಡಿರುವ "ಪುರಾತನ ಗುಹೆ"ಯನ್ನು ಪತ್ತೆಹಚ್ಚಿದ್ದು, ಅನೇಕ ಕುತೂಹಲಕಾರಿ ಅಂಶಗಳು ಬೆಳಕಿಗೆ ಬಂದಿವೆ. "ಪ್ಲೋಟೊ ಗೇಟ್" ಎಂದು ಪ್ರಸಿದ್ದ ಹೊಂದಿರುವ ಈ ಗುಹೆಯನ್ನು "ಫ್ರೈಜಿಯನ್ ಸಂಸ್ಕೃತಿಯ ಹಿರಾಪೊಲಿಸ್ ನಗರದ ಸಮೀಪ ಪತ್ತೆಹಚ್ಚಲಾಗಿದೆ.

- ಈ ಗುಹೆ ಭೂಗತ ಜಗತ್ತಿಗೆ ತೆರೆದುಕೊಳ್ಳುವ ಬಾಗಿಲು. ಈ ಗುಹೆಯಲ್ಲಿ ದಟ್ಟವಾದ ಕೆಟ್ಟ ಹೊಗೆ ತುಂಬಿದ್ದು, ಯಾವುದೇ ಪ್ರಾಣಿ ಇದರ ಬಳಿ ಬಂದರೆ ಸಾವು ನಿಶ್ಚಿತ ಎಂದು ಗ್ರೀಕ್ ನ ವಿಜ್ಞಾನಿ ಸ್ಟ್ರಾಬೋ ಕ್ರಿ.ಪೂ 64-63 ರಲ್ಲಿ ಬರೆದಿದ್ದರು. ಗುಹೆಯೊಳಗೆ ತಾವು ಗುಬ್ಬಚ್ಚಿಗಳನ್ನು ಎಸೆದಾಗ ಅವು ಕ್ಷಣಾರ್ಧದಲ್ಲಿ ಮರಣ ಹೊಂದಿದವು ಎಂದು ಸ್ಟ್ರಾಬೋ ಹೇಳಿದ್ದರು.
- ಈ ಗುಹೆಯನ್ನು ಪತ್ತೆ ಹಚ್ಚಿರುವ ಸಲೆಂಟೋ ವಿವಿ ಪ್ರೋ.ಫ್ರಾನ್ಸಿಸ್ಕೋ ಡಿ ಆಂಡ್ರಿಯಾ ನೇತೃತ್ವದ ವಿಜ್ಞಾನಿಗಳ ತಂಡ ಈ ಗುಹೆ ಹಿಂದಿರುವ ಮರ್ಮವನ್ನು ಬೇಧಿಸಲು ಯಶಸ್ವಿಯಾಗಿದ್ದಾರೆ.
- ವಿಜ್ಞಾನಿಗಳು ನಡೆಸಿರುವ ಅಧ್ಯಯನದ ಪ್ರಕಾರ ಗುಹೆಯಿಂದ "ಇಂಗಾಲ ಡೈ ಆಕ್ಸೈಡ್" ನ ಹೊಗೆ ಬರುತ್ತಿರುವುದೇ ಹಕ್ಕಿಗಳ ಸಾವಿಗೆ ಕಾರಣ ಎಂದು ಹೇಳಿದ್ದಾರೆ. ವಿಜ್ಞಾನಿಗಳ ಈ ಸಂಶೋಧನೆಯಿಂದ ಸಾವಿರಾರು ವರ್ಷಗಳಿಂದ ರಹಸ್ಯವಾಗಿ ಉಳಿದು ಕುತೂಹಲ ಕೆರಳಿಸಿದ್ದ "ನರಕದ ಬಾಗಿಲು" ಅಧ್ಯಯನಕ್ಕೆ ತೆರೆ ಬಿದ್ದಿದೆ.

**ಆಮೆರಿಕಾದ ರೆಡ್- ಪ್ಲಾಗ್ ಸಮರಾಭ್ಯಾಸದಲ್ಲಿ ಭಾರತೀಯ ವಾಯು ಪಡೆ**

ಆಮೆರಿಕಾದಲ್ಲಿ ನಡೆಯಲಿರುವ ಪ್ರತಿಷ್ಠಿತ "ರೆಡ್- ಪ್ಲಾಗ್" ಸಮರಾಭ್ಯಾಸದಲ್ಲಿ ಭಾರತೀಯ ವಾಯು ಪಡೆಗಳು ಭಾಗವಹಿಸಲಿವೆ. ಆಮೆರಿಕಾ ವಾಯುಪಡೆಯ ನೆಲ್ಲಿಸ್ ವಾಯುನೆಲೆಯಲ್ಲಿ ಜುಲೈ 15 ರಿಂದ 26 ರ ವರೆಗೆ ನಡೆಯಲಿರುವ ವೈಮಾನಿಕ ಕಸರತ್ತಿನಲ್ಲಿ ಭಾರತೀಯ ವಾಯ ಪಡೆಯ ಪ್ರಮುಖ ಯುದ್ಧ ವಿಮಾನಗಳು ಹಾಗೂ ವಿಶೇಷ ಕಾರ್ಯಾಚರಣೆ ವಿಮಾನಗಳು ತಮ್ಮ ಕೌಶಲ್ಯವನ್ನು ಪ್ರದರ್ಶಿಸಲಿವೆ.

- ಭಾರತದ ಪ್ರಮುಖ ಯುದ್ಧವಿಮಾನಗಳಾದ ಸುಖೋಯ್ ಎಸ್.ಯು-30 ಎಂಕೆಐ, ಸಿ-130 ಜೆ ಸೂಪರ್ ಹರ್ಕ್ಯೂಲಸ್ ವಿಮಾನಗಳು ಮತ್ತು ಆಕಾಶದಲ್ಲಿ ವಿಮಾನಗಳಿಗೆ ಇಂಧನ ತುಂಬಿಸುವ ಐಎಲ್-78 ವಿಮಾನಗಳು ಈ ಸಮರಾಭ್ಯಾಸದಲ್ಲಿ ಪಾಲ್ಗೊಳ್ಳಲಿವೆ.
- ಈ ಮೊದಲ ಆಮೆರಿಕಾ ತನ್ನ ಆಪ್ತ ರಾಷ್ಟ್ರಗಳಿಗೆ ಮಾತ್ರ ಇದರಲ್ಲಿ ಭಾಗವಹಿಸಲು ಆಹ್ವಾನ ನೀಡುತ್ತಿತ್ತು. ಕಳೆದ ವರ್ಷ ದ್ವಿಪಕ್ಷೀಯ ಸಂಬಂಧ ಸುಧಾರಿಸಿದ್ದ ದೆಸೆಯಿಂದ ಭಾರತಕ್ಕೂ ಈ ಅವಕಾಶ ಲಭಿಸಿದೆ.
- 1975 ರಲ್ಲಿ ಆರಂಭಗೊಂಡ ಈ ಸಮರಾಭ್ಯಾಸದಲ್ಲಿ, ಭಾರತೀಯ ವಾಯು ಪಡೆಯು 2008 ರಲ್ಲಿ ಮೊದಲ ಬಾರಿಗೆ ಭಾಗವಹಿಸಿತ್ತು. ದುಬಾರಿ ವೆಚ್ಚದ ಹಿನ್ನಲೆಯಲ್ಲಿ ಭಾರತ ಐದು ವರ್ಷಗಳಿಗೊಮ್ಮೆ ಭಾಗವಹಿಸಲು ನಿರ್ಧರಿಸಿತು.

**ಗಾಂಟನಾಮೊ ಸೆರೆಮನೆ (Guantanamo Prison) ಮುಚ್ಚಲು ವಿಶ್ವಸಂಸ್ಥೆ ಆದೇಶ**

ಗಾಂಟನಾಮೊ ಸೆರೆಮನೆಯಲ್ಲಿ ಆಗುತ್ತಿರುವ ಮಾನವ ಹಕ್ಕು ಉಲ್ಲಂಘನೆ ಬಗ್ಗೆ ತೀವ್ರವಾಗಿ ಆಕ್ಷೇಪ ವ್ಯಕ್ತಪಡಿಸಿರುವ ವಿಶ್ವಸಂಸ್ಥೆಯ ಮಾನವ ಹಕ್ಕು ಉನ್ನತ ಕಮೀಷನರ್ "ನವಿ ಪಿಳ್ಳೈ" ರವರು ಕೂಡಲೇ ಗಾಂಟನಾಮೊ ಸೆರೆಮನೆಯನ್ನು ಮುಚ್ಚುವಂತೆ ಆದೇಶಿಸಿದ್ದಾರೆ. ಬಂಧಿತರನ್ನು ವಿಚಾರಣೆಗೆ ಒಳಪಡಿಸಿದೆ ಅನಿರ್ದಿಷ್ಟ ಕಾಲ ಸೆರೆಮನೆಯಲ್ಲಿ ಇಟ್ಟಿರುವ ಆಮೆರಿಕಾ ತನ್ನ ಬದ್ದತೆಗೆ ವಿರುದ್ದವಾಗಿ ನಡೆದಿದೆ ಹಾಗೂ ಅಂತರರಾಷ್ಟ್ರೀಯ ಕಾನೂನನ್ನು ಆಮೆರಿಕಾ ಉಲ್ಲಂಘನೆ ಮಾಡಿದೆ ಎಂದು ಪಿಳ್ಳೈ ಹೇಳಿದ್ದಾರೆ. ಅನಿರ್ದಿಷ್ಟ ಕಾಲದ ಸೆರೆವಾಸವನ್ನು ಖಂಡಿಸಿ ಗಾಂಟನಾಮೊದಲ್ಲಿ ಬಂಧಿತರು ಉಪಹಾಸ ಮುಷ್ಕರ ನಡೆಸುತ್ತಿದ್ದರು ಆಮೆರಿಕಾ ಸುಮ್ಮನಿರುವುದು ಶೋಚನೀಯ ಎಂದಿರುವ "ಪಿಳ್ಳೈ" ರವರು ತಕ್ಷಣದಿಂದಲೇ ಸೆರೆಮನೆಯನ್ನು ಮುಚ್ಚವಂತೆ ಆದೇಶ ಹೊರಡಿಸಿದ್ದಾರೆ.

ಗಾಂಟಾನಾಮೊ ಬೇ ಸೆರೆಮನೆ:

- 2001 ರಲ್ಲಿ ಆಮೆರಿಕಾದ ಮೇಲೆ ಭಯೋತ್ಪಾದಕರು ನಡೆಸಿದ ದಾಳಿಯ ಬಳಿಕ ಅಂದಿನ ಅಧ್ಯಕ್ಷ ಬುಷ್ ರವರ ಆಡಳಿತ ಅವಧಿಯಲ್ಲಿ ಗಾಂಟನಾಮೊ ಸೆರೆಮನೆಯನ್ನು 2002 ರಲ್ಲಿ ಪ್ರಾರಂಭಿಸಲಾಯಿತು. ಭಯೋತ್ಪಾದನೆ ವಿರುದ್ಧ ಆಮೆರಿಕಾ ನಡೆಸುತ್ತಿರುವ ಕಾರ್ಯಚರಣೆಯಲ್ಲಿ ಸೆರೆಹಿಡಿಯುವ ಶಂಕಸ್ಪಾದ ಉಗ್ರರನ್ನು ಇಲ್ಲಿ ಬಂಧಿಸಿಡಲಾಗಿದೆ. ಆದರೆ ಇವರನ್ನು ವಿಚಾರಣೆಗೆ ಒಳಪಡಿಸಿದೆ ಅನೇಕ ವರ್ಷಗಳಿಂದ ಕಾನೂನಿಗೆ ವಿರುದ್ದವಾಗಿ ಕೂಡಿಹಾಕಿರುವ ಕ್ರಮವನ್ನು ಮಾವನ ಹಕ್ಕು ಹೋರಾಟಗಾರರು ಖಂಡಿಸಿದ್ದಾರೆ.

**ನೇಪಾಳದಲ್ಲಿ ಬಡತನ ಕುರಿತಾದ ಸಾರ್ಕ್ ಸದಸ್ಯರ ಮಟ್ಟದ ಸಭೆ**

ಬಡತನ ಕುರಿತಾದ ಮೂರನೇ ಸಾರ್ಕ್ ಸದಸ್ಯರ ಮಟ್ಟದ ಸಭೆಯನ್ನು ಏಪ್ರಿಲ್ 5 ರಂದು ನೇಪಾಳದ ಕಠ್ಮಂಡುವಿನಲ್ಲಿ ಆಯೋಜಿಸಲಾಗಿತ್ತು. ಸಾರ್ಕ್ ಒಕ್ಕೂಟದ ಎಂಟು ದೇಶಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಸಾರ್ಕ್ ವಲಯದಲ್ಲಿ ಬಡತನ ನಿವಾರಣೆಗೆ ಸಂಪೂರ್ಣವಾಗಿ ಶ್ರಮಿಸುವುದು ಮತ್ತು ಸದಸ್ಯ ರಾಷ್ಟ್ರಗಳ ನಡುವೆ ಅಗತ್ಯ ಸಹಕಾರವನ್ನು ನೀಡುವುದಾಗಿ ಸದಸ್ಯರು ಒಮ್ಮತದಿಂದ ಪ್ರತಿಜ್ಞೆ ಸ್ವೀಕರಿಸಿದರು.

- ನೇಪಾಳ ಹಂಗಾಮಿ ಸರ್ಕಾರದ ಪ್ರಧಾನಿ "ಖಿಲ್ ರಾಜ್ ರೆಗ್ಮಿ" ರವರು ಸಭೆಗೆ ಚಾಲನೆ ನೀಡಿದರು. ಇದಕ್ಕೂ ಮುಂಚೆ ಐದನೇ ಸಾರ್ಕ್ ಸೆಕ್ರಟರಿ ಮಟ್ಟದ ಸಭೆ ಏಪ್ರಿಲ್ 4 ರಂದು ಕಠ್ಮಂಡುವಿನಲ್ಲಿ ನೆರವೇರಿತ್ತು.
- ಸಾರ್ಕ್ ವಲಯ ರಾಷ್ಟ್ರಗಳಲ್ಲಿ ಬಡತನ ನಿಯಂತ್ರಣ ನೀತಿಯನ್ನು ಅಳವಡಿಸಿಕೊಂಡು, ಸಹಸ್ರಮಾನ ಅಭಿವೃದ್ಧಿ ಗುರಿ-2015 (Millennium Development Goal-2015)ಯನ್ನು ಸಾಧಿಸಲು ಬದ್ದರಿರುವುದಾಗಿ ತಿರ್ಮಾನಿಸಲಾಯಿತು.
- ಭಾರತದ ಪರ ಯೋಜನಾ ಆಯೋಗದ ಪ್ರಧಾನ ಸಲಹೆಗಾರರಾದ "ವಂದನ ಕುಮಾರಿ ಜಿನ" ನೇತೃತ್ವದ ನಾಲ್ಕು ಜನ ಸದಸ್ಯರ ತಂಡ ಭಾಗವಹಿಸಿತ್ತು.

ಸಾರ್ಕ್ (SAARC): South Asia Association of Regional Countries) ಅಥವಾ ದಕ್ಷಿಣ ಏಷ್ಯಾ ವಲಯ ರಾಷ್ಟ್ರಗಳ ಒಕ್ಕೂಟ.

ಸ್ಥಾಪನೆ: ಡಿಸೆಂಬರ್ 8, 1985

ಸದಸ್ಯ ರಾಷ್ಟ್ರಗಳು: ಭಾರತ, ನೇಪಾಳ, ಶ್ರೀಲಂಕಾ, ಪಾಕಿಸ್ತಾನ, ಆಫ್ಘಾನಿಸ್ತಾನ, ಭೂತಾನ್, ಬಾಂಗ್ಲದೇಶ, ಮಾಲ್ಡೀವ್ಸ್.

ಕೇಂದ್ರ ಕಚೇರಿ: ಕಠ್ಮಂಡು.

ಚೇರಮನ್: ಮಹಮ್ಮದ್ ವಹೀದ್ ಹಸನ್

ಸೆಕ್ರೆಟರಿ ಜನರಲ್: ಅಹಮ್ಮದ್ ಸಲೀಮ್

**ಹೊಸ ಧರ್ಮನಿಂದನೆ ವಿರೋಧಿ (Anti Blasphemy Law) ಕಾನೂನು ಪ್ರಸ್ತಾವನೆಯನ್ನು ತಿರಸ್ಕರಿಸಿದ ಬಾಂಗ್ಲ ಪ್ರಧಾನಿ ಹಸೀನಾ**

ಬಾಂಗ್ಲದಲ್ಲಿ ಇಸ್ಲಾಂ ಧರ್ಮದ ಪ್ರಮುಖರು ಬೇಡಿಕೆ ಇಟ್ಟಿದ್ದ ಹೊಸ "ಧರ್ಮನಿಂದನೆ ವಿರೋಧಿ" ಪ್ರಸ್ತಾವನೆಯನ್ನು ಬಾಂಗ್ಲ ಪ್ರಧಾನಿ ಶೇಖ್ ಹಸೀನಾ ರವರು ಸರಸಗಟಾಗಿ ತಳ್ಳಿಹಾಕ್ಕಿದ್ದರೆ. ಇಸ್ಲಾಂ ಧರ್ಮದ ವಿರುದ್ದ ಅವಹೇಳನ ಮಾಡುವವರನ್ನು ದಂಡಿಸಲು ದೇಶದಲ್ಲಿ ಈಗಾಗಲೇ ಸೂಕ್ತ ಕಾನೂನು ವ್ಯವಸ್ಥೆಯಿರುವುದರಿಂದ ಹೊಸ ಕಾನೂನಿನ ಅಗತ್ಯವಿಲ್ಲವೆಂದು ಹೇಳಿದ್ದಾರೆ. ಮತ್ತೊಂದೆಡೆ ಹೊಸ ಕಾನೂನು ಜಾರಿಗೊಳಿಸುವಂತೆ ಬಾಂಗ್ಲದ ರಾಜಧಾನಿಯಲ್ಲಿ ಪ್ರತಿಭಟನೆಯ ಕಾವು ದಿನೇ ದಿನೇ ಏರುತ್ತಿದೆ.

ವಿವಾದವೇನು?

- ಕಳೆದ ಫೆಬ್ರುವರಿಯಲ್ಲಿ ವ್ಯಕ್ತಿಯೊಬ್ಬ ತನ್ನ ಬ್ಲಾಗ್ ನಲ್ಲಿ ಇಸ್ಲಾಂ ಧರ್ಮದ ಬಗ್ಗೆ ಕೇವಲವಾಗಿ ಬರೆದಿದ್ದ ಕಾರಣ ಆತನನ್ನು ಕೊಲೆ ಮಾಡಲಾಗಿತ್ತು. ಇದರಿಂದ ರೊಚ್ಚಿಗೆದ್ದ ಕೆಲವು ಯುವಕರು ಪ್ರತಿಭಟನೆಗೆ ಮುಂದಾಗಿದ್ದರು. ಇವರೆಲ್ಲರು ಇಸ್ಲಾಂ ವಿರೋಧಿಗಳು ಆಗಾಗಿ ಇಂತವರಿಗೇ ಉಗ್ರ ಶಿಕ್ಷೆ ನೀಡಲು ಅವಕಾಶ ಕಲ್ಪಿಸುವ ಕಾನೂನನ್ನು ಜಾರಿಗೆ ತರಬೇಕೆಂದು "ಹಫ್ಜತ್ ಏ-ಇಸ್ಲಾಂ" ಸಂಘಟನೆಯ ಕಾರ್ಯಕರ್ತರು ಪ್ರಧಾನಿರವರನ್ನು ಒತ್ತಾಯಿಸಿದ್ದರು. ಇಸ್ಲಾಂ ಧರ್ಮವನ್ನು ನಿಂಧಿಸುವವರಿಗೆ ಜೀವವಾಧಿ ಶಿಕ್ಷೆಯನ್ನು ನೀಡಬೇಕು ಎಂಬುದು ಇವರ ಮನವಿಯಾಗಿದೆ.

ಬಾಂಗ್ಲದಲ್ಲಿ ಧರ್ಮನಿಂದನೆ ವಿರುದ್ಧ ಇರುವ ಕಾನೂನು:

- ಬಾಂಗ್ಲ ದೇಶದ 1980 ರ ದಂಡ ಸಂಹಿತೆಯ ಸೆಕ್ಷನ್ 295 ಧರ್ಮನಿಂದನೆಗೆ ಸಂಬಂಧಿಸಿದೆ. ಧರ್ಮನಿಂದನೆ, ಧರ್ಮದ ಬಗ್ಗೆ ಅವಹೇಳನಕಾರಿ ಮಾತು ಮತ್ತು ಕೀಳಾಗಿ ಕಾಣುವವರಿಗೆ 2 ವರ್ಷಗಳ ಕಠಿಣ ಶಿಕ್ಷೆ ವಿಧಿಸಲು ಈ ಸೆಕ್ಷನ್ ಅಡಿ ನೀಡಲಾಗಿದೆ.
- ಅಲ್ಲದೇ "ಬಾಂಗ್ಲ ಮಾಹಿತಿ ಹಕ್ಕು-2006 ರ" ಅಡಿಯಲ್ಲಿ ಅಂತರ್ಜಾಲ ಮೂಲಕ ಧರ್ಮದ ಚ್ಯುತಿ ಬರುವಾಗೇ ನಡೆದುಕೊಂಡರೆ 10 ವರ್ಷಗಳ ಕಾಲ ಸೆರೆಮನೆವಾಸ ಮತ್ತು 1 ಕೋಟಿ ದಂಡವನ್ನು ವಿಧಿಸಬಹುದಾಗಿದೆ.

**ಅಝಂ (Azzam): ವಿಶ್ವದ ಅತಿ ದೊಡ್ಡ ವಿಹಾರ ದೋಣಿ**

ವಿಶ್ವದ ಅತಿ ದೊಡ್ಡ ವಿಹಾರ ದೋಣಿ (Yacht) "ಅಝಂ" ಗೆ ಏಪ್ರಿಲ್ 5, 2013 ರಂದು ಚಾಲನೆ ನೀಡಲಾಯಿತು. ಜರ್ಮನ್ "ಶಿಪ್ ಯಾರ್ಡ್" ಈ ದೋಣಿಯನ್ನು ಅಭಿವೃದ್ದಿಪಡಿಸಿದೆ. ಇದುವರೆಗೂ ರಷ್ಯಾದ "Roman Abramovich's 533-foot eclipse" ದೋಣಿ ವಿಶ್ವದ ಅತಿ ದೊಡ್ಡ ದೋಣಿ ಎಂಬ ಖ್ಯಾತಿಯನ್ನು ಹೊಂದಿತ್ತು.

- ಇಟಲಿ ಮೂಲದ "ನೌತ ಯಾಚ್" (Nauta Yacht) ಈ ದೋಣಿಯ ವಿನ್ಯಾಸವನ್ನು ಮಾಡಿದ್ದು, ಜರ್ಮನ್ ಕಂಪನಿ "ಲುರ್ಸೆ ಯಾಚ್" ಸಂಸ್ಥೆ ಈ ದೋಣಿಯನ್ನು ನಿರ್ಮಿಸಿದೆ.
- "ಅಝಂ" ಸುಮಾರು ಎರಡು ಫುಟ್ ಬಾಲ್ ಕ್ರೀಡಾಂಗಣದಷ್ಟು ಉದ್ದವಿದೆ. ಇದರ ನಿರ್ಮಾಣಕ್ಕೆ ಬರೋಬ್ಬರಿ ನಾಲ್ಕು ವರ್ಷಗಳ ಸಮಯ ತೆಗೆದುಕೊಂಡಿದೆ.

ದೋಣಿಯ ವಿಶೇಷತೆಗಳು:

- ಇದರ ಉದ್ದ: 180 ಮೀಟರ್ ಅಥವಾ 590.55 ಅಡಿಗಳು
- ಬೀಮ್ (Beam): 20.8 ಮೀಟರ್ ಅಥವಾ 68 ಅಡಿಗಳು
- ವೇಗ: 30 knots

**ಇರಾನ್ ನಿಂದ ಮತ್ತೆ ಯುರೇನಿಯಂ ಉತ್ಪಾದನೆ**

ವಿಶ್ವದ ಪ್ರಮುಖ ರಾಷ್ಟ್ರಗಳ ದಿಗ್ಬಂಧನ ಭೀತಿಯ ಹೊರತಾಗಿಯೂ ಇರಾನ್ ಮತ್ತೆ ಎರಡು ಗಣಿಗಳಲ್ಲಿ ಯುರೇನಿಯಂ ಅದಿರು ಉತ್ಪಾದನೆ ಮತ್ತು ಯುರೇನಿಯಂ ಸಂಸ್ಕರಣ ಘಟಕವನ್ನು ಪ್ರಾರಂಭಿಸಿರುವುದಾಗಿ ಹೇಳಿದೆ. ವಿಶೇಷವೆಂದರೆ "ನ್ಯಾಷನಲ್ ನ್ಯೂಕ್ಲಿಯರ್ ಟೆಕ್ನಾಲಜಿ ದಿನ" ದಂದೇ ಇರಾನ್ ಈ ಮಾಹಿತಿಯನ್ನು ಬಹಿರಂಗಗೊಳಿಸಿದೆ.

- ಇರಾನ್ ನ "ಯಾಝ್ಡ್" ನಗರದ ಸಮೀಪವಿರುವ "ಸಗಾಂದ್ 1 ಮತ್ತು ಸಗಾಂದ್ 2" ಗಣಿಗಳಲ್ಲಿ ಸುಮಾರು 350 ಅಡಿ ಆಳದಿಂದ ಯುರೇನಿಯಂ ಅದಿರನ್ನು ಹೊರತೆಗೆಯಲಾಗುವುದು. ಈ ಅದಿರಿನಿಂದಿ ಅರ್ದಕನ್ ಬಳಿ ಇರುವ "ಶಾಹೀದ್ ರೆಜೈನೆಜದ್" ಸಂಸ್ಕರಣ ಘಟಕದಲ್ಲಿ ಹಳದಿ ಕೇಕ್ ಅಥವಾ ಕಚ್ಚಾ ಯುರೇನಿಯಂ ನ್ನು ತಯಾರಿಸಲಾಗುವುದು ಎಂದು ಇರಾನ್ ಹೇಳಿದೆ.

- ಈಗಾಗಲೇ "ನತಾಂಜ್" ಮತ್ತು "ಇಸ್ಪಹನ್" ಘಟಕಗಳು ಮಧ್ಯ ಇರಾನ್ ನಲ್ಲಿ ಯುರೇನಿಯಂ ಸಂಸ್ಕರಣ ಕಾರ್ಯವನ್ನು ನಡೆಸುತ್ತಿವೆ.
- ಇರಾನ್ ಆರಂಭ ಮಾಡಿರುವ ಈ ಘಟಕಗಳಿಂದ ಪಶ್ಚಿಮ ದೇಶಗಳಲ್ಲಿ ನಡುಕ ಶುರುವಾಗಿದೆ. ಇರಾನ್ ಈ ಯುರೇನಿಯಂನ್ನು ಅಣ್ವಸ್ತ್ರಗಳ ತಯಾರಿಕೆ ಬಳಸಿಕೊಳ್ಳಲಿದೆ ಎಂಬುದು ಈ ದೇಶಗಳ ಅಭಿಪ್ರಾಯ. ಆದರೆ ಈ ಆರೋಪವನ್ನು ಅಲ್ಲಗಳೆದಿರುವ ಇರಾನ್ ಇದೊಂದು ಶಾಂತಿಯುತ ಯೋಜನೆಯೆಂದು ಹೇಳಿದೆ.

ಹಳದಿ ಕೇಕ್ (Yellow Cake) ಎಂದರೇನು?

- ಹಳದಿ ಕೇಕ್ ಅಥವಾ ಯುರನಿಯ ಎಂದು ಕರೆಯಲಾಗುವ ಇದೊಂದು ಪುಡಿ ರೂಪದ ಪದಾರ್ಥ. ಯುರೇನಿಯಂ ಅದಿರು ಸಂಸ್ಕರಣೆ ಪ್ರಕ್ರಿಯೆಯ ಮಧ್ಯಂತರ ಹಂತದಲ್ಲಿ ಹಳದಿ ಕೇಕ್ ತಯಾರಾಗುತ್ತದೆ. ಹಳದಿ ಕೇಕ್ ನೀರಿನಲ್ಲಿ ಕರಗದ ಪದಾರ್ಥವಾಗಿದ್ದು, ಶೇ.೮೦ ರಷ್ಟು ಯುರೇನಿಯಂ ಆಕ್ಸೈಡ್ ನ್ನು ಹೊಂದಿರುವುದು.

## ಸೊಮಾಲಿಯಾ ಗೆ ಮಿಲಿಟರಿ ಸಹಾಯ ಒದಗಿಸಲು ಆಮೆರಿಕಾ ಒಪ್ಪಿಗೆ

ತಮ್ಮ ದೇಶಕ್ಕೆ ಮಿಲಿಟರಿ ಸಹಾಯ ಒದಗಿಸುವಂತೆ ಸೊಮಾಲಿಯಾ ದೇಶ ಸಲ್ಲಿಸಿದ್ದ ಪ್ರಸ್ತಾವನೆಗೆ ಆಮೆರಿಕಾ ಸರ್ಕಾರ ಒಪ್ಪಿಗೆ ಸೂಚಿಸಿದೆ. 1992 ರಲ್ಲಿ ವಿಶ್ವಸಂಸ್ಥೆ ಸೊಮಾಲಿಯಾ ಗೆ ಮಿಲಿಟರಿ ಸಹಾಯ ಒದಗಿಸುವುದರ ಮೇಲೆ ನಿರ್ಬಂಧ ಹೇರಿತ್ತು. ಆದರೆ ಮಾರ್ಚ್ 2013 ರಲ್ಲಿ ಈ ನಿರ್ಬಂಧವನ್ನು ಸ್ವಲ್ಪ ಮಟ್ಟಿಗೆ ಸಡಿಲಪಡಿಸಿತ್ತು. ವಿಶ್ವ ಸಂಸ್ಥೆಯ ಈ ಕ್ರಮದಿಂದ ದಂಗೆಕೋರರನ್ನು ಹತ್ತಿಕ್ಕಲು ಸಣ್ಣ ಪ್ರಮಾಣದ ಶಸ್ತಾಸ್ತ್ರಗಳನ್ನು ಸೊಮಾಲಿಯಾ ಖರೀದಿ ಮಾಡುಬಹುದಾಗಿದೆ.

- ಸೊಮಾಲಿಯದೊಂದಿಗೆ ಆಮೆರಿಕಾ ತನ್ನ ದ್ವಿಪಕ್ಷೀಯ ಸಂಬಂಧವನ್ನು ಸಂಪೂರ್ಣವಾಗಿ ಕಡಿತಗೊಳಿಸದಿದ್ದರು, 1993 ರಲ್ಲಿ ಸಂಭವಿಸಿದ "ಬ್ಲಾಕ್ ಹಾಕ್ ಡೌನ್" ಅವಘಡದ ನಂತರ ಎರಡೂ ದೇಶಗಳ ನಡುವೆ ಭಾಂದವ್ಯದ ಕೊಂಡಿ ಕಳಚಿತ್ತು. ಈ ಅವಘಡದಲ್ಲಿ ಸೊಮಾಲಿಯಾ ದಂಗೆಕೋರರು ಆಮೆರಿಕಾದ 18 ಸೈನಿಕರನ್ನೂ ಹತ್ಯೆಗೈದಿದ್ದರು. ಅಲ್ಲದೇ ಆಮೆರಿಕಾಗೆ ಸೇರಿದ ಎರಡು ಯುದ್ದ ವಿಮಾನಗಳನ್ನು ಧರೆಗುರುಳಿಸಿದ್ದರು.

## ಯುದ್ಧದ ವೇಳೆ ಮಹಿಳೆಯರ ಮೇಲಿನ ದೌರ್ಜನ್ಯ ತಡೆಗೆ ಜಿ-8 ರಾಷ್ಟ್ರಗಳ ಒಪ್ಪಂದ

ಯುದ್ದದ ಸಮಯದಲ್ಲಿ ಮಹಿಳೆಯರ ಮೇಲೆ ಎಸುಗುವ ಅತ್ಯಾಚಾರದಂತಹ ದುಷ್ಕೃತ್ಯಗಳನ್ನು ತಡೆಯುವ ಮಹತ್ವದ ಒಪ್ಪಂದಕ್ಕೆ ಜಿ-೮ ರಾಷ್ಟ್ರಗಳು ಸಹಿಹಾಕಿವೆ. ಲಂಡನ್ ನ ಲಂಕಸ್ಟರ್ ನಲ್ಲಿ ನಡೆಯುತ್ತಿರುವ ಜಿ-೮ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಈ ಅಂತರರಾಷ್ಟ್ರೀಯ ಒಪ್ಪಂದ ಕೈಗೂಡಿದೆ.

- ಈ ಒಪ್ಪಂದದ ಪ್ರಕಾರ ಯುದ್ದ ಸಮಯದಲ್ಲಿ ಮಹಿಳೆಯರ ಮೇಲೆ ನಡೆಸಲಾಗುವ ದೌರ್ಜನ್ಯವನ್ನು ಯುದ್ದ ಅಪರಾಧವೆಂದು (War Crime) ಪರಿಗಣಿಸಲಾಗುವುದು.
- ಇಂತಹ ಅಪರಾಧಗಳನ್ನು ಹೇಗೆ ತನಿಖೆ ನಡೆಸಬೇಕು ಎಂದು ವಿಶ್ವಕ್ಕೆ ತಿಳಿಸುವ ಸಲುವಾಗಿ ಮತ್ತು ಪ್ರಕರಣದ ವಿರುದ್ದ ಕ್ರಮ ಕೈಗೊಳ್ಳಲು 3.54 ಕೋಟಿ ಡಾಲರ್ ಮೊತ್ತದ ನಿಧಿಯನ್ನು ಸ್ಥಾಪಿಸಲು ನಿರ್ಧಾರ.

- ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ "ವಿಲಿಯಂ ಹೇಗ್" ಈ ಐತಿಹಾಸಿಕ ನಿರ್ಣಯದ ರೂವಾರಿ.
- ಹಾಲಿವುಡ್ ನಟಿ, ಸಮಾಜ ಸೇವಕಿ ಹಾಗೂ ವಿಶ್ವ ಸಂಸ್ಥೆಯ ವಿಶೇಷ ರಾಯಭಾರಿ "ಏಂಜಲೀನಾ ಜೋಲಿ" ಈ ಸಭೆಯಲ್ಲಿ ಭಾಗಿ.
- **ಜಿ-8 ರಾಷ್ಟ್ರಗಳು**: ಕೆನಡಾ, ಫ್ರಾನ್ಸ್, ಜರ್ಮನಿ, ಇಟಲಿ, ರಷ್ಯಾ, ಜಪಾನ್, ಯು.ಕೆ ಮತ್ತು ಆಮೆರಿಕ.

**<u>ಆಫ್ಘಾನ್ ನಲ್ಲಿ ಭಯೋತ್ಪಾದನೆ ನಿಯಂತ್ರಣ ಕುರಿತು ಭಾರತ-ಚೀನಾ ಸಭೆ</u>**

ಆಪ್ಘಾನಿಸ್ತಾನದಲ್ಲಿ ಭಯೋತ್ಪಾದನೆ ನಿರ್ಮೂಲನೆ ಕುರಿತು ಚೀನಾ ಮತ್ತು ಭಾರತ ನಡುವಿನ ಎರಡು ದಿನದ ಸಭೆಯನ್ನು ಇತ್ತೀಚೆಗೆ ಚೀನಾದ ಬೀಜಿಂಗ್ ನಲ್ಲಿ ಆಯೋಜಿಸಲಾಗಿತ್ತು. 2014 ರ ವೇಳೆಗೆ ಆಮೆರಿಕಾ ತನ್ನ ಸೇನೆಯನ್ನು ಆಪ್ಘಾನ್ ನಿಂದ ಹಿಂದಕ್ಕೆ ಕರೆಸಿಕೊಳ್ಳಲಿದ್ದು, ನಂತರ ಆಫ್ಘಾನ್ ನಲ್ಲಿ ಭಯೋತ್ಪಾದನೆ ನಿಯಂತ್ರಿಸಲು ಪರಸ್ಪರ ಸಹಕಾರ ನೀಡುವ ಬಗ್ಗೆ ಚರ್ಚಿಸಲಾಯಿತು.

- ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಬೇರು ಬಿಟ್ಟಿರುವ ಭಯೋತ್ಪಾದನೆಯ ಬಗ್ಗೆ ಉಭಯ ದೇಶಗಳು ಚರ್ಚಿಸಿದವು. ಭಯೋತ್ಪಾದನೆ ನಿಗ್ರಹಿಸಲು ದ್ವಿಪಕ್ಷಿಯ ಸಹಕಾರಕ್ಕೆ ಸಮ್ಮತಿ ಸೂಚಿಸಿದವು.
- ಆಪ್ಘಾನ್ ನಲ್ಲಿ ತೀವ್ರವಾಗಿ ತಲೆದೋರಿರುವ ಭಯೋತ್ಪಾದನೆ ಬಗ್ಗೆ ಚರ್ಚಿಸಲಾಯಿತು. ಆಪ್ಘಾನ್ ನಲ್ಲಿ ಬಿಗಡಾಯಿಸಿರುವ ಕಠಿಣ ಪರಿಸ್ಥಿತಿಯನ್ನು ತಿಳಿಗೊಳಿಸಲು ಭಾರತ, ಚೀನಾ ಮತ್ತು ರಷ್ಯಾ ಹೇಗೆ ತಯಾರಿ ನಡೆಸಿವೆ ಎನ್ನುವುದರ ಬಗ್ಗೆ ಪರಿಶೀಲಿಸಲಾಯಿತು.

**<u>ಪಾಲೇಸ್ತಿಯಾನ್ ಪ್ರಧಾನಿ ಫಯ್ಯದ್ ರಾಜೀನಾಮೆ</u>**

ಪಾಲೇಸ್ತಿಯಾನ್ ಪ್ರಧಾನಿ "ಸಲಂ ಫಯ್ಯದ್ (Salam Fayyad)" ರವರು ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ. ಹಲವು ದಿನಗಳಿಂದ ಪಾಲೇಸ್ತಿಯಾನ್ ಅಧ್ಯಕ್ಷ ಮಹಮ್ಮದ್ ಅಬ್ಬಸ್ ಮತ್ತು ಫಯ್ಯದ್ ರವರ ನಡುವೆ ಬಿನ್ನಾಭಿಪ್ರಾಯ ಮೂಡಿತ್ತು. ಈ ಬೆಳವಣಿಗೆಯಿಂದ ಬೇಸತ್ತು ಅವರು ರಾಜೀನಾಮೆ ನೀಡಿರುವುದಾಗಿ ಪ್ಯಾಲೇಸ್ತಿಯಾನ್ ಮೂಲಗಳು ಹೇಳಿವೆ. ಫಯ್ಯದ್ ರವರನ್ನು ಪ್ರಧಾನಿ ಹುದ್ದೆಯಲ್ಲಿ ಮುಂದುವರೆಸುವಂತೆ ಆಮೆರಿಕಾ ಲಾಬಿ ನಡೆಸಿತ್ತು ಆದರೆ ಈ ಪ್ರಯತ್ನ ಕೊನೆಗೂ ವಿಫಲಗೊಂಡಿದೆ.

- ಹೊಸ ಪ್ರಧಾನಿ ಆಯ್ಕೆಯಾಗುವ ವರೆಗೆ ಫಯ್ಯದ್ ರವರು ಹಂಗಾಮಿ ಪ್ರಧಾನಿಯಾಗಿ ಕಾರ್ಯ ನಿರ್ವಹಿಸಲಿದ್ದಾರೆ.
- ಪ್ರಧಾನಿ ಹುದ್ದೆಯೊಂದಿಗೆ ವಿತ್ತ ಸಚಿವ ಖಾತೆಯನ್ನು ಅವರು ಹೊಂದಿದ್ದರು. ವಿತ್ತ ಸಚಿವರಾಗಿ ಅವರು ಮಂಡಿಸಿದ್ದ ಆರ್ಥಿಕ ನಿಯಮಗಳ ವಿರುದ್ದ ಭಾರಿ ಪ್ರತಿರೋಧ ವ್ಯಕ್ತವಾಗಿತ್ತು. ಇದರಿಂದ ಪಾಲೇಸ್ತಿಯಾನ್ ಅಧ್ಯಕ್ಷರಾದ ಮಹಮ್ಮದ್ ಅಬ್ಬಸ್ ರವರು ಫಯ್ಯದ್ ರವರಿಗೆ ರಾಜೀನಾಮೆ ನೀಡುವಂತೆ ಸೂಚಿಸಿದ್ದರು.
- ಫಯ್ಯದ್ ರವರ ರಾಜೀನಾಮೆಗೆ ಪ್ರತಿಕ್ರಯಿಸಿರುವ "ಹಮಸ್ ಚಳುವಳಿ" ನಾಯಕ "ಸಮಿ ಅಬು ಝೂಹ್ರಿ" ರವರು ಫಯ್ಯದ್ ಪಾಲೇಸ್ತಿಯಾನ್ ದೇಶವನ್ನು ಸಾಲದಲ್ಲಿ ಮುಳಗಿಸಿದ್ದು, ಆಡಳಿತ ಸರ್ಕಾರವೇ ಇದನ್ನು ತುಂಬಬೇಕು ಎಂದಿದ್ದಾರೆ.

**ವಿಶ್ವದ ಅತಿ ದೊಡ್ಡ ದೂರದರ್ಶಕ ನಿರ್ಮಾಣಕ್ಕೆ ಆಮೆರಿಕಾ ಸರ್ಕಾರ ಒಪ್ಪಿಗೆ**

ಭಾರತ, ಚೀನಾ ಮತ್ತು ಜಪಾನ್ ಪಾಲುಗಾರಿಕೆಯಲ್ಲಿ ಆಮೆರಿಕಾ ನಿರ್ಮಿಸುತ್ತಿರುವ ವಿಶ್ವದ ಅತಿ ದೊಡ್ಡ ದೂರದರ್ಶಕ ನಿರ್ಮಾಣಕ್ಕೆ ಆಮೆರಿಕಾ ಸರ್ಕಾರ ತಾತ್ವಿಕ ಒಪ್ಪಿಗೆ ನೀಡಿದೆ. ಹವಾಯಿಯ "ಮೌನ ಕೀ ವೊಲ್ಕನೊ (Mauna Kea Volcano)"ಶಿಖರದಲ್ಲಿ ಈ ದೂರದರ್ಶಕ ಅಸ್ಥಿತ್ವಕ್ಕೆ ಬರಲಿದೆ.

- ಈ ದೂರದರ್ಶಕದಿಂದ ಖಗೋಳಶಾಸ್ತ್ರಜ್ಞನಿರಿಗೆ ಹೊಸ ಗ್ರಹ ಮತ್ತು ನಕ್ಷತ್ರಗಳ ಹುಟ್ಟುಗಳ ಬಗ್ಗೆ ಅಧ್ಯಯನ ನಡೆಸಲು ಅನುಕೂಲವಾಗಲಿದೆ. ಜತೆಗೆ ಬ್ರಹ್ಮಾಂಡ ಪ್ರಾರಂಭವಾದ ವರ್ಷಗಳ ಅರ್ಥಮಾಡಿಕೊಳ್ಳಲು ಸಹಕಾರಿಯಾಗಲಿದೆ.
- ದೂರದರ್ಶಕದಲ್ಲಿ ಬಳಸಲಾಗುವು ಪ್ರಾಥಮಿಕ ಕನ್ನಡಿಯ ಉದ್ದ ಸುಮಾರು 100 ಅಡಿಗಳಷ್ಟಿರಲಿದೆ. ಸಾಮಾನ್ಯ ದೂರದರ್ಶಕಗಳಿಗೆ ಹೋಲಿಸಿದರೆ 9 ಪಟ್ಟು ಹೆಚ್ಚು ವಿಸ್ತೀರ್ಣವನ್ನು ಸೆರೆಹಿಡಿಯುವ ಸಾಮರ್ಥ್ಯವಿದ್ದು, ಚಿತ್ರಗಳ ಸ್ಪಷ್ಟತೆಕೂಡ ಮೂರು ಪಟ್ಟು ಹೆಚ್ಚು ಇರಲಿದೆ.

ವಿರೋಧ:

- ಮೌನ ಕೀ ಶಿಖರದಲ್ಲಿ ದೂರದರ್ಶಕ ಸ್ಥಾಪಿಸುವ ಕ್ರಮಕ್ಕೆ ವಿರೋಧ ವ್ಯಕವಾಗಿದೆ. ಪುರಾಣಗಳ ಪ್ರಕಾರ ಮೌನ ಕೀ ಶಿಖರ ಅತ್ಯಂತ ಪವಿತ್ರವಾದ ಸ್ಥಳ, ಪುರಾಣಕತೆಗಳಲ್ಲಿ ಹೇಳುವಂತೆ ಈ ಸ್ಥಳಕ್ಕೆ ಆಯ್ದ ವ್ಯಕ್ತಿಗಳಿಗೆ ಮಾತ್ರ ಭೇಟಿ ನೀಡುವ ಅವಕಾಶವಿತ್ತು. ಇಂತಹ ಪವಿತ್ರ ಸ್ಥಳ ದೂರದರ್ಶಕ ನಿರ್ಮಾಣದಿಂದ ಕಲುಷಿತಗೊಳ್ಳಲಿದೆ ಎಂಬುದು ವಿವಾದಕ್ಕೆ ಪ್ರಮುಖ ಕಾರಣ. ಅಲ್ಲದೇ ಇಲ್ಲಿರುವ ಅಪರೂಪದ ಜೀವಸಂಕುಲಕ್ಕೂ ಅಪಾಯ ಎದುರಾಗಲಿದೆ ಎಂಬ ಪರಿಸರ ತಜ್ಞನರ ವಾದ ಮತ್ತೊಂದು ಕಾರಣ.

ಯೋಜನೆಯ ರೂವಾರಿಗಳು:

- ಕ್ಯಾಲಿಫೋರ್ನಿಯಾ ವಿವಿ, ಕ್ಯಾಲಿಫೋರ್ನಿಯಾ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಫಾರ್ ರಿಸರ್ಚ್ ಇನ್ ಅಸ್ಟ್ರನಾಮಿ ಮತ್ತು ಕೆನಡಾ ವಿವಿಗಳ ಸಮೂಹ ಈ ಯೋಜನೆಯನ್ನು ಮುನ್ನಡೆಸಲಿವೆ. ಭಾರತ, ಚೀನಾ ಮತ್ತು ಕೆನಡಾ ಈ ಯೋಜನೆಯ ಪಾಲುದಾರ ರಾಷ್ಟ್ರಗಳು.

**ಏಪ್ರಿಲ್ 18-ವಿಶ್ವ ಪರಂಪರೆಯ ದಿನ**

ಏಪ್ರಿಲ್ 18 ನ್ನು ಪ್ರತಿ ವರ್ಷ ವಿಶ್ವ ಪರಂಪರೆಯ ದಿನ (World Heritage Day)ವನ್ನಾಗಿ ಆಚರಿಸಲಾಗುತ್ತದೆ. ಐತಿಹಾಸಿಕ ಸ್ಮಾರಕಗಳ ಮಹತ್ವ ಮತ್ತು ಅವುಗಳ ಸಂರಕ್ಷಣೆ ಕುರಿತು ಜಾಗತಿಕ ಮಟ್ಟದಲ್ಲಿ ಅರಿವು ಮೂಡಿಸುವುದು ಈ ದಿನದ ಮುಖ್ಯ ಉದ್ದೇಶ.

- 1982 ರಲ್ಲಿ ಮೊದಲ ಬಾರಿಗೆ ವಿಶ್ವ ಪರಂಪರೆಯ ದಿನವನ್ನು ಏಪ್ರಿಲ್ 18 ರಂದು ಹಮ್ಮಿಕೊಳ್ಳಲಾಗಿತು. ಟುನೇಷಿಯಾದ "ಇಂಟರ್ ನ್ಯಾಷನಲ್ ಕೌನ್ಸಿಲ್ ಆಫ್ ಮನೊಮೆಂಟ್ಸ್ ಮತ್ತು ಸೈಟ್ಸ್" ನಿಂದ ಹಮ್ಮಿಕೊಳ್ಳಲಾಗಿದ್ದ ಈ ದಿನವನ್ನು "ಯುನೆಸ್ಕೊ" 1983 ರಲ್ಲಿ ಅಂಗೀಕರಿಸಿತು.
- ವಿಶ್ವದ ಮೂಲೆಗಳಲ್ಲಿ ಇರುವ ಐತಿಹಾಸಿಕ ತಾಣಗಳನ್ನು ಗುರುತಿಸಿ, ಅವುಗಳ ಸಂರಕ್ಷಣೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹಕಾರ ನೀಡುವಂತೆ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಈ ದಿನದಂದು ಹಮ್ಮಿಕೊಳ್ಳಲಾಗುವುದು.

- ವಿಶ್ವದಾದ್ಯಂತ ಇಂದು ಒಟ್ಟು 962 ತಾಣಗಳನ್ನು "ಯುನೆಸ್ಕೊ" ವಿಶ್ವ ಪರಂಪರಿಕ ತಾಣಗಳ ಪಟ್ಟಿಯಲ್ಲಿ ಸೇರಿಸಲಾಗಿದೆ.
- ಭಾರತದ 29 ಪರಂಪರಿಕ ತಾಣಗಳು ಯುಸೆಸ್ಕೊ ವಿಶ್ವ ಪರಂಪರಿಕ ತಾಣಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.
- ದೆಹಲಿಯ ಆಗ್ರಾ ಕೋಟೆ ಮತ್ತು ಅಜಂತಾ ಗುಹೆಗಳು ಈ ಪಟ್ಟಿಯಲ್ಲಿ ಸೇರ್ಪಡೆಗೊಂಡ ಮೊದಲ ತಾಣಗಳು. 1983 ರಲ್ಲಿ ಇವೆರಡೂ ಪರಂಪರಿಕ ತಾಣಗಳು ಯುನೆಸ್ಕೊ ಪಟ್ಟಿಗೆ ಸೇರ್ಪಡೆಗೊಂಡವು.

**ಬಯೋನ್-ಎಂ 1: ರಷ್ಯಾದ ಬಾಹ್ಯಕಾಶ ನೌಕೆ ಉಡಾವಣೆ**

ಇಲಿ, ಹಲ್ಲಿ, ಮೀನು, ಬಸವನ ಹುಳು ಸೇರಿದಂತೆ ಇತರೆ ಜೀವಿಗಳನ್ನು ರಷ್ಯಾ ಅಂತರಿಕ್ಷಾ ಪ್ರವಾಸಕ್ಕೆ ಕಳುಹಿಸಿದೆ. ಅಂತರಿಕ್ಷದಲ್ಲಿ ಪ್ರಾಣಿಗಳ ಮೇಲೆ ಬೀರುವ ಪರಿಣಾಮವನ್ನು ಅಧ್ಯಯನ ನಡೆಸಲು ರಷ್ಯಾ ಬಯೋನ್-ಎ01 (Bion-M1) ಎಂಬ ಬಾಹ್ಯಕಾಶ ನೌಕೆಯನ್ನು ಉಡಾಯಿಸಿದೆ. ವಿವಿಧ ಜೀವಿಗಳು ತುಂಬಿರುವ ಬಯೊನ್-ಎ01 ನೌಕೆಯನ್ನು ರಷ್ಯಾದ ಬೈಕನೂರ್ ನಿಂದ ಸೊಯುಜ್ 2-1ಎ ರಾಕೆಟ್ ಮುಖಾಂತರ ಕಕ್ಷೆಗೆ ಸೇರಿಸಲಾಯಿತು.

- ಈ ಮಿಷನ್ ನಲ್ಲಿ 45 ಇಲಿ, 15 ಹಲ್ಲಿ, ಬಸವನ ಹುಳು ಹಾಗೂ ಕೆಲವು ಸೂಕ್ಷ್ಮಜೀವಿಗಳನ್ನು ಸೇರಿವೆ. ಜತೆಗೆ ಜರ್ಮನಿಯ ಪ್ರಯೋಗಲಾಯದಿಂದ ಕಳುಹಿಸಿರುವ ಮೀನು ಮತ್ತು ಜಲಚರ ಸಸ್ಯಗಳನ್ನು ಕೊಂಡೊಯ್ಯಲಾಗಿದೆ.
- 30 ದಿನಗಳ ಕಾಲ ಈ ಜೀವಿಗಳು ಬಾಹ್ಯಕಾಶದಲ್ಲಿ ಸುತ್ತಲಿವೆ. ಇವುಗಳಿಗೆ ಬೇಕಾಗುವ ಆಹಾರವನ್ನು ವ್ಯವಸ್ಥೆ ಮಾಡಲಾಗಿದೆ.
- ಭೂಮಿಯಿಂದ 575 ಕಿ.ಮೀ ಎತ್ತರದಲ್ಲಿ ಈ ಬಾಹ್ಯಕಾಶ ನೌಕೆ ಇರಲಿದ್ದು, ಜೀವಿಗಳ ಸ್ಥಿತಿಗತಿಯನ್ನು ತಿಳಿಯಲು ವಿಡಿಯೋ ಮತ್ತು ಮೆಡಿಕಲ್ ದೂರದರ್ಶಕವನ್ನು ಅಳವಡಿಸಲಾಗಿದೆ. ಪ್ರಾಣಿಗಳಿಗೆ ಅನುಕೂಲವಾಗುವಂತೆ ಬಾಹ್ಯಕಾಶ ನೌಕೆಯ ಒಳಗಡೆ ಸೂಕ್ತ ಉಷ್ಣಾಂಶ ಮತ್ತು ಆರ್ದ್ರತೆಯನ್ನು ಕಲ್ಪಿಸಲಾಗಿದೆ.
- ಬಯೋನ್-ಎ01 ನ್ನು ರಷ್ಯಾದ ಫೆಡರಲ್ ಸ್ಪೇಸ್ ಏಜೆನ್ಸಿ ನಿಯಂತ್ರಿಸಲಿದೆ. ಆದರೆ ಅಮೆರಿಕಾ, ಜರ್ಮನಿ, ಕೆನಡಾ ಮತ್ತು ಪೋಲಾಂಡ್ ನ ವಿಜ್ಞಾನಿಗಳು ಈ ಪ್ರಯೋಗದಲ್ಲಿ ಪಾಲ್ಗೊಂಡಿರುವರು.
- ಬಾಹ್ಯಕಾಶದ ವಾಯುಗುಣ ಹೇಗೆ ಈ ಜೀವಿಗಳ ಮೇಲೆ ಪರಿಣಾಮ ಬೀರುತ್ತದೆ, ಈ ವಾಯುಗುಣಕ್ಕೆ ಜೀವಿಗಳು ಹೇಗೆ ಹೊಂದುಕೊಳ್ಳುತ್ತವೆ, ಅವುಗಳಲ್ಲಿ ಆಗುವ ಬದಲಾವಣೆ ಏನು ಮುಂತಾದ ವಿಷಯಗಳ ಬಗ್ಗೆ ವಿಜ್ಞಾನಿಗಳು ಅಧ್ಯಯನ ನಡೆಸಲಿದ್ದಾರೆ. ಮೇ.18 ರಂದು ಈ ಬಾಹ್ಯಕಾಶ ನೌಕೆ ಭೂಮಿಗೆ ಹಿಂತಿರುಗಿ ಬರಲಿದೆ.
- ರಷ್ಯಾದ ಇಂತದೇ ಪ್ರಯೋಗವನ್ನು 1973 ರಲ್ಲಿ ಮೊದಲ ಬಾರಿಗೆ ಕೈಗೊಂಡಿತ್ತು. ಅದರಲ್ಲಿ ಕೀಟಗಳು, ಸಸ್ಯಗಳು, ಸರೀಸೃಪಗಳನ್ನು ಬಾಹ್ಯಕಾಶಕ್ಕೆ ಕಳುಹಿಸಲಾಗಿತ್ತು. ಬಳಿಕ 1997 ರಲ್ಲಿ ಕೊನೆಯದಾಗಿ ಈ ಪ್ರಯೋಗವನ್ನು ನಡೆಸಿ ಯಶಸ್ವಿಯಾಗಿತ್ತು.

**ಬಾಂಗ್ಲದೇಶದ ಅಧಕ್ಷ ಸ್ಥಾನಕ್ಕೆ "ಅಬ್ದುಲ್ ಹಮೀದ್" ಆಯ್ಕೆ ಖಚಿತ**

ಬಾಂಗ್ಲದೇಶದ 20 ನೇ ಅಧ್ಯಕ್ಷರಾಗಿ "ಅಬ್ದುಲ್ ಹಮೀದ್" ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ. ರಾಷ್ಟ್ರಧ್ಯಕ್ಷರ ಹುದ್ದೆಗೆ ನಡೆಯುತ್ತಿರುವ ಚುನಾವಣೆಗೆ "ಅಬ್ದುಲ್ ಹಮೀದ್" ರವರನ್ನು ಹೊರತುಪಡಿಸಿ, ಬೇರೆ ಯಾರು ನಾಮಪತ್ರ ಸಲ್ಲಿಸಿದ ಕಾರಣ

ಹಮೀದ್ ರವರು ಮುಂದಿನ ರಾಷ್ಟ್ರಾಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ ಎಂದು ಬಾಂಗ್ಲದ ಮುಖ್ಯ ಚುನಾವಣಾ ಅಧಿಕಾರಿ “ಖಾಜಿ ರಾಕಿಬುದ್ದೀನ್ ಮಹಮ್ಮದ್” ಹೇಳಿದ್ದಾರೆ.

- ಬಾಂಗ್ಲದ ಅಧ್ಯಕ್ಷರಾಗಿದ್ದ “ಜಿಲ್ಲೂರ್ ರೆಹಮಾನ್” ರವರು ಮಾರ್ಚ್ 20 ರಂದು ಶ್ವಾಸಕೋಶದ ತೊಂದರೆಯಿಂದ ನಿಧನ ಹೊಂದಿದ್ದರು. ಮಾರ್ಚ್ 23 ರಂದು ಬಾಂಗ್ಲದ ಹಂಗಾಮಿ ಅಧ್ಯಕ್ಷರಾಗಿ “ಹಮೀದ್” ರವರನ್ನು ನೇಮಿಸಲಾಗಿತ್ತು. ಈ ಮುಂಚೆ ಅವರು ಸ್ಪೀಕರ್ ಆಗಿ ಕಾರ್ಯನಿರ್ವಹಿಸುತ್ತಿದ್ದರು.
- ಆಡಳಿತ ಪಕ್ಷ “ಹವಾಮಿ ಲೀಗ್” ನ ಪ್ರಮುಖರೆನಿಸಿರುವ ಹಮೀದ್ ರವರು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುವ ದಿನವನ್ನು ಶೀಘ್ರವಾಗಿ ಪ್ರಕಟಿಸಲಾಗುವುದು.

**ಅಬ್ದುಲ್ ಹಮೀದ್:**

- ಬಾಂಗ್ಲದ ರಾಜಧಾನಿ ಡಾಕಾ ದಿಂದ 100 ಕಿ.ಮೀ ಅಂತರದಲ್ಲಿರುವ “ಕಿಶೋರ್ ಗಂಜ್” ನಲ್ಲಿ 1941, ಜನರಿ 1 ರಂದು ಜನನ.
- 1959 ರಲ್ಲಿ ವಿದ್ಯಾರ್ಥಿಯಾಗಿರುವಾಗಲೇ ರಾಜಕೀಯ ಪ್ರವೇಶ.
- 1969 ರಲ್ಲಿ ಹವಾಮಿ ಪಕ್ಷ ಸೇರ್ಪಡೆ. 1971 ರಲ್ಲಿ ನಡೆದ ಬಾಂಗ್ಲ ವಿಮೋಚನಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಹಮೀದ್ ರವರಿಗೆ ಬಾಂಗ್ಲ ಸ್ವಾಂತಂತ್ರ್ಯ ಪ್ರಶಸ್ತಿಯನ್ನು ನೀಡಿಲಾಗಿದೆ.

**ನ್ಯೂಯಾರ್ಕ್ ನಲ್ಲಿ ಸಿಗರೇಟ್ ಮಾರಾಟ ವಯಸ್ಸು 21 ಕ್ಕೆ ಏರಿಕೆ**

ನ್ಯೂಯಾರ್ಕ್ ನ ಯುವ ಜನಾಂಗ ಸಿಗರೇಟ್ ನಂತಹ ಮಾದಕ ವಸ್ತುಗಳ ಚಟಕ್ಕೆ ಅತಿಯಾಗಿ ಬಲಿಯಾಗುತ್ತಿದ್ದು, ಇದಕ್ಕೆ ಕಡಿವಾಣ ಹೇರುವ ಉದ್ದೇಶದಿಂದ ಸರ್ಕಾರ ಸಿಗರೇಟ್ ಸೇವನೆ ವಯಸ್ಸಿನ ಮಿತಿಯನ್ನು ಹೆಚ್ಚಿಸಲು ಧೃಡ ನಿಶ್ಚಯ ತಳೆದಿದೆ.

- ನ್ಯೂಯಾರ್ಕ್ ನಲ್ಲಿ ಈಗಿರುವ ನಿಯಮದ ಅನ್ವಯ ಸಿಗರೇಟ್ ಸೇವನೆ ವಯಸ್ಸಿನ ಮಿತಿಯನ್ನು 18 ಕ್ಕೆ ನಿಗದಿಪಡಿಸಲಾಗಿದೆ. ಜತೆಗೆ ಸಿಗರೇಟ್ ಮೇಲೆನ ತೆರಿಗೆಯನ್ನು ಈಗಾಗಲೇ ಹೆಚ್ಚಿಸಲಾಗಿದೆ. ಇದರಿಂದಾಗಿ ಅಮೆರಿಕಾದ ಇತರೆ ನಗರಗಳಾಗಿ ಹೋಲಿಸಿದರೆ ನ್ಯೂಯಾರ್ಕ್ ನಲ್ಲಿ ಸಿಗರೇಟ್ ದರ ಅತ್ಯಂತ ಹೆಚ್ಚು.
- ಅಂಕಿ-ಅಂಶಗಳ ಪ್ರಕಾರ ನ್ಯೂಯಾರ್ಕ್ ನಗರದಲ್ಲಿ ಹತ್ತು ಯುವಕರಲ್ಲಿ ಕನಿಷ್ಟ ಎಂಟು ಜನ ಧೂಮಪಾನ ಚಟಕ್ಕೆ ಬಲಿಯಾಗುತ್ತಿದ್ದಾರೆ. ಇವರೆಲ್ಲರೂ 21 ವರ್ಷದ ತುಂಬಿರದ ಯುವಕರು ಎಂಬುದು ಗಮನಾರ್ಹ.
- ಹೊಸದಾಗಿ ಜಾರಿಗೆ ಬರಲಿರುವ ಕಾನೂನಿ ನಲ್ಲಿ ಈ ಸಿಗರೇಟ್ ಸೇವನೆ ವಯಸ್ಸಿನ ಮಿತಿಯನ್ನು 21 ಕ್ಕೆ ಏರಿಸಲಾಗಿದೆ. ಸರ್ಕಾರದ ಈ ಕ್ರಮದಿಂದ ಧೂಮಪಾನ ಚಟಕ್ಕೆ ಬಲಿಯಾಗುವ ಯುವಕರ ಸಂಖ್ಯೆ ಗಣನೀಯವಾಗಿ ತಗ್ಗಿಲಿದೆ ಎಂಬ ಆಶಾಯವನ್ನು ಹೊಂದಲಾಗಿದೆ.

**ಮೂರು ಸ್ಮಾರ್ಟ್ ಫೋನ್ ಗಳನ್ನು ಯಶಸ್ವಿಯಾಗಿ ಉಡಾಯಿಸಿದ ನಾಸಾ**

ಕಡಿಮೆ ವೆಚ್ಚದಲ್ಲಿ ಉಪಗ್ರಹಗಳನ್ನು ಬಾಹ್ಯಕಾಶಕ್ಕೆ ಉಡಾವಣೆ ಮಾಡಲು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರ ಹುಡುಕಲು ನಾಸಾ ಮೂರು ಸ್ಮಾರ್ಟ್ ಫೋನ್ ಗಳನ್ನು ಬಾಹ್ಯಕಾಶಕ್ಕೆ ಉಡಾಯಿಸಿದೆ. “ಫೋನ್ ಸ್ಯಾಟ್ (Phone sat)” ಎಂಬ ಹೆಸರಿನಡಿ ಈ ಮೂರು

ಸ್ಮಾರ್ಟ್ ಫೋನ್ ಗಳನ್ನು ವರ್ಜಿನಿಯಾದ ನಾಸಾದ ವಾಲ್ಲೋಪ್ಸ್ ಉಡ್ಡಾಯನ ಕೇಂದ್ರದಿಂದ ಅಂಟಾರೆಸ್ ರಾಕೆಟ್ ಮೂಲಕ ಉಡಾಯಿಸಲಾಗಿದೆ.

- ಗೂಗಲ್-HTC ನೆಕ್ಸಸ್ ಆಂಡ್ರಾಯ್ಡ್ ಮಾದರಿಯ ಸ್ಮಾರ್ಟ್ ಫೋನ್ ಗಳು ಭೂಮಿಯನ್ನು 150 ಮೈಲಿ ಎತ್ತರದಲ್ಲಿ ಸುತ್ತುಲಿವೆ.ಈ ಸ್ಮಾರ್ಟ್ ಫೋನ್ ಗಳನ್ನು 4 ಇಂಚಿನ ಚೌಕಕಾರದ ಪೆಟ್ಟಿಗೆಯಲ್ಲಿ ಇಟ್ಟು ಕಳುಹಿಸಲಾಗಿದೆ.
- ಭೂಮಿಯ ಚಿತ್ರಗಳನ್ನು ತೆಗೆದು, ರೇಡಿಯೋ ತರಂಗದ ಮೂಲಕ ಮಾಹಿತಿಯನ್ನು ರವಾನಿಸುವುದು ಈ ಸ್ಮಾರ್ಟ್ ಫೋನ್ ಗಳು ಮುಖ್ಯ ಕೆಲಸ.
- ಮುಂದಿನ ದಿನಗಳಲ್ಲಿ ಕಡಿಮೆ ವೆಚ್ಚದಲ್ಲಿ ಅಂದರೆ 10000 ಡಾಲರ್ ಒಳಗಡೆ ಉಪಗ್ರಹಗಳನ್ನು ನಿರ್ಮಿಸಲು ಸಾಧ್ಯವೇ ಎಂದು ತಿಳಿಯುವುದು ಈ ಯೋಜನೆಯ ಮುಖ್ಯ ಉದ್ದೇಶ. ಜತೆಗೆ ಸ್ಮಾರ್ಟ್ ಫೋನ್ ಗಳನ್ನು ಉಪಗ್ರಹಗಳ ಮಾದರಿಯಲ್ಲಿ ಬಳಸಬಹುದೇ ಎಂದು ಅಧ್ಯಯನ ನಡೆಸುವುದುದಾಗಿದೇ ಎಂದು ನಾಸಾ ವಿಜ್ಞಾನಿಗಳು ಹೇಳಿದ್ದಾರೆ.

**ಈಜಿಪ್ಟ್ ನಲ್ಲಿ ವಿಶ್ವದ ಅತಿ ಹಳೆಯ ಬಂದರು ಪತ್ತೆ**

ಫ್ರೆಂಚ್-ಈಜಿಪ್ಟ್ ನ ಪುರಾತತ್ವಶಾಸ್ತ್ರಜ್ಞನರು ಈಜಿಪ್ಟ್ ನಲ್ಲಿ ಜಂಟಿಯಾಗಿ ನಡೆಸಿರುವ ಅನ್ವೇಷಣೆಯಲ್ಲಿ ವಿಶ್ವದ ಅತಿ ಹಳೆಯ ಬಂದರನ್ನು ಪತ್ತೆಹಚ್ಚಿದ್ದಾರೆ. ಈ ಬಂದರು ಸುಮಾರು 4500 ವರ್ಷಗಳಷ್ಟು ಹಳೆಯದು ಎಂದು ಅಂದಾಜಿಸಲಾಗಿದೆ. ಕೆಂಪು ಸಮುದ್ರ ತೀರಾ ಪ್ರದೇಶದಲ್ಲಿ ಈ ಬಂದರನ್ನು ಪತ್ತೆಹಚ್ಚಲಾಗಿದ್ದು, ಇತಿಹಾಸದಲ್ಲಿ ಇದನ್ನು "ಪರೋಹ್ ಕುಫು (Pharaog Khufu)" ಎಂದು ಕರೆಯಲಾಗುತ್ತಿತ್ತು ಎನ್ನಲಾಗಿದೆ.

- ಇದೊಂದು ಪ್ರಮುಖ ವಾಣಿಜ್ಯ ಬಂದರಾಗಿದ್ದು, ತಾಮ್ರ ಮುಂತಾದ ಖನಿಜಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು ಎಂದು ಪುರಾತತ್ವಶಾಸ್ತ್ರಜ್ಞರು ತಿಳಿಸಿದ್ದಾರೆ.
- ಈ ಬಂದಿರನ ಅನ್ವೇಷಣೆಯಿಂದ ಸುಮಾರು 1000 ವರ್ಷಗಳ ಹಿಂದೆ ಇದ್ದ ಈಜಿಪ್ಟ್ ಜನರ ಜೀವನ ಶೈಲಿ ಬಗ್ಗೆ ಬೆಳಕು ಚೆಲ್ಲಲಿದೆ.
- ಇದೇ ವೇಳೆ ಪುರಾತನ ಕಾಲಕ್ಕೆ ಸೇರಿರುವ ಪಾತ್ರೆಗಳು ಪತ್ತೆಯಾಗಿದ್ದು, "ಕುಫು" ಸಂತತಿಯ ರಾಜರಿಗೆ ಸೇರಿದ್ದು ಎಂದು ಊಹಿಸಲಾಗಿದೆ.

**"ಬ್ರೂನಿ"ಯಲ್ಲಿ 22 ನೇ ASEAN ಶೃಂಗಸಭೆ**

"ಅಸೋಸಿಯೇಷನ್ ಆಫ್ ಸೌತ್ ಈಸ್ಟ್ ಏಷಿಯನ್ ನೇಷನ್ಸ್ (ASEAN)" ರಾಷ್ಟ್ರಗಳ 22 ನೇ ಶೃಂಗಸಭೆಯನ್ನು ಏಪ್ರಿಲ್ 24, 25 ರಂದು "ಬ್ರೂನಿ"ಯಲ್ಲಿ ಆಯೋಜಿಸಲಾಗಿತ್ತು. ನಾಲ್ಕನೇ ಬಾರಿಗೆ "ಬ್ರೂನಿ" ಏಷ್ಯನ್ ಶೃಂಗಸಭೆಯ ಅತಿಥ್ಯವನ್ನು ವಹಿಸಿಕೊಂಡಿದೆ. ಈ ಹಿಂದೆ ಬ್ರೂನಿಯಲ್ಲಿ 1989, 1995 ಮತ್ತು 2001 ರಲ್ಲಿ ಶೃಂಗಸಭೆಯನ್ನು ಆಯೋಜಿಸಲಾಗಿತ್ತು. 2013 ರ ಈ ಶೃಂಗಸಭೆಯ ಘೋಷವಾಕ್ಯ "Our People Our Future together". ಈ ಶೃಂಗಸಭೆಯಲ್ಲಿ ಚರ್ಚಿತವಾದ ಕೆಲವು ಪ್ರಮುಖ ವಿಷಯಗಳು ಇಲ್ಲಿವೆ.

**ದಕ್ಷಿಣ ಚೀನಾ ಸಮುದ್ರ (South China Sea):**

- ಈ ಬಾರಿಯ ಶೃಂಗಸಭೆಯಲ್ಲಿ ತೀವ್ರವಾಗಿ ಚರ್ಚೆಯಾದ ವಿಷಯವೆಂದರೆ ದಕ್ಷಿಣ ಚೀನಾ ಸಮುದ್ರದ ಮೇಲೆ ಚೀನಾ ಸಾಧಿಸುತ್ತಿರುವ ಸಾರ್ವಭೌಮತ್ವ ಅಧಿಕಾರ. ಚೀನಾದ ಈ ಧೋರಣೆಯನ್ನು ಫಿಲಿಫೈನ್ಸ್ ಮತ್ತು ವಿಯಟ್ನಾಂ ರಾಷ್ಟ್ರಗಳು ವ್ಯಾಪಕವಾಗಿ ಖಂಡಿಸಿದವು. ದಕ್ಷಿಣ ಚೀನಾ ಸಮುದ್ರದ ವಿವಾದವನ್ನು ಬಗೆಹರಿಸುವಲ್ಲಿ ಸದಸ್ಯ ರಾಷ್ಟ್ರಗಳು ವಿಫಲವಾಗಿದ್ದು, ನೀತಿ ಸಂಹಿತೆಯನ್ನು ಜಾರಿಗೊಳಿಸಿ ಎಂಬ ಕೂಗಗಳು ಸಭೆಯಲ್ಲಿ ಕೇಳಿಬಂದಿತು. ಈ ಸಮುದ್ರ ಒಡೆತನದಕ್ಕೆ ಸಂಬಂಧಿಸಿದಂತೆ ಚೀನಾ ಮತ್ತು ಇತರೆ ಏಷ್ಯನ್ ಸದಸ್ಯ ರಾಷ್ಟ್ರಗಳ ನಡುವೆ ಮೂಡಿರುವ ಬಿರುಕನ್ನು ಅಂತರರಾಷ್ಟ್ರೀಯ ಕಾನೂನು ಮೂಲಕ ಸರಿಪಡಿಸಲು ಕರೆ ನೀಡಲಾಯಿತು. ಜತೆಗೆ ಈ ಭಾಗದಲ್ಲಿ ಶಾಂತಿ ಸುವ್ಯವಸ್ಥೆ ಮತ್ತು ಕಡಲತೀರ ಭದ್ರತೆಗೆ ಹೆಚ್ಚಿನ ಒತ್ತು ನೀಡುವ ಬಗ್ಗೆ ಚರ್ಚಿಸಲಾಯಿತು.

**ಪ್ಯಾಲೆಸ್ತಿನಿಯನ್:**

- ಪ್ಯಾಲೇಸ್ತಿನಿಯನ್ ಜನರ ಸ್ವತಂತ್ರಕ್ಕಾಗಿ ಜನರು ನಡೆಸಿತ್ತಿರುವ ಹೋರಾಟ ಕಾನೂನು ಬದ್ದವಾಗಿದ್ದು, ಶಾಂತಿ ಮಾತುಕತೆಯಿಂದ ಸಮಸ್ಯೆಯನ್ನು ಬಗೆಹರಿಸಲು ಸದಸ್ಯ ರಾಷ್ಟ್ರಗಳು ಒಟ್ಟಾಗಿ ಭಾಗವಹಿಸಲು ಕರೆ ನೀಡಲಾಯಿತು.

**ಕೊರಿಯಾ ಅಣು ವಿವಾದ:**

- ಇತ್ತೀಚೆಗೆ ತೀವ್ರ ಚರ್ಚೆಗೆ ಗ್ರಾಸವಾಗಿ ವಿಶ್ವದ ಗಮನ ಸೆಳೆದಿರುವ ಕೊರಿಯಾ ಪ್ರಾಂತ್ಯದಲ್ಲಿನ ಅಣು ಚಟುವಟಿಕೆ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ವಿಶ್ವಸಂಸ್ಥೆಯ ನಿರ್ಣಯದ ನಡುವೆಯೂ ಕೊರಿಯಾ ಪ್ರಾಂತ್ಯದಲ್ಲಿ ಅಣು ಚಟುವಟಿಕೆಯಿಂದ ಶಾಂತಿ ಕದಡಿದ್ದು, ಈ ಪ್ರಾಂತ್ಯದಲ್ಲಿ ಶಾಂತಿ ನೆಲೆಸುವಂತೆ ಮಾಡಲು ನಿಶಸ್ತ್ರಕರಣ ಏಕೈಕ ಮಾರ್ಗವಾಗಿದ್ದು, ಏಷ್ಯನ್ ಸದಸ್ಯ ರಾಷ್ಟ್ರಗಳು ಈ ಕುರಿತು ಮುಂದಾಳತ್ವ ವಹಿಸಲು ಸಿದ್ದವಿರುವುದಾಗಿ ಹೇಳಲಾಯಿತು.

**ASEAN ಶೃಂಗಸಭೆ ಬಗ್ಗೆ:**

- ASEAN ಸದಸ್ಯ ರಾಷ್ಟ್ರಗಳು ಈ ಶೃಂಗಸಭೆಯನ್ನು ವಾರ್ಷಿಕವಾಗಿ ಆಯೋಜಿಸುತ್ತವೆ. ಸದಸ್ಯ ರಾಷ್ಟ್ರಗಳ ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿ ಸೇರಿದಂತೆ ಇತರೆ ಪ್ರಮುಖ ವಿಷಯಗಳ ಬಗ್ಗೆ ಶೃಂಗಸಭೆಯಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳಲಾಗುವುದು.
- ಇಲ್ಲಿಯವರೆಗೆ ಒಟ್ಟು 21 ಶೃಂಗಸಭೆಗಳನ್ನು ಆಯೋಜಿಸಲಾಗಿದೆ. 2013, ಏಪ್ರಿಲ್ 24,25 ರಂದು "ಬ್ರೂನಿ"ಯ ದರುಸಲೇಂ ನಲ್ಲಿ ನಡೆದದ್ದು 22 ನೇ ಶೃಂಗಸಭೆ. ಇದು ಸೇರಿ ಒಟ್ಟು ನಾಲ್ಕು ಬಾರಿ ಶೃಂಗಸಭೆಯ ಅತಿಥ್ಯವನ್ನು "ಬ್ರೂನಿ" ವಹಿಸಿದೆ.
- ಮೊದಲ ಶೃಂಗಸಭೆಯನ್ನು 1976, ಫೆಬ್ರವರಿ 23-24 ರಂದು ಇಂಡೋನೇಷಿಯಾದ ಬಾಲಿಯಲ್ಲಿ ನಡೆಸಲಾಗಿತ್ತು. 2012 ನವೆಂಬರ್ 18 ರಿಂದ 20 ರವರೆಗೆ ನಡೆದ 21 ನೇ ಶೃಂಗಸಭೆಯ ಅತಿಥ್ಯವನ್ನು "ಕಾಂಬೋಡಿಯಾ" ವಹಿಸಿಕೊಂಡಿತ್ತು.

**ASEAN ಸದಸ್ಯ ರಾಷ್ಟ್ರಗಳು:**

- "ಆಗ್ನೇಯ ಏಷ್ಯಾದ" ಹತ್ತು ರಾಷ್ಟ್ರಗಳ ಒಕ್ಕೂಟವೇ ASEAN.
- ಆಗಸ್ಟ್ 8, 1967 ರಲ್ಲಿ ಸ್ಥಾಪಿಸಲಾಗಿರುವ ಈ ಒಕ್ಕೂಟದ ಕೇಂದ್ರ ಕಚೇರಿ ಇಂಡೋನೇಷಿಯಾದಲ್ಲಿದೆ.

- ಬ್ರೂನಿ. ಕಾಂಬೋಡಿಯಾ, ಇಂಡೋನೇಷಿಯಾ, ಲಾವೋಸ್, ಮಲೇಷಿಯಾ, ಮಯನ್ಮಾರ್, ಫಿಲಿಫೈನ್ಸ್, ಸಿಂಗಾಪುರ್, ಥಾಯ್ಲೆಂಡ್ ಮತ್ತು ವಿಯಟ್ನಂ ಇದರ ಸದಸ್ಯ ರಾಷ್ಟ್ರಗಳು. **ಭಾರತ ASEAN ನ ಸದಸ್ಯ ರಾಷ್ಟ್ರವಲ್ಲ**.
- ASEAN ಈಗಿನ ಸೆಕ್ರಟರಿ ಜನರಲ್: "ಲೆ ಲುಯಾಂಗ್ ಮಿನ್ (Le Luong Minh)"
- "One Vision, One Identity, One Community" ಇದು ಏಷ್ಯನ್ ನ ಧ್ಯೇಯ ವಾಕ್ಯ.

ಕರುನಾಡು ಎಗ್ಸಾಮ್ಸ್

## ವಿಜ್ಞಾನ-ತಂತ್ರಜ್ಞಾನ

**ಅತಿಯಾದ ಕ್ಯಾಲ್ಸಿಯಂ ಸೇವನೆ ಹೃದಯಕ್ಕೆ ಬೇನೆ**

ಅತಿಯಾಗಿ ಕ್ಯಾಲ್ಸಿಯಂ ಮಾತ್ರೆಗಳನ್ನು ಸೇವಿಸುತ್ತಿದ್ದರೆ ಜೋಕೆ. ಹೊಸ ಸಂಶೋಧನೆಯೊಂದರ ಪ್ರಕಾರ ಕ್ಯಾಲ್ಸಿಯಂನ್ನು ಅತಿಯಾಗಿ ಸೇವಿಸುವುದರಿಂದ ಹೃದಯಾಘಾತ ಆಗುವ ಸಂಭವ ಹೆಚ್ಚು. ಆಗಂತ ಕ್ಯಾಲ್ಸಿಯಂ ಮಾತ್ರೆಗಳನ್ನು ಸೇವಿಸದಿರಿ ಎಂದು ಅರ್ಥವಲ್ಲ, ಅನಗತ್ಯವಾಗಿ ಸೇವಿಸುತ್ತಿದ್ದರೆ ಪ್ರಾಣಕ್ಕೆ ಕಂಟಕ ಖಚಿತ.

- ಅಮೆರಿಕಾದ ನ್ಯಾಷನಲ್ ಇನ್ ಸ್ಟಿಟ್ಯೂಟ್ ಆಫ್ ಹೆಲ್ತ್ ನಡೆಸಿರುವ ಸಂಶೋಧನೆಯಲ್ಲಿ ಈ ಅಂಶ ಬೆಳಕಿಗೆ ಬಂದಿದೆ. 50 ರಿಂದ 71 ವಯಸ್ಸಿನ ಸುಮಾರು 4 ಲಕ್ಷ ಜನರನ್ನು ಈ ಸಂಶೋಧನೆಗೆ ಒಳಪಡಿಸಲಾಗಿದೆ. 12 ವರ್ಷಗಳ ಕಾಲ ನಡೆಸಿದ ಈ ಅಧ್ಯಯನದಲ್ಲಿ ಯಾರು ಪ್ರತಿ ದಿನ 1000 ಮಿ.ಗ್ರಾಂ ಕ್ಯಾಲ್ಸಿಯಂ ನ್ನು ಸೇವಿಸುವರೋ, ಅವರಲ್ಲಿ ಶೇ.20 ರಷ್ಟು ಹೃದಯಾಘಾತ ಪ್ರಕರಣಗಳು ಹೆಚ್ಚಾಗಿ ಕಂಡುಬಂದಿವೆ ಎಂದು ಅಮೆರಿಕನ್ ಮೆಡಿಕಲ್ ಅಸೋಸಿಯೇಷನ್ ಜರ್ನಲ್ ನಲ್ಲಿ ಪ್ರಕಟಿಸಲಾಗಿದೆ..
- 2010 ರಲ್ಲಿ ನ್ಯೂಜಿಲ್ಯಾಂಡ್ ನ ಸಂಶೋಧನ ತಂಡವೊಂದು ಸಹ ಅತಿಯಾದ ಕ್ಯಾಲ್ಸಿಯಂ ಸೇವನೆಯಿಂದ ಹೃದಯಕ್ಕೆ ಸಂಬಂಧಿಸಿದ ಕಾಯಿಲೆಗಳಿಗೆ ಆಹ್ವಾನ ನೀಡಲಿದೆ ಎಂದು ಹೇಳಿತ್ತು.
- ಸಂಶೋದನೆಯ ಪ್ರಕಾರ ನಾವು ತೆಗೆದುಕೊಳ್ಳುವ ಕ್ಯಾಲ್ಸಿಯಂ ನ ಶೇ.99 ರಷ್ಟು ಪ್ರಮಾಣ ಮೂಳೆಗಳು ಹೀರಿಕೊಳ್ಳುತ್ತವೆ. ಅಗತ್ಯಕ್ಕಿಂತ ಹೆಚ್ಚಾಗಿ ಕ್ಯಾಲ್ಸಿಯಂ ನ್ನು ಸೇವಿಸಿದಾಗ ಹೃದಯದ ಸ್ನಾಯುಗಳಲ್ಲೂ ಕ್ಯಾಲ್ಸಿಯಂ ಶೇಖರಣೆಗೊಳ್ಳುತ್ತದೆ ಆದ್ದರಿಂದ ಹೃದಯಾಘಾತ ಪ್ರಕರಣಗಳು ಹೆಚ್ಚು.

ಕ್ಯಾಲ್ಸಿಯಂ:

- ಮಾನವನ ದೇಹಕ್ಕೆ ಕ್ಯಾಲ್ಸಿಯಂ ಅತಿ ಪ್ರಮುಖವಾದದ್ದು. ದೇಹದ ಮೂಳೆಗಳ ಬೆಳವಣಿಗೆ, ಸ್ನಾಯುಗಳು ಸರಿಯಾಗಿ ಕೆಲಸ ನಿರ್ವಹಿಸಲು ಮತ್ತು ನರವ್ಯೂಹಗಳು ತಮ್ಮ ಕೆಲಸವನ್ನು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಕ್ಯಾಲ್ಸಿಯಂ ಸೇವನೆ ಅಗತ್ಯವಾದದ್ದು.
- ಭಾರತದಲ್ಲಿ ಸಾಮಾನ್ಯವಾಗಿ ಗ್ರಾಮೀಣ ಭಾಗದ ಮಹಿಳೆಯರು ಕ್ಯಾಲ್ಸಿಯಂ ಕೊರತೆಯಿಂದ ಹೆಚ್ಚಾಗಿ ಬಳಲುತ್ತಿದ್ದಾರೆ. ಸಣ್ಣ ವಯಸ್ಸಿನಲ್ಲೇ ಋತುಮತಿಯಾಗುವುದು, ವಯಸ್ಸಿಗೆ ಬರುವ ಮುನ್ನವೇ ಮದುವೆ ಮಾಡುವುದು ಇದಕ್ಕೆ ಪ್ರಮುಖ ಕಾರಣ.

ಆಸ್ಟಿಯೊಪೊರೋಸಿಸ್ (Osteoporosis):

- ಆಸ್ಟಿಯೊಪೊರೋಸಿಸ್ ಅಥವಾ ಅಸ್ಥಿರಂಧ್ರತೆ ಮೂಳೆಗೆ ಸಂಬಂಧಿಸಿದ ರೋಗ. ಈ ರೋಗ ಭಾದಿತರಲ್ಲಿ ಮೂಳೆ ಮುರಿಯುವುದು ಅಥವಾ ಬಿರುಕು ಉಂಟಾಗುವುದು ಹೆಚ್ಚಾಗಿ ಕಂಡುಬರುತ್ತದೆ. ಆಸ್ಟಿಯೊಪೊರೋಸಿಸ್ ನಲ್ಲಿ ಮೂಳೆಯ ಖನಿಜಾಂಶಗಳ ಸಾಂದ್ರತೆ (Bone Mineral Density (BMD)) ಕ್ಷೀಣಗೊಂಡು, ಮೂಳೆಯ ಸೂಕ್ಷ್ಮ ರಚನೆಯಲ್ಲಿ ಬಿರುಕು ಕಾಣಿಸಿಕೊಳ್ಳುತ್ತದೆ ಹಾಗೂ ಮೂಳೆಯಲ್ಲಿ ಕೊಲಾಜನ್ ಮತ್ತು ಪ್ರೋಟೀನ್ ಪ್ರಮಾಣದಲ್ಲಿ ವ್ಯತ್ಯಾಸ ಕಾಣುತ್ತದೆ. ಮೂಳೆಯ ಖನಿಜಾಂಶಗಳ ಪ್ರಮಾಣ 2.5 ರಷ್ಟು ಕಡಿಮೆ ಇದ್ದರೆ ಅಂತಹ ಸ್ಥಿತಿಯನ್ನು ಅಸ್ಥಿ ರಂಧ್ರತೆ ಎನ್ನಲಾಗುತ್ತದೆ.

- ಆಸ್ಟಿಯೊಪೊರೋಸಿಸ್ ಎರಡು ಹಂತಗಳಲ್ಲಿ ಕಂಡು ಬರುತ್ತದೆ. ರೋಗದ ಸ್ವರೂಪದ ಮೇಲೆ ಟೈಪ್-1 ಮತ್ತು ಟೈಪ್-2 ಆಸ್ಟಿಯೊಪೊರೋಸಿಸ್ ಎನ್ನಲಾಗುವುದು.
- ಟೈಪ್-1 ಆಸ್ಟಿಯೊಪೊರೋಸಿಸ್ ಮಹಿಳೆಯರಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಋತುಬಂಧ ದಾಟಿದ ಮಹಿಳೆಯರಲ್ಲಿ ಕಂಡು ಬರುವ ಇದನ್ನು "ಪೋಸ್ಟ್ ಮೆನೋಪಾಸ್ ಆಸ್ಟಿಯೊಪೊರೋಸಿಸ್" ಎಂತಲೂ ಕರೆಯುತ್ತಾರೆ. ಇದು ಪುರಷರಲ್ಲಿಯೂ ಸಹ ಕಂಡು ಬರಬಹುದು. ಕೆಲವು ನಿರ್ದಿಷ್ಟ ಹಾರ್ಮೋನ್ ಗಳ ವ್ಯತ್ಯಯದಿಂದಾಗಿ ಮತ್ತು ಇತರೆ ತೀವ್ರ ಸ್ವರೂಪದ ರೋಗಗಳು ಮತ್ತು ಔಷಧಿಗಳಿಂದ ಈ ರೋಗವು ಯಾರಿಗೆ ಬೇಕಾದರು ಬರಬಹುದು.
- ಟೈಪ್- ಆಸ್ಟಿಯೊಪೊರೋಸಿಸ್ ಸಾಮಾನ್ಯವಾಗಿ ವಯಸ್ಸಾದವರಲ್ಲಿ ಕಂಡು ಬರುತ್ತದೆ. ಮಹಿಳೆ ಮತ್ತು ಪುರುಷರು ಇಬ್ಬರಲ್ಲೂ 2:1 ಪ್ರಮಾಣದಲ್ಲಿ ಕಂಡು ಬರುತ್ತದೆ.

ರೋಗ ತಡೆಯುವಿಕೆ:

- ಜೀವನ ಶೈಲಿ ಬದಲಾವಣೆ ಮಾಡಿಕೊಳ್ಳುವುದರಿಂದ ಮತ್ತು ಸರಿಯಾದ ಔಷಧ ಸೇವನೆಯಿಂದ ರೋಗವನ್ನು ತಡೆಯಬಹುದಾಗಿದೆ. ಜೀವನ ಶೈಲಿಯಲ್ಲಿ ಬದಲಾವಣೆಯೆಂದರೆ ಸರಿಯಾದ ವ್ಯಾಯಾಮ ಮಾಡುವುದು.
- ಔಷಧಿಗಳೆಂದರೆ ವಿಟಮಿನ್ ಡಿ ಸೇವನೆ, ಕ್ಯಾಲ್ಸಿಯಂ ಸೇವನೆ, ಬಿಸ್ ಫಾಸ್ಪೋನೇಟ್ ಹಾಗೂ ಇನ್ನಿತರ ಔಷಧಿಗಳು ಸೇರಿವೆ

**ಏಪ್ರಿಲ್ 2- ವಿಶ್ವ ಆಟಿಸಂ (Autism) ದಿನ**

ವಿಶ್ವ ಆಟಿಸಂ ದಿನವನ್ನು ಪ್ರತಿವರ್ಷ ಏಪ್ರಿಲ್ 2 ರಂದು ಆಚರಿಸಲಾಗುವುದು. "ಆಟಿಸಂ" ಕಾಯಿಲೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ವಿಶ್ವಸಂಸ್ಥೆ 2008 ರಿಂದ ಏಪ್ರಿಲ್ 2 ನ್ನು ವಿಶ್ವ ಆಟಿಸಂ ದಿನವೆಂದು ಘೋಷಿಸಿದೆ. ವಿಶ್ವದಲ್ಲೆಡೆ ಈ ದಿನದಂದು "ಆಟಿಸಂ" ಕಾಯಿಲೆಯ ಬಗ್ಗೆ ಸಮರ್ಪಕ ಅರಿವು ನೀಡುವ ಸಲುವಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

"ಆಟಿಸಂ":

- ಆಟಿಸಂ ಒಂದು ನರವ್ಯೂಹ ಸಂಬಂಧಿ ಕಾಯಿಲೆ. ಈ ರೋಗ ಪೀಡಿತ ವ್ಯಕ್ತಿಯ ನರವ್ಯೂಹ ಬೆಳವಣಿಗೆಯೂ ಕುಂಠಿತಗೊಳ್ಳುವುದರಿಂದ ವ್ಯಕ್ತಿಯು ತನ್ನ ಸಾಮಾಜಿಕ ಸಂವಹನ ಮತ್ತು ಸಂಪರ್ಕ ಕ್ರಿಯೆಯಿಂದ ದಿನೇ ದಿನೇ ವಂಚಿತನಾಗುವನು. ಮಗು ಮೂರನೇ ವರ್ಷದಲ್ಲಿರುವಾಗಲೇ ಈ ಕಾಯಿಲೆಯ ಲಕ್ಷಣಗಳು ಗೋಚರಿಸುತ್ತವೆ.

ಆಟಿಸಂ ಲಕ್ಷಣಗಳು:

- ಇತರರೊಡನೆ ಸಾಮಾಜಿಕವಾಗಿ ಬೆರೆಯುವುದಿಲ್ಲ.
- ಮಂಕಾಗಿರುವುದು ಮತ್ತು ಮಾತನಾಡಲು ತೊದಲುವುದು.
- ಯಾವುದೇ ಚಟುವಟಿಕೆಗಳಲ್ಲಿ ಆಸಕ್ತಿ ಇಲ್ಲದಿರುವುದು.

**ಮೊಬೈಲ್ ಫೋನ್ ಗೆ 40 ವರ್ಷ**

ಆಧುನಿಕ ಯುಗದ ಜನರ ಜೀವನಾಡಿಯಾಗಿರುವ ಮೊಬೈಲ್ ಫೋನ್ ಗೆ 40 ನೇ ಹುಟ್ಟುಹಬ್ಬದ ಸಂಭ್ರಮ. ಏಪ್ರಿಲ್ 3, 1973 ರಂದು ವಿಶ್ವದ ಮೊದಲ ಮೊಬೈಲ್ ನ್ನು ಆಮೆರಿಕಾದ ಮೋಟೊರೋಲಾ ಕಂಪನಿ ಜಗತ್ತಿಗೆ ಪರಿಚಯಿಸಿತ್ತು.

- ಮೋಟೊರೊಲ್ ಸಂಸ್ಥೆಯ "ಮೊಬೈಲ್ ಸಂಪರ್ಕ ತಂತ್ರಜ್ಞಾನ" ತಂಡದ ಮುಖ್ಯಸ್ಥರಾಗಿದ್ದ ಎಂಜನಿಯರ್ "ಮಾರ್ಟಿನ್ ಕೂಪರ್ (Martin Cooper)" ರವರು ಜಗತ್ತಿನ ಮೊದಲ ಮೊಬೈಲ್ ನ ಜನಕ.
- ಕೂಪರ್ ರವರು ಸಿದ್ದಪಡಿಸಿದ ಮೋಟೊರೋಲಾ ಡೈನಾ TC ಮಾದರಿಯ ಮೊಬೈಲ್ ನ ತೂಕ 1 ಕೆ.ಜಿ (2.2 ಫೌಂಡ್ಸ್) ಮತ್ತು ಬ್ಯಾಟರಿ ಕಾರ್ಯನಿರ್ವಹಿಸುತ್ತಿದ್ದ ಸಮಯ ಕೇವಲ 20 ನಿಮಿಷ.
- ಕೂಪರ್ ರವರ ಈ ಐತಿಹಾಸಿಕ ಸಾಧನೆಗೆ 40 ವರ್ಷಗಳು ಸಂದಿರುವ ಕಾರಣ ಈ ವರ್ಷದ ಪ್ರಾರಂಭದಲ್ಲಿ ಕೂಪರ್ ಮತ್ತು ಅವರ ತಂಡಕ್ಕೆ ನ್ಯಾಷನಲ್ ಅಕಾಡೆಮಿ ಆಫ್ ಎಂಜನಿಯರಿಂಗ್ ಸಂಸ್ಥೆ "ಡ್ರೆಪರ್" ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

**ವಿಶ್ವದ ಅತ್ಯಂತ ಹಗುರ ವಸ್ತುವನ್ನು ಸಂಶೋಧಿಸಿರುವ ವಿಜ್ಞಾನಿಗಳು**

ಚೇನಾದ ಝೇಜಿಯಾಂಗ್ (Zheziang) ವಿಶ್ವವಿದ್ಯಾಲಯದ ವಿಜ್ಞಾನಿಗಳು ವಿಶ್ವದ ಅತಿ ಹಗುರ ವಸ್ತುವನ್ನು ರಚಿಸಿರುವುದಾಗಿ ಹೇಳಿದ್ದಾರೆ. "ಕಾರ್ಬನ್ ಏರೋಜೆಲ್ (Carbon Aerogel)" ಎಂಬ ಹೆಸರಿನ ಈ ವಸ್ತು ಗಾಳಿಯ ಸಾಂದ್ರತೆಯಲ್ಲಿ 1/6 ರಷ್ಟು ಸಾಂದ್ರತೆಯನ್ನು ಹೊಂದಿದೆ. ಪ್ರೋಫೆಸರ್ "ಗಾ ಚೋ" (Gao Chao) ನೇತೃತ್ವದ ತಂಡ ಇದನ್ನು ಅಭಿವೃದ್ಧಿಪಡಿಸಿದೆ.

- ಇದುವರೆಗೂ ಜರ್ಮನ್ ವಿಜ್ಞಾನಿಗಳು ಸಂಶೋಧಿಸಿದ್ದ "ಗ್ರಾಫೈಟ್ ಏರೋಜೆಲ್ (Graphite Aerogel)" ವಿಶ್ವದ ಅತ್ಯಂತ ಹಗುರ ವಸ್ತು ಎಂದು ದಾಖಲಾಗಿತ್ತು. "ಗ್ರಾಫೈಟ್ ಏರೋಜೆಲ್" ನ ಸಾಂದ್ರತೆ 0.18mg/cubic centimeter. ಆದರೆ "ಕಾರ್ಬನ್ ಏರೋಜೆಲ್" ನ ಸಾಂದ್ರತೆ 0.16mg/cubic centimeter. ಏರೋ ಜೆಲ್ ಒಂದು ಅರೆ ಘನ ವಸ್ತುವಾಗಿದ್ದು, ಅದರಲ್ಲಿರುವ ದ್ರಾವಣವನ್ನು ತೆಗೆದು ಒಣಗಿಸಿಲಾಗಿರುತ್ತದೆ. ಘನ ಪದಾರ್ಥದಂತೆ ಕಂಡು ಬಂದರು ಅದರ ಒಳ ಭಾಗ ಅನಿಲದಿಂದ ತುಂಬಿರುವ ಕಾರಣ ಹಗುರವೆನಿಸುವುದು.

ಕಾರ್ಬನ್ ಏರೋಜೆಲ್:

- ಕಾರ್ಬನ್ ಸ್ಪಾಂಜ್ ನಂತೆ ಕಾಣುವ ಕಾರ್ಬನ್ ಏರೋಜೆಲ್ ಉತ್ತಮ ಸ್ಥಿತಿಸ್ಥಾಪಕ (Elascticity) ಗುಣವನ್ನು ಹೊಂದಿದೆ. ಬಲವನ್ನು ಹಿಂತೆಗೆದರೆ ತನ್ನ ಮೊದಲ ಸ್ಥಿತಿಗೆ ಮರಳಲಿದೆ.
- ಕಾರ್ಬನ್ ಏರೋಜೆಲ್ ಒಂದು ಉತ್ತಮ ತೈಲ ಹೀರಿಕೊಳ್ಳುವ ವಸ್ತುವಾಗಿದ್ದು, ಭವಿಷ್ಯದಲ್ಲಿ ನೀರು ಮತ್ತು ಅನಿಲ ಶುದ್ದೀಕರಣ ಸೇರಿದಂತೆ ಸಮುದ್ರಗಳಲ್ಲಿ ತೈಲ ಸೋರಿಕೆ ಉಂಟಾಗುವ ಮಾಲಿನ್ಯವನ್ನು ತಡೆಯುವಲ್ಲಿ ಪ್ರಮುಖ ಪಾತ್ರವಹಿಸಲಿದೆ. ವಿಜ್ಞಾನಿಗಳ ಪ್ರಕಾರ ಸದ್ಯ ತೈಲ ಹೀರಿಕೆಗೆ ಬಳಸುವ ವಸ್ತುಗಳು ಅವುಗಳ ತೂಕದ ಹತ್ತು ಪಟ್ಟು ತೈಲವನ್ನು ಹೀರಿಕೊಳ್ಳುವ ಸಾಮರ್ಥ್ಯವನ್ನು ಹೊಂದಿವೆ. ಆದರೆ ಕಾರ್ಬನ್ ಏರೋಜೆಲ್ 900 ಪಟ್ಟು ಹೆಚ್ಚು ತೈಲವನ್ನು ಹೀರಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಅಲ್ಲದೇ ಇದು ಶಬ್ದವನ್ನು ಹೀರಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ.

**ವಿಶ್ವದ ಅತಿ ಚಿಕ್ಕ "ಅಂಟೇನಾ" ಅಭಿವೃದ್ಧಿಪಡಿಸಿರುವ ಭಾರತದ ವಿಜ್ಞಾನಿಗಳು**

ವಿಶ್ವದ ಅತಿ ಚಿಕ್ಕ ಅಂಟೇನಾವನ್ನು ಭಾರತೀಯ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. "ಸೂಪರ್ ಕಂಪಾಕ್ಟ್ ಅಲ್ಟ್ರಾ ವೈಡ್ ಬ್ಯಾಂಡ್ ಪ್ಲಾನರ್ (Super Compact Ultra Wideband Planar) ಅಂಟೇನಾವನ್ನು ಪ್ರೊಫೆಸರ್ ಶ್ರೀಕಾಂತ್ ಪಾಲ್ ನೇತೃತ್ವದ ತಂಡ ಅಭಿವೃದ್ಧಿಪಡಿಸಿದೆ. ಶ್ರೀಕಾಂತ್ ಪಾಲ್ ರವರು ಬಿರ್ಲಾ ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ" ಯಲ್ಲಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

- ಈ ಅಂಟೇನಾವು ವಿಶ್ವದಲ್ಲಿ ಇದುವರೆಗೂ ಅಭಿವೃದ್ಧಿಪಡಿಸಿರುವ ಅಂಟೇನಾಗಳಲ್ಲೇ ಅತ್ಯಂತ ಚಿಕ್ಕದಾಗಿದೆ. ಇದರ ಗಾತ್ರ 14 mm X 11 mm ಮತ್ತು ಬ್ಯಾಂಡ್ ವಿಡ್ತ್ 10:1 ಆಗಿದೆ.
- ಅಲ್ಟ್ರಾ ವೈಡ್ ಬ್ಯಾಂಡ್ (UWB) ತಂತ್ರಜ್ಞಾನ ಹೊಂದಿರುವ ಕಾರಣ ವೈರ್ ಲೆಸ್ ಸಂಪರ್ಕದಲ್ಲಿ ಪ್ರಮುಖ ಪಾತ್ರವಹಿಸಲಿದೆ.
- ಗೃಹ ಮತ್ತು ಮಿಲಿಟರಿ ಕ್ಷೇತ್ರಗಳಲ್ಲಿ ಬಳಸಬಹುದಾದ "ಅಂಟೇನಾ" ಇದಾಗಿದ್ದು, Reinforced ಪ್ಲಾಸ್ಟಿಕ್ ನಿಂದ ತಯಾರಿಸಲಾಗಿದೆ. ಆಗಾಗಿ ಇದಕ್ಕೆ ತಗಲುವ ವೆಚ್ಚ ಸಹ ಕಡಿಮೆ.

**ಕನ್ಯಾ ನಕ್ಷತ್ರಪುಂಜದಲ್ಲಿ ದೈತ್ಯ ನಕ್ಷತ್ರ ಪತ್ತೆ ಹಚ್ಚಿರುವ ಭಾರತ ವಿಜ್ಞಾನಿ**

ಭಾರತೀಯ ವಿಜ್ಞಾನಿ ಡಾ.ಆನಂದ ಹೋಟಾ ಮತ್ತು ಅವರ ತೈವಾನ್ ನ ಸಹೋದ್ಯೋಗಿಗಳು, ಆಕಾಶಗಂಗೆಗೂ ಅಧಿಕ ದೂರದಲ್ಲಿ ಬೃಹದಾಕಾರದ ನಕ್ಷತ್ರವೊಂದು ಜನ್ಮತಾಳಿರುವುದಾಗಿ ಪತ್ತೆಹಚ್ಚಿದ್ದಾರೆ. ಕನ್ಯಾ (Virgo) ನಕ್ಷತ್ರಪುಂಜದಲ್ಲಿ ಈ ದೈತ್ಯ ನಕ್ಷತ್ರ (Giant Star) ಪತ್ತೆಯಾಗಿದೆ.

- ಸುಮಾರು 550 ಲಕ್ಷವರ್ಷಗಳ ಹಿಂದೆ, ತೀವ್ರ ಬಿಸಿ ಪ್ಲಾಸ್ಮಾ ಹಾಗೂ ಅಧಿಕ ವೇಗವಾಗಿ ಸಾಗುವ ಸುಳಿ ಗಾಳಿಯ ಮಧ್ಯೆ ಈ ನಕ್ಷತ್ರ ಜನ್ಮತಾಳಿದೆ.
- ಈ ನಕ್ಷತ್ರವನ್ನು ಪತ್ತೆಹಚ್ಚುವ ಸಲುವಾಗಿ ವಿಜ್ಞಾನಿಗಳ ತಂಡವು ಸುಬಾರು ದೂರದರ್ಶಕ (Subaru Telescope), ನಾಸಾದ GALEX (Galaxy Evolution Explorer) ಹಾಗೂ ಕೆನಡಾ-ಹವಾಯಿ ದೂರದರ್ಶಕಗಳನ್ನು ಬಳಸಿಕೊಂಡಿದ್ದಾರೆ.
- ಈ ಮಹತ್ವವಾದ ಬೆಳವಣಿಗೆಯಿಂದ ತಾರೆಗಳು ಹುಟ್ಟುವ ಹೊಸ ವಿಧಾನವನ್ನು ಬಗ್ಗೆ ಇನ್ನಷ್ಟು ತಿಳಿಯಲು ಅನುಕೂಲವಾಗಲಿದೆ ಎಂಬುದು ವಿಜ್ಞಾನಿಗಳ ಅಭಿಪ್ರಾಯ.

**ಸಸ್ಯಗಳಿಂದಲೂ ಬೆಳೆಯಬಹುದು ಚಿನ್ನ: ಸಂಶೋಧನೆ**

ಬಡವರಿಗೆ ಗಗನ ಕುಸುಮವಾಗಿರುವ ಚಿನ್ನವನ್ನು ಗಿಡಗಳಲ್ಲೂ ಬೆಳೆಯಬಹುದು ಎಂದು ವಿಜ್ಞಾನಿಗಳು ತೋರಿಸಿಕೊಟ್ಟಿದ್ದಾರೆ. ಇದರ ಅರ್ಥ ಸಸ್ಯಗಳು ಚಿನ್ನವನ್ನು ಉತ್ಪಾದಿಸುತ್ತವೆ ಎಂದಲ್ಲ, ಆದರೆ ಭೂಮಿಯಲ್ಲಿನ ಚಿನ್ನದ ಲೋಹವನ್ನು ಸಸ್ಯಗಳ ಮೂಲಕ ಹೊರತೆಗೆಯುವುದಾಗಿದೆ. ಈ ವಿಧಾನಕ್ಕೆ ವಿಜ್ಞಾನಿಗಳು ಇಟ್ಟಿರುವ ಹೆಸರು "ಫೈಟೊಮೈನಿಂಗ್ (Phytomining)".

ಏನಿದು ಫೈಟೊಮೈನಿಂಗ್?

- ಕೆಲವು ವರ್ಗದ ಸಸ್ಯಗಳು ತಮ್ಮ ಬೇರುಗಳ ಮೂಲಕ ಭೂಮಿಯಲ್ಲಿರುವ ನಿಕ್ಕಲ್, ಸತು ಮತ್ತು ಕ್ಯಾಡ್ಮಿಯಂ ನಂತಹ ಲೋಹಗಳನ್ನು ಸ್ವಾಭಾವಿಕವಾಗಿ ಹೀರಿಕೊಳ್ಳುತ್ತವೆ. ಹಲವು ವರ್ಷಗಳ ಹಿಂದೆಯೇ ಇಂತಹ ಸಸ್ಯಗಳನ್ನು ಅನ್ವೇಷಿಸಲಾಗಿತ್ತು. ಅತಿಸಂಗ್ರಾಹಕ (Hyper accumulator) ಎಂದು ಕರೆಯಲಾಗುವ ಈ ಸಸ್ಯಗಳು ಮಾಲಿನ್ಯ ತಡೆಗಟ್ಟುವಿಕೆಯಲ್ಲೂ ಸಹಕಾರಿಯಾಗಲಿವೆ ಎಂದು ತಿಳಿಯಲಾಗಿತ್ತು.
- ಆದರೆ ಚಿನ್ನವನ್ನು ಹೀರಿಕೊಂಡು ಅಂಗಾಂಶಗಳಲ್ಲಿ ಶೇಖರಿಸಿಡುವ ಸಸ್ಯಗಳು ಇದುವರೆಗೂ ಕಂಡುಬಂದಿರಲಿಲ್ಲ. ಏಕೆಂದರೆ ಚಿನ್ನವು ನೀರಿನಲ್ಲಿ ಸುಲಭವಾಗಿ ಕರಗುವುದಿಲ್ಲ ಆಗಾಗಿ ಸಸ್ಯಗಳು ಚಿನ್ನವನ್ನು ಬೇರಿನ ಮೂಲಕ ಹೀರಿಕೊಳ್ಳಲು ಸಾಧ್ಯವಾಗುತ್ತಿರಲ್ಲಿಲ್ಲ. ಆದರೆ ಈ ಸಮಸ್ಯೆಗೆ ವಿಜ್ಞಾನಿಗಳು ಪರಿಹಾರವನ್ನು ಕಂಡುಹಿಡಿದಿದ್ದಾರೆ.

**ಹೊಸ ವಿಧಾನ ಹೇಗೆ?**

- ಚಿನ್ನವು ನೀರಿನಲ್ಲಿ ಕರಗುವುದಿಲ್ಲ ನಿಜ, ಒಂದು ವೇಳೆ ನೀರಿನಲ್ಲಿ ಕರಗುವಂತೆ ಮಾಡಿದರೆ. ಹೌದು, ಕೆಲವು ನಿರ್ದಿಷ್ಟ ರಾಸಾಯನಿಕಗಳನ್ನು ಚಿನ್ನವಿರುವ ಭೂಮಿಗೆ ಹಾಕಿದಾಗ ಚಿನ್ನ ಕರಗುತ್ತದೆ. ಸಾಸಿವೆ, ಹೊಗೆಸೊಪ್ಪು ಮತ್ತು ಸೂರ್ಯಕಾಂತಿಯಂತಹ ದೊಡ್ಡ ಗಾತ್ರದ ಎಲೆಗಳನ್ನು ಮತ್ತು ಬಹು ಬೇಗ ಬೆಳೆಯುವ ಗಿಡಗಳನ್ನು ನೆಟ್ಟ ನಂತರ ಚಿನ್ನವನ್ನು ಕರಗಿಸಬಲ್ಲ ರಾಸಾಯನಿಕವನ್ನು ಭೂಮಿಗೆ ಹಾಕಲಾಗುತ್ತದೆ. ಚಿನ್ನ ರಾಸಾಯನಿಕದೊಂದಿಗೆ ಬೆರೆತು ನೀರಿನಲ್ಲಿ ಕರಗಿದಾಗ ಸಸ್ಯಗಳು ಆ ನೀರನ್ನು ಹೀರಿಕೊಳ್ಳುತ್ತದೆ. ಆಗ ಚಿನ್ನ ಸಸ್ಯದ ಅಂಗಾಂಶಗಳಲ್ಲಿ ಸಂಗ್ರಹವಾಗುತ್ತದೆ.
- ಈಗೇ ಸಂಗ್ರಹ ಮಾಡಿಕೊಂಡಿರುವವ ಗಿಡಗಳನ್ನು ಕಟಾವು ಮಾಡಿ, ಅವುಗಳನ್ನು ಸುಟ್ಟಾಗ ಸ್ವಲ್ಪ ಮಟ್ಟಿಗೆ ಚಿನ್ನವನ್ನು ಬೇರ್ಪಡಿಸಬಹುದು, ಇನ್ನು ಸ್ವಲ್ಪ ನಾಶವಾಗುತ್ತದೆ. ಆದರೆ ಇದು ಸುಲಭ ವಿಧಾನವೇನಲ್ಲ ಎನ್ನುತ್ತಾರೆ ವಿಜ್ಞಾನಿಗಳು.

**ಇರುವೆಗಳು ಭೂಕಂಪನವನ್ನು ಮುಂಚಿತವಾಗಿ ಗ್ರಹಿಸುತ್ತವೆ: ಸಂಶೋಧನೆ**

ಭೂಕಂಪ ಸಂಭವಿಸುವುದನ್ನು ಒಂದು ದಿನ ಮುಂಚಿತವಾಗಿಯೇ ಇರುವೆಗಳು ಗ್ರಹಿಸುತ್ತವೆ ಎಂಬ ಅಂಶ ಸಂಶೋಧನೆಯಿಂದ ತಿಳಿದು ಬಂದಿದೆ. ಜರ್ಮನಿಯ ಡುಯಿಸ್ ಬರ್ಗ್-ಎಸ್ಸೆನ್ ವಿಶ್ವವಿದ್ಯಾಲಯದ ಗೇಬ್ರಿಯನ್ ಬೆರ್ಬೆರಿಚ್ ನೇತೃತ್ವದ ಸಂಶೋಧನಾ ತಂಡ ಈ ಅಧ್ಯಯನ ನಡೆಸಿದೆ.

- ವಿಜ್ಞಾನಿಗಳು ಹೇಳಿರುವಂತೆ ಇರುವೆಗಳು ಭೂಕಂಪನದ ವೇಳೆ ಬಿರುಕು ಬಿಡುವ ಸ್ಥಳವನ್ನು ಗುರುತಿಸಿ ಅಲ್ಲೇ ತಮ್ಮ ಗೂಡನ್ನು ಕಟ್ಟುತ್ತವೆ. ಇಂತಹ ಸುಮಾರು 15000 ಗೂಡಗಳನ್ನು ಬಿರುಕು ಬಿಡುವ ಸ್ಥಳದಲ್ಲಿಯೇ ಪತ್ತೆಹಚ್ಚಲಾಗಿದೆ.
- ಭೂಕಂಪನಕ್ಕಿಂತ ಮುಂಚಿತ ದಿನ ಇರುವೆಗಳು ತಮ್ಮ ವರ್ತನೆಯನ್ನು ಸಂಪೂರ್ಣವಾಗಿ ಬದಲಾಯಿಸಿಕೊಳ್ಳುತ್ತವೆ ಎಂಬ ಅಂಶ ಅಧ್ಯಯನ ತಂಡ ಬಳಸಿರುವ ವಿಶೇಷ ಕ್ಯಾಮರೆಗಳಿಂದ ತಿಳಿದು ಬಂದಿದೆ. 2009 ರಿಂದ 2012 ರ ವರೆಗೆ ಕೈಗೊಂಡಿರುವ ಈ ಸಂಶೋಧನೆಯಲ್ಲಿ ತಿಳಿದು ಬಂದಿರುವ ಮತ್ತೊಂದು ಪ್ರಮುಖ ಅಂಶವೆಂದರೆ, ಭೂಕಂಪನದ ತೀವ್ರತೆ 2.0 ಕ್ಕಿಂತ ಮೇಲಿದ್ದರೆ ಮಾತ್ರ ಇರುವೆಗಳು ಭೂಕಂಪನವನ್ನು ಗ್ರಹಿಸುತ್ತವೆ.

- ಸಾಮಾನ್ಯವಾಗಿ ಇರುವೆಗಳು ದಿನವಿಡಿ ಆಹಾರ ಸಂಗ್ರಹಿಸಿ ರಾತ್ರಿ ವೇಳೆ ಗೂಡಿನಲ್ಲಿ ವಿಶ್ರಾಂತಿ ಪಡೆಯುತ್ತವೆ. ಆದರೆ ಗೇಬ್ರಿಯನ್ ರವರ ತಂಡದ ಪ್ರಕಾರ ಭೂಕಂಪದ ಮುನ್ನ ದಿನ ಇರುವೆಗಳು ವಿಶ್ರಾಂತಿ ಪಡೆಯದೇ ಗೂಡಿನ ಹೊರಭಾಗದಲ್ಲೇ ಓಡಾಡುತ್ತಿರುತ್ತವೆ.

**ಇರುವೆಗಳು ಗ್ರಹಿಸಲು ಕಾರಣವಾದರು ಏನು?**

- ಅಧ್ಯಯನದ ಪ್ರಕಾರ ಭೂಕಂಪನದ ವೇಳೆ ಹೊರ ಬರುವ ಅನಿಲವನ್ನು ಅಥವಾ ಭೂಮಿಯ ಅಯಸ್ಕಾಂತದಲ್ಲಾಗುವ ಬದಲಾವಣೆಯನ್ನು ಇರುವೆಗಳು ಸೂಕ್ಷ್ಮವಾಗಿ ಗ್ರಹಿಸುತ್ತವೆ.
- ಕೆಂಪು ಇರುವೆಗಳು "ಕಿಮೊರಿಸಿಪ್ಟರ್ಸ್ (Chemoreceptors) ಮತ್ತು ಮ್ಯಾಗ್ನೆಟೊರಿಸಿಪ್ಟರ್ಸ್ (Magnetoreceptors)" ಎನ್ನುವ ವಿಶೇಷ ಜೀವಕೋಶಗಳನ್ನು ಹೊಂದಿವೆ. "ಕಿಮೊರಿಸಿಪ್ಟರ್ಸ್" ಜೀವಕೋಶಗಳು ಇಂಗಾಲದ ಆಮ್ಲದಲ್ಲಾಗುವ ಬದಲಾವಣೆಯನ್ನು ಗುರುತಿಸಲು ಸಹಕರಿಸಿದರೆ," ಮ್ಯಾಗ್ನೆಟೊರಿಸಿಪ್ಟರ್ಸ್" ಜೀವಕೋಶಗಳು ಭೂಮಿಯ ಅಯಸ್ಕಾಂತೀಯ ಗುಣದಲ್ಲಾಗುವ ಬದಲಾವಣೆಯನ್ನು ಗ್ರಹಿಸಲು ಸಹಾಯ ಮಾಡುತ್ತವೆ.

**ಪಿಗ್-26 ರೋಗ ನಿರೋಧಕ ಹಂದಿ ಮರಿ**

ಯು.ಕೆ ಮೂಲದ ವಿಜ್ಞಾನಿಗಳು ರೋಗ ನಿರೋಧಕ ಹಂದಿ ಮರಿಯನ್ನು ಅಭಿವೃದ್ಧಿಪಡಿಸಿರುವುದಾಗಿ ಹೇಳಿದ್ದಾರೆ. "ಪಿಗ್-26 (Pig 26)" ಎಂದು ಹೆಸರಿಡಲಾಗಿರುವ ಈ ಹಂದಿ ಮರಿಯನ್ನು ಸರಳ ತಂತ್ರಜ್ಞಾನದ ಮೂಲಕ ಸೃಷ್ಟಿಸಲಾಗಿದೆ. "ಎಡಿನ್ ಬರ್ಗ್ ರೊಸ್ಲಿನ್ ಇನ್ ಸ್ಟಿಟ್ಯೂಟ್"ನ ತಜ್ಞರು ಪಿಗ್-26 ನ್ನು ಸೃಷ್ಟಿಸಿದ್ದು, 1996 ರಲ್ಲಿ ಪ್ರಪಂಚದ ಮೊದಲ ಕ್ಲೋನಿಂಗ್ ಕುರಿ "ಡಾಲಿ"ಯನ್ನು ಇದೇ ಸಂಸ್ಥೆಯಲ್ಲಿ ಅಭಿವೃದ್ಧಿಪಡಿಸಲಾಗಿತ್ತು.

- "ಜೀನ್ ಎಡಿಟಿಂಗ್ (Gene Editing)" ಎಂಬ ತಂತ್ರಜ್ಞಾನದಿಂದ ಈ ಹಂದಿಯನ್ನು ಅಭಿವೃದ್ಧಿಪಡಿಸಲಾಗಿದ್ದು, ಕುಲಾಂತರಿ ಮಾಂಸ (Genetically Modified Meat) ತಯಾರಿಕೆಗೆ ಇದು ನಾಂದಿ ಹಾಡಲಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.
- "ಪಿಗ್-26" ಜೀನ್ ಎಡಿಟಿಂಗ್ ತಂತ್ರಜ್ಞಾನದ ಮೂಲಕ ಅಭಿವೃದ್ಧಿಪಡಿಸಿರುವ ವಿಶ್ವದ ಮೊದಲ ಪ್ರಾಣಿ.
- ಮಾರಣಾಂತಿಕ ರೋಗ "ಆಫ್ರಿಕಾದ ಹಂದಿ ಜ್ವರ" ಕ್ಕೆ ಈ ಹಂದಿ ತಳಿಯು ಅಧಿಕ ರೋಗ ನಿರೋಧಶಕ್ತಿಯನ್ನು ಹೊಂದಿದೆ.

**ಏಪ್ರಿಲ್ 17: ವಿಶ್ವ ಹಿಮೋಫಿಲಿಯಾ ದಿನ**

ಪ್ರತಿ ವರ್ಷ ಏಪ್ರಿಲ್ 17 ರಂದು ವಿಶ್ವ ಹಿಮೋಫಿಲಿಯಾ ದಿನವನ್ನು ಆಚರಿಸಲಾಗುತ್ತದೆ. ಹಿಮೋಫಿಲಿಯಾ ರೋಗ ಕುರಿತಾಗಿ ಅರಿವು ಮೂಡಿಸಲು ಈ ದಿನದಂದು ವಿಶ್ವದಾದ್ಯಂತ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಹಿಮೋಫಿಲಿಯಾ ಬಗ್ಗೆ:

- ಹಿಮೋಫಿಲಿಯಾ ಒಂದು ಅನುವಂಶೀಯ ಕಾಯಿಲೆ. ರಕ್ತ ಸ್ರಾವವಾಗುವಾಗ ಹೆಪ್ಪುಗಟ್ಟದೇ ಇರುವುದು ಈ ಕಾಯಿಲೆಯ ಮುಖ್ಯ ಲಕ್ಷಣ.
- ಹಿಮೋಲಿಫಿಯಾ ಹೆಚ್ಚಾಗಿ ಮಹಿಳೆಯರಿಗಿಂತ ಪುರುಷರಲ್ಲಿ ಕಂಡು ಬರುತ್ತದೆ.

- ಈ ಅನುವಂಶೀಯ ಕಾಯಿಲೆಗೆ ಕಾರಣವಾಗುವ "ಜೀನ್" ತಂದೆ ಅಥವಾ ತಾಯಿಯಿಂದ ಹೆಣ್ಣು ಮಕ್ಕಳಿಗೆ ರವಾನೆಯಾಗುತ್ತದೆ. ಆದರೆ ಈ ಕಾಯಿಲೆ ಅವರಲ್ಲಿ ಕಂಡು ಬರುವುದಿಲ್ಲ, ಬದಲಿಗೆ ಅವರ ಮಗನಲ್ಲಿ ಕಾಣಿಸಿಕೊಳ್ಳುತ್ತದೆ.
- ಹಿಮೋಫಿಲಿಯಾವನ್ನು ಹಿಮೋಫಿಲಿಯಾ ಎ ಮತ್ತು ಹಿಮೋಫಿಲಿಯಾ ಬಿ ಎಂದು ವಿಂಗಡಿಸಲಾಗಿದೆ. ಹಿಮೋಫಿಲಾಯ ಎ ಯನ್ನು "ವಾನ್ ವಿಲ್ ಬ್ರಾಂಡ್ ಡಿಸೀಸ್ (Von Willebrand Disease)" ಎಂತಲೂ ಕರೆಯಲಾಗುತ್ತದೆ. ಈ ಬಗೆಯ ಹಿಮೋಫಿಲಿಯಾ 10000 ಕ್ಕೆ ಒಬ್ಬರಲ್ಲಿ ಕಂಡುಬರುತ್ತದೆ.
- ಹಿಮೋಫಿಲಿಯಾ ವಾಸಿಯಾಗದ ಕಾಯಿಲೆ ನಿಜ ಆದರೆ ಸೂಕ್ತ ಚಿಕಿತ್ಸೆಯಿಂದ ಈ ಕಾಯಿಲೆಯನ್ನು ನಿಯಂತ್ರಣದಲ್ಲಿಡಬಹುದು.
- "50 Years of Advancing Treatment for All" ಇದು 2013 ಹಿಮೋಫಿಲಿಯಾ ದಿನದ ಥೀಮ್.

**<u>ಭೂಮಿಯನ್ನು ಹೋಲುವ ಎರಡು ಹೊಸ ಗ್ರಹಗಳನ್ನು ಪತ್ತೆ ಹೆಚ್ಚಿರುವ ನಾಸಾ ವಿಜ್ಞಾನಿಗಳು</u>**

ಅಮೆರಿಕಾದ ಬಾಹ್ಯಕಾಶ ಸಂಸ್ಥೆ ನಾಸಾ (National Aeronautic and Science Administration) ದ ವಿಜ್ಞಾನಿಗಳ ತಂಡ ಭೂಮಿಯನ್ನು ಹೋಲುವ ಎರಡು ಹೊಸ ಗ್ರಹಗಳನ್ನು ಪತ್ತೆಹಚ್ಚಿದ್ದಾರೆ. ಭೂಮಿಯಂತೆಯೇ ಇರುವ ಈ ಗ್ರಹಗಳು ಮನುಷ್ಯನ ವಾಸಕ್ಕೆ ಯೋಗ್ಯವಾಗಿವೆ ಎಂದು ಊಹಿಸಲಾಗಿದೆ.

- ಭೂಮಿಯಿಂದ 1,200 ಜ್ಯೋತಿರ್ವರ್ಷಗಳಷ್ಟು ದೂರವಿರುವ ಈ ಗ್ರಹಗಳು, ಕೆಪ್ಲರ್-62 ಎಂಬ ನಕ್ಷತ್ರದ ಸುತ್ತ ಸುತ್ತುತ್ತಿವೆ.
- ನಾಸಾದ ಕೆಪ್ಲರ್ ದೂರದರ್ಶಕದ ಸಹಾಯದಿಂದ ಪತ್ತೆಹಚ್ಚಲಾಗಿರುವ ಈ ಗ್ರಹಗಳಿಗೆ **<u>ಕೆಪ್ಲರ್-62f ಮತ್ತು ಕೆಪ್ಲರ್-62e</u>** ಎಂದು ಹೆಸರಿಡಲಾಗಿದೆ.
- ಕೆಪ್ಲರ್-62f ಗ್ರಹವು ಭೂಮಿಯ ಗಾತ್ರಗಿಂತ 1.4 ಪಟ್ಟು ದೊಡ್ಡದಾಗಿದ್ದು, ನಕ್ಷತ್ರವನ್ನು ಪ್ರದಕ್ಷಿಣೆಯನ್ನು ಹಾಕಲು 267 ದಿನಗಳ ಸಮಯವನ್ನು ತೆಗೆದುಕೊಳ್ಳುತ್ತದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.
- ಕೆಪ್ಲರ್-62e ಗ್ರಹವು ಭೂಮಿಗಿಂತ 1.6 ಪಟ್ಟು ದೊಡ್ಡದಾಗಿದೆ. ಇದರ ಪರಿಭ್ರಮಣಾ ಅವಧಿ 122 ದಿನಗಳು.
- ಕೆಪ್ಲರ್ ಮಿಷನ್ ನ 'ವಿಲಿಯಂ ಬೊರೊಕಿ' ನೇತೃತ್ವದ ಎಮ್ಸ್ ಸಂಶೋಧನಾ ಕೇಂದ್ರದ ವಿಜ್ಞಾನುಗಳ ತಂಡ ಈ ಗ್ರಹಗಳನ್ನು ಪತ್ತೆಹಚ್ಚಿದೆ.

**<u>"ಟಮಿ ಫ್ಲೂ" ತಯಾರಿಕೆಗೆ ಹೊಸ ವಿಧಾನ: ಸಂಶೋಧನಾ ತಂಡದಲ್ಲಿ ಭಾರತೀಯ</u>**

ಹಕ್ಕಿ ಜ್ವರ ಮತ್ತು ಹಂದಿ ಜ್ವರ ವಿರುದ್ಧ ಚಿಕಿತ್ಸೆಗೆ ಬಳಸುತ್ತಿರುವ "ಟಮಿ ಫ್ಲೂ" ಲಸಿಕೆಯನ್ನು ಸುಲಭವಾಗಿ ತಯಾರಿಸುವ ವಿಧಾನವನ್ನು ಕಂಡುಹಿಡಿಯುವಲ್ಲಿ ಜಪಾನ್ ಸಂಶೋಧಕರ ತಂಡ ಯಶಸ್ವಿಯಾಗಿದೆ. ವಿಶೇಷವೆಂದರೆ ಈ ತಂಡದಲ್ಲಿ ಭಾರತೀಯ ವಿದ್ಯಾರ್ಥಿಯೊಬ್ಬರು ಭಾಗವಹಿಸಿರುವುದು. "ಕಲಿಯಾ ಮೂರ್ತಿ ಅಲಗಿರಿ" ಈ ಸಂಶೋಧನಾ ತಂಡದಲ್ಲಿರುವ ಭಾರತೀಯ.

ತಮಿಳುನಾಡಿನ ನಾಗಪಟ್ಟಣಂ ಜಿಲ್ಲೆಯ ರೈತನ ಮಗನಾಗಿರುವ ಅಲಗಿರಿ ರವರು ಜಪಾನ್ ನ ಸಂಶೋಧಕ "ಮಸಕಸ್ತು ಶಿಬಾಸಕಿ" ರವರ ಮಾರ್ಗದರ್ಶನದಡಿ ಸಂಶೋಧನೆ ಮಾಡುತ್ತಿದ್ದಾರೆ.

**"ಟಮಿ ಫ್ಲೂ":**

- ಹಕ್ಕಿ ಜ್ವರ ಮತ್ತು ಹಂದಿ ಜ್ವರ ಚಿಕಿತ್ಸೆಗೆ ಸದ್ಯ ಲಭ್ಯವಿರುವ ಏಕೈಕ ಲಸಿಕೆಯೆಂದರೇ "ಒಸೆಲ್ಟಮಿವಿರ್ (Oseltamivir)", ಇದನ್ನು "ಟಮಿ ಫ್ಲೂ" ಹೆಸರಿನಡಿ ಮಾರಾಟಮಾಡಲಾಗುತ್ತಿದೆ.
- ಸ್ವಿಸ್ ಮೂಲದ ಕಂಪನಿ "ರಾಂಚೆ" ಟಮಿ ಫ್ಲೂ ವನ್ನು ತಯಾರಿಸುತ್ತಿರುವ ಏಕೈಕ ಕಂಪನಿ. 2009 ರಲ್ಲಿ ಈ ಔಷಧದ ಪೇಟೆಂಟ್ ಪಡೆದ ಈ ಕಂಪನಿ, 2010 ರಲ್ಲಿ ಸುಮಾರು ಜಾಗತಿಕ ಮಟ್ಟದಲ್ಲಿ ಈ ಲಸಿಕೆಯನ್ನು ಸರಬರಾಜು ಮಾಡುವ ಮೂಲಕ 2 ಬಿಲಿಯನ್ ಡಾಲರ್ ವಹಿವಾಟು ನಡೆಸಿತ್ತು.
- "ರಾಂಚೆ" ಎರಡು ವಿಧಾನಗಳಲ್ಲಿ ಟಮಿ ಫ್ಲೂ ವನ್ನು ತಯಾರಿಸುತ್ತಿದೆ. ಮೊದಲನೇ ವಿಧಾನದಲ್ಲಿ **ಚೀನಾದಲ್ಲಿ ಅತಿ ಹೆಚ್ಚಾಗಿ ಕಂಡುಬರುವ "Spice Star Anise" ಎಂಬ ಗಿಡಮೂಲಿಕೆಯಿಂದ ದೊರೆಯುವ "Shikimic Acid" ನ್ನು ಬಳಸಿ ತಯಾರಿಸಿದರೇ**, ಎರಡನೇ ವಿಧಾನದಲ್ಲಿ ಬಯೋಫರ್ಮಂಟೇಶನ್" ವಿಧಾನದಿಂದ ತಯಾರಿಸಲಾಗುತ್ತಿದೆ. ಆದರೆ ಈ ವಿಧಾನಗಳು ದುಬಾರಿ ಮತ್ತು ದೀರ್ಘ ಸಮಯ ತೆಗೆದುಕೊಳ್ಳುತ್ತಿದ್ದ ಕಾರಣ "ಟಮಿ ಫ್ಲೂ" ಲಸಿಕೆ ಸಹ ದುಬಾರಿ ಎನಿಸಿತ್ತು.

ಹೊಸ ವಿಧಾನ ಹೇಗೆ:

- ಜಪಾನ್ ಸಂಶೋಧನಾ ತಂಡ ಅನ್ವೇಷಿಸಿರುವ ಹೊಸ ವಿಧಾನದಲ್ಲಿ ನೈಸರ್ಗಿಕವಾಗಿ ದೊರೆಯುವ "**L-ಗ್ಲೂಟಮಿಕ್ ಆಸಿಡ್ (L-Glutamic Acid)" ನ್ನು** ಬಳಸಿಕೊಂಡು ತಯಾರಿಸಲಾಗಿದೆ. ಟಮಿ ಫ್ಲೂ ನಷ್ಟೇ ಈ ಲಸಿಕೆ ಪರಿಣಾಮಕಾರಿಯಾಗಿದೆ.
- ಅಲಗಿರಿ ರವರು ಹೇಳುವಂತೆ ಈ ವಿಧಾನ ಅಗ್ಗವಾಗಿದ್ದು, ಕಡಿಮೆ ಅವಧಿಯಲ್ಲಿ ತಯಾರಿಸಬಹುದು. ಈ ಹೊಸ ವಿಧಾನ ಔಷಧಿ ಕ್ಷೇತ್ರಕ್ಕೆ ದಿಗ್ಭ್ರಮೆ ಉಂಟುಮಾಡಲಿದೆ.

**ಬ್ಯಾಕ್ಟೀರಿಯಾದಿಂದ ಡಿಸೇಲ್ ಉತ್ಪಾದನೆ: ವಿಜ್ಞಾನಿಗಳ ಸಾಧನೆ**

ದಿನೇ ದಿನೇ ಏರುತ್ತಿರುವ ಡಿಸೇಲ್ ಬೆಲೆಯಿಂದ ಕಂಗೆಟ್ಟಿರುವವರಿಗೆ ಸಿಹಿ ಸುದ್ದಿ. ಬ್ಯಾಕ್ಟೀರಿಯಾದಿಂದ ಡಿಸೇಲ್ ಉತ್ಪಾದಿಸುವ ತಂತ್ರಜ್ಞಾನವನ್ನು ಕಂಡುಹಿಡಿಯುವಲ್ಲಿ ಎಕ್ಸಟರ್ ವಿಶ್ವವಿದ್ಯಾಲಯದ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. ಶೆಲ್ ಕಂಪನಿ ಈ ಸಂಶೋಧನೆಗೆ ಧನ ಸಹಾಯ ಮಾಡಿದೆ. ಸದ್ಯಕ್ಕೆ ಪ್ರಯೋಗಾಲಯ ಮಟ್ಟದಲ್ಲಿ ಡಿಸೇಲ್ ನ್ನು ಬ್ಯಾಕ್ಟೀರಿಯಾದಿಂದ ಉತ್ಪಾದಿಸಲಾಗಿದ್ದು, ಮುಂದಿನ ದಿನಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಲು ಚಿಂತನೆ ಮಾಡಲಾಗಿದೆ ಎಂದಿದ್ದಾರೆ.

- E-Coli ಬ್ಯಾಕ್ಟೀರಿಯಾದಿಂದ ಉತ್ಪಾದಿಸಲಾಗಿರುವ ಈ ಡಿಸೇಲ್, ಸಾಂಪ್ರಾದಾಯಿಕ ಡಿಸೇಲ್ ನಂತಯೇ ಇರುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ.

- ಸಸ್ಯಗಳಿಂದ ತಯಾರಿಸಲಾಗುವ ಬಯೋ ಡಿಸೇಲ್ ಗೆ ಪೆಟ್ರೋಲಿಯಂ ಉತ್ಪನ್ನಗಳ ಮಿಶ್ರಣ ಅಗತ್ಯ. ಆದರೆ ಬ್ಯಾಕ್ಟೀರಿಯಾ ದಿಂದ ತಯಾರಿಸಲಾಗಿರುವ ಈ ಡಿಸೇಲ್ ಗೆ ಯಾವುದೇ ಮಿಶ್ರಣದ ಅಗತ್ಯವಿಲ್ಲ.
- ವಿಶೇಷವೆಂದರೆ ಈ ಡಿಸೇಲ್ ನ್ನು ಈಗ ಚಾಲ್ತಿಯಲ್ಲಿರುವ ಎಂಜಿನ್ ವ್ಯವಸ್ಥೆಯಲ್ಲಿಯೇ ಬಳಸಬಹುದು. ಇದಕ್ಕೆ ಪರ್ಯಾಯ ಎಂಜಿನ್ ಅಳವಡಿಕೆ ಅಥವಾ ಎಂಜಿನ್ ಮತ್ತು ಎಂಜಿನ್ ಭಾಗಗಳ ಬದಲಾವಣೆಯ ಅವಶ್ಯಕತೆ ಇಲ್ಲ.
- ಈ ಪರ್ಯಾಯ ಡಿಸೇಲ್ ಕಾರ್ಬನ್ ಮುಕ್ತವಾಗಿದ್ದು, ಹಸಿರು ಮನೆ ಪರಿಣಾಮ ಸೃಷ್ಟಿಸುವ ಹೊಗೆಯನ್ನು ಹೊರಹಾಕುವುದಿಲ್ಲ ಎಂಬುದು ಸಂಶೋಧಕರ ಹೇಳಿಕೆ.

ತಯಾರಿಕೆ ವಿಧಾನ:

- E-Coli ಬ್ಯಾಕ್ಟೀರಿಯಾಗಳು ತಮ್ಮ ಕೋಶ ಪೊರೆಯನ್ನು ಬೆಳೆಸಿಕೊಳ್ಳುವ ಸಲುವಾಗಿ ಸಕ್ಕರೆಯನ್ನು ಕೊಬ್ಬಾಗಿ ಪರಿವರ್ತಿಸುತ್ತವೆ. ಇದೊಂದು ಸ್ವಾಭಾವಿಕ ಕ್ರಿಯೆಯಾಗಿದೆ. ಇದೇ ವಿಧಾನವನ್ನು ಕೃತಕ ಇಂಧನ ತಯಾರಿಕೆಗೆ ಬಳಸಿಕೊಳ್ಳಲಾಗಿದೆ. ಈಗಾಗಲೇ ಔಷಧಿ ವಲಯ ಮತ್ತಿತ್ತರ ಉದ್ಯಮಗಳಲ್ಲಿ E-Coli ಬ್ಯಾಕ್ಟೀರಿಯಾವನ್ನು ದೊಡ್ಡ ಪ್ರಮಾಣದಲ್ಲಿ ಬಳಕೆ ಮಾಡಲಾಗುತ್ತಿದೆ. ಸದ್ಯಕ್ಕೆ ಪ್ರಯೋಗಾಲಯಕ್ಕೆ ಸೀಮಿತವಾಗಿರುವ ಡಿಸೇಲ್ ಉತ್ಪಾದನೆಯನ್ನು, ದೊಡ್ಡ ಪ್ರಮಾಣದಲ್ಲಿ ತಯಾರಿಸುವುದಾಗಿ ವಿಜ್ಞಾನಿಗಳು ಹೇಳಿದ್ದಾರೆ.

**ದ್ರಾಕ್ಷಿ ಸೇವಸಿ, ಆರೋಗ್ಯವಾಗಿರಿ: ಸಂಶೋಧನೆ**

ದ್ರಾಕ್ಷಿ ಹುಳಿ, ಆದರೇನು ದ್ರಾಕ್ಷಿ ಸೇವನೆ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂದು ಸಂಶೋಧನೆಯಿಂದ ತಿಳಿದು ಬಂದಿದೆ. ಚಯಾಪಚಯ ಕ್ರಿಯೆಯಲ್ಲಿ ಉಂಟಾಗುವ ವ್ಯತ್ಯಾಸದಿಂದ (Metabolic Syndrome) ಸಂಭವಿಸಬಹುದಾದ ವಿವಿಧ ಅಂಗಗಳ ವೈಫಲ್ಯತೆಯನ್ನು ದ್ರಾಕ್ಷಿ ಸೇವನೆಯಿಂದ ದೂರವಿಡಬಹುದು ಎಂದು "ಮಿಚಿಗನ್ ವಿಶ್ವವಿದ್ಯಾಲಯ"ದ ಸಂಶೋಧನ ತಂಡ ಹೇಳಿದೆ.

- ಮಿಚಿಗನ್ ವಿವಿ ಯ ಸಂಶೋಧಕ "ಮಿಚೆಲ್ ಸಿಮೊರ್" ರವರ ನೇತೃತ್ವದ ತಂಡ ಪ್ರಾಣಿಗಳ ಮೇಲೆ ನಡೆಸಿದ ಸಂಶೋಧನೆಯಿಂದ ದ್ರಾಕ್ಷಿ ಹಣ್ಣಿನ ಸೇವನೆ ಕೊಬ್ಬಿನ್ನು ಕರಗಿಸಲು ಬಹಳ ಸಹಕಾರಿಯಾಗಿದೆ ಎಂಬ ಅಂಶ ಬೆಳಕಿಗೆ ಬಂದಿದೆ.
- ೯೦ ದಿನಗಳ ಕಾಲ ನಡೆಸಲಾದ ಈ ಸಂಶೋಧನೆಯಲ್ಲಿ ದ್ರಾಕ್ಷಿ ಪುಡಿ ಒಳಗೊಂಡ ಮತ್ತು ಒಳಗೊಂಡಿರದ ಆಹಾರವನ್ನು ಪ್ರಾಣಿಗಳಿಗೆ ನೀಡಲಾಯಿತು. ದ್ರಾಕ್ಷಿ ಪುಡಿಯನ್ನು ಆಹಾರವಾಗಿ ಸೇವಿಸಿದ್ದ ಪ್ರಾಣಿಗಳ ಹೃದಯ, ಕಿಡ್ನಿ ಮತ್ತು ಯಕೃತ್ ನಲ್ಲಿ ಕೊಬ್ಬಿನ ಅಂಶ ಗಣನೀಯವಾಗಿ ಕಡಿಮೆಯಾಗಿದೆ.
- ದ್ರಾಕ್ಷಿಯಲ್ಲಿರುವ **"ಪಾಲಿಫಿನಾಲ್ (Pholyphenol)"** ಎಂಬ ರಾಸಾಯನಿಕ ಅಂಶ ದೇಹದ ಕೊಬ್ಬನ್ನು ಕರಗಿಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಲಿದೆ ಎಂದು ಸಂಶೋಧಕರು ಮಂಡಿಸಿದ್ದಾರೆ. ಹಣ್ಣುಗಳ ಸೇವನೆ ದೇಹದ ಆರೋಗ್ಯಕ್ಕೆ ಒಳ್ಳೆಯದು ಎಂದು ಈಗಾಗಲೇ ತಿಳಿದಿದೆ ಆದರೆ ದ್ರಾಕ್ಷಿ ಹಣ್ಣಿನ ಸೇವನೆ ದೇಹದ ಸ್ಥಿತಿಯನ್ನು ಸಹಜ ಸ್ಥಿತಿಯಲ್ಲಿ ಇಡಲು ಸಹಕಾರಿ ಎಂಬುದು ಸಂಶೋಧಕರ ಅಭಿಪ್ರಾಯ.

"ಮೆಟಬಾಲಿಕ್ ಸಿಂಡ್ರೋಮ್":

- ಚಯಾಪಚಯ ಕ್ರಿಯೆಯಲ್ಲಿ ವ್ಯತ್ಯಾಸ ಉಂಟಾದಾಗ ದೇಹದ ಪ್ರಮುಖ ಅಂಗಗಳಾದ ಹೃದಯ, ಕಿಡ್ನಿ ಮತ್ತು ಯಕೃತ್ ನಲ್ಲಿ ಕೊಬ್ಬಿನ ಅಂಶ ಅಧಿಕವಾಗಿ ಶೇಖರಣೆಯಾಗುತ್ತದೆ. ಈ ಅನಗತ್ಯ ಕೊಬ್ಬು ಹೃದಯ ಸಂಬಂಧಿ ಕಾಯಿಲೆಗಳು, ಅಧಿಕ ರಕ್ತದೊತ್ತಡ ಮುಂತಾದ ಸಂಕೀರ್ಣ ರೋಗಗಳಿಗೆ ದಾರಿ ಮಾಡಿಕೊಡುತ್ತದೆ. ಜತೆಗೆ ವಿವಿಧ ಅಂಗಗಳ ವೈಫಲ್ಯತೆಗೂ ನಾಂದಿಯಾಗುತ್ತದೆ.

**ಪ್ರಕಾಶಮಾನವಾದ "ಧೂಮಕೇತು ISON": ಕಿರು ಮಾಹಿತಿ**

ಸೌರಮಂಡಲದಲ್ಲಿ ಇದುವರೆಗೂ ಪತ್ತೆಯಾಗಿರಾದ ಅತ್ಯಂತ ಪ್ರಕಾಶಮಾನದ ಧೂಮಕೇತು ಇದೇ ನವೆಂಬರ್ 28 ರಂದು ಸೂರ್ಯನ ಸಮೀಪ ಹಾದು ಹೋಗಲಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಧೂಮಕೇತು "ಐಎಸ್ಒಎನ್ (Comet ISON)" ಎಂದು ಹೆಸರಡಿಲಾಗಿರುವ ಈ ಧೂಮಕೇತುವಿನ ಚಲನವಲನಗಳನ್ನು ಹಬ್ಬಲ್ ದೂರದರ್ಶಕದ ಮೂಲಕ ನಾಸಾ ವಿಜ್ಞಾನಿಗಳ ತಂಡ ಅಧ್ಯಯನ ನಡೆಸುತ್ತಿದೆ.

**ಧೂಮಕೇತು ISON ಬಗ್ಗೆ**:

- `"ವಿಟಲಿ ನೆವಸ್ಕಿ" ಮತ್ತು "ಅರ್ಟೆಮ್ ನೊವಿಚೊನಕ್" ವಿಜ್ಞಾನಿಗಳ ತಂಡ ಸೆಪ್ಟೆಂಬರ್ 21, 2012 ರಂದು ಈ ಧೂಮಕೇತುವನ್ನು ರಷ್ಯಾದ "ಇಂಟರ್ ನ್ಯಾಷನಲ್ ಸೈಂಟಿಫಿಕ್ ಆಪ್ಟಿಕಲ್ ನೆಟವರ್ಕ್ (ISON)" ಮೂಲಕ ಪತ್ತೆಹಚ್ಚಿತ್ತು. ಆಗಾಗಿ ಇದಕ್ಕೆ ISON ಧೂಮಕೇತು ಎಂದು ಹೆಸರಿಡಲಾಗಿದೆ.
- "ಧೂಮಕೇತು ISON" ಈ ಶತಮಾನದ ಅತ್ಯಂತ ಪ್ರಕಾಶಮಾನವಾದ ಧೂಮಕೇತು ಎಂದು ಹೇಳಲಾಗಿದ್ದು, ಹಗಲಿನ ವೇಳೆಯಲ್ಲೂ ಇದನ್ನು ಕಾಣಬಹುದಾಗಿದೆ.
- ನವೆಂಬರ್ 28, 2013 ರಂದು ಈ ಧೂಮಕೇತು ಸೂರ್ಯನಿಂದ ಸುಮಾರು 1.17 ಮಿಲಿಯನ್ ಕಿ.ಮೀ ದೂರದಲ್ಲಿ ಈ ಹಾದುಹೋಗಲಿದೆ. ಸೂರ್ಯನ ಸಮೀಪ ಬಂದಾಗ ಇದರಲ್ಲಿರುವ ಮಂಜುಗಡ್ಡೆ ಕರಗುವುದರಿಂದ ಇದು ಅತ್ಯಂತ ಪ್ರಕಾಶಮಾನವಾಗಿ ಹೊಳೆಯಲಿದೆ. ನವೆಂಬರ್ ನಿಂದ ಜನವರಿ 14 ರ ವರೆಗೆ ಇದನ್ನು ಬರೀ ಕಣ್ಣಿನಿಂದ ನೋಡಬಹುದು. ಆಗ ಇದರ ಪ್ರಕಾಶಮಾನ ಹುಣ್ಣಿಮೆ ಚಂದ್ರನನ್ನು ಮೀರಿಸುವಂತೆ ಇರಲಿದೆ.
- ಜನವರಿ 14 ಅಥವಾ 15 ರಂದು ಭೂಮಿಯು ಈ ಧೂಮಕೇತುವಿನ ಕಕ್ಷೆಯಲ್ಲಿ ಹಾದುಹೋಗಲಿದ್ದು, ಆಗ ಉಲ್ಕಾಪಾತ ಸಂಭವಿಸಬಹುದು ಎಂದು ವಿಜ್ಞಾನಿಗಳು ಹೇಳಿದ್ದಾರೆ.
- ಈ ಧೂಮಕೇತು ಸುಮಾರು 6.4 ಕಿ.ಮೀ ಯಷ್ಟು ಗಾತ್ರವಿದೆ. ಇದರ ನ್ಯೂಕ್ಲಿಯಸ್ ನಿಂದ ನಿಮಿಷಕ್ಕೆ 50,802 ಕೆ.ಜಿ.ಯಷ್ಟು ಧೂಳು ಹೊರಬರುತ್ತಿದೆ ಎಂದು ವಿಜ್ಞಾನಿಗಳು ಅಂದಾಜಿಸಿದ್ದಾರೆ.

## ವ್ಯವಹಾರ

### ವಿಜಯಾ ಬ್ಯಾಂಕ್ ಗೆ "ಬ್ರಿಟಿಷ್ ಸ್ಟಾಂಡರ್ಡ್ಸ್ ಇನ್ ಸ್ಟಿಟ್ಯೂಟ್" ನ ಐಎಸ್ಒ 27001 ಪ್ರಮಾಣಪತ್ರ

ಜಾಗತಿಕ ಮಟ್ಟದಲ್ಲಿ ಬ್ಯಾಂಕಿಂಗ್ ವ್ಯವಹಾರದ ಗುಣಮಟ್ಟವನ್ನು ಆಧರಿಸಿ ನೀಡಲಾಗುವ ಪ್ರತಿಷ್ಠಿತ "ಬ್ರಿಟಿಷ್ ಸ್ಟಾಂಡರ್ಡ್ಸ್ ಇನ್ ಸ್ಟಿಟ್ಯೂಟ್" ನ ಐಎಸ್ಒ 27001 (ISO 27001) ಪ್ರಮಾನಪತ್ರವನ್ನು ಸರ್ಕಾರಿ ವಲಯದ ವಿಜಯಾ ಬ್ಯಾಂಕ್ ಪಡೆದುಕೊಂಡಿದೆ. ವಿಜಯಾ ಬ್ಯಾಂಕ್ ನ "ರಿಸ್ಕ್ ಮ್ಯಾನೇಜ್ ಮೆಂಟ್ ವಿಭಾಗ"ದಲ್ಲಿನ ಸಾಧನೆಗೆ ಈ ಪ್ರಮಾಣಪತ್ರ ಲಭಿಸಿದೆ. ವಿಜಯಾ ಬ್ಯಾಂಕ್ ತನ್ನ ಗ್ರಾಹಕರಿಗೆ ಉತ್ತಮ ಸೇವೆ, ಗ್ರಾಹಕರ ಸೇವಾ ದಾಖಲೆಗಳು, ದೂರುಗಳು ಸೇರಿದಂತೆ ವ್ಯವಹಾರಕ್ಕೆ ಸಂಬಂಧಿಸಿದ ದಾಖಲೆಗಳನ್ನು ಉತ್ತಮವಾಗಿ ನಿರ್ವಹಿಸಿರುವುದನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗಿದೆ. ಇತ್ತೀಚೆಗೆ ವಿಜಯಾ ಬ್ಯಾಂಕ್ ನ ಪ್ರಧಾನ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಬ್ರಿಟಿಷ್ ಸ್ಟಾಂಡರ್ಡ್ಸ್ ಇನ್ ಸ್ಟಿಟ್ಯೂಟ್" ನ ಮುಖ್ಯಸ್ಥ ಲಕ್ಷ್ಮೀಪತಿ ನಾರಾಯಣ ಅವರು ವಿಜಯಾ ಬ್ಯಾಂಕ್ ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾದ ಉಪೇಂದ್ರ ಕಾಮತ್ ರವರಿಗೆ ಪ್ರದಾನ ಮಾಡಿದರು.

- "ಬ್ರಿಟಿಷ್ ಸ್ಟಾಂಡರ್ಡ್ಸ್ ಇನ್ ಸ್ಟಿಟ್ಯೂಟ್" ನಿಂದ ದೇಶದಲ್ಲೇ ಇಂತಹ ಪ್ರತಿಷ್ಠಿತ ಪ್ರಮಾಣ ಪತ್ರವನ್ನು ಪಡೆದ ಪ್ರಥಮ ಬ್ಯಾಂಕ್ ವಿಜಯಾ ಬ್ಯಾಂಕ್ ಎನಿಸಿದೆ.
- ಇದೇ ಸಂದರ್ಭದಲ್ಲಿ ತನ್ನ ಗ್ರಾಹಕರ ಸುರಕ್ಷತೆಯನ್ನು ಕಾಯುವ ದೃಷ್ಟಿಯಿಂದ ವಿಜಯಾ ಬ್ಯಾಂಕ್ "ಮಿಸ್ಡ್ ಕಾಲ್" ಯೋಜನೆಯನ್ನು ಜಾರಿಗೊಳಿಸಿದೆ. ಗ್ರಾಹಕರು ಮಿಸ್ಡ್ ಕಾಲ್ ನೀಡಿದರೆ ತಮ್ಮ ಖಾತೆಯ ಸಂಪೂರ್ಣ ವಿವರವನ್ನು "ಎಸ್ಎಂಎಸ್" ಮೂಲಕ ಕಳುಹಿಸಲಾಗುವುದು.

### ಸ್ಯಾಮ್ ಸಂಗ್ ಅತ್ಯಂತ ಜನಪ್ರಿಯ ಬ್ರ್ಯಾಂಡ್

ಮೊಬೈಲ್ ಮಾರುಕಟ್ಟೆ ಸಂಸ್ಥೆ "ಅಪ್ ಸ್ಟ್ರೀಮ್ (Upstream)" ನಡೆಸಿರುವ ಆನ್ ಲೈನ್ ಸಮೀಕ್ಷೆಯಲ್ಲಿ ಅತ್ಯಂತ ಜನಪ್ರಿಯ ಬ್ರಾಂಡ್ ಎಂಬ ಪಟ್ಟವನ್ನು ಸ್ಯಾಮ್ ಸಂಗ್ ಗಿಟ್ಟಿಸಿಕೊಂಡಿದೆ. ಜನಪ್ರಿಯ ಕಂಪನಿಗಳಾದ ನೋಕಿಯಾ, ಆ್ಯಪಲ್ ಮತ್ತು ಬ್ಲಾಕ್ ಬೆರಿ ಕಂಪನಿಗಳನ್ನು ಹಿಂದಕ್ಕೆ ತಳ್ಳಿ ಸ್ಯಾಮಸಂಗ್ ಅಗ್ರ ಸ್ಥಾನಕ್ಕೆ ಏರಿರುವುದು ಗಮನಾರ್ಹ.

- ಸೆಲ್ ಫೋನ್ ಕ್ಷೇತ್ರದಲ್ಲಿ ಉದಯೋನ್ಮುಖ ಮಾರುಕಟ್ಟೆಗಳೆನಿಸಿರುವ ಭಾರತ, ಸೌದಿ ಅರೇಬಿಯಾ, ನೈಜೀರಿಯಾ ಮತ್ತು ಬ್ರೆಜಿಲ್ ದೇಶಗಳಲ್ಲಿ "ಅಪ್ ಸ್ಟ್ರೀಮ್" ಸಂಸ್ಥೆ ಕೈಗೊಂಡ ಸಮೀಕ್ಷೆಯಲ್ಲಿ "ಸ್ಯಾಮ್ ಸಂಗ್" ಜನಪ್ರಿಯ ಬ್ರಾಂಡ್ ಆಗಿ ಹೊರಹೊಮ್ಮಿದೆ.
- ನೈಜೀರಿಯಾದಲ್ಲಿ ಮಾತ್ರ ನೋಕಿಯಾ ಬಗ್ಗೆ ಒಲವು ತೋರಲಾಗಿದೆ. ನೈಜೀರಿಯಾದಲ್ಲಿ ಶೇ.36 ರಷ್ಟು ಜನ ನೋಕಿಯಾವನ್ನು ತಮ್ಮ ನೆಚ್ಚಿನ ಬ್ರಾಂಡ್ ಆಗಿ ಆಯ್ಕೆಮಾಡಿದ್ದಾರೆ.
- ಸಮೀಕ್ಷೆ ಪ್ರಕಾರ ಅಭಿವೃದ್ಧಿ ಹೊಂದಿರುವ ರಾಷ್ಟ್ರವಾದ ಅಮೆರಿಕಾದಲ್ಲಿ ಆ್ಯಪಲ್ ಈಗಲೂ ಜನಪ್ರಿಯ ಸ್ಮಾರ್ಟ್ ಫೋನ್ ಎನಿಸಿದೆ. ಆದರೆ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಸ್ಯಾಮ್ ಸಂಗ್ ಗೆ ಹೆಚ್ಚಿನ ಮನ್ನಣೆ ನೀಡಲಾಗುತ್ತಿದೆ. ಸಮೀಕ್ಷೆ

ಅಭಿಪ್ರಾಯ ಪಟ್ಟಿರುವಂತೆ ಮುಂದುವರೆಯುತ್ತಿರುವ ದೇಶಗಳಲ್ಲಿ ಬ್ರಾಂಡ್ ಉತ್ಪನ್ನಗಳಿಗಿಂತಲೂ ಸಾಮಾನ್ಯ ಮೊಬೈಲ್ ಗಳಿಗೆ ಹೆಚ್ಚಿನ ಬೇಡಿಕೆ ಇದೆ.

- ಒಟ್ಟಾರೆಯಾಗಿ ಹೇಳುವುದಾದರೆ ವಿಶ್ವದಾದ್ಯಂತ ಸ್ಯಾಮ್ ಸಂಗ್ ಮೊಬೈಲ್ ಹೆಚ್ಚು ಜನಪ್ರಿಯ ಬ್ರಾಂಡ್ ಆಗಿದೆ. ಸ್ಯಾಮ್ ಸಂಗ್ ಬಿಡುಗಡೆ ಮಾಡಿರುವ ಗ್ಯಾಲಕ್ಸಿ S III ಮೊಬೈಲ್ ನ ಜನಪ್ರಿಯತೆಯಿಂದಾಗಿ ಸ್ಯಾಮ್ ಸಂಗ್ ಈ ಮನ್ನಣೆಗೆ ಪಾತ್ರವಾಗಿದೆ.

**<u>2014 ರ ವೇಳೆಗೆ ಭಾರತದಲ್ಲಿ ರೂ.2500 ಕೋಟಿ ಬಂಡವಾಳ ಹೂಡಲಿರುವ ಹೊಂಡಾ ಕಂಪನಿ</u>**

ಜಪಾನ್ ಮೂಲದ ಆಟೋಮೊಬೈಲ್ ದಿಗ್ಗಜ ಹೊಂಡಾ ಕಂಪನಿ ಭಾರತದಲ್ಲಿ ತನ್ನ ಉತ್ಪಾದನ ಸಾಮರ್ಥ್ಯವನ್ನು ವಿಸ್ತರಿಸುವ ಸಲುವಾಗಿ ರೂ.2500 ಕೋಟಿ ಬಂಡವಾಳವನ್ನು 2014 ರ ವೇಳೆಗೆ ಹೂಡಲಿರುವುದಾಗಿ ಹೇಳಿದೆ.

- ಹೊಂಡಾ ಸಂಸ್ಥೆಯ ಯೋಜನೆಗಳ ಪ್ರಕಾರ ಭಾರತದಲ್ಲಿ ಮತ್ತೊಂದು ಕಾರು ಉತ್ಪಾದನ ಘಟಕವನ್ನು ಸ್ಥಾಪಿಸಲಾಗುವುದು.
- ಈಗಾಗಲೇ ರಾಜಸ್ತಾನದ "ತಪುಕಾರ" ದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರು ಉತ್ಪಾದನ ಘಟಕದಲ್ಲಿ ಡಿಸೇಲ್ ಎಂಜಿನ್ ಬಿಡಿಭಾಗಗಳು ಮತ್ತು ಕಾರು ಅಸೆಂಬ್ಲಿ ಲೈನ್ ಗಳನ್ನು ಅಭಿವೃದ್ಧಿಪಡಿಸಲಾಗುವುದು.
- ಸದ್ಯ ರಾಜಸ್ತಾನದಲ್ಲಿ ವಾರ್ಷಿಕವಾಗಿ 1.2 ಲಕ್ಷ ಕಾರುಗಳನ್ನು ತಯಾರಿಸಲಾಗುತ್ತಿದೆ. ಹೊಸ ಅಸೆಂಬ್ಲಿ ಲೈನ್ ಅಳವಡಿಸಿಕೊಂಡ ಬಳಿಕ 2.4 ಲಕ್ಷ ಕಾರುಗಳನ್ನು ತಯಾರಿಸುವ ಸಾಮರ್ಥ್ಯವನ್ನು ಈ ಘಟಕ ಹೊಂದಲಿದೆ ಎಂದು ಹೊಂಡಾ ಮೋಟಾರ್ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರ್ "ಯೊಶಿಯುಕಿ ಮತ್ತುಮೊಟೊ" ಹೇಳಿದ್ದಾರೆ.

**<u>ಉಕ್ಕು ಮತ್ತು ಗಣಿಗಾರಿಕೆ ಅಭಿವೃದ್ಧಿಗಾಗಿ ಭಾರತ ಮತ್ತು ತಾಂಜಾನಿಯಾ ಒಪ್ಪಂದ</u>**

ಉಕ್ಕು ಉದ್ಯಮ ಮತ್ತು ಗಣಿಗಾರಿಕೆಗೆ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ವೃದ್ಧಿಸಿಕೊಳ್ಳುವ ಸಲುವಾಗಿ ಭಾರತ ಸರ್ಕಾರ ಮತ್ತು ತಾಂಜಾನಿಯಾ ಸರ್ಕಾರ ಆಶಯ ಪತ್ರಕ್ಕೆ (Letter of Intent) ಸಹಿ ಹಾಕಿವೆ. ತಾಂಜಾನಿಯಾಕ್ಕೆ ಭೇಟಿ ನೀಡಿರುವ ಕೇಂದ್ರ ಉಕ್ಕು ಸಚಿವ ಬೆನಿ ಪ್ರಸಾದ್ ವರ್ಮಾ ರವರು ದರೆಸಲಂ ನಲ್ಲಿ ಒಪ್ಪಂದ ಪತ್ರಕ್ಕೆ ಸಹಿಹಾಕಿದ್ದಾರೆ.

- ಈ ಒಪ್ಪಂದದಿಂದ ಉಭಯ ದೇಶಗಳ ಉಕ್ಕು ಮತ್ತು ಕಬ್ಬಿಣ ಉದ್ಯಮದಲ್ಲಿ ಬಂಡವಾಳ ತೊಡಗಿಸುವುದು ಸುಲಭವಾಗಲಿದೆ.
- ಉಕ್ಕು ಉದ್ಯಮ ಅಭಿವೃದ್ಧಿಗೆ ಕಚ್ಚಾ ವಸ್ತುಗಳ ಪೂರೈಕೆ ಮತ್ತು ಗಣಿಗಾರಿಕೆಯಲ್ಲಿ ಪರಸ್ಪರ ಸಹಕಾರ ಉತ್ತಮಗೊಳ್ಳಲಿದೆ.
- ಉಭಯ ದೇಶಗಳ ನಡುವೆ ಉಕ್ಕು ಮತ್ತು ಕಬ್ಬಿಣ ಉದ್ಯಮಕ್ಕೆ ಸಂಬಂಧಿಸಿದಂತೆ ತಂತ್ರಜ್ಞಾನ ಅಭಿವೃದ್ಧಿ ಮತ್ತು ಮಿನಿಮಯ ಮಾಡಿಕೊಳ್ಳಲಾಗುವುದು.
- ಈ ಒಪ್ಪಂದದಿಂದ ಭಾರತ ಮತ್ತು ತಾಂಜಾನಿಯಾ ಸಂಬಂಧ ಸಹ ಬಿಗಿಗೊಳ್ಳಲಿದೆ.

**SBI ಉಚಿತ ಅಪಘಾತ ವಿಮೆ ಜುಲೈ 1 ರಿಂದ ರದ್ದು**

ದೇಶದ ಅತಿ ದೊಡ್ಡ ಬ್ಯಾಂಕ್ ಭಾರತೀಯ ಸ್ಟೇಟ್ ಬ್ಯಾಂಕ್ ಗೃಹ ಮತ್ತು ವಾಹನ ಸಾಲದ ಮೇಲೆ ನೀಡುತ್ತಿದ್ದ "ಅಪಘಾತ ಪರಿಹಾರದ ಉಚಿತ ವಿಮೆ" ಸೇವೆಯನ್ನು ಮುಂದಿನ ಜುಲೈನಿಂದ ಸ್ಥಗಿತಗೊಳಿಸುವುದಾಗಿ ಹೇಳಿದೆ.

- ಗೃಹ ಮತ್ತು ವಾಹನ ಸಾಲ ಪಡೆದವರು ಅಪಘಾತದಲ್ಲಿ ಮೃತಪಟ್ಟರೆ ಪರಿಹಾರ ಧನದಿಂದಲೇ ಸಾಲ ಜಮಾ ಮಾಡಿಕೊಂಡು, ಮೃತರ ಅವಲಂಬಿತರಿಗೆ ಸಾಲದ ಹೊರೆ ಬೀಳದಂತೆ ಮಾಡಲು ಗುಂಪು ವಿಮಾ ಸೌಲಭ್ಯವನ್ನು SBI ಹಲವು ವರ್ಷಗಳಿಂದ ನೀಡುತ್ತಿತ್ತು.
- ಆದರೆ ಬ್ಯಾಂಕ್ ಈ ಸೌಲಭ್ಯವನ್ನು ಜುಲೈ 1 ರಿಂದ ರದ್ದು ಮಾಡಿರುವುದಾಗಿ ಆದೇಶವನ್ನು ಹೊರಡಿಸಿದೆ. ಆದರೆ ಈ ಕ್ರಮಕ್ಕೆ ಕಾರಣವೇನು ಎಂಬುದು ತಿಳಿದು ಬಂದಿಲ್ಲ.
- ಪ್ರಸ್ತುತ ಬ್ಯಾಂಕ್ ನಲ್ಲಿ ಉಳಿತಾಯ ಖಾತೆ ಹೊಂದಿರುವ 70 ಲಕ್ಷಕ್ಕೂ ಹೆಚ್ಚು ಮಂದಿಗೆ ರೂ.4 ಲಕ್ಷದ ವರೆಗೂ ಪರಿಹಾರ ಧನ ಲಭಿಸುವ ವಿಮಾ ಸೌಲಭ್ಯವನ್ನು "SBI General Insurance" ಕಂಪನಿ ವಾರ್ಷಿಕ ರೂ.100 ರಷ್ಟು ಕನಿಷ್ಟ ಮೊತ್ತಕ್ಕೆ ಒದಗಿಸುತ್ತಿದೆ.

**ಮ್ಯಾಡ್ರಿಡ್ ಪ್ರೊಟೊಕಾಲ್ (Madrid Protocol) ಗೆ ಸೇರ್ಪಡೆಗೊಂಡ ಭಾರತ**

ಭಾರತ ಕಂಪನಿಗಳು ಇನ್ನು ಮುಂದೆ ತಮ್ಮ ಟ್ರೇಡ್ ಮಾರ್ಕನ್ನು ಯುರೋಪಿಯನ್ ಯೂನಿಯನ್ ಸೇರಿದಂತೆ 89 ರಾಷ್ಟ್ರಗಳಲ್ಲಿ ಕೇವಲ ಒಂದೇ ಅರ್ಜಿ ಸಲ್ಲಿಸುವ ಮೂಲಕ ನೊಂದಾಯಿಸಿಕೊಳ್ಳಬಹುದಾಗಿದೆ. ಏಕೆಂದರೆ ಭಾರತ ಇತ್ತೀಚೆಗೆ ಮ್ಯಾಡ್ರಿಡ್ ಪ್ರೊಟೊಕಾಲ್ ಗೆ ಸೇರ್ಪಡೆಗೊಂಡಿದೆ. ಇದರಿಂದ ಭಾರತ "ವರ್ಡ್ ಇಂಟಲೆಕ್ಚುಯಲ್ ಪ್ರಾಪರ್ಟಿ ಆರ್ಗನೇಷನ್" ನ ಮ್ಯಾಡ್ರಿಡ್ ಪ್ರೊಟೊಕಾಲ್ ಗೆ ಸದಸ್ಯ ರಾಷ್ಟ್ರವೆನಿಸಿದೆ.

- ಮ್ಯಾಡ್ರಿಡ್ ಪ್ರೊಟೊಕಾಲ್ ಬಳಕೆದಾರ ಸ್ನೇಹಿ ಮತ್ತು ಸುವ್ಯವಸ್ಥಿ ವಿಧಾವವಾಗಿದ್ದು, ಇದರಿಂದ ಮಾಲೀಕರು ಅಂತರರಾಷ್ಟ್ರೀಯ ಮಟ್ಟದಲ್ಲಿ ತಮ್ಮ ಕಂಪನಿಯ ಟ್ರೇಡ್ ಮಾರ್ಕ್ ಗಳನ್ನು ರಕ್ಷಿಸಿಕೊಳ್ಳಬಹುದಾಗಿದೆ.
- ಮ್ಯಾಡ್ರಿಡ್ ಪ್ರೊಟೊಕಾಲ್ ನಿಂದ ಸ್ಥಳೀಯ ಸಂಸ್ಥೆಗಳು ಜಾಗತಿಕ ಮಟ್ಟದಲ್ಲಿ ಪರಿಚಯವಾಗಲು ಸಹಕಾರಿಯಾಗಲಿದೆ.
- ಭಾರತ G-20 ರಾಷ್ಟ್ರಗಳ ಪೈಕಿ ಮ್ಯಾಡ್ರಿಡ್ ಪ್ರೊಟೊಕಾಲ್ ಗೆ ಸೇರ್ಪಡೆಗೊಂಡ 14 ನೇ ದೇಶ.

ಮ್ಯಾಡ್ರಿಡ್ ಪ್ರೊಟೊಕಾಲ್ (ಶಿಷ್ಟಾಚಾರ):

- ಅಂತರರಾಷ್ಟ್ರೀಯ ಮಟ್ಟದಲ್ಲಿ ಕಂಪನಿಗಳು ತಮ್ಮ ಟ್ರೇಡ್ ಮಾರ್ಕ್ ಗಳನ್ನು ನೊಂದಾಣಿ ಮಾಡಿಕೊಳ್ಳಲು ಇರುವ ಸುವ್ಯವಸ್ಥೆಯೇ ಮ್ಯಾಡ್ರಿಡ್ ಪ್ರೊಟೊಕಾಲ್. ಇದೊಂದು ಕಾನೂನು ಬದ್ದ ಒಪ್ಪಂದವಾಗಿದ್ದು, "Madrid Agreement Concerning the International Registration of Marks of 1891", ಮತ್ತು "Protocol Relating to the Madrid Agreement 1989" ಒಪ್ಪಂದದ ಮೇಲೆ ಸ್ಥಾಪಿತಗೊಂಡಿದೆ. ಮ್ಯಾಡ್ರಿಡ್ ಪ್ರೊಟೊಕಾಲ್ ವ್ಯವಸ್ಥೆಯು ಜಿನೇವಾದ "World

Intellectual Property Organisation (WIPO)) ರ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಸದಸ್ಯ ರಾಷ್ಟ್ರಗಳಿಗೆ ಸೇರಿದ ಕಂಪನಿಗಳಿಂದ ಅರ್ಜಿಗಳನ್ನು ಸ್ವೀಕರಿಸಿ ಟ್ರೇಡ್ ಮಾರ್ಕ್ ನ್ನು ನೊಂದಾಣಿ ಮಾಡಿಸುವುದು ಇದರ ಮುಖ್ಯ ಕಾರ್ಯ.

ಉಪಯೋಗವೇನು?

- ಮ್ಯಾಡ್ರಿಡ್ ಪ್ರೊಟೊಕಲ್ ನ ಸದಸ್ಯತ್ವ ಪಡೆದುಕೊಂಡಿರುವ ದೇಶದ ಕಂಪನಿಗಳು ಮ್ಯಾಡ್ರಿಡ್ ಸದಸ್ಯ ಹೊಂದಿರುವ ದೇಶಗಳಲ್ಲಿ ತಮ್ಮ ಟ್ರೇಡ್ ಮಾರ್ಕ್ ಗಳನ್ನು ನೊಂದಾಯಿಸಿಕೊಳ್ಳಲು ಪ್ರತಿ ದೇಶಕ್ಕೆ ಒಂದರಂತೆ ಅರ್ಜಿಯನ್ನು ಮತ್ತು ಅನೇಕ ಬಾರಿ ಶುಲ್ಕವನ್ನು ಸಲ್ಲಿಸಬೇಕಿಲ್ಲ. ಬದಲಿಗೆ ಕೇವಲ ಒಂದೇ ಅರ್ಜಿ ಮತ್ತು ಒಂದೇ ಬಾರಿ ಶುಲ್ಕವನ್ನು ಪಾವತಿಸಿದರೆ ಸಾಕು ಮ್ಯಾಡ್ರಿಡ್ ಸದಸ್ಯ ಹೊಂದಿರುವ ಎಲ್ಲಾ ರಾಷ್ಟ್ರಗಳಲ್ಲೂ ಟ್ರೇಡ್ ಮಾರ್ಕ್ ನೊಂದಾಣಿಗೊಳ್ಳುತ್ತದೆ.
- ಈ ವ್ಯವಸ್ಥೆಯಿಂದ ಕಂಪನಿಯ ಟ್ರೇಡ್ ಮಾರ್ಕ್ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುತ್ತದೆ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಟ್ರೇಡ್ ಮಾರ್ಕ ನ ದುರ್ಬಳಕೆ ತಡೆಯಬಹುದಾಗಿದೆ.
- ಸದ್ಯ ಮ್ಯಾಡ್ರಿಡ್ ಪ್ರೊಟೊಕಾಲ್ ಗೆ ವಿಶ್ವದ ೮೯ ರಾಷ್ಟ್ರಗಳು ಸದಸ್ಯತ್ವವನ್ನು ಹೊಂದಿವೆ.

**<u>ಟಿವಿಎಸ್- BMW ಒಪ್ಪಂದ</u>**

ದ್ವಿಚಕ್ರ ವಾಹನಗಳ ತಯಾರಿಕೆಗೆ ಸಂಬಂಧಿಸಿದಂತೆ ಟಿವಿಎಸ್ ಮತ್ತು ಜರ್ಮನಿ ಮೂಲದ ಬಿಎಂಡಬ್ಲ್ಯು ಕಂಪನಿಗಳು ಜಂಟಿ ಒಪ್ಪಂದಕ್ಕೆ ಸಹಿ ಹಾಕಿವೆ.

- ಇವೆರಡು ಕಂಪನಿಗಳು ಪಾಲುದಾರಿಕೆಯಡಿ 500 ಸಿಸಿ ಗಿಂತ ಕಡಿಮೆ ಸಾಮರ್ಥ್ಯವನ್ನು ಹೊಂದಿರುವ ಬೈಕ್ ಗಳನ್ನು ತಯಾರಿಸಲಿವೆ.
- ಸದ್ಯ ಬಿಎಂಡಬ್ಲ್ಯು ಮೋಟಾರ್ ಸೈಕಲ್ ವಿಭಾಗ 600 ರಿಂದ 1600 ಸಿಸಿ ಬೈಕ್ ಗಳನ್ನು ತಯಾರಿಸುತ್ತಿದೆ. ಟಿವಿಎಸ್ ಸಂಸ್ಥೆ 250 ಸಿಸಿ ಸಾಮರ್ಥ್ಯಕ್ಕಿಂತ ಕಡಿಮೆ ಸಾಮರ್ಥ್ಯದ ಬೈಕ್ ಗಳನ್ನು ಮಾತ್ರ ತಯಾರಿಸುತ್ತಿದೆ.
- ಎರಡು ಸಂಸ್ಥೆಗಳು ಜಂಟಿಯಾಗಿ ತಯಾರಿಸಲಿರುವ ಬೈಕ್ ಗಳನ್ನು ಟಿವಿಎಸ್ ಮಾದರಿಯಲ್ಲೇ ಮಾರುಕಟ್ಟೆ ಬಿಡುಗಡೆಗೊಳಿಸಲಾಗುವುದು.
- ಈ ಮೊದಲು ದ್ವಿಚಕ್ರ ವಾಹನ ತಯಾರಿಕೆಗೆ ಸಂಬಂಧಿಸಿದಂತೆ ಜಪಾನ್ ಮೂಲದ ಸುಜುಕಿ ಮೋಟಾರ್ ಜತೆ ಟಿವಿಎಸ್ ಸಂಸ್ಥೆ ನಡೆಸಿದ ಮಾತುಕತೆ ವಿಫಲಗೊಂಡಿತ್ತು.

**<u>"ಯಮಹ" ದಿಂದ ವಿಶ್ವದ ಅಗ್ಗ ದರದ ಬೈಕ್</u>**

ಜಪಾನ್ನ ಬೈಕ್ ತಯಾರಿಕಾ ಸಂಸ್ಥೆ "ಯಮಹ" (Yamaha) ವಿಶ್ವದಲ್ಲೇ ಅತ್ಯಂತ ಕಡಿಮೆ ದರದ ಬೈಕ್ ನ್ನು ತಯಾರಿಸಲಿರುವುದಾಗಿ ಹೇಳಿದೆ. ಯಮಹ ತಯಾರಿಸಲಿರುವ ಈ ಬೈಕ್ ನ ದರ ಸುಮಾರು 500 ಯು.ಎಸ್ ಡಾಲರ್ ಅಥವಾ ರೂ.27000 ಸಾವಿರ. ಅಗ್ಗ ದರದ ಬೈಕ್ ತಯಾರಿಕೆಗೆಂದೇ ಯಮಹ ತನ್ನ 5 ನೇ ಜಾಗತಿಕ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರವನ್ನು ಉತ್ತರ ಪ್ರದೇಶದ ಗ್ರೇಟರ್ ನೋಯಿಡಾದಲ್ಲಿ ತೆರೆಯಲಿದೆ. ಭಾರತದಲ್ಲಿ ಕಡಿಮೆ ದರದ ಬೈಕ್ ಗಳಿಗೆ ಭಾರಿ ಬೇಡಿಕೆಯಿರುವುದರಿಂದ

ಯಮಹ ಈ ಯೋಜನೆಗೆ ಭಾರತವನ್ನೇ ಆಯ್ಕೆಮಾಡಿಕೊಂಡಿದ್ದು, ಇಲ್ಲಿಂದ ಲ್ಯಾಟಿನ್ ಆಮೆರಿಕಾ ಮತ್ತು ಆಫ್ರಿಕಾಗಳಿಗೆ ರಫ್ತು ಮಾಡುವುದಾಗಿ ಕಂಪನಿ ತಿಳಿಸಿದೆ.

- ಯಮಹದ ಹೊಸ ಘಟಕ "ಯಮಹ ಮೋಟಾರ್ ರಿಸರ್ಚ್ ಅಂಡ್ ಡೆವಲಪ್ ಮೆಂಟ್ ಇಂಡಿಯಾ ಲಿಮಿಟೆಡ್" ನ್ನು ಸಂಸ್ಥೆ ಫೆಬ್ರವರಿ 2013 ರಲ್ಲಿ ಉತ್ತರಪ್ರದೇಶದ ಸೂರಜ್ ಪುರದಲ್ಲಿ ಸ್ಥಾಪಿಸಿದ್ದು, ಈಗಾಗಲೇ ಬೈಕ್ ಗಳ ತಯಾರಿಕೆಯನ್ನು ಇಲ್ಲಿ ಆರಂಭಿಸಲಾಗಿದೆ. ಜತೆಗೆ ಕಂಪನಿ 2016 ರ ವರೆಗೆ ಹೊಸ ಮಾದರಿಯ ಸ್ಕೂಟರ್ ನ್ನು ವಾರ್ಷಿಕವಾಗಿ ಪರಿಚಯಿಸುವುದಾಗಿ ಹೇಳಿದೆ. ಭಾರತದ ಮಾರುಕಟ್ಟೆಯಲ್ಲಿ ಅತ್ಯುತ್ತಮ ಸ್ಥಾನವನ್ನು ಕಂಡುಕೊಳ್ಳಲು ಸಂಸ್ಥೆ ತನ್ನ ಎರಡನೇ ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರವನ್ನು ಚೆನ್ನೈನಲ್ಲಿ ತೆರೆಯಲು ನಿರ್ಧರಿಸಿದೆ.

ಯಮಹ ತಯಾರಿಸಲಿರು ಬೈಕ್ ಬಗ್ಗೆ:

- ಯಮಹ ತಯಾರಿಸಲಿರುವ ಈ ಅಗ್ಗದ ಬೈಕ್ ನ ಎಂಜಿನ್ ಸಾಮರ್ಥ್ಯ 100cc ಇರಲಿದೆ.
- ಮೊದಲಿಗೆ ಭಾರತದ ಅನುಗುಣಕ್ಕೆ ತಕ್ಕಂತೆ ಬೈಕ್ ನ್ನು ವಿನ್ಯಾಸಗೊಳಿಸಲಾಗುವುದು. ಬಳಿಕ ಜಾಗತಿಕ ಮಾರುಕಟ್ಟೆಯ ಬೇಡಿಕೆಯ ಅನುಸಾರ ವಿನ್ಯಾಸಗೊಳಿಸಲಿದೆ.

**"ಡ್ರೀಮ್ ನಿಯೋ" ಹೊಂಡಾದ ಅತಿ ಕಡಿಮೆ ಬೆಲೆಯ ಬೈಕ್**

ಜಪಾನ್ ನ ಆಟೋಮೊಬೈಲ್ ಕಂಪನಿ ಹೊಂಡಾ ತನ್ನ ಹೊಸ ಮಾದರಿಯ ಬೈಕ್ "ಡ್ರೀಮ್ ನಿಯೋ" ವನ್ನು ಬಿಡುಗಡೆಗೊಳಿಸಿದೆ. ಭಾರತದ ಮಾರುಕಟ್ಟೆಯನ್ನು ಗಮನದಲ್ಲಿಟ್ಟುಕೊಂಡು ತಯಾರಿಸಲಾಗಿರುವ ಈ ಬೈಕ್ ಹೊಂಡಾ ಕಂಪನಿಯ ಅತಿ ಕಡಿಮೆ ಬೆಲೆಯ ಬೈಕ್ ಎನಿಸಿದೆ.

- "ಡ್ರೀಮ್ ನಿಯೋ" ಬೈಕ್ ನ ಬೆಲೆ ರೂ.43,150 ಎಂದು ಕಂಪನಿ ತಿಳಿಸಿದೆ. "ಡಿಯೋ"(ರೂ.44,718) ಇದುವರೆಗೂ ಹೊಂಡಾದ ಕಡಿಮೆ ಬೆಲೆಯ ದ್ವಿಚಕ್ರವಾಹನವಾಗಿತ್ತು.
- 110 ಸಿಸಿ ಸಾಮರ್ಥ್ಯ ವಿರುವ "ಡ್ರೀಮ್ ನಿಯೋ" ಲೀಟರ್ ಗೆ 74 ಕಿ.ಮೀ ಮೈಲೇಜು ನೀಡಲಿದೆ ಎಂದು ಕಂಪನಿ ತಿಳಿಸಿದೆ.
- ಭಾರತದಲ್ಲಿ ಬೈಕ್ ಗಳಿಗೆ ಅಧಿಕ ಬೇಡಿಕೆ ಇದ್ದು, "ಡ್ರೀಮ್ ನಿಯೋ" ಹೊಂಡಾ ಕಂಪನಿಯ ನಿರೀಕ್ಷೆಗೂ ಮೀರಿ ಮಾರಾಟವಾಗಲಿದೆ ಎಂದು ಹೊಂಡಾದ ಸಿಇಓ "ಕೆಟಾ ಮರಮತ್ಸು" ಹೇಳಿದ್ದಾರೆ. 100-110 ಸಿಸಿ ಸಾಮರ್ಥ್ಯವಿರುವ ಬೈಕ್ ಗಳ ಮಾರಾಟದಲ್ಲಿ ಶೇ.150 ರಷ್ಟು ಬೆಳವಣಿಗೆಯನ್ನು ಹೊಂಡಾ ನಿರ್ಧರಿಸಿದೆ.
- ಇತ್ತೀಚೆಗೆ "ಯಮಹ" ಕಂಪನಿ ಸಹ ವಿಶ್ವದಲ್ಲೇ ಅಗ್ಗ ದರದ ಬೈಕ್ ಗಳನ್ನು ತಯಾರಿಸುವುದಾಗಿ ಹೇಳಿತ್ತು.

**ಟಾಟಾ ಪವರ್ ನಿಂದ ಮಹಾರಾಷ್ಟ್ರದಲ್ಲಿ ಮತ್ತೊಂದು ಸೌರ ಶಕ್ತಿ ಘಟಕ**

ಮಹಾರಾಷ್ಟ್ರದ ಸತಾರ ಜಿಲ್ಲೆಯ ಸಮೀಪ 28.8 ಮೆಗಾ ವ್ಯಾಟ್ ಸಾಮರ್ಥ್ಯದ ಸೌರ ಶಕ್ತಿ ಘಟಕವನ್ನು ಸ್ಥಾಪಿಸಲು ನಿರ್ಧರಿಸಿರುವುದಾಗಿ ಟಾಟಾ ಪವರ್ ತಿಳಿಸಿದೆ. ಈ ಯೋಜನೆಯ ಮೂಲಕ ಟಾಟಾ ಸಂಸ್ಥೆ ಹೊಂದಿರುವ ಶುದ್ಧ ಇಂಧನ ತಯಾರಿಕೆಯ ಗುರಿಯನ್ನು ತಲುಪಲು ಸಾಧ್ಯವಾಗಲಿದೆ ಎಂದು ಸಂಸ್ಥೆಯ ಕಾರ್ಯಕಾರಿ ನಿರ್ದೇಶಕ ಎಸ್. ರಾಮಕೃಷ್ಣನ್ ಹೇಳಿದ್ದಾರೆ.

- ಟಾಟಾ ಸಂಸ್ಥೆ ಮಹಾರಾಷ್ಟ್ರದಲ್ಲಿ ನಿರ್ಮಿಸುತ್ತಿರುವ ಎರಡನೇ ಸೌರ ಶಕ್ತಿ ಘಟಕ ಇದಾಗಿದ್ದು, ಪ್ರಸ್ತಾಕ ಸಾಲಿನಲ್ಲಿ ಈ ಯೋಜನೆಗೆ ಸಂಸ್ಥೆಯು ರೂ.230 ಕೋಟಿ ವ್ಯಯಿಸಲಿದೆ.
- ಈಗಾಗಲೇ ಟಾಟಾ ಸಂಸ್ಥೆಯು ಮಹಾರಾಷ್ಟ್ರದ "ಮುಲ್ಶಿ" ಬಳಿ 3 ಮೆಗಾ ವ್ಯಾಟ್ ಸಾಮರ್ಥ್ಯದ ಸೌರ ಶಕ್ತಿ ಘಟಕವನ್ನು ಸಂಸ್ಥೆ ನಿರ್ಮಿಸಿದೆ. ಜತೆಗೆ ಗುಜರಾತ್ ನ "ಮಿತ್ ಪುರ" ದಲ್ಲೂ ಸಹ 25 ಮೆಗಾ ವ್ಯಾಟ್ ಸಾಮರ್ಥ್ಯದ ಸೌರ ಶಕ್ತಿ ಘಟಕವನ್ನು ಸ್ಥಾಪಿಸಲಾಗಿದೆ.
- ಮಹಾರಾಷ್ಟ್ರದ "ಮುಲ್ಶಿ" ಬಳಿ ತೇಲುವ ಸೌರ ಘಟಕ ಸ್ಥಾಪನೆಗೆ ಸಂಬಂಧಿಸಿದಂತೆ ಆಸ್ಟ್ರೇಲಿಯಾದ "Sunengy" ಸಂಸ್ಥೆಯ ಜೊತೆ ಟಾಟಾ ಸಂಸ್ಥೆ ಒಪ್ಪಂದ ಮಾಡಿಕೊಂಡಿದೆ. **ಇದು ದೇಶದ ಮೊದಲ ತೇಲುವ ಸೌರ ಘಟಕ**.
- ಗುಜರಾತ್, ಕರ್ನಾಟಕ, ತಮಿಳುನಾಡು ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಸ್ಥಾಪಿಸಿರುವ ಪವನ ಶಕ್ತಿ ಘಟಕಗಳಿಂದ 376 ಮೆಗಾ ವ್ಯಾಟ್ ವಿದ್ಯುತ್ ನ್ನು ಸಂಸ್ಥೆ ಉತ್ಪಾದಿಸುತ್ತಿದ್ದು, 2020 ರ ವೇಳೆಗೆ 26000 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯ ಗುರಿಯನ್ನು ಸಂಸ್ಥೆ ಹೊಂದಿದೆ ಎಂದು ರಾಮಕೃಷ್ಣನ್ ಹೇಳಿದ್ದಾರೆ.

**2012-13 ನೇ ಸಾಲಿನ ಆರ್ಥಿಕ ಪರಾಮರ್ಶೆ ಬಿಡುಗಡೆ: 2013-14 ರಲ್ಲಿ ಶೇ.6.4 ರಷ್ಟು "ಜಿಡಿಪಿ" ನಿರೀಕ್ಷೆ**

ದೇಶದ "ಒಟ್ಟಾರೆ ರಾಷ್ಟ್ರೀಯ ಉತ್ಪಾದನೆ" (ಜಿಡಿಪಿ)" 2013-14 ರಲ್ಲಿ ಶೇ.6.4 ರಷ್ಟು ಇರಲಿದೆ ಎಂದು ಪ್ರಧಾನ ಮಂತ್ರಿಗಳ ಸಲಹಾ ಸಮಿತಿ (PMEAC) ವಿಶ್ವಾಸ ವ್ಯಕ್ತಪಡಿಸಿದೆ. ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಚೇತರಿಕೆ ಕಂಡುಬಂದಿದ್ದು, ಮತ್ತೆ ಆರ್ಥಿಕ ಅಭಿವೃದ್ಧಿಯತ್ತ ದೇಶ ಮರಳಿದೆ ಎಂದು "ಪಿಎಂಇಎಸಿ" ಅಧ್ಯಕ್ಷ ಸಿ.ರಂಗರಾಜನ್ ಹೇಳಿದ್ದಾರೆ.

**ವರದಿಯಲ್ಲಿರುವ ಅಂಶಗಳು**:

- 2012-13 ನೇ ಸಾಲಿನಲ್ಲಿ ಹಣಕಾಸು ವರ್ಷದಲ್ಲಿ ಶೇ.1.8 ರಷ್ಟು ಕಳಪೆ ಸಾಧನೆ ತೋರಿದ್ದ ದೇಶದ ಕೃಷಿ ಕ್ಷೇತ್ರದಲ್ಲಿ, ಈ ಬಾರಿ ಶೇ.3.5 ರಷ್ಟು ಪ್ರಗತಿ ಕಾಣಲಿದೆ.
- 2012-13 ರಲ್ಲಿ ಶೇ.5.1 ಕ್ಕೇರಿದ್ದ "ಚಾಲ್ತಿ ಖಾತೆ ಕೊರತೆ (ಸಿಎಡಿ), 2013-14 ರಲ್ಲಿ ಶೇ.4.7 ಕ್ಕೆ ತಗ್ಗಲಿದೆ.
- ಕೈಗಾರಿಕೆ ವಲಯದ ಸಾಧನೆಯೂ ಶೇ.3.1 ರಿಂದ ಶೇ.4.9 ಕ್ಕೆ, ಸೇವಾ ಕ್ಷೇತ್ರ ಶೇ.6.6 ರಿಂದ ಶೇ.7.7 ಕ್ಕೆ ಏರಿಕೆಯಾಗುವ ಸಾಧ್ಯತೆ ಇದೆ.

**ವೇಗವಾದ ಪ್ರಿಂಟರ್ ತಯಾರಿಸಿ ದಾಖಲೆ ಬರೆದ: HP**

ವಿಶ್ವದಲ್ಲೇ ಅತ್ಯಂತ ವೇಗವಾಗಿ ಕಾರ್ಯನಿರ್ವಹಿಸಬಲ್ಲ "ಡೆಸ್ಕಟಾಪ್ ಪ್ರಿಂಟರ್" ನ್ನು HP (Hewlett Packard) ಭಾರತದಲ್ಲಿ ಬಿಡುಗಡೆಗೊಳಿಸಿದೆ. "Pro X 500" ಸರಣಿಯ ಈ ಪ್ರಿಂಟರ್ ಗಳು ವಿಶ್ವದ ವೇಗವಾದ ಪ್ರಿಂಟರ್ ಗಳು ಎನಿಸಿದ್ದು, ಗಿನ್ನಿಸ್ ರೆಕಾರ್ಡ್ ಗೆ ಸೇರ್ಪಡೆಗೊಂಡಿವೆ.

- "Pro X 500" ಸರಣಿಯ ಪ್ರಿಂಟರ್ ಗಳನ್ನು HP ಯ ಪೇಜ್ ವೈಡ್ ತಂತ್ರಜ್ಞಾನದಿಂದ ಅಭಿವೃದ್ಧಿಪಡಿಸಲಾಗಿದ್ದು, ನಿಮಿಷಕ್ಕೆ 70 ಪುಟಗಳನ್ನು ಮುದ್ರಿಸುವ ಸಾಮರ್ಥ್ಯವನ್ನು ಹೊಂದಿವೆ.

- ಇದೇ ಸರಣಯಲ್ಲಿ ನಾಲ್ಕು ಮಾದರಿಯ ಪ್ರಿಂಟರ್ ಗಳನ್ನು ಹೊರತರಲಾಗಿದ್ದು, ಎಲ್ಲವೂ ಉತ್ಕೃಷ್ಟ ದರ್ಜೆಯ ಮುದ್ರಣ ಸಾಮರ್ಥ್ಯವನ್ನು ಹೊಂದಿವೆ, ಜತೆಗೆ ಲೇಸರ್ ಕಲರ್ ಪ್ರಿಂಟ್ ಗೆ ಹೋಲಿಸಿದರೆ ಮುದ್ರಣಕ್ಕೆ ಅರ್ಧದಷ್ಟು ವೆಚ್ಚ ಮಾತ್ರ ತಗುಲಲಿದೆ ಎಂದು ಕಂಪನಿ ತಿಳಿಸಿದೆ.
- HP ePrint ತಂತ್ರಜ್ಞಾನದ ಮೂಲಕ ಬಳಕೆದಾರರು ಅತ್ಯಾಧುನಿಕ ಮೊಬೈಲ್ ಗಳಿಂದಲೂ ಈ ಪ್ರಿಂಟರ್ ಗಳನ್ನು ಬಳಸಬಹುದಾಗಿದೆ.
- Pro X 500 ಸರಣಿಯ ಈ ಪ್ರಿಂಟರ್ ಗಳ ಬೆಲೆ 31,499-50,499 ರವರೆಗೆ ಇದೆ. ಇದೇ ಮಾದರಿಯ ಕಪ್ಪು-ಬಿಳುಪು ಪ್ರಿಂಟರ್ ಗಳ ಬೆಲೆ 7,999 ರಿಂದ 11,999 ಇದೆ.

**NTPC ಯೊಂದಿಗೆ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದ ಬಾಂಗ್ಲ**

ಬಾಂಗ್ಲದೇಶದಲ್ಲಿ ಜಂಟಿಯಾಗಿ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪನ್ನ ಘಟಕವನ್ನು ಸ್ಥಾಪಿಸುವ ಸಲುವಾಗಿ "ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ (NTPC)" ಮತ್ತು ಬಾಂಗ್ಲದ ವಿದ್ಯುತ್ ಅಭಿವೃದ್ಧಿ ಇಲಾಖೆ ಮೂರು ಮಹತ್ವದ ಒಪ್ಪಂದಗಳಿಗೆ ಸಹಿ ಹಾಕಿವೆ. ಕೇಂದ್ರ ಇಂಧನ ಕಾರ್ಯದರ್ಶಿ ಪಿ.ಉಮಾಶಂಕ ನೇತೃತ್ವದ ಭಾರತ ಪ್ರತಿನಿಧಿಗಳ ತಂಡ ಬಾಂಗ್ಲದ ಡಾಕಾದಲ್ಲಿ ಈ ಪ್ರಮುಖ ಒಪ್ಪಂದಕ್ಕೆ ಸಹಿ ಹಾಕಿದೆ.

- ವಿದ್ಯುತ್ ಖರೀದಿ, ಅನುಷ್ಠಾನ ಸೇರಿದಂತೆ ಒಟ್ಟು ಮೂರು ಒಪ್ಪಂದಗಳಿಗೆ ಉಭಯ ದೇಶಗಳ ಪ್ರತಿನಿಧಿಗಳು ಸಹಿ ಹಾಕಿದ್ದಾರೆ.
- ಒಪ್ಪಂದದ ಅನ್ವಯ "ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ (NTPC)" ಮತ್ತು ಬಾಂಗ್ಲ ವಿದ್ಯುತ್ ಅಭಿವೃದ್ಧಿ ಇಲಾಖೆ ಜಂಟಿಯಾಗಿ 1320 ಮೆಗಾ ವ್ಯಾಟ್ ಸಾಮರ್ಥ್ಯದ ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಲಿವೆ. ಈ ಯೋಜನೆಗೆ ಸುಮಾರು 1.6 ಬಿಲಿಯನ್ ಡಾಲರ್ ಬೇಕಾಗಲಿದೆ ಎಂದು ಅಂದಾಜಿಸಲಾಗಿದೆ.
- ಬಾಂಗ್ಲದ "ರಾಮ್ ಪಾಲ್" ಉಪಜಿಲ್ಲೆಯ ಮೊಂಗ್ಲ ಬಂದರಿನ ಬಳಿಯ 1834 ಎಕರೆ ಪ್ರದೇಶದಲ್ಲಿ ಈ ಘಟಕವನ್ನು ಸ್ಥಾಪಸಿಲು ಉದ್ದೇಶಿಸಲಾಗಿದೆ.
- ಪರಿಸರ ತಜ್ಞರ ಪ್ರಕಾರ ಈ ಯೋಜನೆಯಿಂದ ಅಪಾರ ಪರಿಸರ ಸಂಪತ್ತು ಅದರಲ್ಲೂ ಸುಂದರ್ ಬನ್ಸ್"ನ ಮ್ಯಾಂಗ್ರೂವ್ಸ್ ಅರಣ್ಯದ ಮೇಲೆ ತೀವ್ರ ತರನಾದ ಕೆಟ್ಟ ಪರಿಣಾಮ ಬೀರಲಿದೆ.

**Win32/Ramnit: ಬ್ಯಾಂಕ್ ಖಾತೆಯ ವಿವರ ಕದಿಯಲಿರುವ ಹೊಸ ವೈರಸ್**

ಬ್ಯಾಂಕ್ ಖಾತೆ ವಿವರವನ್ನು ಆನ್ ಲೈನ್ ನಲ್ಲಿ ಪರಿಶೀಲಿಸುವಾಗ ಎಚ್ಚರದಿಂದಿರಿ. ಏಕೆಂದರೆ ಖಾತೆ ವಿವರ ಮತ್ತು ಪಾಸ್ ವರ್ಡ್ ಕದಿಯುವ ಹೊಸ ವೈರಸ್ ಸದ್ದಿಲ್ಲದೇ ದಾಳಿ ಮಾಡುತ್ತಿರುವುದಾಗಿ "ಕಂಪ್ಯೂಟರ್ ರೆಸ್ಪಾನ್ಸ್ ಎಮರ್ಜೆನ್ಸಿ ಟೀಂ-ಇಂಡಿಯಾ (CERT)" ಪತ್ತೆಹಚ್ಚಿದೆ.

ಯಾವ ವೈರಸ್?

- ವಿನ್32/Ramnit ಎಂದು ಹೆಸರಿಡಲಾಗಿರುವ ಈ ವೈರಸ್, ಬ್ಯಾಂಕ್ ಖಾತೆ ವಿವರ ಮತ್ತು ಪಾಸ್ ವರ್ಡ್ ನ್ನು ಅರಿವಿಲ್ಲದೇ ಕದಿಯುತ್ತಿದೆ ಎನ್ನಲಾಗಿದೆ. ಈ ವೈರಸ್ ಈಗ ದೇಶದಾದ್ಯಂತ ವ್ಯಾಪಕವಾಗಿ ಹರಡಿದೆ ಎಂದು CERT ಹೇಳಿದೆ.
- ವಿಶೇಷವೆಂದರೆ, ಈ ವೈರಸ್ ನ್ನು ಯಾವ ಆಂಟಿ-ವೈರಸ್ ನಿಂದಲೂ ಪತ್ತೆಹ್ಚಲೂ ಸಾಧ್ಯವಿಲ್ಲ. ಆಗಾಗಿ ಇದು ಇಂಟರ್ ನೆಟ್ ಬಳಕೆದಾರರಿಗೆ ಸವಾಲಿಗೆ ಪರಿಣಮಿಸಿದೆ.

ಕಾರ್ಯವಿಧಾನ?

- ಬ್ಯಾಂಕ್ ಖಾತೆಯನ್ನು ಹೊಂದಿರುವ ವ್ಯಕ್ತಿ ತನ್ನ ಖಾತೆಯನ್ನು ಆನ್ ಲೈನ್ ನಲ್ಲಿ ತೆರೆಯುತ್ತಿರುವಾಗಲೇ ಈ ವೈರಸ್ ಖಾತೆಯ ವಿವರವನ್ನು ಸಂಗ್ರಹಿಸಲು ಶುರು ಮಾಡುತ್ತದೆ.
- Exe, DLL ಅಥವಾ HTML ಮಾದರಿಯಲ್ಲಿರುವ ದಾಖಲೆಗಳನ್ನು ಈ ವೈರಸ್ ಮಾರ್ಪಾಡು ಮಾಡುತ್ತದೆ. ಅಲ್ಲಿ ಹೊಸ ವಿಭಾಗವನ್ನು ಸೃಷ್ಟಿಸಿ, ಪಾಸ್ ವರ್ಡ್, ಬ್ಯಾಂಕ್ ಖಾತೆ ಲಾಗಿನ್ ವಿವರಗಳನ್ನು ಕದಿಯುತ್ತದೆ. ಜತೆಗೆ ಬ್ರೌಸಿಂಗ್ ಸೆಟಿಂಗ್ ನ್ನು ಬದಲಾಯಿಸುತ್ತದೆ.

**ಎಂಎಸ್ಎಮ್ಇ (MSME) ವಲಯದ ರಫ್ತು ಉತ್ತೇಜನಕ್ಕೆ ಸಮಿತಿ ರಚಿಸಿದ: ಕೇಂದ್ರ**

ಇತ್ತೀಚಿನ ದಿನಗಳಲ್ಲಿ "ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮ (MSME)" ದ ರಫ್ತಿನಲ್ಲಿ ದಿನೇ ದಿನೇ ಇಳಿಕೆಯಾಗುತ್ತಿದ್ದು, ರಫ್ತು ಉತ್ತೇಜನಕ್ಕೆ ಅಧ್ಯಯನ ನಡೆಸಿ ಸರ್ಕಾರಕ್ಕೆ ಶಿಫಾರಸ್ಸು ಮಾಡುವ ಸಲುವಾಗಿ ಕೇಂದ್ರ ಸರ್ಕಾರ ಆರು ಜನರ ಸಮಿತಿಯೊಂದನ್ನು ರಚಿಸಿದೆ. ಕೇಂದ್ರ ಸರ್ಕಾರದ ಹಣಕಾಸು ಕಾರ್ಯದರ್ಶಿ "ಆರ್. ಎಸ್. ಗುಜ್ರಲ್" ರವರು ಈ ಸಮಿತಿಯ ನೇತೃತ್ವ ವಹಿಸಿಕೊಂಡಿದ್ದಾರೆ. ದೇಶದ ರಫ್ತಿನಲ್ಲಿ ಶೇ.40 ರಷ್ಟು ಪಾಲನ್ನು "ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ಯಮ ಹೊಂದಿದೆ. ಅಲ್ಲದೇ, ದೇಶದ "ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿಡಿಪಿ)" ರಲ್ಲಿ ಶೇ.8 ರಷ್ಟು ಕೊಡುಗೆಯನ್ನು ಈ ವಲಯ ನೀಡುತ್ತಿದೆ.

ಸಮಿತಿ ಬಗ್ಗೆ:

- ಸಮಿತಿಯು "ಎಂಎಸ್ಎಮ್ಇ" ವಲಯದಿಂದ ರಫ್ತನ್ನು ಹೆಚ್ಚಿಸಲು ಸಣ್ಣ ಮತ್ತು ದೀರ್ಘಕಾಲೀನ ಕ್ರಮಗಳನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡಲಿದೆ.
- ಮೇ, 2013 ರ ವೇಳೆಗೆ ಸಮಿತಿಗೆ ತನ್ನ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.
- ಸಮಿತಿಯ ಇತರೆ ಸದಸ್ಯರುಗಳು: ವಾಣಿಜ್ಯ ಕಾರ್ಯದರ್ಶಿ ಎಸ್.ಆರ್, ರಾವ್, ಎಂಎಸ್ಎಮ್ಇ ಕಾರ್ಯದರ್ಶಿ ಮಾಧವ್ ಲಾಲ್, ಹಣಕಾಸು ಸೇವಾ ಕಾರ್ಯದರ್ಶಿ ರಾಜೀವ್ ಟಕ್ರು, ಮುಖ್ಯ ಆರ್ಥಿಕ ಸಲಹೆಗಾರ ರಘುರಾಮ್ ರಾಜನ್ ಮತ್ತು ರೆನಿನ್ಯೂ ಕಾರ್ಯದರ್ಶಿ ಸುಮೀತ್ ಬೋಸ್.

## ಕ್ರೀಡೆ

### ಸೆರೆನಾ ಗೆ ಮಿಯಾಮಿ ಮಾಸ್ಟರ್ ಓಪನ್ ಟೆನ್ನಿಸ್-2013 ಪ್ರಶಸ್ತಿ

ವಿಶ್ವದ ನಂ.1 ಟೆನ್ನಿಸ್ ಆಟಗಾರ್ತಿ ಸೆರೆನಾ ವಿಲಿಯಮ್ಸ್ ರವರ ಸಾಧನೆಗೆ ಮತ್ತೊಂದು ಕಿರೀಟ ದೊರೆತಿದೆ. ಕುತೂಹಲ ಮೂಡಿಸಿದ್ದ ಮಿಯಾಮಿ ಮಾಸ್ಟರ್ ಓಪನ್ ಟೆನ್ನಿಸ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಸೆರೆನಾ ರವರು ವಿಜೇತೆಯಾಗಿ ಹೊರಹೊಮ್ಮಿದರು.

- ಸೆರೆನಾ ರವರು ರಷ್ಯಾದ ಆಟಗಾರ್ತಿ ಮರಿಯಾ ಶರಪೋವಾ ರವರ ವಿರುದ್ಧ 4-6, 6-3, 6-0 ರಲ್ಲಿ ಗೆಲ್ಲುವ ಮೂಲಕ ಸಾಧನೆಗೆ ಮುನ್ನುಡಿ ಬರೆದರು. ಈ ಜಯದ ಮೂಲಕ ಸೆರೆನಾ ರವರು ಮಿಯಾಮಿ ಮಾಸ್ಟರ್ ಓಪನ್ ಟೆನ್ನಿಸ್ ಟೂರ್ನಿಯಲ್ಲಿ ನಲ್ಲಿ ದಾಖಲೆಯ ಆರನೇ ಬಾರಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ವಿಶೇಷವೆಂದರೆ ಈ ಗೆಲುವಿನ ಮೂಲಕ ಸೆರೆನಾ ರವರು ಶರಪೋವಾರವರ ವಿರುದ್ಧ ಸತತವಾಗಿ 11 ಪಂದ್ಯಗಳಲ್ಲಿ ಜಯ ಸಾಧಿಸಿದಂತಾಗಿದೆ.
- ಈ ಹಿಂದೆ ಕ್ರಿಸ್ ಎವರ್ಟ್, ಸ್ಟೆಫಿ ಗ್ರಾಫ್ ಮತ್ತು ಮರ್ಟಿನಾ ನವರ್ಟೋಲಿನಾ ರವರು ಆರು ಬಾರಿ ಈ ಪ್ರಶಸ್ತಿಯನ್ನು ಗೆದ್ದಿದ್ದರು. ಈಗ ಸೆರೆನಾ ಕೂಡ ಇವರೊಂದಿಗೆ ಸೇರಿಕೊಂಡಿದ್ದಾರೆ.
- ಮಿಯಾಮಿ ಟೆನ್ನಿಸ್ ಟೂರ್ನಿ ಸೆರೆನಾ ರವರ 48 ನೇ WTA ವೃತ್ತಿಪರ ಪ್ರಶಸ್ತಿಯಾಗಿದೆ. ಸೆರೆನಾ ರವರು 15 ಬಾರಿ ಗ್ರಾಂಡ್ ಸ್ಲಾಮ್ ಸಿಂಗಲ್ಸ್ ಚಾಂಪಿಯನ್ ಆಗಿದ್ದಾರೆ.

### ಮಿಯಾಮಿ ಓಪನ್ ಟೆನ್ನಿಸ್ ಟೂರ್ನಿ: ಅಂಡ್ರ್ಯೂ ಮರ್ರೆ ಗೆ ಪ್ರಶಸ್ತಿಯ ಗರಿ

ವಿಶ್ವದ ನಂ.2 ಆಟಗಾರ ಬ್ರಿಟನ್ ನ ಅಂಡ್ರ್ಯೂ ಮರ್ರೆ ರವರು ಮಿಯಾಮಿ ಮಾಸ್ಟರ್ಸ್ ಟೆನ್ನಿಸ್ ಪಂದ್ಯಾವಳಿ ಫೈನಲ್ ಪಂದ್ಯದಲ್ಲಿ ವಿಜಯದ ಮಾಲೆ ಧರಿಸಿದರು. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಮರ್ರೆ ರವರು ಸ್ಪೇನ್ ನ ಡೇವಿಡ್ ಫೆರರ್ ವಿರುದ್ಧ 2-6, 6-4, 7-6 ರಲ್ಲಿ ಜಯಗಳಿಸಿದರು.

- 2009 ರಲ್ಲಿ ಮತ್ತು ಕಳೆದ ವರ್ಷ ಈ ಪಂದ್ಯಾವಳಿಯಲ್ಲಿ ಮರ್ರೆ ರವರು ರನ್ನರ್ ಅಪ್ ಪ್ರಶಸ್ತಿಯನ್ನು ಮಾತ್ರ ಗೆದ್ದಿದ್ದರು. ಒಂದು ವೇಳೆ ಈ ಪ್ರಶಸ್ತಿಯನ್ನು ಫೆರರ್ ಗೆದ್ದಿದ್ದರೆ ಮಿಯಾಮಿ ಪ್ರಶಸ್ತಿಯನ್ನು ಗೆದ್ದ ಮೊದಲ ಸ್ಪೇನ್ ಟೆನಿಸ್ ತಾರೆಯಾಗಲಿದ್ದರು.

ಮರ್ರೆಯವರಿಗೆ ಇದು ಈ ವರ್ಷದ ಎರಡನೇ ಪ್ರಶಸ್ತಿ ಜೊತೆಗೆ ಎರಡನೇ ಮಿಯಾಮಿ ಟೂರ್ನಿ ಪ್ರಶಸ್ತಿ ಸಹ ಆಗಿದೆ. ಇತ್ತೀಚೆಗೆ ನಡೆದ ಬ್ರಿಸ್ಬೇನ್ ಅಂತರರಾಷ್ಟ್ರೀಯ ಟೆನ್ನಿಸ್ ಪಂದ್ಯಾವಳಿಯಲ್ಲಿ ಅವರು ರೋಮಾಂಚಕವಾದ ಗೆಲುವನ್ನು ಸಾಧಿಸಿದ್ದರು.

**ಅಂತರರಾಷ್ಟ್ರೀಯ ಟಿ-20 ಕ್ರಿಕೆಟ್ ಸರಣಿ: ಭಾರತ ವನಿತೆಯರ ತಂಡಕ್ಕೆ ಜಯ**

ಭಾರತ ಮತ್ತು ಬಾಂಗ್ಲಾದೇಶಗಳ ನಡುವೆ ನಡೆದ ಮಹಿಳೆಯರ ಅಂತರರಾಷ್ಟ್ರೀಯ ಟಿ-20 ಕ್ರಿಕೆಟ್ ಸರಣಿಯಲ್ಲಿ ಭಾರತ ವನಿತೆಯರ ತಂಡ 3-0 ರಲ್ಲಿ ಸರಣಿಯನ್ನು ತನ್ನದಾಗಿಸಿಕೊಂಡಿತ್ತು. ವಡೋದರದಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಬಾಂಗ್ಲ ವಿರುದ್ದ ಭಾರತ 10 ರನ್ ಗಳ ಜಯ ಸಾಧಿಸುವ ಮೂಲಕ ಪ್ರಶಸ್ತಿಯನ್ನು ಗೆದ್ದುಕೊಂಡಿತು.

- ಮೊದಲ ಮತ್ತು ಎರಡನೇ ಪಂದ್ಯಗಳಲ್ಲೂ ಭಾರತ ತಂಡ ಬಾಂಗ್ಲದೇಶವನ್ನು ಹೀನಾಯವಾಗಿ ಮಣಿಸಿತ್ತು.
- ಭಾರತ ಮತ್ತು ಬಾಂಗ್ಲ ದೇಶಗಳ ವನಿತೆಯರ ಅಂತರರಾಷ್ಟ್ರೀಯ ಏಕದಿನ ಪಂದ್ಯಗಳು ಏಪ್ರಿಲ್ 8 ರಿಂದ ಅಹಮದಬಾದ್ ನಲ್ಲಿ ಆರಂಭವಾಗಲಿವೆ.

**ವಿಶ್ವಕಪ್ ಶೂಟಿಂಗ್: ರಾಹಿಗೆ ಚಿನ್ನದ ಪದಕ**

ದಕ್ಷಿಣಾ ಕೊರಿಯಾದಲ್ಲಿ ನಡೆಯುತ್ತಿರುವ IASF ವಿಶ್ವಕಪ್ ಶೂಟಿಂಗ್ ನಲ್ಲಿ ಭಾರತದ ಮಹಿಳಾ ಶೂಟರ್ ರಾಹಿ ಸರ್ನೋಬತ್ ರವರು ಬಂಗಾರದ ಪದಕ ಜಯಿಸಿದರು. 25 ಮೀಟರ್ ಸ್ಪೋರ್ಟ್ಸ್ ಪಿಸ್ತೂಲ್ ವಿಭಾಗದಲ್ಲಿ ರಾಹಿ ರವರು ಈ ಸಾಧನೆ ಮಾಡಿದರು.

- ಕೊರಿಯಾದ ಚಾಂಗ್ವನ್ ನಲ್ಲಿ ನಡೆದ ಫೈನಲ್ ಪಂದ್ಯದಲ್ಲಿ ಅವರು 8-6 ರಿಂದ ಅದೇ ದೇಶದ ಕಿಯೋಂಗ್ ಯಿ ಕಮ್ ರವರ ವಿರುದ್ದ ಗೆದ್ದರು.
- ರಾಹಿ ರವರು ಈ ವಿಭಾಗದಲ್ಲಿ ಚಿನ್ನದ ಪದಕ ಗೆದ್ದ ಮೊದಲ ಭಾರತೀಯ ಸ್ಪರ್ಧಿ ಎನಿಸಿದ್ದಾರೆ.
- ಈ ಗೆಲುವಿನೊಂದಿಗೆ ರೈಫಲ್ ಶೂಟಿಂಗ್ ವಿಶ್ವಕಪ್ ನಲ್ಲಿ ಭಾರತಕ್ಕೆ ಚಿನ್ನದ ಪದಕ ತಂದುಕೊಟ್ಟ ಅಂಜಲಿ ಭಾಗ್ವತ್, ಗಗನ್ ನಾರಂಗ್, ಸಜೀವ್ ರಜ್ ಪೂತ್, ರಾಜವರ್ಧನ್ ಸಿಂಗ್ ರಾಥೋಡ್ , ರಂಜನ್ ಸೋಧಿ ಮತ್ತು ಮಾನವಜಿತ್ ಸಿಂಗ್ ಸಂಧು ರವರ ಸಾಲಿಗೆ ಸೇರಿದರು.

ಭಾರತದ ಪಿ.ಎನ್.ಪ್ರಕಾಶ್ ರವರು ಇದೇ ವಿಶ್ವಕಪ್ ಶೂಟಿಂಗ್ ನಲ್ಲಿ ಕಂಚಿನ ಪದಕ ಗೆದ್ದರು. ಅವರು 10 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಮೂರನೇ ಸ್ಥಾನಗಳಿಸಿ ಕಂಚಿನ ಪದಕವನ್ನು ತಮ್ಮದಾಗಿಸಿಕೊಂಡರು. ಪ್ರಕಾಶ್ ರವರು ಈ ಪದಕ ಗೆದ್ದ ಮೊದಲ ಕನ್ನಡಿಗ.

**ಡೇವಿಸ್ ಕಪ್: ಇಂಡೋನೇಷಿಯಾ ವಿರುದ್ದ ಭಾರತಕ್ಕೆ 5-0 ಗೆಲುವು**

ಭಾರತದ ಯುವ ಆಟಗಾರರಾದ ಸೋಮ್ ದೇವ್ ವರ್ಮನ್ ಮತ್ತು ಯುಕಿ ಬಾಂಬ್ರಿ ಇಂಡೋನೇಷಿಯಾ ವಿರುದ್ದದ ರಿಸರ್ವ್ ಸಿಂಗಲ್ಸ್ ನಲ್ಲಿ ಜಯಭೇರಿ ಬಾರಿಸುವ ಮೂಲಕ ಏಷ್ಯಾ/ಓಶೆನಿಯಾ ಗುಂಪು-1 ರ ಡೇವಿಸ್ ಕಪ್ ಟೆನಿಸ್ ಟೂರ್ನಿಯಲ್ಲಿ 5-0 ರಿಂದ ಕ್ಲೀನ್ ಸಿಪ್ ಸಾಧಿಸಿತು.

- ಭಾರತ ತಂಡ ಈಗಾಗಲೇ ಇಂಡೋನೇಷಿಯಾ ವಿರುದ್ದ 3-0 ಯಿಂದ ಗೆದ್ದು ಟೂರ್ನಿಯನ್ನು ಗೆದ್ದುಕೊಂಡಿತ್ತು.
- ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ ಅಂಗಳದಲ್ಲಿ ನಡೆದ ಮೊದಲ ಪಂದ್ಯದಲ್ಲಿ ಸೋಮ್ ದೇವ್ ರವರು 6-3, 6-1 ನೇರ ಸೆಟ್ ಗಳಿಂದ ಇಂಡೋನೇಷಯಾದ ಡೇವಿಡ್ ಅಂಗುಂಗ್ ಸುಸಾಂಟೊ ರವರನ್ನು ಸುಲಭವಾಗಿ ಮಣಿಸಿದರು.

- ನಂತರ ನಡೆದ ಇನ್ನೊಂದು ಪಂದ್ಯದಲ್ಲಿ ಯುಕಿ ಭಾಂಬ್ರಿ 6-0,6-1 ನೇರ ಸೆಟ್ ಗಳಿಂದ ಇಂಡೋನೇಷಿಯಾದ ವಿಷ್ಣು ಆದಿ ನುಗ್ರೊಹೊ ವಿರುದ್ಧ ಸುಲಭ ಜಯ ಸಾಧಿಸಿದರು.

**ಹಾಕಿ ಇಂಡಿಯಾದಿಂದ ಉತ್ತಮ ನಿರ್ವಹಣೆ ಮತ್ತು ಅಭಿವೃದ್ಧಿ ಸಮಿತಿ ರಚನೆ**

ರಾಷ್ಟ್ರ ಕ್ರೀಡೆ ಹಾಕಿಯನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಸ್ಪರ್ಧಿಸಲು ಮತ್ತಷ್ಟು ಬಲಗೊಳಿಸುವ ಸಲುವಾಗಿ "ಉತ್ತಮ ನಿರ್ವಹಣೆ ಮತ್ತು ಅಭಿವೃದ್ಧಿ ಸಮಿತಿ" ಯನ್ನು ಹಾಕಿ ಇಂಡಿಯಾ ರಚಿಸಿದೆ. 15 ಮಂದಿ ಸದಸ್ಯರ ಈ ಸಮಿತಿಗೆ ಹಾಕಿ ಇಂಡಿಯಾದ ಸೆಕ್ರಟರಿ ಜನರಲ್ ಡಾ.ನಾರಿಂದರ್ ಭಾತ್ರ ರವರು ಅಧ್ಯಕ್ಷರಾಗಿರವರು. ಹಾಕಿ ಇಂಡಿಯಾದ ವಿಶೇಷ ನಿರ್ದೇಶಕ "ರೊಲಂಟ್ ಒಲ್ಟಮನ್ಸ್" ರವರು ಉಪಾಧ್ಯಕ್ಷರಾಗಿದ್ದಾರೆ. ಭಾರತ ಹಾಕಿ ತಂಡದ ಮಾಜಿ ಆಟಗಾರರು ಮತ್ತು ತರಬೇತುದಾರರು ಈ ಸಮಿತಿಯ ಇತರೆ ಸದಸ್ಯರುಗಳು.

ಈ ಸಮಿತಿಯ ಉದ್ದೇಶಗಳೇನು?

- ಹಾಕಿಯನ್ನು ತಳಹಂತದಲ್ಲಿಯೇ ಪ್ರೋತ್ಸಾಹಿಸುವುದು, ಉತ್ತಮ ನಿರ್ವಹಣೆಗೆ ತಯಾರಿ ಮಾಡುವುದು ಮತ್ತು ತಂಡವನ್ನು ಅಭಿವೃದ್ಧಿಪಡಿಸುವುದು.
- ಉತ್ತಮ ತರಬೇತಿಯ ನೀಲನಕ್ಷೆಯನ್ನು ತಯಾರಿಸಿ, ದೇಶದ ಎಲ್ಲಾ ಹಂತಗಳಲ್ಲೂ ಈ ನೀಲನಕ್ಷೆಯನ್ನು ಅಳವಡಿಸಿಕೊಂಡು ತಂಡಕ್ಕೆ ತರಬೇತಿ ನೀಡುವುದು.
- ಹಾಕಿಯಲ್ಲಿ ಖ್ಯಾತಿಗಳಿಸಿರುವ ದೇಶ ವಿದೇಶ ಆಟಗಾರರು ಮತ್ತು ತರಬೇತುದಾರರ ಸಲಹೆ ಮತ್ತು ಮಾರ್ಗದರ್ಶನಗಳನ್ನು ಪಡೆದುಕೊಂಡು ಸರ್ವಶ್ರೇಷ್ಠ ತಂಡವನ್ನು ಕಟ್ಟುವುದು.

**ಟೆನ್ನಿಸ್ ಅಗ್ರಸ್ಥಾನ ಕಾಯ್ದುಕೊಂಡ ಸೆರೆನಾ ಮತ್ತು ಜೊಕೊವಿಕ್**

ಟೆನ್ನಿಸ್ ಅಸೊಸಿಯೇಷನ್ Ranking ಪಟ್ಟಿಯನ್ನು ಬಿಡುಗಡೆಗೊಳಿಸಿದ್ದು, ಮಹಿಳೆಯರ ಟಾಪ್ ಟೆನ್ ಪಟ್ಟಿಯಲ್ಲಿ ಅಮೆರಿಕಾದ ಸೆರೆನಾ ವಿಲಿಯಮ್ಸ್ ರವರು ಅಗ್ರಸ್ಥಾನವನ್ನು ಉಳಿಸಿಕೊಂಡಿದ್ದಾರೆ. ವಿಶೇಷವೆಂದರೆ ಕಳೆದ ಬಾರಿ ಬಿಡುಗಡೆಗೊಳಿಸಿದ ಪಟ್ಟಿಗೂ ಈ ಬಾರಿಯ ಪಟ್ಟಿಯಲ್ಲಿ ಯಾವುದೇ ಸ್ಥಾನ ಬದಲಾವಣೆ ಆಗಿಲ್ಲ.

- ಸೆರೆನಾ ರವರು 11,115 ಪಾಯಿಂಟ್ ಗಳಿಂದ ನಂ.1 ಸ್ಥಾನದಲ್ಲಿದ್ದಾರೆ. ರಷ್ಯಾದ ಮಾರಿಯಾ ಶರಪೋವ (10240) ಮತ್ತು ಬೆಲಾರಸ್ ನ ವಿಕ್ಟೋರಿಯಾ ಅಝುರೆಕಾ (9325) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿರುವರು.

**ಪುರುಷರ ಪಟ್ಟಿ:**

- ಪುರುಷರ ಟೆನ್ನಿಸ್ ಶ್ರೇಣಿ ಪಟ್ಟಿಯಲ್ಲಿ ಸರ್ಬೀಯಾದ "ನೊವಾಕ್ ಜೊಕೊವಿಕ್" ರವರು ಪ್ರಥಮ ಸ್ಥಾನವನ್ನು ತಮ್ಮ ಬಳಿ ಉಳಿಸಿಕೊಂಡಿದ್ದಾರೆ. ಜೊಕೊವಿಕ್ ರವರು 12,500 ಪಾಯಿಂಟ್ ಗಳಿಂದ ನಂ.1 ಸ್ಥಾನವನ್ನು ಅಲಂಕರಿಸಿದ್ದಾರೆ.
- ಎರಡನೇ ಸ್ಥಾನದಲ್ಲಿ ಬ್ರಿಟನ್ ನ ಆಂಡ್ಯ್ರೂ ಮುರ್ರೆ (8750) ಮತ್ತು ಮೂರನೇ ಸ್ಥಾನದಲ್ಲಿ ಸ್ವಿಟ್ಜರ್ಲ್ಯಾಂಡ್ ನ ರೋಜರ್ ಫೆಡರರ್ (8670) ರವರು ಕಾಣಿಸಿಕೊಂಡಿದ್ದಾರೆ.

**27 ನೇ ಈಶಾನ್ಯ ರಾಜ್ಯಗಳ ಕ್ರೀಡಾಕೂಟ: ಮಣಿಪುರಕ್ಕೆ ಚಾಂಪಿಯನ್ ಪಟ್ಟ**

27 ನೇ ಈಶಾನ್ಯ ರಾಜ್ಯಗಳ ಕ್ರೀಡಾಕೂಟವನ್ನು ಮಣಿಪುರದ ಇಂಪಾಲ್ ನಲ್ಲಿ ಆಯೋಜಿಸಲಾಗಿತ್ತು. ಏಪ್ರಿಲ್ 8, 2013 ರಿಂದ ಎಪ್ರಿಲ್ 11, 2013 ರ ವರೆಗೆ ನಡೆದ ಕ್ರೀಡಾಕೂಟದಲ್ಲಿ ಅತಿಥ್ಯವಹಿಸಿದ್ದ ಮಣಿಪುರ ರಾಜ್ಯ ಚಾಂಪಿಯನ್ ಆಗಿ ಹೊರಹೊಮ್ಮಿತು.

- ಒಟ್ಟು 127 ಪದಕಗಳನ್ನು ಗೆಲ್ಲುವ ಮೂಲಕ ಮಣಿಪುರ ಚಾಂಪಿಯನ್ ಕಿರೀಟವನ್ನು ಮುಡಿಗೇರಿಸಿಕೊಂಡಿತು. ಇದರಲ್ಲಿ 74 ಚಿನ್ನ, 31 ಬೆಳ್ಳಿ ಮತ್ತು 22 ಕಂಚಿನ ಪದಕಗಳು ಸೇರಿವೆ.
- 101 ಪದಕಗಳನ್ನು ಗೆಲ್ಲುವ ಮೂಲಕ ಅಸ್ಸಾಂ ಎರಡನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು. ಅಸ್ಸಾಂ ರಾಜ್ಯ 31 ಚಿನ್ನ, 30 ಬೆಳ್ಳಿ ಮತ್ತು 40 ಕಂಚಿನ ಪದಕಗಳನ್ನು ಗೆಲ್ಲುವಲ್ಲಿ ಶಕ್ತವಾಯಿತು.
- 20 ಚಿನ್ನ, 19 ಬೆಳ್ಳಿ ಮತ್ತು 33 ಕಂಚಿನ ಪದಕಗಳನ್ನು ಸೇರಿ ಒಟ್ಟು 72 ಪದಕಗಳನ್ನು ಗೆದ್ದ ಮಿಜೋರಾಂ ರಾಜ್ಯ ಮೂರನೇ ಸ್ಥಾನ ಪಡೆದುಕೊಂಡಿತು.
- ಉಳಿದಂತೆ ನಾಗಾಲ್ಯಾಂಡ್ (49), ಅರುಣಚಲ್ ಪ್ರದೇಶ್ (45), ಮೇಘಾಲಯ (37), ತ್ರಿಪುರ (36) ಮತ್ತು ಸಿಕ್ಕಿಂ (11) ಪದಕಗಳನ್ನು ಗೆಲ್ಲುವ ಮೂಲಕ ಕ್ರಮವಾಗಿ ನಂತರದ ಸ್ಥಾನಗಳನ್ನು ಪಡೆದುಕೊಂಡವು.

ಈಶಾನ್ಯ ರಾಜ್ಯ ಕ್ರೀಡಾ ಕೂಟ:

- ಈಶಾನ್ಯ ರಾಜ್ಯಗಳ ಕ್ರೀಡಾ ಕೂಟವನ್ನು ಮೊದಲು ಈಶಾನ್ಯ ರಾಜ್ಯಗಳ ಕ್ರೀಡಾ ಉತ್ಸವ ಎಂದು ಕರೆಯಲಾಗುತ್ತಿತ್ತು. ಈ ಕ್ರೀಡಾಕೂಟವನ್ನು ಮೊದಲ ಬಾರಿಗೆ 1986-87 ರಲ್ಲಿ ಇಂಪಾಲ್ ನಲ್ಲಿ ಏರ್ಪಡಿಸಲಾಗಿತ್ತು.

**ಕ್ರಿಕೆಟ್ :ಭಾರತ ವನಿತೆಯರ ತಂಡದ ಪಾಲಾದ ಏಕದಿನ ಸರಣಿ**

ಬಾಂಗ್ಲದೇಶದ ವಿರುದ್ಧ ಟ್ವೆಂಟಿ-20 ಸರಣಿಯಲ್ಲಿ ಗೆಲುವು ಸಾಧಿಸಿದ್ದ ಭಾರತದ ವನಿತೆಯರ ತಂಡ ಏಕದಿನ ಸರಣಿಯನ್ನು ತನ್ನದಾಗಿಸಿಕೊಂಡಿತು. ಸರ್ದಾರ್ ಪಟೇಲ್ ಕ್ರೀಡಾಂಗಣದಲ್ಲಿ ನಡೆದ ಮೂರನೇ ಮತ್ತು ಕೊನೆಯ ಪಂದ್ಯದಲ್ಲಿ ಬಾಂಗ್ಲದೇಶವನ್ನು 58 ರನ್ ಗಳಿಂದ ಮಣಿಸಿ ಸರಣಿಯನ್ನು ತನ್ನದಾಗಿಸಿಕೊಂಡಿತು.

- ಮೂರನೇ ಏಕದಿನ ಪಂದ್ಯದಲ್ಲಿ ಟಾಸ್ ಗೆದ್ದು ಬ್ಯಾಟಿಂಗ್ ಆರಿಸಿಕೊಂಡ ಭಾರತ 48.3 ಓವರ್ ಗಳಲ್ಲಿ 154 ರನ್ ಗಳ ಸಾಧಾರಣ ಗುರಿಯನ್ನು ನೀಡಿತು.
- ಆದರೆ ಬ್ಯಾಟಿಂಗ್ ವೈಫಲ್ಯ ಕಂಡ ಬಾಂಗ್ಲದೇಶ ಕೇವಲ 96 ರನ್ ಗಳನ್ನು ಗಳಿಸುವ ಮೂಲಕ ತನ್ನ ಎಲ್ಲಾ ವಿಕೆಟ್ ಗಳನ್ನು ಕಳೆದುಕೊಂಡು ಪರಾಭವಗೊಂಡಿತು.
- ಭಾರತದ ಪರ ಆರಂಭಿಕ ಬ್ಯಾಟ್ಸ್ ಮನ್ ಗಳಾದ ಪೂನಮ್ ರಾವತ್ ಮತ್ತು ಸ್ಮೃತಿ ಮಂಧಾನ ರವರ ಜೊತೆಯಾಟ ಮೊದಲ ವಿಕೆಟ್ ಗೆ ಭಾರತ 37 ರನ್ ಕಲೆಹಾಕಿತು.

**ಏಷ್ಯನ್ ಕುಸ್ತಿ ಚಾಂಪಿಯನ್ ಷಿಪ್: ಅಮಿತ್ ಕುಮಾರ್ ಗೆ ಚಿನ್ನ**

ಭಾರತದ "ಅಮಿತ್ ಕುಮಾರ್ ದಂಕರ್" ರವರು "ಸೀನಿಯರ್ ಏಷ್ಯನ್ ಕುಸ್ತಿ ಚಾಂಪಿಯನ್ ಷಿಪ್" ನ ಪುರುಷರ 66 ಕೆ.ಜಿ ಪ್ರೀ ಸ್ಟೈಲ್ ವಿಭಾಗದಲ್ಲಿ ಬಂಗಾರದ ಪದಕ ಗೆದ್ದುಕೊಂಡರು.

- ಅಮಿತ್ ರವರು ಫೈನಲ್ ಪಂದ್ಯದಲ್ಲಿ 0-1, 4-0, 3-2 ರಿಂದ ಮಂಗೋಲಿಯಾದ ಎಮ್.ಗಾಂಜೋರಿಂಗ್ ರವರನ್ನು ಪರಾಭವಗೊಳಿಸುವ ಮೂಲಕ ಪದಕ ಗೆದ್ದರು.
- ಇದೇ ವೇಳೆ, ಪುರುಷರ 84 ಕೆ.ಜಿ ವಿಭಾಗದಲ್ಲಿ ಭಾರತದ ನರಸಿಂಗ್ ಪಂಚಮ್ ಸಿಂಗ್ ರವರು ಕಂಚಿನ ಪದಕ ಗೆದ್ದರು.

ಪ್ರಯಾಗ್ ಗೆ ಬಂಗಾರ:

- ಕಜಕಿಸ್ತಾನದಲ್ಲಿ ನಡೆಯುತ್ತಿರುವ "ASBS ಕಾನ್ ಫೆಡರೇಷನ್ ಜೂನಿಯರ್ ಬಾಕ್ಸಿಂಗ್ ಚಾಂಪಿಯನ್ ಷಿಪ್" ನ ಪುರುಷರ 60 ಕೆ.ಜಿ ವಿಭಾಗದಲ್ಲಿ ಭಾರತದ ಪ್ರಯಾಗ್ ಚೌಹಣ್ ರವರು ಬಂಗಾರದ ಪದಕ ಗೆದ್ದರು. ಫೈನಲ್ ನಲ್ಲಿ ಅವರು ಕಜಕಿಸ್ತಾನದ ಅಜತ್ ಇಲ್ಯುಬಯೇವ್ ರವರನ್ನು ಸೋಲಿಸಿ ಪದಕವನ್ನು ಗೆದ್ದರು.

ಕರುನಾಡು ಎಗ್ಸಾಮ್ಸ್

## ಸುದ್ದಿಯಲ್ಲಿರುವ ವ್ಯಕ್ತಿಗಳು

### "ಅಂತರ ರಾಷ್ಟ್ರೀಯ ವಾಣಿಜ್ಯ ಮಂಡಳಿಯ" ಅಧ್ಯಕ್ಷರಾಗಿ ರಾಜನ್ ಭಾರತಿ ಮಿತ್ತಲ್

ಭಾರತಿ ಎಂಟರ್ ಪ್ರೈಸಸ್ ನ ಉಪಾಧ್ಯಕ್ಷ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ರಾಜನ್ ಭಾರತಿ ಮಿತ್ತಲ್ ರವರು "ಅಂತರರಾಷ್ಟ್ರೀಯ ವಾಣಿಜ್ಯ ಮಂಡಳಿ (International Chamber of Commerce (ICC))" ನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

- ಇತ್ತೀಚೆಗೆ ನಡೆದ ICC ಇಂಡಿಯಾದ 82 ನೇ ಸಾಮಾನ್ಯ ಸಭೆಯಲ್ಲಿ ರಾಜನ್ ರವರ ನೇಮಕಾತಿ ನಿರ್ಣಯವನ್ನು ಕೈಗೊಳ್ಳಲಾಗಿದೆ. ICC ಇಂಡಿಯಾ ಅಂತರರಾಷ್ಟ್ರೀಯ ಮಟ್ಟದ ವ್ಯವಹಾರ ಸಂಸ್ಥೆಯಾದ ಪ್ಯಾರಿಸ್ ಮೂಲದ ICC ಯಿಂದ ಮಾನ್ಯತೆ ಪಡೆದುಕೊಂಡಿದೆ.
- ದೂರ ಸಂಪರ್ಕ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರುವ ಭಾರತಿ ಏರ್ ಟೆಲ್ ಭಾರತಿ ಎಂಟರ್ ಪ್ರೈಸಸ್ ನ ಸಮೂಹ ಸಂಸ್ಥೆಯಾಗಿದೆ. ಭಾರತಿ ಏರ್ ಟೆಲ್ ಸದ್ಯ ವಿಶ್ವದಾದ್ಯಂತ 20 ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.

### ಎಂ.ಎಫ್.ಫಾರೂಕಿ ದೂರ ಸಂಪರ್ಕ ಇಲಾಖೆಯ ನೂತನ ಕಾರ್ಯದರ್ಶಿ

ದೂರ ಸಂಪರ್ಕ ಇಲಾಖೆಯ (Department of Telecom)ನೂತನ ಕಾರ್ಯದರ್ಶಿಯಾಗಿ ಎಂ.ಎಫ್.ಫಾರೂಕಿ ರವರು ನೇಮಕಗೊಂಡಿದ್ದಾರೆ. ಈ ಮುಂಚೆ ಕಾರ್ಯದರ್ಶಿಯಾಗಿದ್ದ ಆರ್.ಚಂದ್ರಶೇಖರ್ ರವರು ಮಾರ್ಚ್ ತಿಂಗಳ ಅಂತ್ಯದಲ್ಲಿ ನಿವೃತ್ತಿ ಹೊಂದಿದ ಕಾರಣ ಅವರ ಉತ್ತರಾಧಿಕಾರಿಯಾಗಿ ಫಾರೂಕಿ ರವರು ನೇಮಕಗೊಂಡಿದ್ದಾರೆ. ಫಾರೂಕಿ ರವರು ಈ ಮುನ್ನ ಭಾರಿ ಕೈಗಾರಿಕ ಇಲಾಖೆಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸುತ್ತಿದ್ದರು.

ಎಂ.ಎಫ್. ಫಾರೂಕಿ:

- 1978 ನೇ ಬ್ಯಾಚ್ ನ ಐಎಎಸ್ ಅಧಿಕಾರಿಯಾಗಿರುವ ಫಾರೂಕಿ ರವರು ಭೌತಶಾಸ್ತ್ರ ಮತ್ತು ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ.
- ಚೆನ್ನೈ ನಗರ ಅಭಿವೃದ್ಧಿ ಪ್ರಾಧಿಕಾರದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿ, ಪರಿಸರ ಮತ್ತು ಅರಣ್ಯ ಸಚಿವಾಲಯದಲ್ಲಿ ವಿಶೇಷ ಕಾರ್ಯದರ್ಶಿಯಾಗಿ ಇವರು ಕಾರ್ಯನಿರ್ವಹಿಸಿದ್ದಾರೆ.

### ಜಿ.ವಿ. ಪ್ರಸಾದ್ : ಡಾ.ರೆಡ್ಡಿ ಲ್ಯಾಬೋರೆಟರಿಸ್ ಸಂಸ್ಥೆಯ ನೂತನ ಸಿಇಓ

ಡಾ. ರೆಡ್ಡಿ ಲ್ಯಾಬೋರೆಟರಿಸ್ (DRL) ಸಂಸ್ಥೆಯ ನೂತನ ಸಿಇಓ ಆಗಿ ಜಿ.ವಿ.ಪ್ರಸಾದ್ ರವರು ಅಧಿಕಾರವಹಿಸಿಕೊಂಡಿದ್ದಾರೆ. ಜಿ.ವಿ. ಪ್ರಸಾದ್ ರವರು ರೆಡ್ಡಿ ಲ್ಯಾಬೋರೆಟರಿಸ್ ಸಂಸ್ಥೆಯ ಸಂಸ್ಥಾಪಕ ದಿವಂಗತ "ಕಲ್ಲಂ ಅಂಜಿ ರೆಡ್ಡಿ"ರವರ ಅಳಿಯ.

- ಸಂಸ್ಥೆಯ ಉಪಾದ್ಯಕ್ಷ ಸ್ಥಾನದ ಹೊಣೆಯನ್ನು ಅಂಜಿ ರೆಡ್ಡಿರವರ ಮಗ ಸತೀಶ್ ರೆಡ್ಡಿಗೆ ವಹಿಸಲಾಗಿದೆ. ಉಪಾಧ್ಯಕ್ಷ ಸ್ಥಾನದ ಜವಾಬ್ದಾರಿ ಜತೆಗೆ ಸತೀಶ್ ರವರು ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿ ಸಹ ಸೇವೆ ಸಲ್ಲಿಸಲ್ಲಿದ್ದಾರೆ. ಸತೀಶ್ ರವರು 1993 ರಿಂದ ಸಂಸ್ಥೆಯ ಸೇವೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.
- ರೆಡ್ಡಿ ಲ್ಯಾಬೋರೆಟರಿಸ್ ಸಂಸ್ಥಾಪಕರಾದ "ಕಲ್ಲಂ ಅಂಜಿ ರೆಡ್ಡಿ" ರವರು ಮಾರ್ಚ್ 15, 2013 ರಂದು ನಿಧನ ಹೊಂದಿದ್ದರು. ಅವರ ಅಗಲಿಕೆಯಿಂದಾಗಿ ಕಂಪನಿಯ ಆಡಳಿತ ವ್ಯವಸ್ಥೆಗೆ ಬದಲಾವಣೆ ತರಲಾಗಿದ್ದು, ಕಂಪನಿ ಮಂಡಳಿ ಸದಸ್ಯರು ಅರ್ಹತೆಯ ಆದಾರದ ಮೇಲೆ ಈ ಹುದ್ದೆಗಳಿಗೆ ನೇಮಕಮಾಡಿದ್ದಾರೆ.

**ಆಸ್ಕರ್ ಮತ್ತು ಬೂಕರ್ ಪ್ರಶಸ್ತಿ ವಿಜೇತೆ "ರುತ್ ಪ್ರವರ್ ಜಬ್ವಾಲ್" ನಿಧನ**

ದೀರ್ಘಕಾಲದ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ಆಸ್ಕರ್ ಮತ್ತು ಬೂಕರ್ ಪ್ರಶಸ್ತಿ ವಿಜೇತೆ "ರುತ್ ಪ್ರವರ್ ಜಬ್ವಾಲ್ (Ruth Prawer Jabval)" ನ್ಯೂಯಾರ್ಕ್ ನಲ್ಲಿ ನಿಧನರಾದರು. ಅವರಿಗೆ 85 ವರ್ಷ ವಯಸ್ಸಾಗಿತ್ತು.

"ರುತ್ ಪ್ರವರ್ ಜಬ್ವಾಲ್":

- "ಮರ್ಚಂಟ್ ಐವೋರಿ ಪ್ರೊಡಕ್ಷನ್" ಸಂಸ್ಥೆಯಲ್ಲಿ ಜಬ್ವಾಲ್ ರವರು ಸದಸ್ಯರಾಗಿ ಅನೇಕ ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. 4 ದಶಕಗಳ ಕಾಲದ ಸೇವೆಯಲ್ಲಿ ಅವರು 22 ಚಿತ್ರಗಳಿಗೆ ಅವರು ಕಥೆಯನ್ನು ಬರೆದಿದ್ದರು.
- ಜಬ್ವಾಲ್ ರವರು "ಎ ರೂಮ್ ವಿತ್ ಎ ವೀವ್" ಮತ್ತು "ಹಾವರ್ಡ್ ಎಂಡ್" ಚಿತ್ರಗಳಿಗೆ ಎರಡು ಬಾರಿ ಆಸ್ಕರ್ ಪ್ರಶಸ್ತಿಗೆ ಭಾಜನರಾಗಿದ್ದರು.
- 19 ಕಾದಂಬರಿಗಳ ಜತೆಗೆ ಅನೇಕ ಸಣ್ಣ ಕಥೆಗಳನ್ನು ಅವರು ರಚಿಸಿದ್ದರು. 1975 ರಲ್ಲಿ ಅವರ ಕಾದಂಬರಿ "ಹೀಟ್ ಅಂಡ್ ಡಸ್ಟ್" ಗೆ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಲಭಿಸಿತ್ತು.
- 2013 ರಲ್ಲಿ "ನ್ಯೂಯಾರ್ಕ್" ನಿಯತಕಾಲಿಕೆಯಲ್ಲಿ ಪ್ರಕಟಗೊಂಡ "ದಿ ಜಡ್ಜ್ ವಿಲ್" ಅವರ ಕೊನೆಯ ಕಥೆಯಾಗಿದೆ.

**ಕಲಾ ಸಾಹಿತಿ ಮರಿಶಾಮಾಚಾರ್ ನಿಧನ**

ಕರ್ನಾಟಕ ಶಿಲ್ಪಾ ಕಲಾ ಅಕಾಡೆಮಿಯ ನಿವೃತ್ತ ರಿಜಿಸ್ಟ್ರಾರ್, ಕಲಾ ಸಾಹಿತಿ ಮರಿಶಾಮಚಾರ್ ನಿಧರಾದರು. 62 ವರ್ಷ ವಯಸ್ಸಿನವರಾಗಿದ್ದ ಅವರಿಗೆ ಪತ್ನಿ ಮತ್ತು ಮೂವರು ಪುತ್ರಿಯರು ಇದ್ದಾರೆ.

ಮರಿಶಾಮಾಚಾರ್:

- ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಗೆ ಬರುವ ವಿಜಯಪುರದಲ್ಲಿ 1951 ರಲ್ಲಿ ಮರಿಶಾಮಾಚಾರ್ ಜನಿಸಿದ್ದರು.
- ಕೆನ್ ಶಾಲೆಯಲ್ಲಿ ಡಿಪ್ಲೊಮಾ ವ್ಯಾಸಂಗ ಮಾಡಿದ ಬಳಿಕ ಬರೋಡಾದಲ್ಲಿ ಉನ್ನತ ಕಲಾ ಶಿಕ್ಷಣ ಪಡೆದರು.
- ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಪ್ರದರ್ಶನ ಅಧಿಕಾರಿಯಾಗಿ 30 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದರು. ಕೇಂದ್ರ ಲಲಿತಕಲಾ ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದ ಅವರು, ವಿವಿಧ ಕಲಾ ಸಂಸ್ಥೆಗಳಲ್ಲಿ ಪದಾದಿಕಾರಿಗಳಾಗಿ ಕಾರ್ಯನಿರ್ವಹಿಸಿದ್ದರು.

- ಕರ್ನಾಟಕ ಲಲಿತಕಲಾ ಅಕಾಡೆಮಿ, ಪುಸ್ತಕ ಪ್ರಾಧಿಕಾರ ಪ್ರಶಸ್ತಿ, ಸುವರ್ಣ ಕರ್ನಾಟಕ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದರು.
- "ದೃಶ್ಯ ಕಲಾ", ಸಮಕಾಲೀನ ಲೀಲೆ", "ಭಾರತದ ದೃಶ್ಯ ಕಲಾವಿದರು", "ಕಲಾ ಸಾಧಕ" ಮತ್ತು ಕೆ.ಕೆ ಹೆಬ್ಬಾರ್ ಕುರಿತಾದ "ಹಾಡುವ ರೇಖೆ" ಸೇರಿದಂತೆ ಅನೇಕ ಕೃತಿಗಳನ್ನು ರಚಿಸಿದ್ದಾರೆ.

**ONGC ಯ ನೂತನ ನಿರ್ದೇಶಕರಾಗಿ ಎನ್.ಕೆ.ವರ್ಮಾ ನೇಮಕ**

ಸರ್ಕಾರಿ ಸ್ವಾಮ್ಯದ "ತೈಲ ಮತ್ತು ನೈಸರ್ಗಿಕ ಅನಿಲ ನಿಗಮ (ONGC)" ದ ಪ್ರತಿಶೋಧನ (Exploration) ವಿಭಾಗದ ನೂತನ ನಿರ್ದೇಶಕರಾಗಿ ನಂದನ್ ಕುಮಾರ್ ವರ್ಮಾ ರವರು ನೇಮಕಗೊಂಡಿದ್ದಾರೆ. ಈ ಮುಂಚೆ ನಿಗಮದ ನಿರ್ದೇಶಕರಾಗಿದ್ದ ಎಸ್.ವಿ. ರಾವ್ ರವರು ಮಾರ್ಚ್ 31, 2013 ರಂದು ನಿವೃತ್ತಿ ಹೊಂದಿದ್ದರು. ರಾವ್ ರವರ ಉತ್ತರಾಧಿಕಾರಿಯಾಗಿ ವರ್ಮಾ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

ಎನ್.ಕೆ.ವರ್ಮಾ:

- ವರ್ಮಾ ರವರು ಭೂಗೋಳ ಶಾಸ್ತ್ರದಲ್ಲಿ ಎಂ.ಎಸ್ಸಿ ಪದವಿ, ಪೆಟ್ರೋಲಿಯಂ ಪ್ರತಿಶೋಧನದಲ್ಲಿ ಎಂ.ಟೆಕ್ ಮತ್ತು ಎಂ.ಬಿ.ಎ (ಫೈನಾನ್ಸ್) ಪದವಿಯನ್ನು ಪಡೆದಿದ್ದಾರೆ. ಇವರು ONGC ಪ್ರತಿಶೋಧನಾ ವಿಭಾಗದ 11 ನೇ ನಿರ್ದೇಶಕರು.
- ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಕ್ಷೇತ್ರದಲ್ಲಿ 30 ವರ್ಷಗಳ ಅನುಭವವನ್ನು ಹೊಂದಿರುವ ವರ್ಮಾ ರವರು ಈ ಮುಂಚೆ ONGC ಯ ಅಂಗ ಸಂಸ್ಥೆಯಾದ "ONGC ವಿದೇಶ್ ಲಿಮೆಟೆಡ್" ನಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

**CII ನೂತನ ಅಧ್ಯಕ್ಷರಾಗಿ ಎಸ್.ಗೋಪಾಲ ಕೃಷ್ಣನ್**

ಭಾರತದ ಕೈಗಾರಿಕೆಗಳ ಒಕ್ಕೂಟ (Confederation of India Industries (CII)) ನ 2013-14 ನೇ ಸಾಲಿಗೆ ನೂತನ ಅಧ್ಯಕ್ಷರಾಗಿ ಇನ್ಫೋಸಿಸ್ ನ ಸಹ ಸಂಸ್ಥಾಪಕ ಮತ್ತು ಕಾರ್ಯಕಾರಿ ಸಹ ಅಧ್ಯಕ್ಷ ಎಸ್.ಗೋಪಾಲಕೃಷ್ಣನ್ ಆಯ್ಕೆಯಾಗಿದ್ದಾರೆ. ಇದುವರೆಗೂ CII ನ ಅಧ್ಯಕ್ಷರಾಗಿದ್ದ "ಮಿ.ಆದಿ ಗೋದ್ರೆಜ್" ರವರ ಅವಧಿ ಪೂರ್ಣಗೊಂಡ ಕಾರಣ ಅವರ ಸ್ಥಾನವನ್ನು ಗೋಪಾಲಕೃಷ್ಣನ್ ತುಂಬಲಿದ್ದಾರೆ. ಟ್ರಾಕ್ಟರ್ಸ್ ಇಂಡಿಯಾ ಪ್ರೈವೆಟ್ ಲಿಮಿಟೆಡ್ ನ ಉಪಾಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿರುವ "ಸುಮಿತ್ ಮಜುಮ್ದರ್" ರವರು 2013-14 ನೇ ಸಾಲಿಗೆ ಉಪಾಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

- ಎನ್. ಆರ್. ನಾರಾಯಣಮೂರ್ತಿ ಮತ್ತು ಗೋಪಾಲಕೃಷ್ಣನ್ ರವರು 1981 ರಲ್ಲಿ ಇತರೆ ಐದು ಜನರೊಂದಿಗೆ ಇನ್ಫೋಸಿಸ್ ಸಂಸ್ಥೆಯನ್ನು ಹುಟ್ಟುಹಾಕಿದರು. ಕ್ರಿಸ್ (ಕೃಷ್ಣ) ರವರು ಸಂಸ್ಥೆಯ ತಾಂತ್ರಿಕ ನಿರ್ದೇಶಕರಾಗಿ ತಮ್ಮ ಸೇವೆಯನ್ನು ಆರಂಭಿಸಿದರು.
- 1987 ರಿಂದ 1994 ರ ತನಕ KSA/Infosys (ಇನ್ಫೋಸಿಸ್ ಮತ್ತು KSA ಅಟ್ಲಾಂಟ, ಅಮೆರಿಕಾ ಜಂಟಿ ಉದ್ಯಮ) ನ ತಾಂತ್ರಿಕ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು.

- 2007 ರಲ್ಲಿ ಇನ್ಫೋಸಿಸ್ ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ನಂದನ್ ನೀಲಕೇಣಿ ರವರಿಂದ ಅಧಿಕಾರವಹಿಸಿಕೊಂಡರು. ಬಳಿಕ ಆಗಸ್ಟ್ 21, 2011 ರಂದು ಕಾರ್ಯಕಾರಿ ಸಹ ಅಧ್ಯಕ್ಷರಾಗಿ ನೇಮಕಗೊಂಡರು.
- ಕ್ರಿಸ್ ಏಷ್ಯಾದ ಟಾಪ್ ಸಿಇಓ ಎಂಬ ಖ್ಯಾತಿಗೆ ಇತ್ತೀಚೆಗೆ ಭಾಜರಾಗಿದ್ದರು. ಅಲ್ಲದೇ ಕಾರ್ಪೊರೇಟ್ ಗವರ್ನೆಸ್ ಏಷ್ಯಾ ನೀಡುವ "ಏಷ್ಯಾ ಕಾರ್ಪೋರೇಟ್ ಡೈರೆಕ್ಟರ್ ಆವಾರ್ಡ್" ಪ್ರಶಸ್ತಿ ಸಹ ಅವರಿಗೆ ಲಭಿಸಿದೆ.

**ಪುಲಿಟ್ಜರ್ ಪ್ರಶಸ್ತಿ ವಿಜೇತ "ರೋಜರ್ ಎಬರ್ಟ್" ನಿಧನ**

ಚಿಕಾಗೋ "ಸನ್ ಟೈಮ್ಸ್" ಪತ್ರಿಕೆಯ ಚಿತ್ರ ವಿಮರ್ಶಕ, ಪುಲಿಟ್ಜರ್ ಪ್ರಶಸ್ತಿ ವಿಜೇತ "ರೋಜರ್ ಎಬರ್ಟ್" ಕೊನೆಯುಸಿರೆಳೆದರು. ಸುಮಾರು 45 ವರ್ಷಗಳ ಕಾಲ ಚಿಕಾಗೋ ಸನ್ ಟೈಮ್ಸ್ ಪತ್ರಿಕೆಯಲ್ಲಿ ವಿಮರ್ಶಕರಾಗಿ ಅವರು ದುಡಿದ್ದಿದ್ದರು. ಫೋರ್ಬ್ಸ್ 2007 ರಲ್ಲಿ ಅವರನ್ನು ಅಮೆರಿಕಾದ ಅತ್ಯಂತ ಪ್ರಭಾವಿ ವಿಮರ್ಶಕ ಎಂದು ಹೊಗಳಿತ್ತು.

- ಇಲಿನಾಯ್ಸ್ ವಿವಿ ಯಿಂದ ಪತ್ರಿಕೋದ್ಯಮದಲ್ಲಿ ಪದವಿಯನ್ನು ಪಡೆದಿರುವ ಎಬರ್ಟ್ ರವರು ಪುಸ್ತಕ ವಿಮರ್ಶೆಗಳನ್ನು ಮಾರಾಟ ಮಾಡುವ ಮೂಲಕ ವೃತ್ತಿಯನ್ನು ಆರಂಭಿಸಿದರು.
- 1966 ರಲ್ಲಿ "ಸನ್ ಟೈಮ್ಸ್" ಪತ್ರಿಕೆಗೆ ಚಿತ್ರ ವಿಮರ್ಶಕರಾಗಿ ಸೇರಿಕೊಂಡರು.
- 1975 ರಲ್ಲಿ ಇವರ ವಿಮರ್ಶಣೆಗೆ ಪುಲಿಟ್ಜರ್ ಪ್ರಶಸ್ತಿ ಲಭಿಸಿತ್ತು. ವಿಶೇಷವೆಂದರೆ ಚಿತ್ರ ವಿಮರ್ಶಣೆಗೆ ಪುಲಿಟ್ಜರ್ ಪ್ರಶಸ್ತಿಯನ್ನು ಪಡೆದ ಮೊದಲಿಗರು ಎಂಬ ಖ್ಯಾತಿಗೆ ಎಬರ್ಟ್ ಒಳಗಾದರು.
- "ರಾಬರ್ಟ್ ಮಿಚುಮ್", ಅಲ್ಫ್ರೆಡ್ ಹಿಚ್ ಕಾಕ್" ರವರಂತಹ ಹೆಸರಾಂತ ಸಿನಿ ನಿರ್ದೇಶಕರನ್ನು "ಎಬರ್ಟ್" ರವರು ಸಂದರ್ಶಿಸಿದ್ದರು.

**ಹ್ಯಾಲ್ವೆಟ್ ಪ್ಯಾಕರ್ಡ್ (HP) ಸಂಸ್ಥೆಯ ಚೇರಮನ್ "ರೇ ಲೆನ್" ರಾಜೀನಾಮೆ**

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಪ್ರಸಿದ್ದ ಸಂಸ್ಥೆ "ಹ್ಯಾಲ್ವೆಟ್ ಪ್ಯಾಕರ್ಡ್" ಚೇರಮನ್ "ರೇ ಲೆನ್" ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವುದಾಗಿ ಸಂಸ್ಥೆ ತಿಳಿಸಿದೆ.

- ಇತ್ತೀಚೆಗಷ್ಟೆ "ರೇ ಲೆನ್" ರವರು ಕಂಪನಿಯ ಅಧ್ಯಕ್ಷ ಹುದ್ದೆಗೆ ಮರು ಆಯ್ಕೆಗೊಂಡಿದ್ದರು. ಮಾರ್ಚ್ 2013 ರಲ್ಲಿ ನಡೆದ ಸಂಸ್ಥೆಯ ವಾರ್ಷಿಕ ಸಭೆಯಲ್ಲಿ ಸಂಸ್ಥೆಯ ಪಾಲುದಾರರು "ರೇ ಲೆನ್" ರವರನ್ನು ಅಧ್ಯಕ್ಷ ಸ್ಥಾನಕ್ಕೆ ಮರು ಆಯ್ಕೆ ಮಾಡಿದ್ದರು.
- ಬ್ರಿಟಿಷ್ ಮೂಲದ ಸಾಪ್ಟವೇರ್ ಕಂಪನಿ Autonomy Plc ಯನ್ನು "ರೇ ಲೆನ್" ತಮ್ಮ ಸ್ವಂತ ನಿರ್ಧಾರದಿಂದ ಹೆಚ್ಚಿನ ಮೊತ್ತಕ್ಕೆ ಖರೀದಿ ಮಾಡಿದ್ದ ಕಾರಣ ಅವರ ವಿರುದ್ದ ಆರೋಪಗಳು ಕೇಳಿಬಂದಿದ್ದವು. ಇದರಿಂದ ಮನನೊಂದು ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.
- ಸಂಸ್ಥೆಯ ನಿರ್ದೇಶಕರಾಗಿರುವ "ರಾಲ್ಫ್ ವೈಟ್ ವರ್ತ್" ರವರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.

**ಇತಿಹಾಸ ತಜ್ಞ ಪ್ರೊಫೆಸರ್ ಬ್ರತೀಂದ್ರನಾಥ್ ಮುಖರ್ಜಿ ನಿಧನ**

ಪ್ರಸಿದ್ಧ ಇತಿಹಾಸ ತಜ್ಞ ಮತ್ತು ಪ್ರಾಚೀನ ಲಿಪಿ ಅನ್ವೇಷಣಕಾರ ಪ್ರೊಫೆಸರ್ ಬ್ರತೀಂದ್ರನಾಥ್ ಮುಖರ್ಜಿ (79) ರವರು ತಮ್ಮ ನಿವಾಸದಲ್ಲಿ ವಿಧಿವಶರಾದರು. ಬ್ರತೀಂದ್ರ ರವರು ಪತ್ನಿ ಮತ್ತು ಪುತ್ರಿಯನ್ನು ಆಗಲಿದ್ದಾರೆ.

- ಬ್ರತೀಂದ್ರ ರವರು ಭಾರತ ಕಂಡ ಅಪರೂಪದ ವ್ಯಕ್ತಿ. ಮಧ್ಯ ಏಷ್ಯಾ ಭಾಷೆಗಳನ್ನು ಅವರು ಚೆನ್ನಾಗಿ ಅರಿತಿದ್ದರು. ಪೂರ್ವ ಇರಾನ್ (ಸಧ್ಯ ಉಜ್ಬೇಕಿಸ್ತಾನ ಮತ್ತು ತಜಕಿಸ್ತಾನ್) ನಲ್ಲಿ ಬಳಕೆಯಲ್ಲಿರುವ "ಸೊಗ್ದಿಯಾ" ಭಾಷೆಯನ್ನು ಕರಗತ ಮಾಡಿಕೊಂಡಿದ್ದ ಕೆಲವೇ ಕೆಲವು ಪರಿಣಿತರಲ್ಲಿ ಮುಖರ್ಜಿ ಸಹ ಒಬ್ಬರು. ಬ್ರಾಹ್ಮಿ ಮತ್ತು ಕುರೋಷ್ಠಿ ಲಿಪಿಗಳನ್ನು ಅವರು ಬಲ್ಲವರಾಗಿದ್ದರು.
- ಕೇವಲ ಇತಿಹಾಸಗಾರನಲ್ಲದೇ, ನಾಣ್ಯ ಸಂಗ್ರಹ ಮತ್ತು ಪ್ರಾಚೀನ ಲಿಪಿ ಗಳ ಸಂಶೋಧನೆಯಲ್ಲೂ ಅಪಾರವಾದ ಹೆಸರನ್ನು ಗಳಿಸಿದ್ದರು.
- ಮುಖರ್ಜಿ ರವರು ಸುಮಾರು 50 ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಅವುಗಳಲ್ಲಿ "ಗ್ರೀಕ್ ಅಂಡ್ ಅರಮಿಕ್ ಎಡಿಕ್ಟ್ ಆಫ್ ಅಶೋಕ", "ರೈಸ್ ಆಫ್ ದಿ ಕುಶಾಣ ಎಂಪೈರ್" ಅತಿ ಪ್ರಮುಖವಾದವು. ದೇಶದ ನಾಣ್ಯಗಳ ಕುರಿತಾಗಿ ಅವರು "ಇಂಡಿಯನ್ ಗೋಲ್ಡ್" ಎಂಬ ಪುಸ್ತಕವನ್ನು ಸಹ ಬರೆದಿರುವರು. "ಕಾಯಿನ್ ಆಫ್ ಬೆಂಗಾಲ್" ಮತ್ತು "ನುಮಿಸ್ಮೆಟಿಕ್ ಆರ್ಟ್ ಆಫ್ ಇಂಡಿಯಾ" ನಾಣ್ಯಗಳ ಬಗ್ಗೆ ಬರೆದಿರುವ ಮತ್ತೆರೆಡು ಪ್ರಮುಖ ಪುಸ್ತಕಗಳು.
- ಕೊಲ್ಕತ್ತಾ ವಿವಿಯ ಪ್ರಾಚೀನ ಭಾರತ ಇತಿಹಾಸ ವಿಭಾಗದಲ್ಲಿ ಪ್ರೊಫೆಸರ್ ಆಗಿ ಸೇವೆ ಸಲ್ಲಿಸಿದ್ದರು. ಪ್ರಮುಖ ಇತಿಹಾಸ ತಜ್ಞರು ಎನಿಸಿರುವ ರಣಬೀರ್ ಚಟರ್ಜಿ ಮತ್ತು ಸುಚಂದ್ರ ಘೋಷ್ ರವರು ಮುಖರ್ಜಿಯ ಶಿಷ್ಯರುಗಳು.
- ಭಾರತ ಸರ್ಕಾರ ಮುಖರ್ಜಿ ರವರಿಗೆ ಪದ್ಮಶ್ರಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

**"ನ್ಯಾಷನಲ್ ರೈಫಲ್ ಅಸೋಸಿಯೇಷನ್ ಆಫ್ ಇಂಡಿಯಾ (NRAI)" ದ ಅಧ್ಯಕ್ಷರಾಗಿ ರಣಿಂದರ್ ಸಿಂಗ್**

ರಣಿಂದರ್ ಸಿಂಗ್ ರವರು "ನ್ಯಾಷನಲ್ ರೈಫಲ್ ಅಸೋಸಿಯೇಷನ್ ಆಫ್ ಇಂಡಿಯಾ" ದ ಅಧ್ಯಕ್ಷರಾಗಿ ಮರು ಆಯ್ಕೆಯಾದರು. ಇತ್ತೀಚೆಗೆ ನಡೆದ ಸಾಮಾನ್ಯ ಸಭೆಯಲ್ಲಿ ನಿವೃತ್ತ ನ್ಯಾಯಮೂರ್ತಿಗಳಾದ ಎಂ.ಎಸ್.ಗಿಲ್ ರವರು ಸಿಂಗ್ ಎರಡನೇ ಬಾರಿಗೆ ಅಧ್ಯಕ್ಷರಾಗಿ ನೇಮಕಗೊಂಡಿರುವುದನ್ನು ಪ್ರಕಟಿಸಿದರು.

- ರಣಿಂದರ್ ಸಿಂಗ್ ರವರು ಡಿಸೆಂಬರ್ 29, 2010 ರಿಂದ "ನ್ಯಾಷನಲ್ ರೈಫಲ್ ಅಸೋಸಿಯೇಷನ್ ಆಫ್ ಇಂಡಿಯಾ" ದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದರು.
- ರೈಫಲ್ ಅಸೋಸಿಯೇಷನ್ ನ ಹಿರಿಯ ಸದಸ್ಯರಾದ "ಅವತಾರ್ ಸಿಂಗ್" ರವರನ್ನು ಉಪಾಧ್ಯಕ್ಷಾಗಿ ನೇಮಕ ಮಾಡಲಾಗಿದೆ.
- ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿರುವ "ಬಲಿಜ್ ಸಿಂಗ್ ಸೇಠ್" ರವರು ಇದೇ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ.

NRAI ನ ಜನರಲ್ ಸೆಕ್ರಟರಿಯಾಗಿ ಡಿ.ವಿ.ಎಸ್.ಸಿಂಗ್ ರವರು ಆಯ್ಕೆಯಾಗಿದ್ದಾರೆ.

**<u>ಲೆಫ್ಟಿನೆಂಟ್ ಅಭಿಷೇಕ್ ಟೊಮಿ: ಪ್ರಪಂಚ ಸುತ್ತಿದ ಮೊದಲ ಭಾರತೀಯ</u>**

ಭಾರತ ನೌಕ ದಳದ ಲೆಫ್ಟಿನೆಂಟ್ "ಅಭಿಷೇಕ್ ಟೊಮಿ" ರವರು ಏಕಾಂಗಿಯಾಗಿ ಮತ್ತು ನಿರಂತರವಾಗಿ ಪ್ರಪಂಚ ಪ್ರದಕ್ಷಿಣೆ ಹಾಕಿ ಅದ್ಬುತ ಸಾಧನೆಗೈದರು. ಮತ್ತು ಇಂತಹ ಸಾಧನೆ ಮಾಡಿದ ಪ್ರಥಮ ಭಾರತೀಯ ಎಂಬ ಹಿರಿಮೆಗೂ ಪಾತ್ರರಾದರು. ರಾಷ್ಟ್ರಪತಿ ಪ್ರಣಭ್ ಮುಖರ್ಜಿ ರವರು ಏಪ್ರಿಲ್ 6 ರಂದು ಟೊಮಿ ರವರಿಗೆ ಅದ್ದೂರಿ ಸ್ವಾಗತ ಕೋರುವ ಮೂಲಕ ಬರಮಾಡಿಕೊಂಡರು.

- ಟೊಮಿ ರವರು ನವೆಂಬರ್ 1, 2012 ರಂದು ಮುಂಬೈ ಗೇಟ್ "INSV Mhadei" ಹಡಗಿನ ಮೂಲಕ ಪ್ರದಕ್ಷಣೆಯನ್ನು ಆರಂಭಿಸಿದರು.
- "ಸಾಗರ ಪರಾಕ್ರಮ" ಯೋಜನೆಯಡಿಯಲ್ಲಿ ಟೊಮಿ ರವರು ಈ ಸಾಹಸ ಯಾತ್ರೆಯನ್ನು ಕೈಗೊಂಡಿದ್ದರು. ಪ್ರಣಭ್ ಮುಖರ್ಜಿ ರವರು ರಕ್ಷಣಾ ಸಚಿವರಾಗಿದ್ದ ವೇಳೆ "ಸಾಗರ ಪರಾಕ್ರಮ" ಯೋಜನೆಯನ್ನು ಪ್ರಾರಂಭಿಸಲಾಗಿತ್ತು.
- ಟೊಮಿ ರವರು ಇಂತಹ ಅಮೋಘ ಸಾಧನೆ ಮಾಡಿದ ಭಾರತದ ಮೊದಲಿಗ ಮತ್ತು ಏಷ್ಯಾದ ಎರಡನೇಯವರು.

ಸಮುದ್ರ ಯಾನದ ಬಗ್ಗೆ:

- ಲೆಫ್ಟಿನೆಂಟ್ ಟೊಮಿ ರವರು ತಮ್ಮ ಸಮುದ್ರಯಾನದ ವೇಳೆ ವಿಶ್ವ ಮೂರು ಭೂಶಿಖರಗಳಾದ ಕೇಪ್ ಲೀವಿನ್, ಕೇಪ್ ಹಾರ್ನ್ ಮತ್ತು ಕೇಪ್ ಆಫ್ ಗುಡ್ ಹೋಫ್ ಗಳನ್ನು ದಾಟಿದರು.
- ಈ ಸಮುದ್ರಯಾನ ದ ಒಟ್ಟು ಉದ್ದ 23100 ನಾಟಿಕಲ್ ಮೈಲಿಗಳು ಮತ್ತು ಇಂಡಿಯನ್, ಸದರನ್, ಫೆಸಿಫಿಕ್ ಹಾಗೂ ಅಟ್ಲಾಂಟಿಕ್ ಸಾಗರ ಗಳ ಮೂಲಕ ಯಾನವನ್ನು ಪೂರ್ಣಗೊಳಿಸಲಾಗಿದೆ.

**<u>ವೊಲ್ವೊ ಕಂಪನಿ ರಾಯಭಾರಿಯಾಗಿ ಜೀವ್ ಮಿಲ್ಖಾ ಸಿಂಗ್</u>**

ಸ್ವಿಡನ್ ಮೂಲದ ಐಷರಾಮಿ ಕಾರು ತಯಾರಿಕಾ ಕಂಪನಿ ವೊಲ್ವೊ ತನ್ನ ಕಾರುಗಳ ಮಾರಾಟವನ್ನು ಹಿಮ್ಮಡಿಗೊಳಿಸಲು ಪ್ರಚಾರ ರಾಯಭಾರಿಯಾಗಿ ಖ್ಯಾತ ಗಾಲ್ಫ್ ಪಟು ಜೀವ್ ಮಿಲ್ಖ್ ಸಿಂಗ್ ರವರನ್ನು ನೇಮಕ ಮಾಡಿದೆ.

- 2012 ರಲ್ಲಿ ವೊಲ್ವೊ 800 ಕಾರುಗಳನ್ನು ಮಾರಾಟ ಮಾಡುವಲ್ಲಿ ಸಫಲವಾಗಿತ್ತು. 2013 ರಲ್ಲಿ 1200 ರಿಂದ 1300 ಕಾರುಗಳನ್ನು ಮಾರಾಟ ಮಾಡುವ ಗುರಿಯನ್ನು ಕಂಪನಿ ಹೊಂದಿದೆ.
- 2013 ರ ಮೊದಲ ತ್ರೈಮಾಸಿಕ ದಲ್ಲಿ 276 ಕಾರುಗಳು ಮಾರಾಟಗೊಂಡಿದ್ದು, 2012 ಕ್ಕೆ ಹೋಲಿಸಿದರೆ ಈ ಬೆಳವಣಿಗೆ ಶೇ.140 ರಷ್ಟು ಅಧಿಕ.
- ಸದ್ಯ ವೊಲ್ವೊ ಭಾರತದಲ್ಲಿ XC60, XC 90, S80 ಮತ್ತು S60 ಎಂಬ ನಾಲ್ಕು ಮಾದರಿಯ ಕಾರುಗಳನ್ನು ಮಾರಾಟ ಮಾಡುತ್ತಿದೆ.

## ಬ್ರಿಟನ್ ನ ಮೊದಲ ಮಹಿಳಾ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ನಿಧನ

ಬ್ರಿಟನ್ ನ ಮೊದಲ ಮಹಿಳಾ ಪ್ರಧಾನಿ ಮಾರ್ಗರೇಟ್ ಥ್ಯಾಚರ್ ರವರು ನಿಧನರಾದರು. ಥ್ಯಾಚರ್ ರವರು ಉಕ್ಕಿನ ಮಹಿಳೆ ಎಂದೇ ಪ್ರಸಿದ್ಧರಾಗಿದ್ದರು. ಅನಾರೋಗ್ಯದ ಕಾರಣ ಅವರು ಮರಣಹೊಂದಿದರು. ಥ್ಯಾಚರ್ ರವರಿಗೆ ಒಬ್ಬ ಪುತ್ರಿ ಮತ್ತು ಪುತ್ರ ಇದ್ದಾರೆ.

- 1959 ರಲ್ಲಿ ಕನ್ಸರ್ವೇಟಿವ್ ಪಕ್ಷದಿಂದ ಉತ್ತರ ಲಂಡನ್ ನ ಪಿಂಚ್ಲಿನಿಂದ ಸಂಸತ್ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ರಾಜಕೀಯ ವೃತ್ತಿ ಜೀವನವನ್ನು ಆರಂಭಿಸಿದರು.
- ಕನ್ಸರ್ವೇಟಿವ್ ಪಕ್ಷದ ಥ್ಯಾಚರ್ ರವರು 1979 ರಿಂದ 1990 ರವರೆಗೆ ಬ್ರಿಟನ್ನಿನ ಪ್ರಧಾನಿಯಾಗಿ ಸುದೀರ್ಘ ಕಾಲ ಸೇವೆ ಸಲ್ಲಿಸಿದ್ದರು.
- ಮಾರ್ಗರೇಟ್ ರವರು ಭಾರತದ ಮಾಜಿ ಪ್ರಧಾನಿ ದಿವಂಗತ ಇಂಧಿರಾ ಗಾಂಧಿ ರವರೊಂದಿಗೆ ಉತ್ತಮ ಭಾಂದವ್ಯವನ್ನು ಹೊಂದಿದ್ದರು.

## ಕೃಷ್ಣ ಕುಮಾರ್ ನಟರಾಜನ್ NASSCOM ನ ನೂತನ ಅಧ್ಯಕ್ಷರು

"ನ್ಯಾಷನಲ್ ಅಸೋಸಿಯೇಷನ್ ಆಫ್ ಸಾಫ್ಟ್ ವೇರ್ ಅಂಡ್ ಸರ್ವೀಸ್ (NASSCOM)" ನ 2013-14 ನೇ ಸಾಲಿಗೆ ಅಧ್ಯಕ್ಷರಾಗಿ ಮೈಂಡ್ ಟ್ರೀ ಸಂಸ್ಥೆಯ ಸಿಇಓ ಮತ್ತು ನಿರ್ದೇಶಕರು ಆಗಿರುವ ಕೃಷ್ಣ ಕುಮಾರ್ ನಟರಾಜನ್ ರವರು ನೇಮಕಗೊಂಡಿದ್ದಾರೆ. TSC ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಓ ಆಗಿರುವ ಎನ್.ಚಂದ್ರಶೇಖರ್ ರವರು 2012-13 ನೇ ಸಾಲಿನಲ್ಲಿ NASSCOM ನ ಅಧ್ಯಕ್ಷರಾಗಿದ್ದರು.

- ಇದೇ ವೇಳೆ NASSCOM ಕಾರ್ಯಕಾರಿ ಮಂಡಳಿಯ ಉಪಾಧ್ಯಕ್ಷರಾಗಿ ಕೊಗ್ನಿಜೆಂಟ್ ಸಂಸ್ಥೆಯ ಮುಖ್ಯಕಾರ್ಯನಿರ್ವಾಹಣ ಅಧಿಕಾರಿಯಾಗಿರುವ ಆರ್.ಚಂದ್ರಶೇಖರನ್ ರವರನ್ನು ನೇಮಕ ಮಾಡಲಾಗಿದೆ.

ನಾಸ್ಕಾಮ್:

- ನಾಸ್ಕಮ್: ಭಾರತದ ಮಾಹಿತಿ ತಂತ್ರಜ್ಞಾನ ಮತ್ತು ವ್ಯವಹಾರ ಹೊರಗುತ್ತಿಗೆಯ ವ್ಯಾಪರ ಸಂಘ. ಇದೊಂದು ಲಾಭರಹಿತ ಸಂಸ್ಥೆ. 1988 ರಲ್ಲಿ ಇದನ್ನು ಸ್ಥಾಪಿಸಿಲಾಗಿದ್ದು, ಇದರ ಕೇಂದ್ರ ಕಚೇರಿ ನವದೆಹಲಿಯಲ್ಲಿದೆ.

## "ಏಷ್ಯಾ ಫೊರಂ ಆಫ್ ಪಾರ್ಲಿಮೆಂಟರಿಯನ್ಸ್" ಅಧ್ಯಕ್ಷರಾಗಿ ಪಿ.ಜೆ. ಕುರಿಯನ್ ನೇಮಕ

ರಾಜ್ಯ ಸಭಾದ ಉಪಸಭಾಪತಿಗಳಾದ ಪಿ.ಜೆ.ಕುರಿಯನ್ ರವರು "ಏಷ್ಯಾ ಫೊರಂ ಆಫ್ ಪಾರ್ಲಿಮೆಂಟರಿಯನ್ಸ್ ಆನ್ ಪಾಪುಲೇಷನ್ ಅಂಡ್ ಡೆವಲಫ್ ಮೆಂಟ್ (Asia Forum of Parliamentarians on Population and Development (AFPPD))" ನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಬ್ಯಾಂಕಕ್ ನಲ್ಲಿ ಏಪ್ರಿಲ್ 11 ರಂದು ನಡೆದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಪಿ.ಜೆ. ಕುರಿಯನ್ ರವರ ಆಯ್ಕೆಯನ್ನು ಅಂತಿಮಗೊಳಿಸಲಾಯಿತು.

- ಈ ಹಿಂದೆ AFPPD ಯ ಅಧ್ಯಕ್ಷರಾಗಿದ್ದ ಜಪಾನ್ ನ ಮಾಜಿ ಪ್ರಧಾನ ಮಂತ್ರಿಗಳಾದ "ಯಸೊಒ ಪುಕುಡ" ರವರಿಂದ ತೆರವಾಗಿದ್ದ ಸ್ಥಾನವನ್ನು ಕುರಿಯನ್ ರವರು ತುಂಬಲಿದ್ದಾರೆ.
- ಕುರಿಯನ್ ರವರು "ಇಂಡಿಯನ್ ಅಸೋಸಿಯೇಷನ್ ಆಫ್ ಪಾರ್ಲಿಮೆಂಟರಿಯನ್ಸ್ ಆನ್ ಪಾಪುಲೇಷನ್ ಅಂಡ್ ಡೆವಲಪ್ ಮೆಂಟ್" ನ ಹಾಲಿ ಅಧ್ಯಕ್ಷರಾಗಿರುವರು.

AFPPD ಬಗ್ಗೆ:

- AFPPD ಒಂದು ಸರ್ಕಾರೇತರ ಸಂಸ್ಥೆಯಾಗಿದ್ದು, 1981 ರಲ್ಲಿ ಸ್ಥಾಪಿಸಲಾಗಿದೆ. ಜನಸಂಖ್ಯೆ ಮತ್ತು ಅಭಿವೃದ್ದಿ ಗೆ ಸಂಬಂಧಿಸಿದಂತೆ ಏಷ್ಯಾದ 25 ರಾಷ್ಟ್ರಗಳ ಪಾರ್ಲಿಮೆಂಟರಿಯನ್ಸ್ ರವರ ನಡುವೆ ಸಹಕಾರ ವೃದ್ದಿಸುವುದು ಇದರ ಪ್ರಮುಖ ಕಾರ್ಯ.
- ಜತೆಗೆ ಶಿಕ್ಷಣ, ಸುಸ್ಥಿರ ಅಭಿವೃದ್ದಿ, ಸ್ಥಿರ ಆರೋಗ್ಯ, ಕುಟುಂಬ ಕಲ್ಯಾಣ ಯೋಜನೆ, ಪರಿಸರ ಮತ್ತು ಲಿಂಗ ಸಮಾನತೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಪಾರ್ಲಿಮೆಂಟರಿಯನ್ಸ್ ಮೂಲಕ ಅಭಿವೃದ್ದಿ ಸಾಧಿಸುವುದು AFPPD ಯ ಉದ್ದೇಶವಾಗಿದೆ.

## ಕ್ರಾಂತಿಕಾರಿ ಬಿನೊದ್ ಬಿಹಾರಿ ಚೌಧರಿ ನಿಧನ

ಬಾಂಗ್ಲದ ಕ್ರಾಂತಿಕಾರಿ, ಸಿವಿಲ್ ಸೊಸೈಟಿಯ ಹಿರಿಯ ಸದಸ್ಯ ಮತ್ತು ಖ್ಯಾತ ಬೆಂಗಾಲ್ ಕ್ರಾಂತಿಕಾರಿ "ಸೂರ್ಯ ಸೇನ್" ರವರ ಒಡನಾಡಿ ಆಗಿದ್ದ ಚೌಧರಿರವರು ಕೊಲ್ಕತ್ತಾದ ಆಸ್ಪತ್ರೆಯಲ್ಲಿ ಮರಣಹೊಂದಿದ್ದರು (104). ಚಿತ್ತಗಾಂಗ್ ಶಸ್ತಾಸ್ತ್ರ ದಾಳಿಯ ರೂವಾರಿಗಳಲ್ಲಿ ಬದುಕಿದ್ದ ಕೊನೆಯ ಕ್ರಾಂತಿಕಾರಿ ಎಂಬ ಹಿರಿಮೆಗೂ ಅವರು ಪಾತ್ರರಾಗಿದ್ದರು.

- ಸ್ವಾತಂತ್ರ ಪೂರ್ವದಲ್ಲಿ ಬ್ರಿಟಿಷರ ವಿರುದ್ದ ದಂಗೆದಿದ್ದ "ಮಸ್ತರ್ದ ಜುಗಂಟರ್" ಕ್ರಾಂತಿಕಾರಿ ಪಡೆಯಲ್ಲಿ ಚೌಧರಿಯವರು ಸಕ್ರಿಯವಾಗಿ ಪಾಲ್ಗೊಂಡಿದ್ದರು. 1930, ಏಪ್ರಿಲ್ 18 ರಂದು ಬ್ರಿಟಿಷ್ ಮತ್ತು ಪೊಲಿಸ್ ಪಡೆಗಳ ಮೇಲೆ ಶಸ್ತಾಸ್ತ್ರ ದಾಳಿ ನಡೆಸಿ ಸುದ್ದಿಮಾಡಿತ್ತು.
- ಚೌಧರಿ ರವರು 1939 ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸೇರ್ಪಡೆಗೊಂಡರು. ನಂತರ ಚಿತ್ತಗಾಂಗ್ ಜಿಲ್ಲಾ ಸಮಿತಿಯ ಸಹಾಯಕ ಕಾರ್ಯದರ್ಶಿಯಾಗಿ ನೇಮಕಗೊಂಡರು. ಬಳಿಕ 1946 ರಲ್ಲಿ ಚಿತ್ತಗಾಂಗ್ ಶಾಖೆಯ ಜನರಲ್ ಸೆಕ್ರಟರಿಯಾಗಿ ಆಯ್ಕೆಯಾದರು.
- 1940 ರಿಂದ 1946 ರ ವರೆಗೆ "ಬೆಂಗಾಲ್ ಪ್ರಾವಿನ್ಷಿಯಲ್ ಕಾಂಗ್ರೆಸ್ ಎಕ್ಸಕ್ಯೂಟಿವ್ ಕಮಿಟಿಯ" ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.
- ಭಾರತ ಮತ್ತು ಬಾಂಗ್ಲ ವಿಭಜನೆಯಾದ ನಂತರ ಚೌಧರಿರವರು 1954 ರ ತನಕ ಪೂರ್ವ ಪಾಕಿಸ್ತಾನ (ಬಾಂಗ್ಲ) ದ ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.
- ಬಾಂಗ್ಲ ಇತಿಹಾಸದಲ್ಲಿ ಅಜರಾಮರ ಆಗಿರುವ ಅವರಿಗೆ 2000 ರಲ್ಲಿ ಬಾಂಗ್ಲ ಸರ್ಕಾರ ತನ್ನ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.

**ಉದ್ಯಮಿ ಆರ್.ಪಿ.ಗೊಯೇಂಕಾ ವಿಧಿವಶ**

ಪ್ರಸಿದ್ಧ RPG ಎಂಟರ್ ಪ್ರೈಸೆಸ್ ಅಧ್ಯಕ್ಷ ಹಾಗೂ "ಇಂಡಿಯಾಸ್ ಟೇಕ್ ಓವರ್ ಕಿಂಗ್" ಎಂದೇ ಖ್ಯಾತಿ ಹೊಂದಿದ್ದ ರಾಮ್ ಪ್ರಸಾದ್ ಗೊಯೇಂಕಾ ರವರು ವಿಧಿವಶರಾದರು. ಶ್ರೀಯುತರು ಪತ್ನಿ ಮತ್ತು ಇಬ್ಬರು ಪುತ್ರರನ್ನು ಅಗಲಿದ್ದಾರೆ.

ಆರ್.ಪಿ.ಗೊಯೇಂಕಾ:

- ರಾಮ್ ಪ್ರಸಾದ್ ಗೊಯೇಂಕಾ ರವರು ಮಾರ್ಚ್ 1, 1930 ರಲ್ಲಿ ಶ್ರೀಮಂತ ಉದ್ಯಮಿ ಕುಟುಂಬದಲ್ಲಿ ಜನಿಸಿದರು. ಮೂಲತಃ ರಾಜಸ್ಥಾನದವರಾದ ಅವರ ಹಿರಿಯು 1820 ರ ದಶಕದಲ್ಲಿ ಕೊಲ್ಕತ್ತಾ ವಲಸೆ ಬಂದು ಅಲ್ಲೇ ನೆಲೆಸಿದ್ದರು.
- ಪ್ರೆಸ್ಸಿಡೆಂಸಿ ಕಾಲೇಜು ಮತ್ತು ಹಾರ್ವರ್ಡ್ ವಿವಿ ಯಿಂದ ಶಿಕ್ಷಣ ಪಡೆದಿರುವ ಗೊಯೇಂಕಾ 1979 ರಲ್ಲೇ ಉದ್ಯಮಕ್ಕೆ ದುಮುಕಿದರು.
- ಸರಳ, ಸಜ್ಜನಿಕೆಗೆ ಪಾತ್ರರಾಗಿದ್ದ ಅವರು 2000 ದಿಂದ 2006 ರ ತನಕ ರಾಜ್ಯಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.
- ಭಾರತ ವಾಣಿಜ್ಯ ಕೈಗಾರಿಕೆಗಳ ಒಕ್ಕೂಟ (ಫಿಕ್ಕಿ) ಮತ್ತು ಏಷ್ಯಾ ಫೆಸಿಪಿಕ್ ಚೆಂಬರ್ಸ್ ಆಫ್ ಕಾಮರ್ಸ್ ನ ಅಧ್ಯಕ್ಷರಾಗಿ ಸಹ ಅವರು ಕಾರ್ಯನಿರ್ವಹಿಸಿದ್ದರು. ಅಲ್ಲದೇ ಐಐಟಿ-ಕರಗ್ ಪುರ್ ನ ಆಡಳಿತ ಮಂಡಳಿಯ ಸದಸ್ಯರೂ ಆಗಿದ್ದರು.
- 1979 ರಿಂದಲೇ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದರಾದರು 1990 ರ ನಂತರ ಗೊಯೇಂಕಾ ರವರು ಬ್ಯಾಂಕಿಂಗ್, ಟೀ, ಸೆಣಬು ಮತ್ತು ಜವಳಿ ಕಾರ್ಖಾನೆಗಳನ್ನು ಸ್ಥಾಪಿಸುವ ಮೂಲಕ ಭಾರತ ಕಂಡ ಶ್ರೇಷ್ಠ ಉದ್ಯಮಿ ಎನಿಸಿದರು.
- ಇಂದು ಗೊಯೇಂಕಾರವರ ಸಂಸ್ಥೆಗಳು ವಾರ್ಷಿಕವಾಗಿ 20000 ಕೋಟಿ ವ್ಯವಹಾರ ನಡೆಸುತ್ತಿವೆ. ಕಲ್ಲಿದ್ದಲು ಗಣಿಗಾರಿಕೆ, ಕಾರ್ಬನ್ ಬ್ಲಾಕ್, ವಿದ್ಯುತ್ ಉತ್ಪಾದನೆ, ಔಷಧಿ ವಲಯ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಬಂಡವಾಳ ಹೂಡಿವೆ.

**ವೆನಿಜುವೆಲಾ ಅಧ್ಯಕ್ಷರಾಗಿ "ನಿಕೊಲಸ್ ಮಡುರೊ" ಆಯ್ಕೆ**

ಭಾರಿ ಕುತೂಹಲ ಮೂಡಿಸಿದ್ದ ವೆನುಜುವೆಲಾ ಅಧ್ಯಕ್ಷರ ಚುನಾವಣೆ ಫಲಿತಾಂಶ ಹೊರಬಿದ್ದಿದ್ದು, ವೆನುಜುವೆಲಾದ ಮಾಜಿ ಅಧ್ಯಕ್ಷ ದಿವಂಗತ "ಹುಗೊ ಷಾವೇಜ್" ರವರ ರಾಜಕೀಯ ನಿಕಟವರ್ತಿಯಾಗಿದ್ದ "ನಿಕೊಲಸ್ ಮಡುರೊ" ರವರು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಯುನೈಟೆಡ್ ಸೊಷಿಯಲಿಸ್ಟ್ ಪಾರ್ಟಿ" ಯ ನಾಯಕರಾಗಿರುವ ಮಡುರೊ ರವರು ತಮ್ಮ ಪ್ರತಿಸ್ಪರ್ಧಿ "ಹೆನಿರಿಕ್ ಕ್ಯಾಪ್ರಿಲ್ಸ್ ರಡೊನ್ಸ್ಕಿ (Henrique Capriles Radonski)" ರವರನ್ನು ಕೇವಲ 3,00,000 ಮತಗಳ ಅಂತರದಿಂದ ಸೋಲಿಸಿದ್ದಾರೆ. ಒಟ್ಟಾರೆಯಾಗಿ ಮಡರೊ ರವರು ಶೇ.50.66 ರಷ್ಟು ಮತಗಳನ್ನು ಗಳಿಸಿದರೆ, ರಡೊನ್ಸ್ಕಿ ರವರು ಶೇ.49.07 ರಷ್ಟು ಮತಗಳನ್ನು ಪಡೆದಿದ್ದಾರೆ. ರಡೊನ್ಸ್ಕಿ ರವರಿಗೆ ಇದು ಎರಡನೇ ಸೋಲು. ಅಕ್ಟೋಬರ್ 2012 ರಲ್ಲಿ ನಡೆದ ಚುನಾವಣೆಯಲ್ಲೂ ಸಹ ಅವರು "ಹುಗೊ ಷಾವೇಜ್"ರ ವಿರುದ್ಧ ಸೋಲನ್ನು ಅನುಭವಿಸಿದ್ದರು.

- ಪುಟ್ಟಪರ್ತಿ ಸಾಯಿಬಾಬಾ ರವರ ಭಕ್ತರಾಗಿರುವ "ನಿಕೊಲಸ್ ಮಡುರೊ" ರವರು ಒಬ್ಬ ಬಸ್ ಡ್ರೈವರ್ ಆಗಿದ್ದವರು. ಅನಿರೀಕ್ಷಿತ ಬೆಳವಣಿಗೆಯಿಂದ "ಹುಗೊ ಷಾವೇಜ್"ರವರ ನಿಷ್ಠವಂತ ನಿಕಟವರ್ತಿಯಾಗಿ ರಾಜಕೀಯದಲ್ಲಿ ಉನ್ನತ ಮಟ್ಟವನ್ನು ಏರಿದರು.

- ವೆನುಜುವೆಲಾದ ಅಧ್ಯಕ್ಷರಾಗಿದ್ದ "ಹುಗೊ ಷಾವೇಜ್" ರವರು ಇತ್ತೀಚೆಗೆ ಕ್ಯಾನ್ಸರ್ ನಿಂದ ಮರಣಹೊಂದಿದ ಬಳಿಕ ಮಡುರೊ ರವರನ್ನು ವೆನುಜುವೆಲಾದ ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಲಾಗಿತ್ತು.
- ಅಧ್ಯಕ್ಷರಾಗಿ ನೇಮಕಗೊಂಡ ಬಳಿಕ ತಮ್ಮ ದೇಶದ ಜನರನ್ನು ಉದ್ದೇಶಿಸಿ ಮಾತನಾಡಿದ "ಮಡುರೊ" ರವರು "ಹುಗೋ ಷಾವೇಜ್" ಹಾಕಿಕೊಟ್ಟಿರುವ ರಾಜಕೀಯ ನಿಯಮಗಳನ್ನು ಚಾಚು ತಪ್ಪದೇ ಪಾಲಿಸುವುದಾಗಿ ಹೇಳಿದ್ದಾರೆ.

**<u>ವಿಶ್ವದ 100 ಪ್ರಭಾವಶಾಲಿ ಏಷ್ಯನ್ನರ ಪಟ್ಟಿಯಲ್ಲಿ ಸೋನಿಯಾಗೆ 2 ನೇ ಸ್ಥಾನ</u>**

"ದಿ ಏಷ್ಯನ್ ಆವಾರ್ಡ್ಸ್ ಟಾಪ್ 100" ಪಟ್ಟಿಯನ್ನು ಇತ್ತೀಚೆಗೆ ಲಂಡನ್ ನಲ್ಲಿ ಬಿಡುಗಡೆಗೊಳಿಸಿದ್ದು, ವಿಶ್ವದ 100 ಪ್ರಭಾವಶಾಲಿ ಏಷ್ಯನ್ನರ ಪಟ್ಟಿಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ "ಸೋನಿಯಾ ಗಾಂಧಿ" ರವರಿಗೆ ಎರಡನೇ ಸ್ಥಾನ ಲಭಿಸಿದೆ. ಸೋನಿಯಾ ರವರು ಯು.ಪಿ.ಎ ಸರ್ಕಾರದ ಮುಖ್ಯಸ್ಥೆಯಾಗಿ, ಲೋಕಸಭೆಯನ್ನೇ ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಾರೆ ಎಂದು ಬಣ್ಣಿಸಲಾಗಿದೆ.

- ಚೀನಾದ ಅಧ್ಯಕ್ಷ ಮತ್ತು ಕಮ್ಯೂನಿಸ್ಟ್ ಪಾರ್ಟಿ ಆಫ್ ಚೀನಾದ ಕಾರ್ಯದರ್ಶಿಯೂ ಆಗಿರುವ "ಕ್ಸಿ ಜಿನ್ ಪಿಂಗ್" ರವರು ಪಟ್ಟಿಯಲ್ಲಿ ನಂ.1 ಸ್ಥಾನಗಳಿಸಿದ್ದಾರೆ.
- ಭಾರತದ ಪ್ರಧಾನ ಮಂತ್ರಿ "ಮನ ಮೋಹನ್ ಸಿಂಗ್" ರವರು ನಾಲ್ಕನೇ ಸ್ಥಾನದಲ್ಲಿ ಕಾಣಿಸಿಕೊಂಡರೆ, ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷ "ರಾಹುಲ್ ಗಾಂಧಿ" ರವರು 5 ನೇ ಸ್ಥಾನದಲ್ಲಿದ್ದಾರೆ.
- ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಇತರೆ ಪ್ರಮುಖರೆಂದರೆ ರಿಲಾಯನ್ಸ್ ನ ಮುಖೇಶ್ ಅಂಬಾನಿ (9), ರಾಷ್ಟ್ರಪತಿ ಪ್ರಣಬ್ ಮುಖರ್ಜಿ (19) ಮತ್ತು ಉಕ್ಕು ಉದ್ಯಮಿ ಲಕ್ಷ್ಮೀ ಮಿತ್ತಲ್ (20) ನೇ ಸ್ಥಾನದಲ್ಲಿದ್ದಾರೆ.
- ಈ ಪಟ್ಟಿಯಲ್ಲಿ ಒಟ್ಟು 39 ಜನ ಭಾರತೀಯರು ಸ್ಥಾನ ಪಡೆಯುವ ಮೂಲಕ ಭಾರತ ಪ್ರಥಮ ಸ್ಥಾನದಲ್ಲಿದೆ. ಉಳಿದಂತೆ ಚೀನಾ (15) ಮತ್ತು ಫಿಲಿಪ್ಪೈನ್ಸ್ (6) ನಂತರ ಸ್ಥಾನದಲ್ಲಿವೆ.
- ಇದೇ ಸಂದರ್ಭದಲ್ಲಿ ಇನ್ಫೋಸಿಸ್ ಸ್ಥಾಪಕ ನಾರಾಯಣ ಮೂರ್ತಿ ರವರಿಗೆ "ವರ್ಷದ ಪರೋಪಕಾರಿ ಪ್ರಶಸ್ತಿ", ಆದಿ ಗೋದ್ರೆಜ್ ರವರಿಗೆ "ವರ್ಷದ ಉದ್ಯಮಿ ಪ್ರಶಸ್ತಿ" ಮತ್ತು ಎಸ್ಸಾರ್ ಗ್ರೂಪ್ ನ "ರವಿ ರೂಯ" ರವರಿಗೆ ಸುಸ್ಥಿರ ಅಭಿವೃದ್ಧಿಗೆ ನೀಡಲಾಗುವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**<u>ವಿಶ್ವದ 100 ಪ್ರಭಾವಶಾಲಿ ಏಷ್ಯನ್ನರ ಪಟ್ಟಿಯಲ್ಲಿ ಸೋನಿಯಾಗೆ 2 ನೇ ಸ್ಥಾನ</u>**

"ದಿ ಏಷ್ಯನ್ ಆವಾರ್ಡ್ಸ್ ಟಾಪ್ 100" ಪಟ್ಟಿಯನ್ನು ಇತ್ತೀಚೆಗೆ ಲಂಡನ್ ನಲ್ಲಿ ಬಿಡುಗಡೆಗೊಳಿಸಿದ್ದು, ವಿಶ್ವದ 100 ಪ್ರಭಾವಶಾಲಿ ಏಷ್ಯನ್ನರ ಪಟ್ಟಿಯಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಧ್ಯಕ್ಷೆ "ಸೋನಿಯಾ ಗಾಂಧಿ" ರವರಿಗೆ ಎರಡನೇ ಸ್ಥಾನ ಲಭಿಸಿದೆ. ಸೋನಿಯಾ ರವರು ಯು.ಪಿ.ಎ ಸರ್ಕಾರದ ಮುಖ್ಯಸ್ಥೆಯಾಗಿ, ಲೋಕಸಭೆಯನ್ನೇ ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಾರೆ ಎಂದು ಬಣ್ಣಿಸಲಾಗಿದೆ.

- ಚೀನಾದ ಅಧ್ಯಕ್ಷ ಮತ್ತು ಕಮ್ಯೂನಿಸ್ಟ್ ಪಾರ್ಟಿ ಆಫ್ ಚೀನಾದ ಕಾರ್ಯದರ್ಶಿಯೂ ಆಗಿರುವ "ಕ್ಸಿ ಜಿನ್ ಪಿಂಗ್" ರವರು ಪಟ್ಟಿಯಲ್ಲಿ ನಂ.1 ಸ್ಥಾನಗಳಿಸಿದ್ದಾರೆ.

- ಭಾರತದ ಪ್ರಧಾನ ಮಂತ್ರಿ "ಮನ ಮೋಹನ್ ಸಿಂಗ್" ರವರು ನಾಲ್ಕನೇ ಸ್ಥಾನದಲ್ಲಿ ಕಾಣಿಸಿಕೊಂಡರೆ, ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷ "ರಾಹುಲ್ ಗಾಂಧಿ" ರವರು 5 ನೇ ಸ್ಥಾನದಲ್ಲಿದ್ದಾರೆ.
- ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಇತರೆ ಪ್ರಮುಖರೆಂದರೆ ರಿಲಾಯನ್ಸ್ ನ ಮುಖೇಶ್ ಅಂಬಾನಿ (9), ರಾಷ್ಟ್ರಪತಿ ಪ್ರಣಬ್ ಮುಖರ್ಜಿ (19) ಮತ್ತು ಉಕ್ಕು ಉದ್ಯಮಿ ಲಕ್ಷೀ ಮಿತ್ತಲ್ (20) ನೇ ಸ್ಥಾನದಲ್ಲಿದ್ದಾರೆ.
- ಈ ಪಟ್ಟಿಯಲ್ಲಿ ಒಟ್ಟು 39 ಜನ ಭಾರತೀಯರು ಸ್ಥಾನ ಪಡೆಯುವ ಮೂಲಕ ಭಾರತ ಪ್ರಥಮ ಸ್ಥಾನದಲ್ಲಿದೆ. ಉಳಿದಂತೆ ಚೀನಾ (15) ಮತ್ತು ಫಿಲಿಪೈನ್ಸ್ (6) ನಂತರ ಸ್ಥಾನದಲ್ಲಿವೆ.
- ಇದೇ ಸಂದರ್ಭದಲ್ಲಿ ಇನ್ಫೋಸಿಸ್ ಸ್ಥಾಪಕ ನಾರಾಯಣ ಮೂರ್ತಿ ರವರಿಗೆ "ವರ್ಷದ ಪರೋಪಕಾರಿ ಪ್ರಶಸ್ತಿ", ಆದಿ ಗೋದ್ರೆಜ್ ರವರಿಗೆ "ವರ್ಷದ ಉದ್ಯಮಿ ಪ್ರಶಸ್ತಿ" ಮತ್ತು ಎಸ್ಸಾರ್ ಗ್ರೂಫ್ ನ "ರವಿ ರೂಯ" ರವರಿಗೆ ಸುಸ್ಥಿರ ಅಭಿವೃದ್ಧಿಗೆ ನೀಡಲಾಗುವ ಪ್ರಶಸ್ತಿಗೆ ಭಾಜನರಾಗಿದ್ದಾರೆ.

**ಅಂತರರಾಷ್ಟ್ರೀಯ ವಾಣಿಜ್ಯ ಮಂಡಳಿಯ ಉಪಾಧ್ಯಕ್ಷರಾಗಿ "ಸುನೀಲ್ ಮಿತ್ತಲ್"**

ಭಾರತಿ ಎಂಟರ್ ಪ್ರೈಸಸ್ ನ ಅಧ್ಯಕ್ಷ ಮತ್ತು ಸಿಇಒ ಆಗಿರುವ "ಸುನೀಲ್ ಭಾರ್ತಿ ಮಿತ್ತಲ್" ಅಂತರರಾಷ್ಟ್ರೀಯ ವಾಣಿಜ್ಯ ಮಂಡಳಿ (International Chamber of Commerce (ICC)) ಯ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಜುಲೈ 1 ರಂದು ಅಧಿಕಾರ ವಹಿಸಿಕೊಳ್ಳಲಿರುವ ಮಿತ್ತಲ್ ರವರು ಎರಡು ವರ್ಷಗಳ ಕಾಲ ಈ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ. ಕತಾರ್ ನ ದೋಹದಲ್ಲಿ ನಡೆದ ವಾರ್ಷಿಕ ಸಭೆಯಲ್ಲಿ ಸುನೀಲ್ ಮಿತ್ತಲ್ ರವರನ್ನು ಆಯ್ಕೆಮಾಡಲಾಗಿದೆ. "**ಹರೋಲ್ಡ್ ಮ್ಯಾಕ್ ಗಿಲ್** (Harold Mc Gill)" ರವರನ್ನು ಅಧ್ಯಕ್ಷರಾಗಿ ಆಯ್ಕೆಮಾಡಲಾಗಿದೆ.

- "ಅಂತರರಾಷ್ಟ್ರೀಯ ವಾಣಿಜ್ಯ ಮಂಡಳಿ"ಯ ಇತಿಹಾಸದಲ್ಲೇ, ಇದರ ಕಾರ್ಯಕಾರಿ ಮಂಡಳಿಗೆ ಆಯ್ಕೆಯಾಗಿರುವ **ಮೂರನೇ** ಭಾರತೀಯ ಎಂಬ ಖ್ಯಾತಿಗೆ ಸುನೀಲ್ ಮಿತ್ತಲ್ ಪಾತ್ರರಾಗಿದ್ದಾರೆ..
- "ಭಾರತ್ ರಾಮ್" ರವರು ಅಂತರರಾಷ್ಟ್ರೀಯ ವಾಣಿಜ್ಯ ಮಂಡಳಿಗೆ ಆಯ್ಕೆಯಾದ ಪ್ರಥಮ ಭಾರತೀಯ. 1969-1971 ರ ವರೆಗೆ ಕಾರ್ಯಕಾರಿಯ ಮಂಡಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು.
- ದಿವಂಗತ "ಹರಿಶಂಕರ್ ಸಿಂಗಾನಿಯಾ" ರವರು 1993-95 ರಲ್ಲಿ ಐಸಿಸಿ ಗೆ ಆಯ್ಕೆಯಾದ ಎರಡನೇ ಭಾರತೀಯ.

ಅಂತರರಾಷ್ಟ್ರೀಯ ವಾಣಿಜ್ಯ ಮಂಡಳಿ:

- ವಿಶ್ವದ ಹಳೆಯ ಮತ್ತು ಅತಿ ದೊಡ್ಡ ಜಾಗತಿಕ ವ್ಯಾಪಾರ ಸಂಘಟನೆ. ಇದನ್ನು 1919 ರಲ್ಲಿ ಸ್ಥಾಪಿಸಲಾಯಿತು. ಅ
- ಅಂತರರಾಷ್ಟ್ರೀಯ ವಾಣಿಜ್ಯ ಮಂಡಳಿಯ ಕೇಂದ್ರ ಕಚೇರಿಯು "ಪ್ಯಾರಿಸ್" ನಲ್ಲಿದೆ.
- ವ್ಯಾಪಾರ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಅಡತಡೆಗಳನ್ನು ತಗ್ಗಿಸುವ ಮೂಲಕ ಜಾಗತಿಕ ಮಟ್ಟದಲ್ಲಿ ಆರ್ಥಿಕ ಬೆಳವಣಿಗೆಗೆ ಸಹಕರಿಸುವ ನಿಟ್ಟಿನಲ್ಲಿ ಈ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ.

**ಮಾನವ ಕಂಪ್ಯೂಟರ್ ಖ್ಯಾತಿಯ ಶಕುಂತಲಾ ದೇವಿ ನಿಧನ**

ಮಾನವ ಕಂಪ್ಯೂಟರ್ ಎಂದೇ ಪ್ರಸಿದ್ದರಾಗಿದ್ದ ಗಣಿತಜ್ಞೆ "ಶಕುಂತಲಾ ದೇವಿ" ರವರು ಹೃದಯಾಘಾತದಿಂದ ನಿಧನರಾದರು. ಎಂತಹ ಕ್ಲೀಷ್ಟ ಗಣಿತ ಸಮಸ್ಯೆಗಳನ್ನು ಕ್ಷಣಾರ್ಧಗಳಲ್ಲಿ ಮುಗಿಸುವ ಚಾಣಕ್ಯತೆಯನ್ನು ಅವರು ಹೊಂದಿದ್ದರು. ಜತೆಗೆ ಜ್ಯೋತಿಷಿ, ಜಾದೂಗಾರ್ತಿಯಾಗಿಯೂ ವಿಶ್ವಮಟ್ಟದಲ್ಲಿ ಹೆಸರನ್ನು ಸಂಪಾದಿಸಿದ್ದರು.

- 1980 ರಲ್ಲಿ ಲಂಡನ್ ನ ಇಂಪೀರಿಯಲ್ ಕಾಲೇಜಿನ ಕಂಪ್ಯೂಟರ್ ವಿಭಾಗ ಸಿದ್ದಪಡಿಸಿದ್ದ ಗುಣಾಕಾರವನ್ನು ಶಕುಂತಲಾ ರವರು ಯಾವುದೇ ತಾಂತ್ರಿಕ ಸಹಾಯವಿಲ್ಲದೇ 13 ಅಂಕಿಗಳನ್ನು ಮತ್ತೊಂದು 13 ಅಂಕಿಗಳಿಂದ ಗುಣಿಸಿ ಕೇವಲ 28 ಸೆಕೆಂಡ್ ಗಳಲ್ಲಿ ನಿಖರ ಉತ್ತರ ನೀಡುವ ಮೂಲಕ ಗಿನ್ನಿಸ್ ದಾಖಲೆ ಬರೆದಿದ್ದರು.
- 1977 ರಲ್ಲಿ ಅಮೆರಿಕಾದ ಡಲ್ಲಾಸ್ ನಲ್ಲಿ 201 ಅಂಕಿಗಳನ್ನು ನೀಡಿ 23 ನೇ ವರ್ಗ ಮೂಲವನ್ನು 50 ಸೆಕೆಂಡ್ ಗಳಲ್ಲಿ ಕಂಡು ಹಿಡಿದರು. ಯೂನಿವಾಕ್ 1108 ಕಂಪ್ಯೂಟರ್ ಗಳಿಗಿಂತ 10 ಸೆಕೆಂಡು ಬೇಗ ಉತ್ತರ ನೀಡಿದ್ದರು.
- ಬಡ ಮಕ್ಕಳ ಬಗ್ಗೆ ಅಪಾರ ಕಾಳಜಿ ಹೊಂದಿದ್ದ ಅವರು ಬೆಂಗಳೂರಿನ ಎಚ್ಎಸ್ಆರ್ ಲೇಔಟ್ ನಲ್ಲಿ ಶಕುಂತಲಾ ದೇವಿ "ಇನ್ ಸ್ಟಿಟ್ಯೂಟ್ ಆಫ್ ಮ್ಯಾನೇಜ್ ಮೆಂಟ್ ಸೈನ್ಸ್ ಮತ್ತು ಕಾಲೇಜನ್ನು" ಆರಂಭಿಸಿರುವರು.
- "ಫಜಲ್ ಟು ಫಜಲ್ ಯು", "ಬುಕ್ ಆಫ್ ನಂಬರ್", "ಇನ್ ದಿ ವಂಡರ್ ಲಾ ಆಫ್ ನಂಬರ್" ಇವು ಶಕುಂತಲಾ ದೇವಿರವರು ಮಕ್ಕಳಿಗಾಗಿ ಬರೆದಿರುವ ಕೆಲವು ಪುಸ್ತಕಗಳು.

**ಸುಪ್ರೀಂ ಕೋರ್ಟ್ ನಿವೃತ್ತಿ ಮುಖ್ಯ ನ್ಯಾಯಮೂರ್ತಿ ಜೆ.ಎಸ್.ವರ್ಮಾ ನಿಧನ**

ಸುಪ್ರೀಂ ಕೋರ್ಟ್ ನ ನಿವೃತ್ತ ಮುಖ್ಯ ನ್ಯಾಯಾಧೀಶ "ಜಗದೀಶ್ ಶರಣ್ ವರ್ಮಾ" ರವರು ನಿಧನರಾದರು. ವರ್ಮಾ ರವರಿಗೆ 80 ವರ್ಷ ವಯಸ್ಸಾಗಿತ್ತು. ವಿವಿಧ ಅಂಗಗಳ ವೈಫಲ್ಯದಿಂದ ಬಳಲುತ್ತಿದ್ದ ಅವರು ಗುಡಾಂಗವ್ನ ಆಸ್ಪತ್ರೆಯಲ್ಲಿ ಕೊನೆಯುಸಿರೆಳದರು. ಸುಪ್ರೀಂ ಕೋರ್ಟ್ನ ಮುಖ್ಯ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸುತ್ತಿದ್ದಾಗ ಅವರು ನೀಡಿದ್ದ ಕೆಲವು ಐತಿಹಾಸಿಕ ತೀರ್ಪುಗಳಿಂದ ಜನ ಮನ್ನಣೆಗಳಿಸಿದ್ದರು.

- ಜೆ.ಎಸ್.ವರ್ಮಾ ರವರು ಸುಪ್ರೀಂ ಕೋರ್ಟ್ ನ 27 ನೇ ಮುಖ್ಯ ನ್ಯಾಯಾಧೀಶರಾಗಿ ಮಾರ್ಚ್ 25, 1997 ರಿಂದ ಜನವರಿ 18, 1998 ರ ವರಗೆ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದರು.
- ನಿವೃತಿಯಾದ ನಂತರ "ರಾಷ್ಟ್ರೀಯ ಮಾನವ ಹಕ್ಕು ಆಯೋಗ"ದ ಅಧ್ಯಕ್ಷರಾಗಿ ನವೆಂಬರ್ 1999 ರಿಂದ ಜನವರಿ 2003 ರ ವರಗೆ ಕಾರ್ಯನಿರ್ವಹಿಸಿದ್ದರು. 2002 ರಲ್ಲಿ ನಡೆದ ಗುಜರಾತ್ ಕೋಮು ಗಲಭೆ ವೇಳೆ ಸ್ವತಃ ತಾವೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ದೇಶದಾದ್ಯಂತ ಸಂಚಲನ ಮೂಡಿಸಿತ್ತು.
- 1997 ರಲ್ಲಿ "ವಿಶಾಖ ಪ್ರಕರಣ"ದಲ್ಲಿ ಜೆ.ಎಸ್ ವರ್ಮಾ ರವರು ನೀಡಿದ ತೀರ್ಪು ಭಾರತ ಇತಿಹಾಸದಲ್ಲೇ ಅತ್ಯಂತ ಪ್ರಮುಖವಾದದ್ದು. ಈ ತೀರ್ಪಿನಿಂದಾಗಿಯೇ ಕೆಲಸ ಮಾಡುವ ಮಹಿಳೆಯರ ಮೇಲೆ ಆಗುವ ಅತ್ಯಾಚಾರ ಪ್ರಕರಣ ತಡೆ ಕಾನೂನು ದೇಶದಲ್ಲಿ ರೂಪಗೊಂಡಿದ್ದು.

**ವರ್ಮಾ ನೇತೃತ್ವದ ಸಮಿತಿಗಳು:**

- 1991 ರಲ್ಲಿ ರಾಜೀವ್ ಗಾಂಧಿ ರವರನ್ನು ಹತ್ಯೆಯಾದ ಹಿನ್ನಲೆಯಲ್ಲಿ, ಭದ್ರತೆ ಪಡೆಯಲ್ಲಿನ ಲೋಪದೋಷಗಳನ್ನು ಅಧ್ಯಯನ ಮಾಡಿ ವರದಿ ಸಲ್ಲಿಸುವಂತೆ ಕೇಂದ್ರ ಸರ್ಕಾರ ಜೆ.ಎಸ್.ವರ್ಮಾ ರವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತ್ತು.
- ಇತ್ತೀಚೆಗೆ ದೆಹಲಿಯ ಯುವತಿ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದ ಹಿನ್ನಲೆಯಲ್ಲಿ ಅತ್ಯಚಾರ ಪ್ರಕರಣದ ತಡೆ ಕಾನೂನು ಸುಧಾರಣೆಗೆ ಕೇಂದ್ರ ಸರ್ಕಾರ ವರ್ಮಾ ರವರ ಅಧ್ಯಕ್ಷತೆಯಲ್ಲಿ ಮೂರು ಜನರ ಸಮಿತಿಯನ್ನು ರಚಿಸಿತ್ತು. ಅತ್ಯಾಚಾರಿಗಳಿಗೆ ಕನಿಷ್ಟ 10 ವರ್ಷ ಶಿಕ್ಷೆ, ಬಾಲಾಪರಾಧಿಗಳ ವಯಸ್ಸನ್ನು 18 ಕ್ಕೆ ಮಿತಿಗೊಳಿಸುವುದು ಸೇರಿದಂತೆ ಇತರೆ ಪ್ರಮುಖ ಸಲಹೆಗಳನ್ನು ಸಮಿತಿ ಸರ್ಕಾರಕ್ಕೆ ಶಿಫಾರಸ್ಸುಗೊಳಿಸಿತ್ತು.

**ಹಳ್ಳಿಗಳಿಗೆ ಬೆಳಕು ನೀಡಲಿರುವ ಸಚಿನ್ ತೆಂಡೂಲ್ಕರ್**

ಭಾರತದ ಕ್ರಿಕೆಟ್ ದಂತಕತೆಯಾಗಿರುವ ಸಚಿನ್ ತೆಂಡೂಲ್ಕರ್ ರವರು ವಿದ್ಯುತ್ತನ್ನೇ ಕಾಣದ ದೇಶದ ಹಳ್ಳಿಗಳಿಗೆ ಬೆಳಕು ನೀಡು ಮಹತ್ವದ ಕಾರ್ಯಕ್ಕೆ ಮುಂದಾಗಿದ್ದಾರೆ. ತೀರಾ ಹಿಂದುಳಿದಿರುವ ಹಳ್ಳಿಗಳಿಗೆ ಅಧಿಕ ದಕ್ಷತೆಯುಳ್ಳ, ಪರಿಸರ ಸ್ನೇಹಿ ಮತ್ತು ಕಡಿಮೆ ದರದ ಸೌರ ದ್ವೀಪಗಳನ್ನು ಅಳವಡಿಸಲು "Schneider ಎಲೆಕ್ಟ್ರಿಕ್ ಇಂಡಿಯಾ" ಎಂಬ ಸಂಸ್ಥೆಯೊಂದಿಗೆ ಸಚಿನ್ ಕೈಜೋಡಿಸಿದ್ದಾರೆ.

- "Spreading Happiness" ಎಂಬ ಶೀರ್ಷಿಕೆಯಡಿ ರೂಪಿಸಲಾಗಿರುವ ಈ ಕಾರ್ಯಕ್ರಮದಲ್ಲಿ ಸುಮಾರು 25,000 ಹಳ್ಳಿ ಜನರ ಮನೆಗಳಿಗೆ ಸೌರ ವಿದ್ಯುತ್ ಶಕ್ತಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು.
- ಈಗಾಗಲೇ ಮಹಾರಾಷ್ಟ್ರದ "ನಾಸಿಕ್" ಜಿಲ್ಲೆಯಲ್ಲಿ ಪ್ರಾತ್ಯಕ್ಷಿಕವಾಗಿ ಈ ಕಾರ್ಯಕ್ರಮವನ್ನು ಹೊರತಂದಿದ್ದು, ಸುಮಾರು 1000 ಜನರಿಗೆ ಸೌರ ಶಕ್ತಿ ಸೌಲಭ್ಯವನ್ನು ಒದಗಿಸಲಾಗಿದೆ.
- ಇದಕ್ಕಾಗಿಯೇ "Schneider ಎಲೆಕ್ಟ್ರಿಕ್ ಇಂಡಿಯಾ" ಸಂಸ್ಥೆ "In-Diya" ಎಂಬ ವಿನೂತನ ಮಾದರಿಯ ದೀಪ ವ್ಯವಸ್ಥೆಯನ್ನು ಅನ್ವೇಷಿಸಿದೆ. LED ತಂತ್ರಜ್ಞಾನ ಆಧಾರಿತ ಈ ದೀಪ ವ್ಯವಸ್ಥೆಯನ್ನು ಬಡವರಿಗಾಗಿಯೇ ತಯಾರಿಸಲಾಗಿದ್ದು, ವಿದ್ಯುತ್ ಅವಲಂಭನೆ ಇಲ್ಲದೇ ಸೌರ ಶಕ್ತಿಯಿಂದ ಬೆಳಗಲಿವೆ. ಈ ದೀಪ ವ್ಯವಸ್ಥೆಯು 8.15 ಗಂಟೆಗಳ ಕಾಲ ಬೆಳಕು ನೀಡಲಿದೆ ಹಾಗೂ 50,000 ಗಂಟೆಗಳ ಜೀವಿತಾವಧಿಯನ್ನು ಹೊಂದಿದೆ.
- ಈ ಬಗ್ಗೆ ಪ್ರತಿಕ್ರಯಿಸಿರುವ ಸಚಿನ್ "ದೇಶದ ಜನ ತನ್ನ ಮೇಲೆ ಅಪಾರ ಪ್ರೀತಿಯನ್ನು ತೋರಿದ್ದಾರೆ. ವಿದ್ಯುತ್ತನ್ನೇ ಕಾಣದ ಅನೇಕ ಹಳ್ಳಿಗಳಿದ್ದು, ಅಂತಹ ಜನರ ಮುಖದ ಮೇಲೆ ಇಂದು ನಾಳೆ ಸಂತೋಷ ನೋಡುವುದೇ ಈ "Spreading Happiness" ಕಾರ್ಯಕ್ರಮದಿಂದ ಪ್ರಮುಖ ಗುರಿಯಂದು ಸಚಿನ್ ಹೇಳಿದ್ದಾರೆ.

**ಖ್ಯಾತ ಹಿನ್ನಲೆ ಗಾಯಕಿ ಶಂಶದ್ ಬೇಗಂ ನಿಧನ**

ಹಿಂದಿ ಚಿತ್ರರಂಗದ ಮೊತ್ತ ಮೊದಲ ಹಿನ್ನಲೆ ಗಾಯಕಿಯರಲ್ಲಿ ಒಬ್ಬರಾದ, ಸಂಗೀತಾದ ದಂತೆಕಥೆಯಾಗಿರುವ ಶಂಶಾದ್ ಬೇಗಂ ರವರು ನಿಧನರಾದರು. ಅವರಿಗೆ 94 ವರ್ಷ ವಯಸ್ಸಾಗಿತ್ತು. ಕಳೆದ ಕೆಲವು ತಿಂಗಳಿಂದ ಅವರು ಅನಾರೋಗ್ಯ ಪೀಡಿತರಾಗಿದ್ದರು.

- ಶಂಶಾದ್ ರವರು 1919, ಎಪ್ರಿಲ್ 14 ರಂದು ಪಂಜಾಬಿನ ಅಮೃತಸರದಲ್ಲಿ ಜನಿಸಿದರು. 1947 ರ ಡಿಸೆಂಬರ್ 16 ರಂದು ಆಕೆ ಈಗಿನ ಪೇಶಾವರ್ ರೇಡಿಯೋದಲ್ಲಿ ಮೊದಲ ಬಾರಿಗೆ ಹಾಡು ಹಾಡಿದ್ದರು. ಈ ಮೂಲಕ ಲಕ್ಷಾಂತರ ಸಂಗೀತ ಪ್ರಿಯರನ್ನು ಆಕರ್ಷಿಸಿದ್ದರು.
- "ಮೇರೆ ಪಿಯಾ ಗಯೇ ರಂಗೂನ್", "ಕಭಿ ಆರ್ ಕಭಿ ಪಾರ್", "ಕಜ್ರಾ ಮೊಹಬ್ಬತ್ ವಾಲಾ" ಮುಂತಾದವು ಅವರು ಹಾಡಿರುವ ಸೂಪರ್ ಹಿಟ್ ಹಾಡುಗಳು.
- ಚಲನಚಿತ್ರ ಹಿನ್ನಲೆ ಗಾಯನದ ಜತೆಗೆ ಬೇಗಂ ರವರು ಹಲವಾರು ಭಕ್ತಿಗೀತೆಗಳನ್ನು ಹಾಗೂ ಗಜಲ್ ಗಳನ್ನು ಹಾಡಿದ್ದಾರೆ.

**ಪೆರೂಗ್ವೆಯ ನೂತನ ಅಧ್ಯರಾಗಿ "ಹೊರಶಿಯೊ ಕಾರ್ಟೆಸ್ (Horacio Cartes)"**

ಶ್ರೀಮಂತ ಉದ್ಯಮಿ "ಹೊರಶಿಯೊ ಕಾರ್ಟೆಸ್" ರವರು ಪೆರೂಗ್ವೆಯ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜಯ ಸಾಧಿಸುವ ಮೂಲಕ ದೇಶದ ನೂತನ ಅಧ್ಯಕ್ಷರಾಗಿ ಆಯ್ಕೆಯಾದರು. ತಮ್ಮ ಪ್ರತಿ ಸ್ಪರ್ಧಿ ಲಿಬರಲ್ ಪಕ್ಷದ "ಎಫ್ರೆನ್ ಅಲೆಗ್ರೆ" ರವರನ್ನು ಶೇ.8 ರಷ್ಟು ಮತಗಳ ಅಂತರದಿಂದ ಸೋಲಿಸುವ ಮೂಲಕ ಅಧ್ಯಕ್ಷ ಸ್ಥಾನವನ್ನು ತಮ್ಮದಾಗಿಸಿಕೊಂಡರು.

- ಕೊಲೊರಡೊ ಪಕ್ಷದವರಾದ "ಕಾರ್ಟೆಸ್"ರವರು ಶೇ.45.8 ರಷ್ಟು ಮತಗಳನ್ನು ಪಡೆದರೆ, ಪ್ರತಿಸ್ಪರ್ಧಿ ಲಿಬರಲ್ ಪಕ್ಷದ "ಎಫ್ರೆನ್ ಅಲೆಗ್ರೆ" ರವರಿಗೆ ಶೇ.36.9 ರಷ್ಟು ಮತಗಳನ್ನು ಗಳಿಸಲು ಮಾತ್ರ ಸಾಧ್ಯವಾಯಿತು. 2008 ರಲ್ಲಿ ನಡೆದ ಚುನಾವಣೆಯಲ್ಲಿ ಕೊಲೊರಡೊ ಪಕ್ಷ ಸೋಲು ಕಾಣುವ ಮೂಲಕ ಭಾರಿ ಮುಖಭಂಗವನ್ನು ಅನುಭವಿಸಿತ್ತು.
- "ಕಾರ್ಟೆಸ್" ರವರು 2009 ರಲ್ಲಿ ಕೊಲೊರಡೊ ಪಕ್ಷಕ್ಕೆ ಸೇರ್ಪಡೆಯಾಗುವ ಮೂಲಕ ರಾಜಕೀಯ ತೀರಾ ಹೊಸಬರೆನಿಸಿದ್ದಾರೆ. ಆದರೆ ಇವರೊಬ್ಬ ಅಗರ್ಭ ಶ್ರೀಮಂತ. ಪೆರೂಗ್ವೆಯ ಅತಿ ದೊಡ್ಡ ತಂಬಾಕು ಕಂಪನಿ, ಬ್ಯಾಂಕಿಂಗ್ ಮತ್ತು ಇತರೆ ಕೃಷಿ ಸಂಬಂಧಿತ ಸಂಸ್ಥೆಗಳ ಮಾಲೀಕರು. ಅಲ್ಲದೇ ಲಿಬಾರ್ಟಡರ್ ಪುಟ್ ಬಾಲ್ ಕ್ಲಬ್ ನ ಅಧ್ಯಕ್ಷರೂ ಆಗಿರುವರು.
- ಅಧ್ಯಕ್ಷರಾಗಿ ಆಯ್ಕೆಯಾದ ಮೇಲೆ ದೇಶವನ್ನು ಉದ್ದೇಶಿಸಿ ಮಾತಾನಾಡಿದ "ಕಾರ್ಟೆಸ್" ರವರು ದೇಶದಲ್ಲಿರುವ ಬಡತನವನ್ನು ಹೋಗಲಾಡಿಸಲು ಹೊಸ ಮಾರ್ಗಗಳನ್ನು ಹುಡುಕುವುದಾಗಿ ಹೇಳಿದ್ದಾರೆ. "ಕಾರ್ಟೆಸ್" ರವರು ಒಬ್ಬ ಸರ್ಮರ್ಥ ನಾಯಕನಾಗಿದ್ದು, ಕೊಲೊರಡೊ ಪಕ್ಷ ಕಳೆದುಕೊಂಡಿದ್ದ ವರ್ಚಸನ್ನು ಮರಳಿ ತರಲಿದ್ದಾರೆ ಎಂದು ಬೆಂಬಲಿಗರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕೊಲೊರಡೊ ಪಾರ್ಟಿ:

- ಪೆರೂಗ್ವೆಯ ಪ್ರಭಾವಶಾಲಿ ರಾಜಕೀಯ ಪಕ್ಷ. 1947 ರಲ್ಲಿ ಅಧಿಕಾರ ಬಂದ ಈ ಪಕ್ಷ ಸತತವಾಗಿ 60 ವರ್ಷಗಳ ಕಾಲ ದೇಶವನ್ನು ಮುನ್ನಡೆಸಿತ್ತು. ಆದರೆ 2008 ರಲ್ಲಿ ನಡೆದ ಚುನಾವಣೆಯಲ್ಲಿ ವಿರೋಧ ಪಕ್ಷವಾದ ಲಿಬರಲ್ ಪಕ್ಷಕ್ಕೆ ತಲೆಬಾಗಿತ್ತು. ಆಗ ಲಿಬರಲ್ ಪಕ್ಷದ ಮುಖಂಡರಾದ "ಫರ್ನಾಡೊ ಲುಗೊ" ರವರು 2008 ರಲ್ಲಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು. ಜೂನ್ 2012 ರಲ್ಲಿ "ಲುಗೋ" ರವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಲಾಯಿತು. ಇದರಿಂದ

ದೇಶದಾದ್ಯಂತ ಅಶಾಂತಿ ತಲೆದೋರಿ ಅನೇಕ ಸಾವು ನೋವುಗಳು ಸಂಭವಿಸಿದ್ದವು. ಇದಾದ ಕೇವಲ 48 ಗಂಟೆಗಳಲ್ಲಿ ಉಪಾಧ್ಯಕ್ಷರಾಗಿದ್ದ "ಫೆಡರಿಕ್ ಫ್ರಾಂಕೋ"ರವರನ್ನು ಅಧ್ಯಕ್ಷರನ್ನಾಗಿ ಲಿಬರಲ್ ಪಾರ್ಟಿ ನೇಮಕಮಾಡಿತ್ತು.

**ನರಸಿಂಹನ್ ರವಿ: "ಭಾರತ ಪತ್ರಿಕೋದ್ಯಮ ಸಂಪಾದಕರ ಸಂಘ" (Editors Guild of India)ದ ನೂತನ ಅಧ್ಯಕ್ಷರು**

ಭಾರತ ಪ್ರತಿಕೋದ್ಯಮ ಸಂಪಾದಕರ ಸಂಘದ ಅಧ್ಯಕ್ಷರಾಗಿ "ನರಸಿಂಹನ್ ರವಿ" ರವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ರವಿ ಅವರು "ದಿ ಹಿಂದೂ" ದಿನ ಪತ್ರಿಕೆಯ ಸಮೂಹ ಸಂಸ್ಥೆಯಾದ "ಕಸ್ತೂರಿ ಅಂಡ್ ಸನ್ಸ್" ನ ನಿರ್ದೇಶಕರು. "ದಿ ಬ್ಯುಸಿನೆಸ್ ಸ್ಟಾಂಡರ್ಡ್" ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದ ಟಿ.ಎನ್ ನಿನನ್ ರವರು ಇದುವರೆಗೂ ಈ ಸಂಘದ ಅಧ್ಯಕ್ಷರಾಗಿ ಸೇವೆ ನಿರ್ವಹಿಸುತ್ತಿದ್ದರು. ರವಿ ರವರು ಮುಂದಿನ ಎರಡು ವರ್ಷಗಳ ಕಾಲ ಈ ಹುದ್ದೆಯಲ್ಲಿರುವರು.

**ಭಾರತ ಸಂಪಾದಕರ ಸಂಘ:**

- ಪತ್ರಿಕೆ ಮತ್ತು ನಿಯತಕಾಲಿಕೆಗಳ ಸಂಪಾದಕರ ಒಕ್ಕೂಟ. 1977 ರಲ್ಲಿ ಈ ಸಂಘವನ್ನು ಸ್ಥಾಪಿಸಲಾಗಿದೆ. ರಾಷ್ಟ್ರ ಮಟ್ಟದಲ್ಲಿ ಸಂಪಾದಕರನ್ನು ಪ್ರತಿನಿಧಿಸುತ್ತಿರುವ ಏಕೈಕ ಸಂಘ.
- ಎಲೆಕ್ಟ್ರಾನಿಕ್ ಮಾಧ್ಯಮ, ಸ್ಥಳೀಯ ಮತ್ತು ರಾಷ್ಟ್ರೀಯ ಮಟ್ಟದ ಪತ್ರಿಕೆಗಳ ಮತ್ತು ನಿಯತಕಾಲಿಕೆಗಳ ಸುಮಾರು 200 ಸಂಪಾದಕರು ಈ ಸಂಘದ ಸದಸ್ಯರಾಗಿದ್ದಾರೆ.

**ಉದ್ದೇಶಗಳು:**

- ಪತ್ರಿಕಾ ಸ್ವಾತಂತ್ರ್ಯ ಸೇರಿದಂತೆ ಇತರೆ ಮಾಧ್ಯಮ ಸಮೂಹಗಳ ಸ್ವಾತಂತ್ರ್ಯವನ್ನು ರಕ್ಷಿಸುವುದು.
- ಪತ್ರಿಕೋದ್ಯಮ ವೃತ್ತಿಪರ ಮಾನದಂಡಗಳ ಸುಧಾರಣೆಗೆ ಶ್ರಮಿಸುವುದು.
- ಪತ್ರಕರ್ತರಿಗೆ ನೀತಿ ಸಂಹಿತೆಯನ್ನು ಜಾರಿಗೊಳಿಸುವುದು.
- ಪತ್ರಕರ್ತ, ಪತ್ರಿಕೋದ್ಯಮದ ಹಿತರಕ್ಷಣೆಯನ್ನು ಕಾಯುವುದು.
- ಈ ಮೇಲಿನ ಎಲ್ಲಾ ಅಂಶಗಳನ್ನು ಸಮರ್ಥವಾಗಿ ನಿಭಾಯಿಸಲು ಅಗತ್ಯವಿರುವ ಕಾರ್ಯಕ್ರಮಗಳನ್ನು ರೂಪಿಸುವುದು.

**ಸಾರ್ಕ್ ನ HIV/AIDS ಜಾಗೃತಿ ಕಾರ್ಯಕ್ರಮದ ಸದ್ಭಾವನ ರಾಯಭಾರಿಯಾಗಿ: ಅಜಯ್ ದೇವಗಾನ್**

ಸಾರ್ಕ್ (South Asian Association for Regional Cooperation) ಸದಸ್ಯ ರಾಷ್ಟ್ರಗಳಲ್ಲಿ ಹೆಚ್‌ಐವಿ/ಏಡ್ಸ್ ರೋಗದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಕ್ಕೆ ಬಾಲಿವುಡ್ ನಟ ಅಜಯ್ ದೇವಗಾನ್ ರವರನ್ನು ಸದ್ಭಾವನ ರಾಯಭಾರಿಯನ್ನಾಗಿ ನೇಮಕಮಾಡಲಾಗಿದೆ. ಇದೇ ವೇಳೆ ಬಾಂಗ್ಲದೇಶದ ಪ್ರಸಿದ್ಧ ಗಾಯಕಿ "ರುನಾ ಲೈಲಾ (Runa Laila)" ಮತ್ತು ಪಾಕಿಸ್ತಾನದ ಆಸ್ಕರ್ ಪ್ರಶಸ್ತಿ ವಿಜೇತ ಸಿನಿಮಾ ನಿರ್ಮಾಪಕ "ಶರ್ಮೀನ್ ಒಬೈಡ್ ಚಿನಾಯ್" ರವರನ್ನು ಸಹ ರಾಯಭಾರಿಗಳನ್ನಾಗಿ ನೇಮಕ ಮಾಡಲಾಗಿದೆ.

- ಸಾರ್ಕ ಸದಸ್ಯ ರಾಷ್ಟ್ರಗಳಲ್ಲಿ ಹೆಚ್‌ಐವಿ/ಏಡ್ಸ್ ಕುರಿತು ಅರಿವು ಮೂಡಿಸುವ ಈ ಕಾರ್ಯಕ್ರಮಕ್ಕೆ 2009 ರಲ್ಲಿ ಚಾಲನೆ ನೀಡಲಾಗಿದೆ.

- ಭಾರತದ ಖ್ಯಾತ ನಟಿ “ಶಬನಾ ಅಜ್ಮಿ” ರವರು ಈ ಕಾರ್ಯಕ್ರಮದ ಮೊದಲ ರಾಯಭಾರಿಯಾಗಿ ನೇಮಕಗೊಂಡಿದ್ದರು.

**ತೃಪ್ತರಾಜ್ ಪಾಂಡ್ಯ: 6 ವರ್ಷ ವಯಸ್ಸಿನಲ್ಲಿ ತಬಲ ಬಾರಿಸಿ ಗಿನ್ನಿಸ್ ದಾಖಲೆ ಬರೆದ ಪೋರ**

ಸಾಧನೆಗೆ ಯಾವ ವಯಸ್ಸಾದರೇನು, ಸಾಧಿಸುವ ಛಲವಿರಬೇಕು ಅಷ್ಟೇ. ಈ ಮಾತನ್ನು 6 ವರ್ಷದ ಬಾಲಕ ತೃಪ್ತರಾಜ್ ಪಾಂಡ್ಯ ಧೃಡಿಕರೀಸಿದ್ದಾನೆ. 6 ವರ್ಷ ವಯಸ್ಸಿನ ಈ ಬಾಲಕ ಪ್ರಪಂಚದಲ್ಲೇ ಅತ್ಯಂತ ಕಿರಿಯ ವಯಸ್ಸಿನಲ್ಲಿ ತಬಲ ಬಾರಿಸುವವ ಎಂಬ ದಾಖಲೆಯನ್ನು ಬರೆದಿದ್ದಾನೆ. ಅಷ್ಟೇ ಅಲ್ಲ, ಈತನ ಸಾಧನೆ ಈಗ ಗಿನ್ನಿಸ್ ರೆಕಾರ್ಡ್ ನಲ್ಲೂ ದಾಖಲಾಗಿದೆ.

- ಇದು ವರೆಗೂ ಓಡಿಶಾ ಮೂಲದ “ರಜತ್ ಕುಮಾರ್ ಮಿಶ್ರಾ” ಎಂಬ ಬಾಲಕ ಈ ದಾಖಲೆಗೆ ಪಾತ್ರರಾಗಿದ್ದರು. ಈ ದಾಖಲೆ ಬರೆದಾಗ ರಜತ್ ಕುಮಾರ್ ಗೆ ಏಳು ವರ್ಷ ವಯಸ್ಸಾಗಿತ್ತು. ಆದರೆ ಪಾಂಡ್ಯ ಈಗ ಮಿಶ್ರಾ ರವರ ದಾಖಲೆಯನ್ನು ಸರಿಗಟ್ಟಿದ್ದಾನೆ.
- ಪಾಂಡ್ಯ ಮೂರು ವರ್ಷ ಐದು ದಿನ ವಯಸ್ಸಿನ ಬಾಲಕನಾಗಿದ್ದಾಗಲೇ ಆಕಾಶವಾಣಿಯ ನೇರ ಪ್ರಸಾರದಲ್ಲಿ ತಬಲ ಬಾರಿಸಿ ತಮ್ಮ ಪ್ರತಿಭೆಯನ್ನು ತೋರಿದ್ದ. ಈ ಸಾಧನೆಗಾಗಿ “ಬಾಲ ಕಲಾ ರತ್ನ” ಪ್ರಶಸ್ತಿಯನ್ನು ನೀಡಲಾಗಿದೆ.
- ಅಷ್ಟೇ ಅಲ್ಲದೇ, ಅನೇಕ ಸಮಾರಂಭಗಳಲ್ಲಿ ಪಾಂಡ್ಯ ತಮ್ಮ ಪ್ರತಿಭೆಯನ್ನು ತೋರಿಸಿ ಜನ ಮನ್ನಣೆಗಳಿಸಿ ಸೈ ಎನಿಸಿಕೊಂಡಿದ್ದಾನೆ.
- ಲಿಮ್ಕಾ ದಾಖಲೆಗೂ ಈತನ ಹೆಸರನ್ನು ಶಿಫಾರಸ್ಸು ಮಾಡಲಾಗಿತ್ತು. ಆದರೆ 12 ವರ್ಷದ ತುಂಬಿದವರು ಮಾತ್ರ ಲಿಮ್ಕಾದಲ್ಲಿ ಸೇರ್ಪಡೆಗೊಳ್ಳಲು ಅರ್ಹರಾಗಿರುತ್ತಾರೆ ಆಗಾಗಿ ಪಾಂಡ್ಯ ಹೆಸರನ್ನು ಕೈಬಿಡಲಾಗಿದೆ.

**ಅನಿಲ್ ಗೋಸ್ವಾಮಿ: ನೂತನ ಗೃಹ ಕಾರ್ಯದರ್ಶಿ**

ಹಿರಿಯ ಐಎಎಸ್ ಅಧಿಕಾರಿ 58 ವರ್ಷ ವಯಸ್ಸಿನ “ಅನಿಲ್ ಗೋಸ್ವಾಮಿ” ರವರನ್ನು ನೂತನ ಗೃಹ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದಾರೆ. ಪ್ರಧಾನಿ ಮನಮೋಹನ್ ಸಿಂಗ್ ನೇತೃತ್ವದ ಆಯ್ಕೆ ಸಮಿತಿಯು “ಅನಿಲ್ ಗೋಸ್ವಾಮಿ” ರವರನ್ನು ನೂತನ ಈ ಹುದ್ದೆಗೆ ನೇಮಕಮಾಡಿದೆ. ಗೋಸ್ವಾಮಿ ರವರು ಜೂನ್ 30, 2013 ರಂದು ಆರ್.ಕೆ.ಸಿಂಗ್ ರವರಿಂದ ಅಧಿಕಾರ ವಹಿಸಿಕೊಳ್ಳಲಿದ್ದು, 2015 ರ ಜೂನ್ ವರೆಗೆ ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

ಅನಿಲ್ ಗೋಸ್ವಾಮಿ:

- 1978 ರ ಐಎಎಸ್ ಬ್ಯಾಚ್ ನವರಾದ “ಅನಿಲ್ ಗೋಸ್ವಾಮಿ” ರವರು ಜಮ್ಮು ಮತ್ತು ಕಾಶ್ಮೀರ ರಾಜ್ಯದ ವಿವಿಧ ಇಲಾಖೆಗಳಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ.
- ಸದ್ಯ ಗೋಸ್ವಾಮಿ ರವರು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುವರು.

**"ತಕೆಹಿಕೊ ನಕಾವ್(Takehiko Nakao)": ಏಷ್ಯನ್ ಅಭಿವೃದ್ಧಿ ಬ್ಯಾಂಕ್ ನ ಹೊಸ ಅಧ್ಯಕ್ಷರು**

"ಏಷ್ಯನ್ ಅಭಿವೃದ್ಧಿ ಬ್ಯಾಂಕ್ (Asian Development Bank (ADB))" ನ ನೂತನ ಅಧ್ಯಕ್ಷರಾಗಿ "ತಕಿಹಿಕೊ ನಕಾವ್" ರವರು ನೇಮಕಗೊಂಡಿದ್ದಾರೆ. ಏಪ್ರಿಲ್ 27 ರಂದು ನವದೆಹಲಿಯಲ್ಲಿ ನಡೆದ ನಿರ್ದೇಶಕ ಮಂಡಳಿಯ ಸಭೆಯಲ್ಲಿ "ತಕಿಹಿಕೊ ನಕಾವ್" ರವರು ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆಗೊಂಡರು.

- ಈ ಮುಂಚೆ ADB ಯ ಅಧ್ಯಕ್ಷರಾಗಿದ್ದ "ಹರುಹಿಕೊ ಕುರೊಡ" ರವರ ರಾಜೀನಾಮೆಯಿಂದ ಈ ಸ್ಥಾನ ತೆರವುಗೊಂಡಿತ್ತು. "ಹರುಹಿಕೊ ಕುರೊಡ" ರವರು ಜಪಾನ್ ಸೆಂಟ್ರಲ್ ಬ್ಯಾಂಕ್ ನ ಗರ್ವನರ್ ಆಗಿ ನೇಮಕಗೊಂಡ ಕಾರಣ "ಮಾರ್ಚ್ 2013" ರಂದು ರಾಜೀನಾಮೆ ನೀಡಿದ್ದರು.
- 57 ವರ್ಷ ವಯಸ್ಸಿನ "ನಕಾವ್" ರವರು ಜಪಾನ್ ನ ಅಂತರರಾಷ್ಟ್ರೀಯ ವ್ಯವಹಾರಗಳ ಆರ್ಥಿಕ ವಿಭಾಗದ ಉಪ ಸಚಿವರಾಗಿ ಸೇವೆ ಸಲ್ಲಿಸಿದ್ದರು.
- ADB ಯ 9 ನೇ ಅಧ್ಯಕ್ಷರಾಗಿ ನೇಮಕಗೊಂಡಿರುವ ಇವರು ನವೆಂಬರ್ 2016 ರ ತನಕ ಅಧ್ಯಕ್ಷರಾಗಿ ಸೇವೆ ಸಲ್ಲಿಸಲಿದ್ದಾರೆ.

**"ಏಷ್ಯನ್ ಅಭಿವೃದ್ಧಿ ಬ್ಯಾಂಕ್":**

- 22 ಆಗಸ್ಟ್ 1966 ರಲ್ಲಿ ಸ್ಥಾಪನೆ.
- ಕೇಂದ್ರ ಕಚೇರಿ: ಫಿಲಿಫೈನ್ಸ್ ನ ರಾಜಧಾನಿ "ಮನಿಲ"
- ಸದಸ್ಯತ್ವ ರಾಷ್ಟ್ರಗಳು: 67
- ಉದ್ದೇಶ: ಏಷ್ಯಾ ರಾಷ್ಟ್ರಗಳ ಅಭಿವೃದ್ಧಿಗೆ ಆರ್ಥಿಕ ಸಹಾಯ ಒದಗಿಸುವುದು.

**ಟೈಮ್ಸ್ ನಿಯತಕಾಲಿಕೆಯ "100 ಪ್ರಭಾವ ಶಾಲಿ" ವ್ಯಕ್ತಿಗಳ ಪಟ್ಟಿಯಲ್ಲಿ: ಅಮಿರ್ ಖಾನ್**

ಟೈಮ್ಸ್ ನಿಯತಕಾಲಿಕೆ ಹೊರತರುವ "100 ಪ್ರಭಾವ ಶಾಲಿ" ವ್ಯಕ್ತಿಗಳ ಪಟ್ಟಿಯನ್ನು ಬಿಡುಗಡೆಗೊಳಿದ್ದು, ಬಾಲಿವುಡ್ ನ ಪ್ರಸಿದ್ಧ ನಟ "ಅಮೀರ್ ಖಾನ್" ರವರು ಈ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ. ದೇಶದಲ್ಲಿ ತುಂಬಿ ತುಳುಕುತ್ತಿರುವ ಸಾಮಾಜಿಕ ಪಿಡುಗಗಳನ್ನು ಅಮೀರ್ ತಮ್ಮ "ಸತ್ಯ ಮೇವ ಜಯತೇ" ಕಾರ್ಯಕ್ರಮದಲ್ಲಿ ಬಿಂಬಿಸುತ್ತಿರುವುದು ಈಗ ವಿಶ್ವದ ಗಮನ ಸೆಳೆದಿದೆ. ಲೈಂಗಿಕ ಕಿರುಕುಳದಿಂದ ಮಕ್ಕಳನ್ನು ರಕ್ಷಿಸುವ ಸಲುವಾಗಿ ಇತ್ತೀಚೆಗೆ ಸರ್ಕಾರ ಮಂಡಿಸಿದ "ಮಕ್ಕಳ ರಕ್ಷಣಾ ಮಸೂದೆ" ಹಿಂದೆ ಅಮೀರ್ ರವರ ಅಪಾರ ಶ್ರಮವಹಿಸಿದ್ದಾರೆ. ಅಲ್ಲದೇ ಇತ್ತೀಚೆಗೆ ಭಾರತಕ್ಕೆ ಬೇಟಿ ನೀಡಿದ್ದ ಬ್ರಿಟನ್ ಪ್ರಧಾನಿ ಡೇವಿಡ್ ಕೆಮರೂನ್ ರವರೊಂದಿಗೆ ಭಾರತದಲ್ಲಿನ ಲಿಂಗ ತಾರತಮ್ಯದ ಬಗ್ಗೆ ಚರ್ಚಿಸಿ ಗಮನ ಸೆಳೆದಿದ್ದರು.

- 2012 ರಲ್ಲಿ ಅಮಿರ್ ಖಾನ್ ರವರು "ಏಷ್ಯಾ ಆವೃತ್ತಿಯ" ಟೈಮ್ಸ್ ನಿಯತಕಾಲಿಕೆ ಮುಖಪುಟದಲ್ಲಿ ಕಾಣಿಸಿಕೊಂಡಿದ್ದರು. ಟೈಮ್ಸ್ ನಿಯತಕಾಲಿಕೆಯ ಮುಖಪುಟದಲ್ಲಿ ಕಾಣಿಸಿಕೊಂಡ ಮೂರನೇ ಬಾಲಿವುಡ್ ನಟ ಎಂಬ ಹಿರಿಮೆಗೂ ಪಾತ್ರರಾಗಿದ್ದರು.

- 2013 ರ "ಪ್ರಭಾವ ಶಾಲಿ" ವ್ಯಕ್ತಿಗಳ ಪಟ್ಟಿಯಲ್ಲಿ ಕಾಣಿಸಿಕೊಂಡಿರುವ ಏಷ್ಯಾದ ಇತರೆ ವ್ಯಕ್ತಿಗಳೆಂದರೇ, ಕೇಂದ್ರ ವಿತ್ತ ಸಚಿವ ಪಿ.ಚಿದಂಬರಂ, ಮಲಾಲ ಯೂಸಫ್ ಝೈ ಮತ್ತು ವಕೀಲೆ ವೃಂದಾ ಗ್ರೋವರ್ (ದೆಹಲಿ ಯುವತಿಯ ಮೇಲಾದ ಅತ್ಯಾಚಾರದ ವೇಳೆ ನಡೆದ ಪ್ರತಿಭಟನೆಯ ಮುಂಖಡರು )
- ಈ ಪಟ್ಟಿಯಲ್ಲಿರುವ ಇತರೆ ಗಣ್ಯರೆಂದರೇ ಬರಾಕ್ ಒಬಾಮ, ಜೇ ಜೆಡ್, ಅಂಗ್ ಸನ್ ಸೂಕಿ, ಸ್ಟೀವನ್ ಸ್ಪೆಲ್ ಬರ್ಗ್, ಜೆನ್ನಿಫರ್ ಲಾರೆನ್ಸ್ ಇತ್ಯಾದಿ.

ಕರುನಾಡು ಎಗ್ಸಾಂ

## ಪ್ರಶಸ್ತಿಗಳು

**ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್ ಗೆ FE “ಇಂಡಿಯಾ’ಸ್ ಬೆಸ್ಟ್ ಬ್ಯಾಂಕ್ ಪ್ರಶಸ್ತಿ-2012-13”**

ಪ್ರತಿಷ್ಠಿತ “ಇಂಡಿಯಾ’ಸ್ ಬೆಸ್ಟ್ ಬ್ಯಾಂಕ್ ಪ್ರಶಸ್ತಿ-2012-13 (India’s Best Bank Award) ಯನ್ನು “ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್” ಪಡೆದುಕೊಂಡಿದೆ. ಸಕ್ರಿಯಾ ಬೆಳವಣಿಗೆ ಮತ್ತು ಉತ್ತಮ ಸೇವೆಯಿಂದ ಅಭಿವೃದ್ಧಿ ಕಾಯ್ದುಕೊಂಡಿರುವುದರಿಂದ ಈ ಪ್ರಶಸ್ತಿಯನ್ನು ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್ ಗೆ ನೀಡಲಾಗಿದೆ. ಲಾಭದಲ್ಲಿರುವ ಖಾಸಗಿ ವಲಯದ ಹಳೆಯ ಬ್ಯಾಂಕ್ ಗಳ ಪೈಕಿ “ಜಮ್ಮು ಮತ್ತು ಕಾಶ್ಮೀರ” ಬ್ಯಾಂಕ್ ನಂ.1 ಸ್ಥಾನದಲ್ಲಿದೆ.

- ಸಮೀಕ್ಷೆಯ ಪ್ರಕಾರ ಖಾಸಗಿ ವಲಯದ ಅತ್ಯುತ್ತಮ ಹಳೆಯ ಬ್ಯಾಂಕ್ ಗಳಲ್ಲಿ “ಜಮ್ಮು ಮತ್ತು ಕಾಶ್ಮೀರ” ಬ್ಯಾಂಕ್ ಪ್ರಥಮ ಸ್ಥಾನ ಲಭಿಸಿದೆ.
- 2011 ನೇ ಸಾಲಿನಲ್ಲೂ ಈ ಪ್ರಶಸ್ತಿಯನ್ನು “ಜಮ್ಮು ಮತ್ತು ಕಾಶ್ಮೀರ” ಬ್ಯಾಂಕ್ ಈ ಪ್ರಶಸ್ತಿಗೆ ಭಾಜನವಾಗಿತ್ತು.

“ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್”:

- ಜಮ್ಮು ಮತ್ತು ಕಾಶ್ಮೀರ ಬ್ಯಾಂಕ್ ನ್ನು ಅಕ್ಟೋಬರ್ 1, 1938 ರಲ್ಲಿ ಮಹಾರಾಜ ಹರಿಸಿಂಗ್ ರವರ ಸಹಾಯದದೊಂದಿಗೆ ಸ್ಥಾಪಸಿಲಾಯಿತು. ಇದರ ಪ್ರಧಾನ ಕಚೇರಿ ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿದೆ. ಅತ್ಯುತ್ತಮ ಸೇವೆಯನ್ನು ಒದಗಿಸುವ ಮೂಲಕ ವಿದೇಶಿ ಪ್ರಶಸ್ತಿಗಳಿಗೂ ಪಾತ್ರವಾಗಿದೆ.
- ಬ್ಯಾಂಕ್ ನ ಅಂಕಿ-ಅಂಶಗಳ ಪ್ರಕಾರ 2012-13 ನೇ ಸಾಲಿನಲ್ಲಿ 1 ಲಕ್ಷ ಕೋಟಿ ವ್ಯವಹಾರವನ್ನು ಬ್ಯಾಂಕ್ ನಡೆಸಿದೆ.

**ಭಾರತದ ಸಹೋದರರಿಗೆ “ವೈಟಲ್ ವಾಯ್ಸ್ ಗ್ಲೋಬಲ್ ಲೀಡರ್ ಶಿಪ್ ಆವಾರ್ಡ್”**

ಮಹಿಳೆಯರ ವಿರುದ್ದದ ದೌರ್ಜನ್ಯ ತಡೆಗೆ ಶ್ರಮಿಸಿದ ಮೂವರು ಭಾರತದ ಸಹೋದರರಿಗೆ ಪ್ರತಿಷ್ಠಿತ “ವೈಟಲ್ ವಾಯ್ಸ್ ಗ್ಲೋಬಲ್ ಲೀಡರ್ ಪ್ರಶಸ್ತಿ (Vital Voice Global Leadership Award)” ಲಭಿಸಿದೆ. ಆಮೆರಿಕಾದ ಕೆನಡಿ ಸೆಂಟರ್ ನಲ್ಲಿ ನಡೆದ ಸಮಾರಂಭದಲ್ಲಿ ಆಮೆರಿಕಾದ ಉಪಾಧ್ಯಕ್ಷ “ಜಾಯ್ ಬಿಡೆನ್” ರವರು ರವಿಕಾಂತ್, ರಿಷಿ ಮತ್ತು ನಿಷಿಕಾಂತ್ ರವರಿಗೆ ಪ್ರಧಾನ ಮಾಡಿದರು.

- ಸುಪ್ರೀಂ ಕೋರ್ಟನಲ್ಲಿ ವಕೀಲರಾಗಿರುವ “ರವಿ ಕಾಂತ್” ಮತ್ತು ಅವರ ಸಹೋದರರು 2001 ರಲ್ಲಿ “ಶಕ್ತಿ ವಾಹಿನಿ” ಎಂಬ ಸರ್ಕಾರೇತರ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಮಹಿಳೆಯರ ವಿರುದ್ದ ನಡೆಯುವ ದೌರ್ಜನ್ಯವನ್ನು ತಡೆಯಲು ಅಪಾರವಾಗಿ ಶ್ರಮಿಸುತ್ತಿದೆ. ಶಕ್ತಿವಾಹಿಸಿ ಇಲ್ಲಿಯವರೆಗೆ ಸುಮಾರು 2000 ಮಹಿಳೆಯರನ್ನು ರಕ್ಷಿಸಿದೆ.

“ವೈಟಲ್ ವಾಯ್ಸ್ ಗ್ಲೋಬಲ್ ಲೀಡರ್ ಪ್ರಶಸ್ತಿ:

- ಆಮೆರಿಕಾದ ಮಾಜಿ ವಿದೇಶಾಂಗ ಕಾರ್ಯದರ್ಶಿ “ಹಿಲರಿ ಕ್ಲಿಂಟನ್” ರವರು 1997 ರಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದರು. ಮಹಿಳೆಯರ ಹಿತರಕ್ಷಣೆಯನ್ನು ಕಾಯಲು ಶ್ರಮಿಸುವವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

**ಲಲಿತ್ ಸೂರಿ ಹೋಟೆಲ್ ಸಮೂಹಕ್ಕೆ ರಾಷ್ಟ್ರೀಯ ಪ್ರಶಸ್ತಿ**

ಲಲಿತ್ ಸೂರಿ ಒಡೆತನದ ಹೋಟೆಲ್ ಸಮೂಹಕ್ಕೆ "ನ್ಯಾಷನಲ್ ಆವಾರ್ಡ್ ಫಾರ್ ಎಕ್ಸಲೆನ್ಸ್ ಇನ್ ಹಾಸ್ಪಿಟಾಲಿಟಿ ಎಜುಕೇಷನ್ 2011-12 ಪ್ರಶಸ್ತಿಯನ್ನು ನೀಡಲಾಗಿದೆ. ಹೋಟೆಲ್ ಉದ್ಯಮದಲ್ಲಿ ಕೌಶಲ್ಯ ಅಭಿವೃದ್ದಿ ನೀಡಲಾಗಿರುವ ಕೊಡುಗೆಯನ್ನು ಗಮನಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಕೇಂದ್ರ ಪ್ರವಾಸೋಧ್ಯಮ ಸಚಿವ ಕೆ.ಚಿರಂಜೀವಿ ರವರು ಪ್ರಶಸ್ತಿಯನ್ನು ವಿತರಿಸಿದರು.

- ಲಲಿತ್ ಸೂರಿ ಹೋಟೆಲ್ ಸಮೂಹದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಜ್ಯೊತ್ಸಾನ ಸೂರಿ ರವರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಪ್ರಾಜೆಕ್ಟ್ ದಿಶಾ:

- ಲಲಿತ್ ಸೂರಿ ಹೋಟೆಲ್ ಸಮೂಹ "ಪ್ರಾಜೆಕ್ಟ್ ದಿಶಾ" ಎಂಬ ಯೋಜನೆಯನ್ನು ಆರಂಭಿಸಿದ್ದು, ಸ್ಥಳೀಯ ಯುವಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಚಿತ ಮತ್ತು ಉತ್ತಮ ಮಟ್ಟದ ಶಿಕ್ಷಣವನ್ನು ನೀಡುತ್ತಿದೆ. ಅಲ್ಲದೇ ಉದ್ಯೋಗ ಸೌಲಭ್ಯವನ್ನು ಸಹ ಕಲ್ಪಸಿಲಾಗುತ್ತಿದೆ.

**ಹಿರಿಯ ನಟ "ಪ್ರಾಣ್" ಗೆ 44 ನೇ ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿ**

ಚಲನಚಿತ್ರ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದವರಿಗೆ ಕೊಡಲಾಗುವ ಅತ್ಯುನ್ನತ ಪ್ರಶಸ್ತಿಯಾದ ದಾದಾ ಸಾಹೇಬ್ ಪ್ರಶಸ್ತಿಯನ್ನು ಪ್ರಕಟಿಸಲಾಗಿದ್ದು, 2012 ನೇ ಸಾಲಿನ ಈ ಪ್ರಶಸ್ತಿಗೆ ಹಿರಿಯ ನಟ "ಶ್ರೀ ಪ್ರಾಣ್ ಕ್ರಿಷನ್ ಸಿಕಂದ್" ರವರನ್ನು ಆಯ್ಕೆಮಾಡಲಾಗಿದೆ.

ಶ್ರೀ ಪ್ರಾಣ್ ಕ್ರಿಷನ್ ಸಿಕಂದ್:

- ದೆಹಲಿಯಲ್ಲಿ 1920 ರಲ್ಲಿ ಜನಿಸಿದ ಇವರು ಪ್ರಾಣ್ ಎಂದೇ ಜನಪ್ರಿಯಗೊಂಡಿದ್ದಾರೆ. ಮೂಲತಃ ಛಾಯಾಗ್ರಾಹಕರಾಗಿದ್ದ ಪ್ರಾಣ್ ರವರು ಆಕಸ್ಮಿಕವಾಗಿ ನಿರ್ಮಾಪಕರೊಬ್ಬರ ಭೇಟಿಯಿಂದ "ಯಮ್ಲ ಜತ್ (Yamla Jat)" ಎನ್ನುವ ಸಿನಿಮಾ ಮೂಲಕ ಸಿನಿ ಲೋಕಕ್ಕೆ ಪಾದಾರ್ಪಣೆ ಮಾಡಿದರು.
- ದೇವಾನಂದ್ ರವರು ಪ್ರಮುಖ ಪಾತ್ರದಲ್ಲಿ ಅಭಿನಯಿಸಿದ "ಜಿದ್ದಿ" ಚಿತ್ರದಲ್ಲಿ "ಪ್ರಾಣ್" ಕಾಣಿಸಿಕೊಂಡಿದ್ದರು. ಈ ಚಿತ್ರ ಪ್ರಾಣ್ ರವರಿಗೆ ಬ್ರೇಕ್ ನೀಡಿದ್ದು ಇತಿಹಾಸ. ಆ ಬಳಿಕ "ಪ್ರಾಣ್" ಹಿಂತಿರುಗಿ ನೋಡಲೇ ಇಲ್ಲ.
- ಸುಮಾರು 400 ಚಿತ್ರಗಳಲ್ಲಿ ಪ್ರಾಣ್ ರವರು ಅಭಿನಯಿಸುವ ಮೂಲಕ ಹಿಂದಿ ಚಿತ್ರರಂಗಕ್ಕೆ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ.
- ಬಾಲಿವುಡ್ ನ ಹಿರಿಯ ನಟರಾದ ದಿಲೀಪ್ ಕುಮಾರ್, ದೇವಾನಂದ್ ಮತ್ತು ರಾಜ್ ಕಪೂರ್ ರವರ ಜೊತೆ ಅಭಿನಯಿಸಿರುವ ಪ್ರಾಣ್ ತಮ್ಮ ಅದ್ಭುತ ನಟನೆಯಿಂದ ಜನಮನ್ನಣೆಗಳಿಸಿದ್ದಾರೆ. ಮಧುಮತಿ, ದೇವದಾಸ್, ದಿಲ್ ದಿಯಾ ದರ್ದ್ ಲಿಯಾ, ರಾಮ್ ಹೌರ್ ಶಾಮ್, ಜಿದ್ದಿ, ಚೋರಿ ಚೋರಿ, ಜಗ್ತೆ ರಹೋ" ಪ್ರಾಣ್ ಅಭಿನಯದ ಪ್ರಮುಖ ಚಿತ್ರಗಳು.

ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿ:

- ಭಾರತ ಚಿತ್ರರಂಗದ ಅಭಿವೃದ್ಧಿ ಅಪಾರ ಕೊಡುಗೆ ನೀಡಿದವರಿಗೆ ಈ ಪ್ರಶಸ್ತಿಯನ್ನು 1969 ರಿಂದ ನೀಡಲಾಗುತ್ತಿದೆ. ನಟಿ ದೇವಿಕಾ ರಾಣಿ ಈ ಪ್ರಶಸ್ತಿಯನ್ನು ಪಡೆದ ಮೊದಲಿಗರು. ಪ್ರಶಸ್ತಿಯು ಸ್ವರ್ಣ ಕಮಲ, 10 ಲಕ್ಷ ನಗದು ಮತ್ತು ಒಂದು ಶಾಲ್ ನ್ನು ಒಳಗೊಂಡಿದೆ. ಕನ್ನಡದಲ್ಲಿ ಈ ಪ್ರಶಸ್ತಿಯು ಡಾ.ರಾಜಕುಮಾರ್ ರವರಿಗೆ ಮಾತ್ರ ಲಭಿಸಿದೆ.

**ಭಾರತೀಯ ಅಮೆರಿಕನ್ ಅರ್ಥಶಾಸ್ತ್ರಜ್ಞ "ರಾಜ್ ಚೆಟ್ಟಿ" ಗೆ "ಬೇಬಿ ನೊಬೆಲ್"**

ಹಾರ್ವರ್ಡ್ ವಿಶ್ವವಿದ್ಯಾಲಯದ ಯುವ ಭಾರತೀಯ ಅಮೆರಿಕನ್ ಅರ್ಥಶಾಸ್ತ್ರಜ್ಞ "ರಾಜ್ ಚೆಟ್ಟಿ" ರವರು ಪ್ರತಿಷ್ಠಿತ "ಜಾನ್ ಬ್ಯಾಟ್ಸ್ ಕ್ಲಾರ್ಕ್" ಪದಕಕ್ಕೆ ಪಾತ್ರರಾಗಿದ್ದಾರೆ. ಈ ಪದಕವನ್ನು "ಬೇಬಿ ನೊಬೆಲ್" ಎಂದೇ ಕರೆಯಲಾಗುತ್ತದೆ. ದೆಹಲಿ ಮೂಲದ ರಾಜ್ ರವರು 2009 ರಿಂದ ಹಾರ್ವರ್ಡ್ ವಿವಿಯಲ್ಲಿ ಪ್ರಾಧ್ಯಾಪಕರಾಗಿ ಸೇವಿಸಲ್ಲಿಸುತ್ತಿದ್ದಾರೆ.

- ಆರ್ಥಿಕ ಚಿಂತನೆಗಳು ಮತ್ತು ಜ್ಞಾನವನ್ನು ಹೊಂದಿರುವ 40 ವರ್ಷಕ್ಕಿಂತ ಕೆಳ ವಯಸ್ಸಿನ ಅಮೆರಿಕನ್ ಅರ್ಥಶಾಸ್ತ್ರಜ್ಞ ಸಾಧಕರಿಗೆ ಈ ಪದಕವನ್ನು ನೀಡಲಾಗುತ್ತಿದೆ. ನೊಬೆಲ್ ಪ್ರಶಸ್ತಿಯ ನಂತರ ಅರ್ಥಶಾಸ್ತ್ರಕ್ಕೆ ನೀಡುವ ಅತ್ಯುನ್ನತ ಪ್ರಶಸ್ತಿ ಇದಾಗಿದೆ.
- ಅಮೆರಿಕನ್ ಆರ್ಥಿಕ ಅಸೋಸಿಯೇಷನ್ ಈ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡುತ್ತಿದೆ. ಚೆಟ್ಟಿರವರು ಸಾಮಾಜಿಕ ವಿಮೆ, ತೆರಿಗೆ ನೀತಿ ಮತ್ತು ಶಿಕ್ಷಣ ನೀತಿಗಳಲ್ಲಿ ತಮ್ಮ ಅಮೋಘ ಚಿಂತನೆಗಳ ಮೂಲಕ ಅರ್ಥಶಾಸ್ತ್ರಕ್ಕೆ ಗಣನೀಯ ಕೊಡುಗೆ ನೀಡಿರುವುದನ್ನು ಗಮನಿಸಿ ಈ ಪ್ರಶಸ್ತಿಯನ್ನು ಕೊಡಲಾಗಿದೆ.
- ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಮತ್ತು ನೊಬೆಲ್ ಪ್ರಶಸ್ತಿ ವಿಜೇತರುಗಳಾದ "ಪಾಲ್ ಕ್ರುಗ್ ಮನ್" "ಪಾಲ್ ಸ್ಯಾಮುಲ್ ಸನ್" "ಮಿಲ್ಟನ್ ಪ್ರೈಡ್ ಮನ್" ಮತ್ತು "ಜೋಸೆಫ್ ಸ್ಟಿಗ್ಲಿಟ್ಜ್" ರವರು ಈ ಪ್ರಶಸ್ತಿಗೆ ಈ ಹಿಂದೆ ಭಾಜನರಾಗಿರುವರು.

**ಪರಿಸರ ಚಳುವಳಿಗಾರ "ರೊಸ್ಸಾನೊ ಎರ್ಕೋಲಿನಿ" ಗೆ ಗೋಲ್ಡ್ ಮನ್ ಪ್ರಶಸ್ತಿ**

ಪರಿಸರ ಸಂರಕ್ಷಣೆಗೆ ಗಣನೀಯ ಸೇವೆ ನೀಡಿದವರಿಗೆ ಕೊಡಲಾಗುವ "ಗೋಲ್ಡ್ ಮನ್-2013" ಪ್ರಶಸ್ತಿಯನ್ನು ಪ್ರಕಟಿಸಲಾಗಿದ್ದು, ಇಟಲಿಯ ಪರಿಸರ ಚಳುವಳಿಗಾರ ರೊಸ್ಸಾನೊ ಎರ್ಕೋಲಿನಿ" ಸೇರಿದಂತೆ ಇತರೆ ಐದು ಪರಿಸರ ಹೋರಾಟಗಾರರಿಗೆ ಗೋಲ್ ಮನ್ ಪ್ರಶಸ್ತಿ ಲಭಿಸಿದೆ. ಪ್ರಶಸ್ತಿ ಪಡೆದವರ ವಿವರ ಇಲ್ಲಿದೆ.

- ರೊಸ್ಸಾನೊ ಎರ್ಕೋಲಿನಿ (Rossano Ercolini): ವೃತ್ತಿಯಲ್ಲಿ ಶಾಲಾ ಶಿಕ್ಷಕರಾಗಿರುವ ಇವರು ಇಟಲಿ ದೇಶದ ಪ್ರಜೆ. ಇಟಲಿಯ ಕೆಲವು ನಗರಗಳಲ್ಲಿ ನಗರದ ತ್ಯಾಜ್ಯ ವಸ್ತುಗಳನ್ನು ಸುಡುವುದರಿಂದ ಜನರ ಆರೋಗ್ಯದ ಮೇಲೆ ಉಂಟಾಗುವ ಪರಿಣಾಮಗಳನ್ನು ಅಲ್ಲಿನ ಜನರಿಗೆ ಮನವರಿಕೆ ಮಾಡಿಕೊಟ್ಟರು. ಇದರಿಂದ ತ್ಯಾಜ್ಯ ಸುಡುವುದನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತು. ಅಲ್ಲದೇ ತ್ಯಾಜ್ಯ ವಿಲೇವಾರಿಗೆ ರೊಸ್ಸಾನೊ ರವರು "ಜೀರೋ ವೆಸ್ಟ್" ಎಂಬ ವಿಧಾನವನ್ನು ತಿಳಿಸಿಕೊಟ್ಟರು. ಇಂದು "ಜೀರೋ ವೆಸ್ಟ್" ವಿಧಾನ ಇಟಲಿಯ ಪ್ರಮುಖ ನಗರಗಳಲ್ಲಿ ಕ್ರಾಂತಿಯನ್ನು ಮಾಡಿದೆ.

- ಜೋನಾತನ್ ಡೀಲ್: ಜೋನಾತನ್ ದಕ್ಷಿಣಾ ಆಫ್ರಿಕಾದವರಾದರು. ದಕ್ಷಿಣಾ ಆಫ್ರಿಕಾದಲ್ಲಿರುವ "ಕರೂ" ಎಂಬ ಶುಷ್ಕ ಭಾಗದ ರಕ್ಷಣೆಗೆ ನಿಲ್ಲುವ ಮೂಲಕ ಅಲ್ಲಿನ ಜೀವವೈವಿದ್ಯಗಳ ರಕ್ಷಣೆಗೆ ಬೆಂಬಲವಾಗಿ ನಿಂತವರು. ಇವರ ಈ ಸಾಧನೆಯನ್ನು ಗುರುತಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ.
- ಪ್ರಶಸ್ತಿ ಪಡೆದ ಇತರರು: ಅಝುಂ ಅಲ್ವಾಶ್ (ಇರಾಕ್), ಅಲೆಟಾ ಬಾನ್ (ಇಂಡೋನೇಷಿಯಾ), ಕಿಂಬರ್ಲಿ ವಾಸ್ಸರಮನ್ (ಯು.ಎಸ್,ಎ) ಮತ್ತು ನೊಹ್ರಾ ಪಂಡಿಲ್ಲ (ಕೊಲಂಬಿಯಾ).

ಗೋಲ್ಡ್ ಮನ್ ಆವಾರ್ಡ್:

- ಪರಿಸರ ಸಂರಕ್ಷಣೆ, ಅಳಿವಿನ ಅಂಚಿನಲ್ಲಿರುವ ಜೀವಿಗಳ ರಕ್ಷಣೆ, ಪರಿಸರಕ್ಕೆ ಹಾನಿಕರ ಮಾಡಬಲ್ಲ ಯೋಜನೆಗಳ ವಿರುದ್ದ ಹೋರಾಟ ಮುಂತಾದ ಪರಿಸರ ಸಂರಕ್ಷಣೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಇತರರಿಗೆ ಮಾದರಿಯಾಗಿರುವ ವ್ಯಕ್ತಿಗಳಿಗೆ ಈ ಪ್ರಶಸ್ತಿಯನ್ನು ವಾರ್ಷಿಕವಾಗಿ ನೀಡಲಾಗುತ್ತಿದೆ. ಪರಿಸರ "ಆಸ್ಕರ್" ಎಂದೇ ಪ್ರಸಿದ್ದವಾಗಿರುವ ಈ ಪ್ರಶಸ್ತಿಯು 1,50,000 ಡಾಲರ್ ನಗದನ್ನು ಒಳಗೊಂಡಿದೆ.

**ನವಜೋತ್ ಸಿಂಗ್:ಶೇರ್ ಐ-ಕಾಶ್ಮೀರ್ ಪ್ರಶಸ್ತಿ ಪಡೆದ ಕಿರಿಯ ಅಥ್ಲೇಟ್**

ಖ್ಯಾತ ಅಥ್ಲೇಟಿಕ್ ಪಟು "ನವಜೋತ್ ಸಿಂಗ್" ರವರು "ಶೇರ್-ಐ-ಕಾಶ್ಮೀರ್" ಪ್ರಶಸ್ತಿ ಪಡೆದ ಕಾಶ್ಮೀರದ ಅತ್ಯಂತ ಕಿರಿಯ ಅಥ್ಲೇಟ್ ಎಂಬ ಗೌರವಕ್ಕೆ ಪಾತ್ರರಾದರು. 16 ವರ್ಷ ವಯಸ್ಸಿನ ಸಿಂಗ್ ರವರು 2007 ರಲ್ಲಿ ರಾಜ್ ಕೋಟ್ ನಲ್ಲಿ ನಡೆದ "ಸಬ್ ಜೂನಿಯರ್ ನ್ಯಾಷನಲ್ ಅಥ್ಲೇಟಿಕ್ ಜಿಮ್ನಾಸ್ಟಿಕ್" ಕೂಟದಲ್ಲಿ ಬೆಳ್ಳಿ ಪದಕ ಗೆಲ್ಲುವ ಮೂಲಕ ಮಾಡಿದ ಸಾಧನೆಗೆ ಈ ಪ್ರಶಸ್ತಿಯನ್ನು ನೀಡಲಾಗಿದೆ. ಅಲ್ಲದೇ ಸಿಂಗ್ ರವರು 2008-09 ನೇ ಸಾಲಿನಲ್ಲಿ ವರ್ಷದ ಅತ್ಯುತ್ತಮ ಆಟಗಾರ ಹಿರಿಮೆಗೂ ಪಾತ್ರರಾಗಿದ್ದರು.

- 2008 ರಂದು ಇದೇ ಜಿಮ್ನಾಸ್ಟಿಕ್ ಕೂಟದಲ್ಲಿ ಸಿಂಗ್ ರವರು ಎರಡು ಚಿನ್ನದ ಪದಕಗಳನ್ನು ತಮ್ಮದಾಗಿಸಿಕೊಂಡಿದ್ದರು.
- ಸಿಂಗ್ ಸೇರಿದಂತೆ ಒಟ್ಟು 13 ಜನ ಜಿಮ್ನಾಸ್ಟಿಕ್ ಗಳಿಗೆ ಈ ಪ್ರಶಸ್ತಿಯನ್ನು ಈ ಬಾರಿ ನೀಡಲಾಗಿದೆ. ಅಲ್ಲದೇ ವಿವಿಧ ಕ್ರೀಡೆಯಲ್ಲಿ ಸಾಧನೆಗೈದವರಿಗೂ ಸಹ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಶೇರ್- ಐ- ಕಾಶ್ಮೀರ್:

- "ಶೇರ್-ಐ-ಕಾಶ್ಮೀರ್" ಪ್ರಶಸ್ತಿಯನ್ನು ಕಾಶ್ಮೀರ ಸರ್ಕಾರ ತನ್ನ ರಾಜ್ಯದ ಕ್ರೀಡಾಪಟುಗಳಿಗೆ ನೀಡುವ ಕ್ರೀಡಾ ಪುರಸ್ಕಾರ.
- 1978 ರಲ್ಲಿ ಈ ಪ್ರಶಸ್ತಿಯನ್ನು ಸ್ಥಾಪಿಸಲಾಗಿದೆ. 1991 ರಿಂದ ಈ ಪ್ರಶಸ್ತಿ ನೀಡುವಿಕೆಯನ್ನು ನಿಲ್ಲಿಸಲಾಗಿತ್ತಾದರೂ, 2002 ರಿಂದ ಪುನಃ ಪ್ರಾರಂಭಿಸಲಾಗಿದೆ.

**ತೆಲುಗಿನ ಖ್ಯಾತ ಲೇಖಕ ರಾವುರಿ ಭಾರದ್ವಜ್ ಗೆ ಜ್ಞಾನಪೀಠ**

ತೆಲುಗಿನ ಪ್ರಸಿದ್ದ ಲೇಖಕ ಡಾ. ರಾವುರಿ ಭಾರದ್ವಜ್ (87) ರವರು 2012 ನೇ ಸಾಲಿನ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಕೇವಲ 8 ನೇ ತರಗತಿ ಓದಿದ್ದರೂ, ರಾವೂರಿ ತೆಲುಗು ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ

ನೀಡಿದ್ದಾರೆ. ಸಣ್ಣಕಥೆ, ಸಂಕಲನ, ಕಾದಂಬರಿ, ಮಕ್ಕಳ ಕಥೆಗಳು ಸೇರಿದಂತೆ ಇವರು ಹಲವು ಪುಸ್ತಕಗಳು ವಿಶ್ವವಿದ್ಯಾಲಯಗಳಲ್ಲಿ ಪಠ್ಯಗಳಾಗಿವೆ. ಇನ್ನು ಕೆಲವು ಪುಸ್ತಕಗಳೂ ಸಂಶೋಧನಾ ಕಾರ್ಯಗಳಿಗೆ ಮೂಲಗಳಾಗಿವೆ.

- ರಾವೂರಿ ಅವರು ತಮ್ಮ ಸಾಹಿತ್ಯ ಜೀವನದಲ್ಲಿ ಸಣ್ಣಕಥೆಗಳ 37 ಸಂಕಲನ, 17 ಕಾದಂಬರಿ ಮತ್ತು ಅನೇಕ ಮಕ್ಕಳ ಕಥೆಗಳನ್ನು ಬರೆದಿದ್ದಾರೆ.
- "ಪಕುದುರಲ್ಲು", "ಜೀವನ ಸಂಸಾರಂ", "ಇಂಪು ತೇರ ವೆಂಕು" ಮತ್ತು ಕೌಮುದಿ ಇವರ ಪ್ರಸಿದ್ಧ ಕಾದಂಬರಿಗಳು.
- ಈ ಹಿಂದೆ ರಾವುರಿರವರು "ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ", "ಬಾಲ ಸಾಹಿತ್ಯ ಪರಿಷತ್ ಪ್ರಶಸ್ತಿ", "ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ" ಮತ್ತು "ತೆಲುಗು ಅಕಾಡೆಮಿ" ಪ್ರಶಸ್ತಿಗೆ ಭಾಜರಾಗಿದ್ದರು.
- ತೆಲುಗು ಸಾಹಿತ್ಯಕ್ಕೆ ಇದು **ಮೂರನೇ** ಜ್ಞಾನಪೀಠ ಪ್ರಶಸ್ತಿ. ಈ ಹಿಂದೆ ಲೇಖಕರಾದ ಡಾ.ನಾರಾಯಣ ರೆಡ್ಡಿ ಮತ್ತು ವಿಶ್ವನಾಥ ಸತ್ಯನಾರಾಯಣ ರವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.

**ಜ್ಞಾನಪೀಠ ಪ್ರಶಸ್ತಿ:**

- ಜ್ಞಾನಪೀಠ ಪ್ರಶಸ್ತಿಯು ಸಾಹಿತ್ಯ ಕ್ಷೇತ್ರಕ್ಕೆ ನೀಡಲಾಗುವ ಅತ್ಯುನ್ನತ್ತ ಪ್ರಶಸ್ತಿ. ದೇಶದ ಯಾವುದೇ ಅಧಿಕೃತ ಭಾಷೆಗಳಲ್ಲಿ ಬರೆಯುವ ಭಾರತೀಯ ಪ್ರಜೆಯು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಈ ಪ್ರಶಸ್ತಿಯನ್ನು 1961 ರಲ್ಲಿ ಸ್ಥಾಪಿಸಲಾಗಿದ್ದು, 1965 ರಿಂದ ಕೊಡಲಾಗುತ್ತಿದೆ.
- ಟೈಮ್ಸ್ ಆಫ್ ಇಂಡಿಯಾ ಗ್ರೂಫ್ ಸ್ಥಾಪಿಸಿರುವ "ಭಾರತೀಯ ಜ್ಞಾನಪೀಠ" ಟ್ರಸ್ಟ್ ಈ ಪ್ರಶಸ್ತಿಯನ್ನು ನೀಡುತ್ತಾ ಬರುತ್ತಿದೆ.
- ಮಲೆಯಾಳಂ ನ ಸಾಹಿತಿ "ಜಿ.ಶಂಕರ್ ಕುರೂಪ್" ರವರು ಈ ಪ್ರಶಸ್ತಿಯನ್ನು ಪಡೆದ ಮೊದಲಿಗರು. ಅವರ "ಒಡಕ್ಕುರ್ಝುಲ್ (Odakkuzhal)" ಸಂಕಲನಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.
- ಇಲ್ಲಿಯವರೆಗೂ ಒಟ್ಟು 53 ಸಾಹಿತಿಗಳು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.
- ಹಿಂದಿ ಸಾಹಿತ್ಯಕ್ಕೆ ಒಟ್ಟು 9 ಪ್ರಶಸ್ತಿಗಳು ಲಭಿಸುವ ಮೂಲಕ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ಭಾಷೆ ಎನಿಸಿದೆ. ಕನ್ನಡ ಸಾಹಿತ್ಯಕ್ಕೆ 8 ಪ್ರಶಸ್ತಿಗಳು ಲಭಿಸುವ ಮೂಲಕ ಎರಡನೇ ಸ್ಥಾನದಲ್ಲಿದೆ. ಬೆಂಗಾಲಿ ಮತ್ತು ಮಲಯಾಳಂ ಸಾಹಿತ್ಯಕ್ಕೆ ಐದು ಬಾರಿ ಈ ಪ್ರಶಸ್ತಿಯನ್ನು ನೀಡಲಾಗಿದೆ.
- ಇಲ್ಲಿಯವರೆಗೆ ಒಟ್ಟು 7 ಮಹಿಳಾ ಸಾಹಿತಿಗಳು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೆಂಗಾಲಿ ಲೇಖಕಿ "ಆಶಾಪೂರ್ಣದೇವಿ" ರವರು 1976 ರಲ್ಲಿ ಈ ಪ್ರಶಸ್ತಿಯನ್ನು ಪಡೆದ ಮೊದಲ ಲೇಖಕಿ ಎಂಬ ಕೀರ್ತಿಗೆ ಪಾತ್ರರಾದರು. 2011 ರಲ್ಲಿ ಒಡಿಶಾದ "ಪ್ರತಿಭಾ ರೇ" ಈ ಪ್ರಶಸ್ತಿ ಪಡೆದ ಇತ್ತೀಚಿನ ಲೇಖಕಿ.
- "ಸತ್ಯ ವ್ರತ ಶಾಸ್ತ್ರಿ" ರವರು ಸಂಸ್ಕೃತದಲ್ಲಿ ಜ್ಞಾನ ಪೀಠ ಪ್ರಶಸ್ತಿ ಪಡೆದ ಪ್ರಥಮರು.
- 46 ನೇ ಜ್ಞಾನಪೀಠ ಪ್ರಶಸ್ತಿಯನ್ನು ಕನ್ನಡದ ಹೆಸರಾಂತ ಸಾಹಿತಿ "ಡಾ.ಚಂದ್ರಶೇಖರ ಕಂಬಾರ"ರಿಗೆ ನೀಡಲಾಯಿತು.
- ಜ್ಞಾನಪೀಠ ಪ್ರಶಸ್ತಿಯು 7 ಲಕ್ಷ ನಗದು, ಕಂಚಿನಿಂದ ಮಾಡಲಾದ ಸರಸ್ವತಿ ಪ್ರತಿಮೆ ಮತ್ತು ಫಲಕವನ್ನು ಒಳಗೊಂಡಿದೆ.

**ಪುಲಿಟ್ಜರ್ ಪ್ರಶಸ್ತಿ ಪ್ರಕಟ: ನ್ಯೂಯಾರ್ಕ್ ಟೈಮ್ಸ್ ಗೆ ನಾಲ್ಕು ಪ್ರಶಸ್ತಿ**

ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸಂಗೀತಾ ಸಂಯೋಜನೆ ಸಂಬಂಧಿಸಿದ ಒಟ್ಟು 21 ವರ್ಗಗಳಿಗೆ ನೀಡಲಾಗುವ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಯನ್ನು ಪ್ರಕಟಿಸಿಲಾಗಿದೆ. ಪತ್ರಿಕೋದ್ಯಮ ವಿಭಾಗದಲ್ಲಿ ನ್ಯೂಯಾರ್ಕ್ ಟೈಮ್ಸ್ ಒಟ್ಟು ನಾಲ್ಕು ಪ್ರಶಸ್ತಿಗಳನ್ನು ಬಾಚಿಕೊಂಡಿದೆ. 2013 ನೇ ಸಾಲಿನ ಪುಲಿಟ್ಜರ್ ಪ್ರಶಸ್ತಿ ವಿಜೇತರ ವಿವರ ಈ ಕೆಳಗೆ ನೀಡಲಾಗಿದೆ (ಪ್ರಮುಖವಾದವು ಮಾತ್ರ ಹೆಚ್ಚಿನ ವಿವರಗಳಿಗೆ www.pulitzer.org ನೋಡಿ).

**ಪತ್ರಿಕೋದ್ಯಮ**

- ಬ್ರೇಕಿಂಗ್ ನ್ಯೂಸ್ ವರದಿ: “ದಿ ಡೆನ್ವರ್ ಪೋಸ್ಟ್” ನ ಸಿಬ್ಬಂದಿಗೆ ಲಭಿಸಿದೆ.
- ತನಿಖೆ ವರದಿ (Investigation Report): ದಿ ನ್ಯೂಯಾರ್ಕ್ ಟೈಮ್ಸ್ ನ “ಡೇವಿಡ್ ಬರ್ಸ್ಟೋವ್ ಮತ್ತು ಅಲೆಜಂದ್ರ ಕ್ಸಾನಿಕ್ ವಾನ್ ಬರ್ ಟ್ರಬ್”.
- ಅಂತರರಾಷ್ಟ್ರೀಯ ವರದಿ: ದಿ ನ್ಯೂಯಾರ್ಕ್ ಟೈಮ್ಸ್ ನ “ಡೇವಿಡ್ ಬರ್ಬೋಜಾ”.
- ವಿವರಣಾತ್ಮಕ ವರದಿ: ದಿ ನ್ಯೂಯಾರ್ಕ್ ಟೈಮ್ಸ್ ನ ಸಿಬ್ಬಂದಿ.
- ವೈಶಿಷ್ಟವಾದ ಬರಹ: ದಿ ನ್ಯೂಯಾರ್ಕ್ ಟೈಮ್ಸ್ ನ “'ಜಾನ್ ಬ್ರಾಂಚ್'”

**ಸಾಹಿತ್ಯ, ಡ್ರಾಮಾ ಮತ್ತು ಸಂಗೀತಾ**

- ಕಾದಂಬರಿ: **ಅಡಂ ಜಾನಸನ್ ರವರ ''ದಿ ಆರ್ಫನ್ಸ್ ಮಾಸ್ಟರ್ಸ್ ಸನ್ (The Orphan Master’s Son)** ಗೆ ನೀಡಲಾಗಿದೆ.
- ಡ್ರಾಮಾ: ಅಯದ್ ಅಕ್ತರ್ ರವರ ''ಡಿಸ್ ಗ್ರೇಸ್ಡ್ (Disgraced)''.
- ಸಂಗೀತಾ: ಕೆರೊಲಿನ್ ಶಾ ರವರ ''Partita for 8 Voices”.

**ಪುಲಿಟ್ಜರ್ ಪ್ರಶಸ್ತಿ:**

- ಪುಲಿಟ್ಜರ್ ಪ್ರಶಸ್ತಿಯನ್ನು 1917 ರಲ್ಲಿ ಸ್ಥಾಪಿಸಲಾಗಿದೆ. ಆಮೆರಿಕಾದ ಪ್ರಕಾಶರಾದ “'ಜೋಸೆಫ್ ಪುಲಿಟ್ಜರ್'' ರವರು ಬರೆದಿಟ್ಟ ವಿಲ್ ನ ಅನ್ವಯ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ಪ್ರಶಸ್ತಿಯ ಉಸ್ತುವಾರಿಯನ್ನು ಆಮೆರಿಕಾದ “'ಕೊಲಂಬಿಯಾ ವಿಶ್ವವಿದ್ಯಾಲಯ'' ನೋಡಿಕೊಳ್ಳುತ್ತಿದೆ.
- ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸಂಗೀತಾ ಸಂಯೋಜನೆ ಕ್ಷೇತ್ರಗಳ ಒಟ್ಟು 21 ವರ್ಗಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ಈ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತದೆ. 20 ವರ್ಗಗಳಿಗೆ ನೀಡಲಾಗುವ ಪ್ರಶಸ್ತಿಯು 10000 ಆಮೆರಿಕಾ ಡಾಲರ್ ನಗದನ್ನು ಒಳಗೊಂಡಿದೆ.
- ಸಾರ್ವಜನಿಕ ಸೇವೆ ವಿಭಾಗಕ್ಕೆ ನೀಡಲಾಗುವ ಪ್ರಶಸ್ತಿಯು ಚಿನ್ನದ ಪದಕವನ್ನು ಮಾತ್ರ ಒಳಗೊಂಡಿರುತ್ತದೆ.

**ತೆಲುಗಿನ ಖ್ಯಾತ ಲೇಖಕ ರಾವುರಿ ಭಾರದ್ವಜ್ ಗೆ ಜ್ಞಾನಪೀಠ**

ತೆಲುಗಿನ ಪ್ರಸಿದ್ಧ ಲೇಖಕ ಡಾ. ರಾವುರಿ ಭಾರದ್ವಜ್ (87) ರವರು 2012 ನೇ ಸಾಲಿನ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಕೇವಲ 8 ನೇ ತರಗತಿ ಓದಿದ್ದರೂ, ರಾವೂರಿ ತೆಲುಗು ಸಾಹಿತ್ಯ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ. ಸಣ್ಣಕಥೆ, ಸಂಕಲನ, ಕಾದಂಬರಿ, ಮಕ್ಕಳ ಕಥೆಗಳು ಸೇರಿದಂತೆ ಇವರು ಹಲವು ಪುಸ್ತಕಗಳು ವಿಶ್ವವಿದ್ಯಾಲಯಗಳಲ್ಲಿ ಪಠ್ಯಗಳಾಗಿವೆ. ಇನ್ನು ಕೆಲವು ಪುಸ್ತಕಗಳೂ ಸಂಶೋಧನಾ ಕಾರ್ಯಗಳಿಗೆ ಮೂಲಗಳಾಗಿವೆ.

- ರಾವೂರಿ ಅವರು ತಮ್ಮ ಸಾಹಿತ್ಯ ಜೀವನದಲ್ಲಿ ಸಣ್ಣಕಥೆಗಳ 37 ಸಂಕಲನ, 17 ಕಾದಂಬರಿ ಮತ್ತು ಅನೇಕ ಮಕ್ಕಳ ಕಥೆಗಳನ್ನು ಬರೆದಿದ್ದಾರೆ.
- "ಪಕುದುರಲ್ಲು", "ಜೀವನ ಸಂಸಾರಂ", "ಇಂಪು ತೇರ ವೆಂಕು" ಮತ್ತು ಕೌಮುದಿ ಇವರ ಪ್ರಸಿದ್ಧ ಕಾದಂಬರಿಗಳು.
- ಈ ಹಿಂದೆ ರಾವುರಿರವರು "ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ", "ಬಾಲ ಸಾಹಿತ್ಯ ಪರಿಷತ್ ಪ್ರಶಸ್ತಿ", "ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ" ಮತ್ತು "ತೆಲುಗು ಅಕಾಡೆಮಿ" ಪ್ರಶಸ್ತಿಗೆ ಭಾಜರಾಗಿದ್ದರು.
- ತೆಲುಗು ಸಾಹಿತ್ಯಕ್ಕೆ ಇದು **ಮೂರನೇ** ಜ್ಞಾನಪೀಠ ಪ್ರಶಸ್ತಿ. ಈ ಹಿಂದೆ ಲೇಖಕರಾದ ಡಾ.ನಾರಾಯಣ ರೆಡ್ಡಿ ಮತ್ತು ವಿಶ್ವನಾಥ ಸತ್ಯನಾರಾಯಣ ರವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.

**ಜ್ಞಾನಪೀಠ ಪ್ರಶಸ್ತಿ:**

- ಜ್ಞಾನಪೀಠ ಪ್ರಶಸ್ತಿಯು ಸಾಹಿತ್ಯ ಕ್ಷೇತ್ರಕ್ಕೆ ನೀಡಲಾಗುವ ಅತ್ಯುನ್ನತ್ತ ಪ್ರಶಸ್ತಿ. ದೇಶದ ಯಾವುದೇ ಅಧಿಕೃತ ಭಾಷೆಗಳಲ್ಲಿ ಬರೆಯುವ ಭಾರತೀಯ ಪ್ರಜೆಯು ಈ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ. ಈ ಪ್ರಶಸ್ತಿಯನ್ನು 1961 ರಲ್ಲಿ ಸ್ಥಾಪಿಸಲಾಗಿದ್ದು, 1965 ರಿಂದ ಕೊಡಲಾಗುತ್ತಿದೆ.
- ಟೈಮ್ಸ್ ಆಫ್ ಇಂಡಿಯಾ ಗ್ರೂಪ್ ಸ್ಥಾಪಿಸಿರುವ "ಭಾರತೀಯ ಜ್ಞಾನಪೀಠ" ಟ್ರಸ್ಟ್ ಈ ಪ್ರಶಸ್ತಿಯನ್ನು ನೀಡುತ್ತಾ ಬರುತ್ತಿದೆ.
- ಮಲೆಯಾಳಂ ನ ಸಾಹಿತಿ "ಜಿ.ಶಂಕರ್ ಕುರೂಪ್" ರವರು ಈ ಪ್ರಶಸ್ತಿಯನ್ನು ಪಡೆದ ಮೊದಲಿಗರು. ಅವರ "ಒಡಕ್ಕುಝುಲ್ (Odakkuzhal)" ಸಂಕಲನಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ.
- ಇಲ್ಲಿಯವರೆಗೂ ಒಟ್ಟು 53 ಸಾಹಿತಿಗಳು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ.
- ಹಿಂದಿ ಸಾಹಿತ್ಯಕ್ಕೆ ಒಟ್ಟು 9 ಪ್ರಶಸ್ತಿಗಳು ಲಭಿಸುವ ಮೂಲಕ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಪಡೆದ ಭಾಷೆ ಎನಿಸಿದೆ. ಕನ್ನಡ ಸಾಹಿತ್ಯಕ್ಕೆ 8 ಪ್ರಶಸ್ತಿಗಳು ಲಭಿಸುವ ಮೂಲಕ ಎರಡನೇ ಸ್ಥಾನದಲ್ಲಿದೆ. ಬೆಂಗಾಲಿ ಮತ್ತು ಮಲಯಾಳಂ ಸಾಹಿತ್ಯಕ್ಕೆ ಐದು ಬಾರಿ ಈ ಪ್ರಶಸ್ತಿಯನ್ನು ನೀಡಲಾಗಿದೆ.
- ಇಲ್ಲಿಯವರೆಗೆ ಒಟ್ಟು 7 ಮಹಿಳಾ ಸಾಹಿತಿಗಳು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಬೆಂಗಾಲಿ ಲೇಖಕಿ "ಆಶಾಪೂರ್ಣದೇವಿ" ರವರು 1976 ರಲ್ಲಿ ಈ ಪ್ರಶಸ್ತಿಯನ್ನು ಪಡೆದ ಮೊದಲ ಲೇಖಕಿ ಎಂಬ ಕೀರ್ತಿಗೆ ಪಾತ್ರರಾದರು. 2011 ರಲ್ಲಿ ಓಡಿಶಾದ "ಪ್ರತಿಭಾ ರೇ" ಈ ಪ್ರಶಸ್ತಿ ಪಡೆದ ಇತ್ತೀಚಿನ ಲೇಖಕಿ.
- "ಸತ್ಯ ವ್ರತ ಶಾಸ್ತ್ರಿ" ರವರು ಸಂಸ್ಕೃತದಲ್ಲಿ ಜ್ಞಾನ ಪೀಠ ಪ್ರಶಸ್ತಿ ಪಡೆದ ಪ್ರಥಮರು.
- 46 ನೇ ಜ್ಞಾನಪೀಠ ಪ್ರಶಸ್ತಿಯನ್ನು ಕನ್ನಡದ ಹೆಸರಾಂತ ಸಾಹಿತಿ "ಡಾ.ಚಂದ್ರಶೇಖರ ಕಂಬಾರ"ರಿಗೆ ನೀಡಲಾಯಿತು.

- ಜ್ಞಾನಪೀಠ ಪ್ರಶಸ್ತಿಯು 7 ಲಕ್ಷ ನಗದು, ಕಂಚಿನಿಂದ ಮಾಡಲಾದ ಸರಸ್ವತಿ ಪ್ರತಿಮೆ ಮತ್ತು ಫಲಕವನ್ನು ಒಳಗೊಂಡಿದೆ.

**ಪುಲಿಟ್ಜರ್ ಪ್ರಶಸ್ತಿ ಪ್ರಕಟ: ನ್ಯೂಯಾರ್ಕ್ ಟೈಮ್ಸ್ ಗೆ ನಾಲ್ಕು ಪ್ರಶಸ್ತಿ**

ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸಂಗೀತಾ ಸಂಯೋಜನೆ ಸಂಬಂಧಿಸಿದ ಒಟ್ಟು 21 ವರ್ಗಗಳಿಗೆ ನೀಡಲಾಗುವ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಯನ್ನು ಪ್ರಕಟಿಸಿಲಾಗಿದೆ. ಪತ್ರಿಕೋದ್ಯಮ ವಿಭಾಗದಲ್ಲಿ ನ್ಯೂಯಾರ್ಕ್ ಟೈಮ್ಸ್ ಒಟ್ಟು ನಾಲ್ಕು ಪ್ರಶಸ್ತಿಗಳನ್ನು ಬಾಚಿಕೊಂಡಿದೆ. 2013 ನೇ ಸಾಲಿನ ಪುಲಿಟ್ಜರ್ ಪ್ರಶಸ್ತಿ ವಿಜೇತರ ವಿವರ ಈ ಕೆಳಗೆ ನೀಡಲಾಗಿದೆ (ಪ್ರಮುಖವಾದವು ಮಾತ್ರ ಹೆಚ್ಚಿನ ವಿವರಗಳಿಗೆ www.pulitzer.org ನೋಡಿ).

**ಪತ್ರಿಕೋದ್ಯಮ**

- ಬ್ರೇಕಿಂಗ್ ನ್ಯೂಸ್ ವರದಿ: "ದಿ ಡೆನ್ವರ್ ಪೋಸ್ಟ್" ನ ಸಿಬ್ಬಂದಿಗೆ ಲಭಿಸಿದೆ.
- ತನಿಖೆ ವರದಿ (Investigation Report): ದಿ ನ್ಯೂಯಾರ್ಕ್ ಟೈಮ್ಸ್ ನ "ಡೇವಿಡ್ ಬರ್ಸ್ಟೋವ್ ಮತ್ತು ಅಲೆಜಂದ್ರ ಕ್ಸಾನಿಕ್ ವಾನ್ ಬರ್ ಟ್ರಬ್".
- ಅಂತರರಾಷ್ಟ್ರೀಯ ವರದಿ: ದಿ ನ್ಯೂಯಾರ್ಕ್ ಟೈಮ್ಸ್ ನ "ಡೇವಿಡ್ ಬರ್ಬೋಜಾ".
- ವಿವರಣಾತ್ಮಕ ವರದಿ: ದಿ ನ್ಯೂಯಾರ್ಕ್ ಟೈಮ್ಸ್ ನ ಸಿಬ್ಬಂದಿ.
- ವೈಶಿಷ್ಟವಾದ ಬರಹ: ದಿ ನ್ಯೂಯಾರ್ಕ್ ಟೈಮ್ಸ್ ನ "'ಜಾನ್ ಬ್ರಾಂಚ್'"

**ಸಾಹಿತ್ಯ, ಡ್ರಾಮಾ ಮತ್ತು ಸಂಗೀತಾ**

- ಕಾದಂಬರಿ: **ಅಡಂ ಜಾನಸನ್ ರವರ "ದಿ ಆರ್ಫನ್ಸ್ ಮಾಸ್ಟರ್ಸ್ ಸನ್ (The Orphan Master's Son)** ಗೆ ನೀಡಲಾಗಿದೆ.
- ಡ್ರಾಮಾ: ಅಯದ್ ಅಕ್ತರ್ ರವರ "ಡಿಸ್ ಗ್ರೇಸ್ಡ್ (Disgraced)".
- ಸಂಗೀತಾ: ಕೆರೊಲಿನ್ ಶಾ ರವರ "Partita for 8 Voices".

**ಪುಲಿಟ್ಜರ್ ಪ್ರಶಸ್ತಿ:**

- ಪುಲಿಟ್ಜರ್ ಪ್ರಶಸ್ತಿಯನ್ನು 1917 ರಲ್ಲಿ ಸ್ಥಾಪಿಸಲಾಗಿದೆ. ಆಮೆರಿಕಾದ ಪ್ರಕಾಶರಾದ "ಜೋಸೆಫ್ ಪುಲಿಟ್ಜರ್" ರವರು ಬರೆದಿಟ್ಟ ವಿಲ್ ನ ಅನ್ವಯ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ಪ್ರಶಸ್ತಿಯ ಉಸ್ತುವಾರಿಯನ್ನು ಆಮೆರಿಕಾದ "'ಕೊಲಂಬಿಯಾ ವಿಶ್ವವಿದ್ಯಾಲಯ" ನೋಡಿಕೊಳ್ಳುತ್ತಿದೆ.
- ಪತ್ರಿಕೋದ್ಯಮ, ಸಾಹಿತ್ಯ ಮತ್ತು ಸಂಗೀತಾ ಸಂಯೋಜನೆ ಕ್ಷೇತ್ರಗಳ ಒಟ್ಟು 21 ವರ್ಗಗಳಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.
- ಈ ಪ್ರಶಸ್ತಿಯನ್ನು ಪ್ರತಿ ವರ್ಷ ನೀಡಲಾಗುತ್ತದೆ. 20 ವರ್ಗಗಳಿಗೆ ನೀಡಲಾಗುವ ಪ್ರಶಸ್ತಿಯು 10000 ಆಮೆರಿಕಾ ಡಾಲರ್ ನಗದನ್ನು ಒಳಗೊಂಡಿದೆ.
- ಸಾರ್ವಜನಿಕ ಸೇವೆ ವಿಭಾಗಕ್ಕೆ ನೀಡಲಾಗುವ ಪ್ರಶಸ್ತಿಯು ಚಿನ್ನದ ಪದಕವನ್ನು ಮಾತ್ರ ಒಳಗೊಂಡಿರುತ್ತದೆ.

## ಪರಿಸರ

### ನಾಲ್ಕನೇ “ಶುದ್ಧ ಇಂಧನ ಕುರಿತಾದ ಸಚಿವರ ಸಭೆ” ಯ ಅತಿಥ್ಯ ವಹಿಸಲಿರುವ ಭಾರತ

ನಾಲ್ಕನೇ “ಶುದ್ಧ ಇಂಧನ ಕುರಿತಾದ ಸಚಿವರ ಸಭೆ (Clean Energy Ministerial Meeting (CEM))”ಯ ಅತಿಥ್ಯವನ್ನು ಭಾರತ ವಹಿಸಿಕೊಂಡಿದ್ದು, ಏಪ್ರಿಲ್ 16 ರಿಂದ 18 ರ ವರೆಗೆ ನಡೆಯಲಿರುವ ಈ ಸಭೆಗೆ ಪ್ರಧಾನ ಮಂತ್ರಿಗಳಾದ ಮನ ಮೋಹನ್ ಸಿಂಗ್ ರವರು ಚಾಲನೆ ನೀಡಲಿದ್ದಾರೆ.

- ಆಮೆರಿಕಾದ ಇಂಧನ ಕಾರ್ಯದರ್ಶಿ ಸ್ಟೀವನ್ ಚು ಸೇರಿದಂತೆ, ಒಟ್ಟು 23 ದೇಶಗಳ ಇಂಧನ ಸಚಿವರು ಈ ಸಭೆಯಲ್ಲಿ ಭಾಗವಹಿಸಲಿರುವರು. ಶುದ್ಧ ಇಂಧನದ ಅಭಿವೃದ್ಧಿ, ಬಳಕೆಗೆ ಸಂಬಂಧಸಿದ ನಿಯಮಗಳು ಮತ್ತು ಶುದ್ಧ ಇಂಧನ ಅಭಿವೃದ್ಧಿಯಲ್ಲಿ ಖಾಸಿಗಿ ಕಂಪನಿಗಳ ಸಹಭಾಗಿತ್ವದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು.

CEM ಮತ್ತು ಉದ್ದೇಶಗಳು:

- ಜಾಗತಿಕ ಮಟ್ಟದಲ್ಲಿ ಶುದ್ಧ ಇಂಧನ ಅಭಿವೃದ್ಧಿ ಕುರಿತಾಗಿ ಚರ್ಚಿಸಲು ಇರುವ ಏಕೈಕ ವೇದಿಕೆಯೆಂದರೆ ಶುದ್ಧ ಇಂಧನ ಕುರಿತಾದ ಸಚಿವರ ಸಭೆ.
- ಕೇವಲ ಇಂಧನ ಸಚಿವರಲ್ಲದೇ, ಇತರೆ ಸಚಿವಾಲಯದ (ಉದಾ: ವಿಜ್ಞಾನ ತಂತ್ರಜ್ಞಾನ) ಸಚಿವರನ್ನು ಪಾಲ್ಗೊಂಡು ಶುದ್ಧ ಇಂಧನಕ್ಕೆ ಅಭಿವೃದ್ಧಿ ಸೂಕ್ತ ಮಾರ್ಗಗಳನ್ನು ಹುಡುಕುವುದು ಇದರ ಮುಖ್ಯ ಉದ್ದೇಶ.
- ಜಾಗತಿಕ ಮಟ್ಟದಲ್ಲಿ ಪರಸ್ಪರ ಉತ್ತಮ ವಿಧಾನಗಳನ್ನು ವಿನಿಮಯ ಮಾಡಿಕೊಳ್ಳುವ ಮೂಲಕ ಶುದ್ಧ ಇಂಧನವನ್ನು ಅಭಿವೃದ್ಧಿ ಪಡಿಸುವುದು ಮತ್ತು ಪ್ರೋತ್ಸಾಹಿಸುವುದು.
- ಇವೆಲ್ಲದರ ಜೊತೆಗೆ ಇಂಧನ ಭದ್ರತೆ ಸಾಧಿಸುವುದು, ಮಾಲಿನ್ಯಕಾರಕಗಳ ಹೊರಸೂಸುವಿಕೆಯನ್ನು ನಿಯಂತ್ರಿಸುವುದು ಮತ್ತು ಇಂಧನ ಕೊರತೆಯನ್ನು ನೀಗಿಸುವುದರ ಮೂಲಕ ಸುಸ್ಥಿರ ಬೆಳವಣಿಗೆಯನ್ನು ಕಾಣುವುದು.

ಇದುವರೆಗೂ ನಡೆದಿರುವ CEM ಸಭೆಗಳು:

- ಮೊದಲ ಶುದ್ಧ ಇಂಧನ ಕುರಿತಾದ ಸಚಿವರ ಸಭೆಯನ್ನು ಆಮೆರಿಕಾದ ಇಂಧನ ಕಾರ್ಯದರ್ಶಿಗಳಾದ ಸ್ಟೀವನ್ ಚು ರವರ ನೇತೃತ್ವದಲ್ಲಿ ಜುಲೈ 2010 ರಂದು ವಾಷಿಂಗ್ ಟನ್ ನಲ್ಲಿ ಆಯೋಜಿಸಲಾಗಿತ್ತು.
- ಎರಡನೇ ಸಭೆಯನ್ನು 2011 ರಲ್ಲಿ ಯುನೈಟೆಡ್ ಅರಭ್ ಎಮಿರೇಟ್ಸ್ ನ ಅಬು ದುಬೈನಲ್ಲಿ ನಡೆಸಲಾಗಿತ್ತು.
- ಮೂರನೇ ಸಭೆಯನ್ನು 2012 ರಲ್ಲಿ ಯು.ಕೆ ನ ಲಂಡನ್ ನಲ್ಲಿ ಹಮ್ಮಿಕೊಳ್ಳಲಾಗಿತ್ತು.

### ಏಪ್ರಿಲ್ 7: ವಿಶ್ವ ಆರೋಗ್ಯ ದಿನ

ವಿಶ್ವ ಆರೋಗ್ಯ ದಿನವನ್ನು ಏಪ್ರಿಲ್ 7 ರಂದು ಪ್ರತಿ ವರ್ಷ ಆಚರಿಸಲಾಗುತ್ತದೆ. ಈ ವರ್ಷದ ವಿಶ್ವ ಆರೋಗ್ಯ ದಿನದ ಘೋಷಣೆ “ಅಧಿಕ ರಕ್ತದೊತ್ತಡ (High Blood Pressure)”.

- 1948 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆ (WHO) ಪ್ರಥಮ ಬಾರಿಗೆ ವಿಶ್ವ ಆರೋಗ್ಯ ಸಭೆಯನ್ನು ಆಯೋಜಿಸಿತ್ತು.
- 1950 ರಿಂದ ಪ್ರತಿ ವರ್ಷ ಏಪ್ರಿಲ್ 7 ರಂದು “ವಿಶ್ವ ಆರೋಗ್ಯ ದಿನ” ವನ್ನು ಆಚರಿಸಲಾಗುತ್ತಿದೆ.

- ಜಾಗತಿಕ ಮಟ್ಟದಲ್ಲಿ ಆರೋಗ್ಯ ಕಾಳಜಿಯ ಮಹತ್ವವನ್ನು ಜನರಲ್ಲಿ ಸಾರುವ ಉದ್ದೇಶದಿಂದ ವಿಶ್ವ ಆರೋಗ್ಯ ದಿನವನ್ನು ಆಚರಿಸಲಾಗುತ್ತಿದೆ. ಪ್ರತಿ ವರ್ಷ ಜಾಗತಿಕ ಮಟ್ಟದಲ್ಲಿ ಅತಿ ಗಂಭೀರವೆನಿಸಿರುವ ಆರೋಗ್ಯ ಸಮಸ್ಯೆಯ ಬಗ್ಗೆ ಜನರಿಗೆ ತಿಳಿವಳಿಕೆ ನೀಡಲಾಗುವುದು.
- ಈ ವರ್ಷ ಘೋಷಣೆ: “ಅಧಿಕ ರಕ್ತದೊತ್ತಡ”. ರಕ್ತದೊತ್ತಡ 120/80 mmHg ಇದ್ದರೆ ಅದನ್ನು ಸಾಮಾನ್ಯ ರಕ್ತದೊತ್ತಡ ಎನ್ನುವರು. ರಕ್ತದೊತ್ತಡ 140/90 mmHg ಅಥವಾ ಅದಕ್ಕೂ ಹೆಚ್ಚಿದರೆ ಅಂತಹ ಸ್ಥಿತಿಗೆ ಅಧಿಕ ರಕ್ತದೊತ್ತಡ ಎನ್ನಲಾಗುತ್ತದೆ. ಅಧಿಕ ರಕ್ತದೊತ್ತಡವಿರುವ ವ್ಯಕ್ತಿಯು ಹೃದಯಘಾತ, ಉಸಿರಾಟ ತೊಂದರೆ ಮತ್ತು ಯಕೃತ್ ನ ಸಮಸ್ಯೆಯಿಂದ ಬಳಲುವುದು ಸಾಮಾನ್ಯ.
- ವಿಶ್ವ ಆರೋಗ್ಯ ಸಂಸ್ಥೆಯ ಅಂಕಿ ಅಂಶಗಳ ಪ್ರಕಾರ ಪ್ರತಿ ಮೂವರು ವಯಸ್ಕರಲ್ಲಿ ಒಬ್ಬರು ಅಧಿಕ ರಕ್ತದೊತ್ತಡದಿಂದ ಬಳಲುತ್ತಿದ್ದಾರೆ. ಹಾಗೂ ಜಾಗತಿಕ ಮಟ್ಟದಲ್ಲಿ ಪ್ರತಿ ವರ್ಷ 9 ಮಿಲಿಯನ್ ಸಾವಿನ ಪ್ರಕರಣಗಳು ಸಂಭವಿಸುತ್ತಿವೆ.

**ಜಲಮಾಲಿನ್ಯ ತಡೆ ಯೋಜನೆಗಳಿಗೆ ರೂ.4065.81 ಕೋಟಿ ಬಿಡುಗಡೆ ಮಾಡಲಿರುವ ಕೇಂದ್ರ ಸರ್ಕಾರ**

ಜಲ ಮಾಲಿನ್ಯ ತಡೆಗೆ ಸಂಬಂಧಿಸಿದ ಯೋಜನೆಗಳಿಗೆ ಕೇಂದ್ರ ಸರ್ಕಾರ ರೂ.4065.81 ಕೋಟಿ ಅನುದಾನವನ್ನು ಬಿಡುಗಡೆ ಮಾಡಲು ಕೇಂದ್ರ ಸರ್ಕಾರ ಸಮ್ಮತಿ ಸೂಚಿಸಿದೆ. ದೇಶದ ವಿವಿಧ ರಾಜ್ಯಗಳಲ್ಲಿ ನದಿ ಮತ್ತು ಕೆರೆ ಮೂಲಗಳನ್ನು ಸಂರಕ್ಷಿಸುವುದಕ್ಕಾಗಿ ಈ ಅನುದಾನವನ್ನು ಬಳಸಿಕೊಳ್ಳಲಾಗುವುದು. ರಾಜ್ಯಗಳ ಪೈಕಿ ಉತ್ತರ ಪ್ರದೇಶ ಅತಿ ಹೆಚ್ಚು ಅಂದರೆ ರೂ.1385.95 ಕೋಟಿ ಅನುದಾನವನ್ನು ಪಡೆದುಕೊಂಡಿದೆ.

ಜಲಮಾಲಿನ್ಯ ತಡೆಗೆ ಸರ್ಕಾರ ಜಾರಿಗೊಳಿಸಿರುವ ಯೋಜನೆಗಳು:

ರಾಷ್ಟ್ರೀಯ ಕೆರೆ ಸಂರಕ್ಷಣೆ ಯೋಜನೆ (National Lake Conservation Plan):

- ರಾಷ್ಟ್ರೀಯ ಕೆರೆ ಸಂರಕ್ಷಣೆ ಯೋಜನೆಯನ್ನು 2001 ರಿಂದ ಆರಂಭಿಸಲಾಗಿದೆ. ಈ ಯೋಜನೆಗೆ ತಗಲುವ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು 70:30 ಅನುಪಾತದಲ್ಲಿ ಭರಿಸುತ್ತಿವೆ. ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿನ ಕೆರೆಗಳಿಗೆ ಕಲುಷಿತ ನೀರು ಸೇರ್ಪಡೆಗೊಳ್ಳುವುದನ್ನು ತಡೆಯುವುದು ಮತ್ತು ಶುದ್ಧ ನೀರಿನ ಮೂಲಗಳನ್ನು ಸಂರಕ್ಷಿಸುವುದು ಈ ಯೋಜನೆಯ ಮುಖ್ಯ ಗುರಿ.

ರಾಷ್ಟ್ರೀಯ ನದಿ ಸಂರಕ್ಷಣೆ ಕಾರ್ಯಕ್ರಮ (National River Conservation Programme)

ನದಿ ಮೂಲಗಳನ್ನು ಸಂರಕ್ಷಿಸುವ ಸಲುವಾಗಿ ಕೇಂದ್ರ ಸರ್ಕಾರ ಈ ಯೋಜನೆಯನ್ನು ಜಾರಿಗೊಳಿಸಿದೆ. ಯೋಜನೆಯ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿರ್ದಿಷ್ಟ ಅನುಪಾತದಲ್ಲಿ ಭರಿಸುತ್ತಿವೆ. ಸದ್ಯ ಈ ಯೋಜನೆಯಡಿ ಪ್ರಮುಖವಾದ 39 ನದಿಗಳನ್ನು ತರಲಾಗಿದೆ

**"ಸೈನ್ಸ್ ಎಕ್ಸ್ ಪ್ರೆಸ್ ಬಯೋಡೈವರ್ಸಿಟಿ ಸ್ಪೆಷಲ್" ರೈಲಿಗೆ ಮತ್ತೆ ಚಾಲನೆ**

ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯವು "ಸೈನ್ಸ್ ಎಕ್ಸ್ ಪ್ರೆಸ್ ಬಯೋಡೈವರ್ಸಿಟಿ ಸ್ಪೆಷಲ್ (Science Express Biodiversity Special (SEBS)) ರೈಲಿಗೆ ಏಪ್ರಿಲ್ ೯ ರಂದು ಮತ್ತೆ ಚಾಲನೆ ನೀಡಿದೆ. ದೆಹಲಿಯ ಸಾಫರ್ ಗಂಜ್ ನಿಂದ ಪ್ರಾರಂಭಗೊಂಡಿರುವ ಈ ರೈಲು ದೇಶದ ಉದ್ದಗಲ 100 ರೈಲು ನಿಲ್ದಾಣಗಳಲ್ಲಿ ಸಂಚಾರ ನಡೆಸಲಿದೆ.

- ಒಟ್ಟು 16 ಭೋಗಿಗಳನ್ನು ಈ ರೈಲು ಹೊಂದಿದ್ದು, ಇದರಲ್ಲಿ 8 ಭೋಗಿಗಳು ದೇಶದ ವಿವಿಧ ಭೌಗೋಳಿಕ ಪ್ರದೇಶಗಳ ಜೀವ ವೈವಿದ್ಯತೆಯ ಬಗ್ಗೆ ಕಿರು ಚಿತ್ರ, ಪ್ರದರ್ಶನ ಮತ್ತು ವಿಡಿಯೋಗಳನ್ನು ಭಿತ್ತರಿಸಲಿವೆ.
- ಉಳಿದ ಭೋಗಿಗಳು ಹವಾಮಾನ ಬದಲಾವಣೆ, ನೀರು ಮತ್ತು ಇಂಧನ ಸಂರಕ್ಷಣೆ ಸೇರಿದಂತೆ ವಿಜ್ಞಾನಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಪ್ರದರ್ಶಿಸಲಿವೆ. ಈ ಬಾರಿಯು ಜನಪ್ರಿಯ "ಜಾಯ್ ಆಫ್ ಸೈನ್ಸ್ ಲ್ಯಾಬ್" ಗಳನ್ನು ವಿಶೇಷ ಭೋಗಿಗಳಲ್ಲಿ ಅಳವಡಿಸಲಾಗಿದ್ದು, ವಿಜ್ಞಾನ ಕುರಿತಾದ ಪ್ರಯೋಗಗಳನ್ನು ಇಲ್ಲಿ ವಿದ್ಯಾರ್ಥಿಗಳು ಕೈಗೊಳ್ಳಬಹುದಾಗಿದೆ. ರೈಲು ನಿಂತಿರುವ ವೇಳೆ ರಸ ಪ್ರಶ್ನೆ, ಚಿತ್ರ ಬಿಡಿಸುವ ಸ್ಪರ್ಧೆಗಳಲ್ಲಿ ಯುವ ಜನಾಂಗ ಭಾಗವಹಿಸಬಹುದಾಗಿದೆ.
- ಭಾರತದ ಜೀವ ವೈವಿಧ್ಯತೆಯನ್ನು ಜನರಿಗೆ ತೋರಿಸುವ ಸಲುವಾಗಿ "ಸೈನ್ಸ್ ಎಕ್ಸ್ ಪ್ರೆಸ್ ಬಯೋಡೈವರ್ಸಿಟಿ ಸ್ಪೆಷಲ್" ರೈಲನ್ನು ಕಳೆದ ವರ್ಷ ಪರಿಸರ ದಿನ (ಜೂನ್ 5)ದಂದು ಆರಂಭಿಸಲಾಗಿತ್ತು.

**ಹೆಚ್ಚುತ್ತಿರುವ ಬಾಹ್ಯಕಾಶ ಭಗ್ನವಶೇಷಗಳು (Space Junk): ಕಾದಿದೆ ಅಪಾಯ**

ಬಾಹ್ಯಕಾಶದಲ್ಲಿ ಕೃತಕ ಅವಶೇಷಗಳು ಅಪಾಯದ ಮಟ್ಟ ಮೀರಿ ಹೆಚ್ಚುತ್ತಿದ್ದು, ಈ ಬೆಳವಣಿಗೆಯನ್ನು ನಿರ್ಲಕ್ಷಿಸಿದರೆ ಮುಂದಿನ ದಿನಗಳಲ್ಲಿ ಭಾರಿ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ. ಯುರೋಪಿಯನ್ ಸ್ಪೇಸ್ ಏಜೆನ್ಸಿ ಜರ್ಮನಿಯಲ್ಲಿ ಏರ್ಪಾಡಿಸಿದ್ದ "ಸ್ಪೇಸ್ ಜಂಕ್" ಕುರಿತಾದ ಸೆಮಿನರ್ ನಲ್ಲಿ ವಿಜ್ಞಾನಿಗಳು ಈ ಎಚ್ಚರಿಕೆ ನೀಡಿದ್ದಾರೆ.

- ಒಂದು ಅಂದಾಜಿನ ಪ್ರಕಾರ 10 ಸೇ.ಮೀಟರ್ ಗಿಂತ ದೊಡ್ಡದಾಗಿರುವ ಸುಮಾರು 29,000 ಕ್ಕೂ ಹೆಚ್ಚು ಅವಶೇಷಗಳು ಭೂಮಿಯನ್ನು ಸುತ್ತುಹಾಕುತ್ತಿವೆ. ಈ ಅವಶೇಷಗಳು ಗಂಟೆಗೆ 25,000 ಕಿ.ಮೀ ವೇಗದಲ್ಲಿ ಭೂಮಿಯನ್ನು ಸುತ್ತುತ್ತಿದ್ದು, ಈ ವೇಗ ವಿಮಾನ ಚಲಿಸುವ ವೇಗಕ್ಕಿಂತಲೂ 40 ಪಟ್ಟು ಹೆಚ್ಚು.
- ಇಷ್ಟು ವೇಗದಲ್ಲಿ ಚಲಿಸುವ ಒಂದು ಸಣ್ಣ ಅವಶೇಷ ಉಪಗ್ರಹಕ್ಕೆ ತಾಕಿದರೆ ಸಾಕು ಕೋಟ್ಯಾಂತರ ರೂಪಾಯಿಯ ಯೋಜನೆ ನೀರಿನಲ್ಲಿ ಹೋಮ ಮಾಡಿದಂತೆ ಆಗುತ್ತದೆ. ಈ ಅವಶೇಷಗಳನ್ನು ನಿಯಂತ್ರಿಸದೇ ಬಿಟ್ಟರೆ ದೂರಸಂಪರ್ಕ ಸೇವೆ, ಉಪಗ್ರಹ ಆಧಾರಿತ ನ್ಯಾವಿಗೇಷನ್ ಮತ್ತು ಇತರೆ ಉಪಗ್ರಹ ಸೇವೆಗಳು ಮುಂದಿನ ವರ್ಷಗಳಲ್ಲಿ ಸ್ಥಗಿತಗೊಳ್ಳಲಿವೆ ಎಂದು "ಯುರೋಪಿಯನ್ ಸ್ಪೇಸ್ ಏಜೆನ್ಸಿ"ಯ ವಿಜ್ಞಾನಿಗಳು ಎಚ್ಚರಿಸಿದ್ದಾರೆ.

**ಏನಿದು "ಸ್ಪೇಸ್ ಜಂಕ್"?**

- ಬಾಹ್ಯಕಾಶ ವಿಷಯಕ್ಕೆ ಬಂದಾಗ ಇತ್ತೀಚೆಗೆ ಬಹಳಷ್ಟು ಚರ್ಚಿತವಾಗುವ ವಿಷಯವೆಂದರೆ "ಸ್ಪೇಸ್ ಜಂಕ್" ಅಥವಾ "ಸ್ಪೇಸ್ ಡೆಬ್ರಿಸ್" ಅಥವಾ "ಸ್ಪೇಸ್ ವೇಸ್ಟ್" ಅಥವಾ ಬಾಹ್ಯಕಾಶ ಭಗ್ನವಶೇಷಗಳು. ಕೆಲಸಕ್ಕೆ ಬಾರದ ಮತ್ತು ಹಾಳಾದ ಉಪಗ್ರಹಗಳು, ಬಾಹ್ಯಕಾಶಕ್ಕೆ ಉಡಾಯಿಸಲಾದ ರಾಕೆಟ್ ಗಳು, ಬಾಹ್ಯಕಾಶ ನೌಕೆಗಳು, ರಾಕೆಟ್ ನಿಂದ

ಹೊರಸೂಸಲಾಗುವ ಧೂಳು, ಉಪಗ್ರಹಗಳು ಒದಕ್ಕೊಂದು ಡಿಕ್ಕಿ ಹೊಡೆದಾಗ ಉಂಟಾಗುವ ಚೂರುಗಳೇ ಬಾಹ್ಯಕಾಶ ಭಗ್ನವಶೇಷಗಳು.

- ಈ ಅವಶೇಷಗಳಿಂದು ಭೂಮಿಯ ಕಕ್ಷೆಯಲ್ಲಿ ಅತ್ಯಂತ ವೇಗದಲ್ಲಿ ಸುತ್ತುತ್ತಿವೆ. ಈಗೇ ಸುತ್ತುವಾಗ 10 ಸೇಂ.ಮೀಟರ್ ಗಿಂತಲೂ ದೊಡ್ಡದಿರುವ ಅವಶೇಷ ಉಪಗ್ರಹಕ್ಕೆ ಡಿಕ್ಕೆ ಹೊಡೆದಿದ್ದೆ ಆದರೆ ಉಪಗ್ರಹ ಹಾಳಾಗುವುದರಲ್ಲಿ ಅನುಮಾನವೇ ಇಲ್ಲ ಎನ್ನುತ್ತಾರೆ ವಿಜ್ಞಾನಿಗಳು. ಜತೆಗೆ ಈಗೇ ಹಾಳಾದ ಉಪಗ್ರಹ ಭೂಮಿಗೆ ಬಾರದೇ ಬಾಹ್ಯಕಾಶದಲ್ಲಿ ಅದು ಸಹ ಭಗ್ನವಶೇಷವಾಗಿ ಸುತ್ತುಹಾಕಿ, ಮತ್ತಷ್ಟು ಭಗ್ನವಶೇಷಗಳ ಸೃಷ್ಟಿಗೆ ಕಾರಣವಾಗುತ್ತದೆ. ಈ ಸನ್ನಿವೇಶವನ್ನ "ಕೆಸ್ಲರ್ ಸಿಂಡ್ರೋಮ್ (Kessler Syndrome)" ಎನ್ನಲಾಗುತ್ತದೆ.

**ಸ್ಪೇಸ್ ಜಂಕ್ ನ ಮೂಲಗಳು**:

- **ಉಪಗ್ರಹಗಳು**:ನಾಸಾದ ಅಂಕಿ ಅಂಶದ ಪ್ರಕಾರ ಇಂದು ಬಾಹ್ಯಕಾಶದಲ್ಲಿ ಸರಿ ಸುಮಾರು 902 ಮಾನವ ನಿರ್ಮಿತ ಉಪಗ್ರಹಗಳು ಭೂಮಿಯನ್ನು ಸುತ್ತುತ್ತಿವೆ. ಈ ಉಪಗ್ರಹಗಳು ತಮ್ಮ ಕೆಲಸವನ್ನು ನಿಲ್ಲಿಸಿದರೆ ಅಥವಾ ಒಂದಕ್ಕೊಂದು ಡಿಕ್ಕಿ ಹೊಡೆದರೆ ಆಗ ಭಗ್ನವಶೇಷಗಳಾಗುತ್ತವೆ. 1958 ರಲ್ಲಿ ಅಮೆರಿಕಾ ಕಳುಹಿಸಿದ್ದ Vangaurd I ಉಪಗ್ರಹ 1964 ರಲ್ಲಿ ಸಂಪರ್ಕವನ್ನು ಕಳೆದುಕೊಂಡಿತ್ತು. ಸದ್ಯ ಭೂಮಿಯ ಸುತ್ತ ಸುತ್ತುತ್ತಿರುವ ಈ ಉಪಗ್ರಹ ಅತ್ಯಂತ ಹಳೆಯ ಭಗ್ನವಶೇಷ ಎನ್ನಲಾಗುತ್ತಿದೆ. ಇನ್ನೂ 240 ವರ್ಷಗಳ ಕಾಲ ಇದು ಕಕ್ಷೆಯಲ್ಲೇ ಸುತ್ತಲಿದೆ.
- **ಕಳೆದುಹೋದ ವಸ್ತುಗಳು**: ಬಾಹ್ಯಕಾಶ ಯಾನಿಗಳು ಬಾಹ್ಯಕಾಶ ನಡಿಗೆಯ ವೇಳೆ ಆಕಸ್ಮಾತ್ ಆಗಿ ತಮ್ಮ ವಸ್ತುಗಳನ್ನು ಬಾಹ್ಯಕಾಶದಲ್ಲಿ ಕಳೆದುಕೊಂಡರೆ ಅವು ಸಹ "ಸ್ಪೇಸ್ ಜಂಕ್" ಆಗಿ ಉಳಿದುಕೊಳ್ಳುತ್ತವೆ. ಸುನೀತಾ ವಿಲಿಯಮ್ಸ್ ರವರು ಬಾಹ್ಯಕಾಶ ನಡಿಗೆಯ ವೇಳೆ ತಮ್ಮ ಕ್ಯಾಮರ ಕಳೆದುಕೊಂಡಿದ್ದು ಇದಕ್ಕೆ ಉದಾಹರಣೆ.
- **ಬೂಸ್ಟರ್ಸ್**: ಉಪಗ್ರಹ ಉಡಾವಣೆಗೆ ಬಳಸುವ ರಾಕೆಟ್ ಗಳಲ್ಲಿ ಅಳವಡಿಸಲಾದ ಬೂಸ್ಟರ್ ಗಳು ನಿರ್ದಿಷ್ಟ ಹಂತ ತಲುಪಿದ ಮೇಲೆ ರಾಕೆಟ್ ನಿಂದ ಬೇರ್ಪಡೆಗೊಳ್ಳುತ್ತವೆ. ಈ ಬೂಸ್ಟರ್ ಗಳು ಸಹ "ಸ್ಪೇಸ್ ಜಂಕ್" ಆಗಿ ಪರಿವರ್ತನೆ ಹೊಂದುತ್ತವೆ.
- **ಆಂಟಿ ಸೆಟಲೈಟ್ ಮಿಸೈಲ್ ಟೆಸ್ಟ್**: ಕೆಲವೊಮ್ಮೆ ಉಪಯೋಗಕ್ಕೆ ಬಾರದ ಉಪಗ್ರಹಗಳನ್ನು ಸ್ಪೋಟಕಗಳಿಂದ ಹೊಡೆದು ಉರುಳಿಸಲಾಗುವುದು. ಈಗೇ ಸ್ಪೋಟಗೊಂಡ ಉಪಗ್ರಹ ಅನಿಯಮಿತ ಚೂರುಗಳಾಗುವುದರಿಂದ ಅವಶೇಷಷಗಳು ಸೃಷ್ಟಿಯಾಗಲು ಕಾರಣವಾಗುತ್ತದೆ.

**ಕೆಸ್ಲರ್ ಸಿಂಡ್ರೋಮ್ (Kessler Syndrome)?:**

- "ಕೆಸ್ಲರ್ ಸಿಂಡ್ರೋಮ್" ಬಾಹ್ಯಕಾಶ ಭಗ್ನವಶೇಷಗಳಿಗೆ ಸಂಬಂಧಿಸಿದ ಸಿದ್ಧಾಂತ. ನಾಸಾದ ವಿಜ್ಞಾನಿ "ಡೊನಾಲ್ಡ್ ಜೆ.ಕೆಸ್ಲರ್" ರವರು 1978 ರಲ್ಲಿ ಈ ಪರಿಕಲ್ಪನೆಯನ್ನು ಮಂಡಿಸಿದರು. ಬಾಹ್ಯಕಾಶದಲ್ಲಿ ಭಗ್ನವಶೇಷಗಳು ಹೇಗೆ ಸೃಷ್ಟಿಯಾಗುತ್ತವೆ ಎಂಬುದರ ಬಗ್ಗೆ ಕೆಸ್ಲರ್ ರವರು ಸವಿವರವಾಗಿ ಹೇಳಿದ್ದಾರೆ. ಸಾಮಾನ್ಯವಾಗಿ ಉಪಗ್ರಹಗಳನ್ನು "ಭೂಮಿಯ ಕೆಳಸ್ತರ ಕಕ್ಷೆಗೆ (Low Earth Orbit)ಗೆ ಕಳುಹಿಸಿಕೊಡಲಾಗುವುದರಿಂದ ಈ ಭಾಗದಲ್ಲಿ ಉಪಗ್ರಹಗಳ ದಟ್ಟಣೆ ಅಧಿಕವಾಗಿರುತ್ತದೆ. ಈ ಉಪಗ್ರಹಗಳು ಭೂಮಿಯನ್ನು ಪ್ರದಕ್ಷಿಣೆ ಹಾಕುವಾಗ ಒಂದಕ್ಕೊಂದು ಡಿಕ್ಕಿ ಹೊಡೆದರೆ

ಚೂರುಗಳಾಗುತ್ತವೆ. ಈ ಚೂರುಗಳಿಂದ ಮತ್ತಷ್ಟು ಚೂರುಗಳು ಸೃಷ್ಟಿಯಾಗಿ ಬಾಹ್ಯಕಾಶ ತುಂಬ ಅವಶೇಷಗಳು ಹೆಚ್ಚಾಗುತ್ತ ಹೋಗುತ್ತವೆ. ಈ ಸರಣಿ ಕ್ರಿಯೆಯನ್ನೇ "ಕೆಸ್ಲರ್ ಸಿಂಡ್ರೋಮ್" ಎನ್ನಲಾಗುತ್ತದೆ.

**ಭಗ್ನವಶೇಷ ನಿಯಂತ್ರಣ:**

- ಬಾಹ್ಯಕಾಶದಲ್ಲಿ ಭಗ್ನವಶೇಷಗಳು ಮಿತಿ ಮೀರಿ ಹೆಚ್ಚುತ್ತಿದ್ದರೂ, ಇದರ ನಿಯಂತ್ರಣಕ್ಕೆ ಅಂತರರಾಷ್ಟ್ರೀಯ ಒಪ್ಪಂದ ಏರ್ಪಾಡದೇ ಇರುವುದು ದುರಂತವೇ ಸರಿ.
- COPUOS: "United Nation Committee on the Peaceful Use of Outer Space" 2007 ರಲ್ಲಿ "ಸ್ಪೇಸ್ ಜಂಕ್" ನ ನಿಯಂತ್ರಣ ಕೆಲವು ಸ್ವಪ್ರೇರಿತ ಮಾರ್ಗಸೂಚಿಗಳನ್ನು ಪ್ರಕಟಿಸಿತಾದರೂ ಅಷ್ಟೇನೂ ಫಲಕಾರಿಯಾಗಿಲ್ಲ.
- ನಾಸಾ ಮತ್ತು ಯುರೋಪಿಯನ್ ಸ್ಪೇಸ್ ಏಜೆನ್ಸಿ ಕೂಡ ಇದರ ನಿಯಂತ್ರಣಕ್ಕೆ ತಮ್ಮದೇ ಆದ ನಿಯಮಗಳನ್ನು ರೂಪಿಸಿಕೊಂಡಿವೆ.

**Graveyard Orbit (ಸ್ಮಶಾನ ಕಕ್ಷೆ)?**

- "ಗ್ರೇವ್ ಯಾರ್ಡ್ ಆರ್ಬಿಟ್" ನ್ನು "ಸೂಪರ್ ಸಿಂಕ್ರೂನಸ್" ಕಕ್ಷೆ ಅಥವಾ "ಜಂಕ್ ಆರ್ಬಿಟ್" ಯಂತಲೂ ಕರೆಯಲಾಗುತ್ತದೆ. ಯಾವುದೇ ಬಾಹ್ಯಕಾಶ ನೌಕೆಯ ಕಾರ್ಯಾವಧಿ ಮುಗಿದ ನಂತರ "ಗ್ರೇವ್ ಯಾರ್ಡ್ ಆರ್ಬಿಟ್" ಗೆ ನೂಕಲಾಗುವುದು.

**ವಿಪ್ಪಲ್ ಶೀಲ್ಡ್ (Whipple Shield)?**

- ಮಾನವ ಸಹಿತ ಅಥವಾ ಮಾನವ ರಹಿತ ಬಾಹ್ಯಕಾಶ ನೌಕೆಯನ್ನು "ಸ್ಪೇಸ್ ಜಂಕ್" ಗಳಿಂದ ರಕ್ಷಿಸಲು ಹೊದಿಸಲಾಗುವ ರಕ್ಷಣಾ ಕವಚವೇ "ವಿಪ್ಪಲ್ ಶೀಲ್ಡ್". ಸೆಕೆಂಡ್ ಗೆ 3 ರಿಂದ 18 ಕಿ.ಮೀ ವೇಗದಲ್ಲಿ ಚಲಿಸುವ "ಸ್ಪೇಸ್ ಜಂಕ್"ಗಳಿಂದ ರಕ್ಷಣೆ ಪಡೆಯಲು ಈ ಶೀಲ್ಡ್ ನ್ನು ಹೊದಿಸಲಾಗುತ್ತದೆ. "ಫ್ರೆಡ್ ವಿಪ್ಪಲ್" ಎಂಬ ವಿಜ್ಞಾನಿ ಇದರ ಅನ್ವೇಷಕ. ಕೆಲ್ವರ್ ಅಥವಾ ನೆಕ್ಸಟೆಲ್ ಅಲ್ಯೂಮಿನಿಯಂ ಆಕ್ಸೈಡ್" ನಿಂದ ವಿಪ್ಪಲ್ ಶೀಲ್ಡನ್ನು ಮಾಡಲಾಗಿರುತ್ತದೆ.

**ಏಪ್ರಿಲ್ 25: ವಿಶ್ವ ಮಲೇರಿಯಾ ದಿನ**

ವಿಶ್ವ ಮಲೇರಿಯಾ ದಿನವನ್ನು ಏಪ್ರಿಲ್ 25 ರಂದು ಜಗತ್ತಿನಾದ್ಯಂತ ಆಚರಿಸಲಾಗುತ್ತದೆ. ಈ ಮಾರಕ ಕಾಯಿಲೆಯ ನಿಯಂತ್ರಣ ಮತ್ತು ರೋಗ ಲಕ್ಷಣಗಳ ಬಗ್ಗೆ ಈ ದಿನದಂದು ಜನರಲ್ಲಿ ತಿಳುವಳಿಕೆ ನೀಡಲಾಗುವುದು. **"Invest in the Future: Defeat Malaria" ಇದು ವಿಶ್ವ ಮಲೇರಿಯಾ ದಿನ-2013 ರ ಥೀಮ್ ಆಗಿದೆ.**

ಮಲೇರಿಯಾ:

- ಮಲೇರಿಯಾ **"ಅನಾಫಿಲಿಸ್" ಹೆಣ್ಣು** ಸೊಳ್ಳೆ ಕಚ್ಚುವುದರ ಮೂಲಕ ಹರಡುವ ಸಾಂಕ್ರಾಮಿಕ ರೋಗ. ಪ್ಲಾಸ್ಮೋಡಿಯಂ ಜಾತಿಗೆ ಸೇರಿರುವ "ಪ್ರೋಟೊಸೊಮನ್" ಪರಾವಲಂಬಿಯು ಈ ರೋಗಕ್ಕೆ ಮುಖ್ಯ ಕಾರಣ. ಪ್ಲಾಸ್ಮೋಡಿಯಂ ಪರಾವಲಂಭಿಯು ಐದು ಜಾತಿಗಳು ಮನುಷ್ಯರಿಗೆ ಸೋಂಕು ತಗುಲಿಸಬಲ್ಲವು. ಅದರಲ್ಲಿ **"ಪ್ಲಾಸ್ಮೋಡಿಯಂ ಫಾಲ್ಸಿಪಾರಮ್"** ರೋಗದ ಅತಿ ಗುರುತರವಾದ ಸ್ವರೂಪಕ್ಕೆ ಕಾರಣ. ಉಳಿದಂತೆ "ಪ್ಲಾಸೋಡಿಯಂ ವೈವಾಕ್ಸ್",

"ಪ್ಲಾಸೋಡಿಯಂ ಓವಲೆ" ಮತ್ತು "ಪ್ಲಾಸೋಡಿಯಂ ಮಲೇರಿಯೆ" ಅಷ್ಟೇನು ತೀಕ್ಷವಲ್ಲದ ಮಲೇರಿಯಾ ರೋಗಕ್ಕೆ ಕಾರಣವಾಗುತ್ತವೆ.

- ಪ್ರಪಂಚದಲ್ಲಿ ವಾರ್ಷಿಕವಾಗಿ ಸುಮಾರು ಒಂದರಿಂದ ಮೂರು ದಶಲಕ್ಷ ಜನರು ಈ ಮಾರಣಾಂತಿಕ ಕಾಯಿಲೆಗೆ ಬಲಿಯಾಗುತ್ತಿದ್ದಾರೆ. ಇವರಲ್ಲಿ ಹೆಚ್ಚಿನವರು ಆಫ್ರಿಕಾ ಖಂಡದ ಉಪ ಸಹರಾ ವಲಯದಲ್ಲಿನ ಸಣ್ಣ ಮಕ್ಕಳು.
- ಮಲೇರಿಯಾ ಲಸಿಕೆಗಳ ಕುರಿತು ಸಂಶೋಧನೆ-ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಜತೆಗೆ ಸೊಳ್ಳೆಗಳ ತಳಿ ವೈಜ್ಞಾನಿಕ ಕುಶಲಬಳಕೆ (ಜೆನಿಟಿಕ್ ಮ್ಯನಿಪುಲೇಶನ್) ಮಾಡಿ ಪರಾವಲಂಭಿಗಳ ವಿರುದ್ಧ ಅವುಗಳ ನಿರೋದಕ ಶಕ್ತಿಯನ್ನು ಹೆಚ್ಚಿಸುವ ತಂತ್ರವನ್ನೂ ಸಹ ಪರ್ಯಾಲೋಚಿಸಲಾಗಿದೆ. ಮಲೇರಿಯಾದಿಂದ ಉನ್ನತ ಸ್ತರದ ರಕ್ಷಣೆ ನೀಡುವ ಲಸಿಕೆ ಇದುವರೆಗೂ ಲಭ್ಯವಾಗಿಲ್ಲ. ಸೋಂಕಿನ ಸಾಧ್ಯತೆಗಳನ್ನು ಕಡಿಮೆಗೊಳಿಸಲು ನಿರೋಧಕ ಔಷಧಿಗಳನ್ನು ನಿರಂತರವಾಗಿ ಸೇವಿಸಬೇಕಾಗುತ್ತದೆ. ಸದ್ಯ **ಕ್ವಿನೈನ್ (Quinine) ಮತ್ತು ಅರ್ಟೆಮಿಸಿನಿನ್ (Artiminisine)** ನಂತಹ ಮಲೇರಿಯಾ ನಿರೋಧಕ ಲಸಿಕೆಗಳನ್ನು ನೀಡಲಾಗುತ್ತಿದೆ.

**ಅರ್ಟೆಮಿನಿಸ್ ನಿರೋಧಕ ಮಲೇರಿಯಾ**:

- ಜಾಗತಿಕ ಮಟ್ಟದಲ್ಲಿ ಮಲೇರಿಯಾ ರೋಗದ ವಿರುದ್ಧ ನೀಡುವ ಚಿಕಿತ್ಸೆಯಲ್ಲಿ ಇಂದು ಅತಿ ಹೆಚ್ಚಾಗಿ ಬಳಸಲಾಗುತ್ತಿರುವ ಔಷಧವೆಂದರೆ **"ಅರ್ಟೆಮಿಸಿನಿನ್ (Artimisinin)".** ಕ್ವಿನೈನ್ ಗಿಂತಲೂ ಅರ್ಟೆಮಿಸಿನಿನ್ ಅತ್ಯಂತ ಪರಿಣಾಮಕಾರಿ ಎಂದು ಈಗಾಗಲೇ ಸಂಶೋಧನೆಯಿಂದ ಸಾಬೀತಾಗಿದೆ. ಆದರೆ ಇತ್ತೀಚಿನ ದಿನಗಳಲ್ಲಿ "ಪಾಲ್ಸಿಪಾರಮ್" ಜಾತಿಯ ಪರಾವಲಂಭಿಗಳು "ಅರ್ಟೆಮಿಸಿನಿನ್ ಆಧಾರಿತ ಚಿಕ್ಸಿತೆಗೆ (Artiminisin Based Combaination Therapy)" ನಿರೋಧಕತೆಯನ್ನು ಒಡ್ಡುತ್ತಿರುವುದು ವೈದ್ಯ ಕ್ಷೇತ್ರಕ್ಕೆ ಸವಾಲಾಗಿ ಪರಿಣಮಿಸಿದೆ.
- "ಆರ್ಟೆಮಿನಿಸಿನ್" ನಿರೋಧಕ ಮಲೇರಿಯಾ ರೋಗವು ದಕ್ಷಿಣಾ ಏಷ್ಯಾಗಳಲ್ಲಿ ಅತಿ ಹೆಚ್ಚಾಗಿ ಕಂಡು ಬರುತ್ತಿರುವುದಾಗಿ ವಿಶ್ವ ಆರೋಗ್ಯ ಸಂಸ್ಥೆ ಹೇಳಿಕೆಯಿಂದ ತಿಳಿದುಬಂದಿದೆ. ದಕ್ಷಿಣಾ ಏಷ್ಯಾದ ಪ್ರಮುಖ ರಾಷ್ಟ್ರಗಳಾದ ಥಾಯ್ಲೆಂಡ್, ಕಾಂಬೋಡಿಯಾ, ಮಯನ್ಮಾರ್, ವಿಯಟ್ನಾಂ ಮತ್ತು ಚೀನಾದ ಕೆಲವು ಪ್ರಾಂತ್ಯಗಳಲ್ಲಿ ವ್ಯಾಪಕವಾಗಿ "ಆರ್ಟೆಮಿನಿಸಿನ್" ನಿರೋಧಕ ಮಲೇರಿಯಾ ಹಬ್ಬಿದೆ. ಇದರ ನಿಯಂತ್ರಣ ವಿಶ್ವ ಆರೋಗ್ಯ ಸಂಸ್ಥೆ 400 ಮಿಲಿಯನ್ ಡಾಲರ್ ನ "Emergency Response to Arteminisin Resistance (ERAR)" ಎಂಬ ಕಾರ್ಯಕ್ರಮವನ್ನು ಜಾರಿಗೊಳಿಸಿದೆ.

**ರೋನಾಲ್ಡ್ ರಾಸ್ (Ronald Ross):**

- ಸರ್ ರೋನಾಲ್ಡ್ ರಾಸ್ ಒಬ್ಬ ಬ್ರಿಟಿಷ್ ವೈದ್ಯ. ಮಲೇರಿಯಾ ರೋಗದ ಮೇಲೆ ಇವರು ನಡೆಸಿದ ಸಂಶೋಧನೆಗಾಗಿ 1902 ರಲ್ಲಿ ವೈದ್ಯಕೀಯ ನೊಬೆಲ್ ಪ್ರಶಸ್ತಿಯನ್ನು ನೀಡಲಾಯಿತು. ಮಲೇರಿಯಾ ರೋಗ ತರುವ ಪರಾವಲಂಭಿಗಳು "ಅನಾಫಿಲಿಸ್" ಹೆಣ್ಣು ಸೊಳ್ಳೆಯ ಮೂಲಕ ಹರಡುತ್ತವೆ ಎಂದು ಜಗತ್ತಿಗೆ ತೋರಿಸಿಕೊಟ್ಟ ಮೊದಲಿಗರು. ರಾಸ್ ರವರ ಈ ಅನ್ವೇಷಣೆಯಿಂದಾಗಿ ಮಲೇರಿಯಾ ರೋಗದ ನಿಯಂತ್ರಣಕ್ಕೆ ಅಡಿಪಾಯ ಹಾಕಲಾಯಿತು.

**ಭೂಮಿಯ ಸಮೀಪಕ್ಕೆ "2013 ಜಿಎ೦3" ಕ್ಷುದ್ರಗ್ರಹ (Asteroid)**

ಭೂಮಿಯ ಸಮೀಪದಲ್ಲಿ ಹಾದುಹೋಗಲಿದೆ ಎನ್ನಲಾದ ಕ್ಷುದ್ರಗ್ರಹವನ್ನು ವಿಜ್ಞಾನಿಗಳು ಪತ್ತೆಹಚ್ಚಿದ್ದಾರೆ. "2013ಜಿಎ೦3" ಎಂದು ಹೆಸರಿಡಲಾಗಿರುವ ಈ ಕ್ಷುದ್ರಗ್ರಹವು 2026 ರ ಏ.14 ರಂದು ಭೂಮಿಯ ಅತ್ಯಂತ ಸಮೀಪದಲ್ಲಿ ಹಾದುಹೋಗಲಿದೆ.

- "2013ಜಿಎ೦3" ಕ್ಷುದ್ರಗ್ರಹವನ್ನು ಅರೊಜೋನಾದ ಮೌಂಟ್ ಲೆಮ್ಮೊನ್ ಸರ್ವೇಕ್ಷಣಾಲಯ ಅನ್ವೇಷಿಸಿದೆ.
- ಈ ಹಿಂದೆ ನಾಸಾದ ವಿಜ್ಞಾನಿಗಳು ಈ ಕ್ಷುದ್ರಗ್ರಹವು ಭೂಮಿಯ ಮೇಲ್ಮೈನಿಂದ 39 ಸಾವಿರ ಕಿ.ಮೀ ಅಂತರದಲ್ಲಿ ಹಾದುಹೋಗಲಿದೆ ಎಂದು ಅಂದಾಜಿಸಿದ್ದರು.
- ಇತ್ತೀಚಿನ ಅಧ್ಯಯನದ ಪ್ರಕಾರ ಈ ಕ್ಷುದ್ರಗ್ರಹವು 2026,ಏಪ್ರಿಲ್ 13 ರಂದು ಭೂಮಿಯಿಂದ 8, 620 ಕಿ.ಮೀ ಅಥವಾ 15 ಸಾವಿರ ಕಿ.ಮೀ ಒಳಗೆ ಹಾದುಹೋಗಲಿರುವುದಾಗಿ ಹೇಳಿದ್ದಾರೆ.

**ಅಲಹಬಾದ್ ''ಹೀಟ್ ಆಕ್ಷನ್ ಪ್ಲಾನ್ (Heat Action Plan)"**

ಹವಾಮಾನ ಬದಲಾವಣೆಯಿಂದ ಹೆಚ್ಚುತ್ತಿರುವ ತಾಪಮಾನದ ಬಗ್ಗೆ ಮಾಹಿತಿ ಮತ್ತು ಅದರಿಂದ ಉಂಟಾಗಬಹುದಾದ ಅಪಾಯಕಾರಿ ಸನ್ನಿವೇಶಗಳನ್ನು ನಿಭಾಯಿಸಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳಿಗೆ ಸಂಬಂಧಿಸಿದಂತೆ "ಹೀಟ್ ಆಕ್ಷನ್ ಪ್ಲಾನ್" ಎಂಬ ಮಹತ್ವದ ಯೋಜನೆಯನ್ನು "ಅಲಹಬಾದ್ ಮುನಿಸಿಲ್ ಕಾರ್ಪೋರೇಷನ್" ಜಾರಿಗೊಳಿಸಿದೆ. ದಕ್ಷಿಣಾ ಏಷ್ಯಾದಲ್ಲೇ ಇಂತಹ ವಿಶೇಷ ಮತ್ತು ಉಪಯುಕ್ತ ಯೋಜನೆಯನ್ನು ಜಾರಿಗೆ ತಂದ ಮೊದಲ ನಗರ ಎಂಬ ಹೆಗ್ಗಳಿಕೆಗೂ ಅಲಹಬಾದ್ ಪಾತ್ರವಾಗಿದೆ.

ಯೋಜನೆಯಲ್ಲಿ ಏನಿದೆ?

- ಹೆಚ್ಚುತ್ತಿರುವ ತಾಪಮಾನದಿಂದ ಆರೋಗ್ಯದ ಮೇಲೆ ಆಗುತ್ತಿರುವ ವ್ಯತಿರಿಕ್ತ ಪರಿಣಾಮವನ್ನು ತಡೆಯು ಸಲುವಾಗಿ ತಕ್ಷಣದ ಮತ್ತು ದೀರ್ಘಕಾಲೀನ ವಿಧಾನಗಳನ್ನು ಈ ಯೋಜನೆಯಡಿ ರೂಪಿಸಲಾಗಿದೆ.
- ತಾಪಮಾನದ ಬಗ್ಗೆ ವೈದ್ಯ ಸಿಬ್ಬಂದಿ ಮತ್ತು ಕೊಳಚೆ ನಿವಾಸಿಗಳಿಗೆ ಮುನ್ನೆಚ್ಚರಿಕೆ ತರಬೇತಿ ಮತ್ತು ಜಾಗೃತಿ ಶಿಬಿರವನ್ನು ಏರ್ಪಡಿಸಲಾಗುವುದು.
- ತಾಪಮಾನದ ಬೇಗೆಯಿಂದ ರಕ್ಷಿಸಿಕೊಳ್ಳುವುದಕ್ಕಾಗಿ ಶಾಲಾ ಮಕ್ಕಳಿಗೆ, ಹೊರಗಡೆ ಕೆಲಸ ಮಾಡುವವರಿಗೆ ಮತ್ತು ಇತರೆ ದುರ್ಬಲ ವರ್ಗಗಳಿಗೆ ತರಬೇತಿಯನ್ನು ನೀಡಲಾಗುವುದು.
- ತಾಪಮಾನದಿಂದ ಕಾಯಿಲೆಗಳು ಉದ್ಭವಿಸುವ ಸಂಭವವಿದ್ದಲ್ಲಿ ಸಾರ್ವಜನಿಕರಿಗೆ ಸೂಕ್ತ ಮಾಹಿತಿಯನ್ನು ರವಾನಿಸುವುದು.

ಯೋಜನೆಯ ರೂವಾರಿಗಳು:

- "ಅಲಹಬಾದ್ ಮುನ್ಸಿಪಲ್ ಕಾರ್ಪೋರೇಷನ್", "ಇಂಡಿಯನ್ ಇನ್ ಸ್ಟಿಟ್ಯೂಟ್ ಆಫ್ ಹೆಲ್ತ್", ಗಾಂದಿನಗರ, "ಪಬ್ಲಿಕ್ ಹೆಲ್ತ್ ಫೌಂಡೇಶನ್ ಆಫ್ ಇಂಡಿಯಾ" ಮತ್ತು "ಕ್ಲೈಮೆಟ್ ಅಂಡ್ ಡೆವಲಪ್ ಮೆಂಟ್ ನೆಟವರ್ಕ್" ಈ ಯೋಜನೆಯ ಮುಖ್ಯ ರೂವಾರಿಗಳೆನಿಸಿವೆ.